ಹುಬ್ಬಳ್ಳಿ
ಗುರುವಾರ, 30 ಏಪ್ರಿಲ್ 2026
ಸಂಪುಟ 16, ಸಂಚಿಕೆ 36, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬಿಜೆಪಿಗೆ ಬಂಗಾಳ? ಮತದಾನೋತ್ತರ ಸಮೀಕ್ಷೆ

• ಪುಟ 2

ಕಿರುಸುದ್ದಿ

ಕೇಶವಗೆ ಗೌರವ



◆**ಧಾರವಾಡ:** ಕೋವಿಡ್-19 ವೇಳೆ ಅನೇಕ ಸಮಾಜಮುಖಿ ಸೇವೆ ಗುರುತಿಸಿ, ಕರ್ನಾಟಕ ರಾಜ್ಯ ವಿಕಲಚೇತನರ ಒಕ್ಕೂಟದ ನಿಕಟಪೂರ್ವ ಧಾರವಾಡ ಜಿಲ್ಲಾಧ್ಯಕ್ಷ ಹಾಗೂ ಸಕ್ಷಮ ಜಿಲ್ಲಾಧ್ಯಕ್ಷ ಕೇಶವ ಪ್ರಭಾಕರ ತೆಲಗು ಅವರಿಗೆ ಅಮೇರಿಕಾದ ಯುರೋಪಿಯನ್ ಬುಕ್ ಆಫ್ ಗ್ಲೋಬಲ್ ರಿಕಾರ್ಡ್ ಸಂಸ್ಥೆಯು ಪ್ರಸಂಶನಾ ಪತ್ರ ನೀಡಿ ಗೌರವಿಸಿದೆ. ಇದು ಇಡೀ ಏಷಿಯಾ ಖಂಡದಲ್ಲಿಯೇ ಸಮಾಜಮುಖಿ ಕೆಲಸಕ್ಕೆ ನೀಡುವ ಬಹುದೊಡ್ಡ ಗೌರವವಾಗಿದೆ.

ಡಾ.ಟಿ.ಕೆ.ಗುಂಡೂರ್‌ಗೆ ಪಿಎಚ್‌ಡಿ



◆**ಧಾರವಾಡ:** ಡಾ.ಟಿ.ಕೆ.ಗುಂಡೂರ್ ಮಂಡಿಸಿದ ಪೋರ್ಟಬಲ್ ಅಲ್ಲದ ದುರುದ್ದೇಶ ಪೂರಿತ ಫೈಲ್‌ಗಳನ್ನು ಪತ್ತೆ ಹಚ್ಚಲು ಪರಿಮಕಾರಿ ಅಲ್ಗಾರಿದಮ್ ಅಧ್ಯಯನ ಮತ್ತು ವಿನ್ಯಾಸ' ಎಂಬ ಪ್ರೌಢಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ಪ್ರದಾನಿಸಿದೆ. ಇವರಿಗೆ ಪ್ರಾಧ್ಯಾಪಕಿ ಡಾ.ಶ್ರೀದೇವಿ ಮಾರ್ಗದರ್ಶಕರಾಗಿದ್ದರು.

ಮೇ 1ಕ್ಕೆ ಉಪನ್ಯಾಸ

◆**ಧಾರವಾಡ:** ಕಾಯಕ ದಿನಾಚರಣೆ ಹಾಗೂ ಬಸವ ಜಯಂತಿ ಪ್ರಯುಕ್ತ ಮೇ 1ರ ಸಂಜೆ 5 ಗಂಟೆಗೆ ಶಹರದ ಚನ್ನಬಸವೇಶ್ವರ ನಗರದಲ್ಲಿರುವ ಲಿಂಗಾಯತ ಭವನದಲ್ಲಿ ವಿಶೇಷ ಉಪನ್ಯಾಸ ಹಾಗೂ ವಚನ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸಾಂಸ್ಕೃತಿಕ ನಾಯಕ ಬಸವಣ್ಣ ವಿಷಯ ಕುರಿತು ನಿವೃತ್ತ ಪ್ರಾಧ್ಯಾಪಕಿ ಡಾ.ವೀಣಾ ಹೂಗಾರ ಉಪನ್ಯಾಸ ನೀಡಲಿದ್ದು, ಪದ್ಮಶ್ರೀ ಪಂ.ಎಂ.ವೆಂಕಟೇಶಕುಮಾರ ವಚನ ಸಂಗೀತ ನಡೆಸಿಕೊಡಲಿದ್ದಾರೆ. ಮಹಾಸಭಾ ಜಿಲ್ಲಾಧ್ಯಕ್ಷ ಪ್ರದೀಪಗೌಡ ಪಾಟೀಲ ಅಧ್ಯಕ್ಷತೆ ವಹಿಸುವರು ಎಂದು ಮಹಾಸಭಾ ಕಾರ್ಯದರ್ಶಿ ಶಿವಶರಣ ಕಲಬಶೆಟ್ಟರ ತಿಳಿಸಿದ್ದಾರೆ.

ಸುಜಾತಗೆ ಪಿಎಚ್‌ಡಿ



◆**ಧಾರವಾಡ:** ಸಂಶೋಧನಾ ವಿದ್ಯಾರ್ಥಿನಿ ಸುಜಾತ ಆರ್. ಮಂಡಿಸಿದ ಕೊಡಗು ಜಿಲ್ಲೆಯ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿ: ಒಂದು ಅಧ್ಯಯನ ಎಂಬ ಪ್ರೌಢ ಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನಿಸಿದೆ. ಇವರಿಗೆ ಡಾ.ಆರ್. ಎಚ್.ನಾಯಕ ಮಾರ್ಗದರ್ಶನ ಮಾಡಿದ್ದರು.

ಶೇ.96.7ರಷ್ಟು ಫಲಿತಾಂಶ





◆**ಧಾರವಾಡ:** ತಾಲೂಕಿನ ನರೇಂದ್ರ ಗ್ರಾಮದ ಸರ್ಕಾರಿ ಪ್ರೌಢಶಾಲೆ ಕಳೆದ ಮಾರ್ಚ್‌ನಲ್ಲಿ ನಡೆದ 2025-26ನೇ ಸಾಲಿನ ಎಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.96.7ರಷ್ಟು ಫಲಿತಾಂಶ ದಾಖಲಿಸಿ, ಉತ್ತಮ ಸಾಧನೆ ಮಾಡಿದೆ. ಗುಣಮಟ್ಟದಲ್ಲಿ ಶೇ.78.25ರಷ್ಟು ಕ್ವಾಲಿಟಿ ವೇಟೇಜ್‌ನೊಂದಿಗೆ ಎ ಗ್ರೇಡ್ ಪಡೆದು, ಗಮನಾರ್ಹ ಸೆಳೆದಿದೆ. ಪರೀಕ್ಷೆ ಬರೆದ 91 ಮಕ್ಕಳಲ್ಲಿ 88 ಮಕ್ಕಳು ಉತ್ತೀರ್ಣರಾಗಿದ್ದು, 15 ಉನ್ನತ ಶ್ರೇಣಿ, 42 ಪ್ರಥಮ ದರ್ಜೆ, 20 ದ್ವಿತೀಯ ದರ್ಜೆ, 11 ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಸ್ನೇಹಾ ಮೊರಬ ಶೇ.95.68, ವೈಷ್ಣವಿ ವಿಧಾತೆ ಶೇ.93.44 ಮತ್ತು ಜ್ಯೋತಿ ಮಾದರ ಶೇ.92.64ರಷ್ಟು ಅಂಕ ಪಡೆದು ಶಾಲೆಗೆ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದಿದ್ದಾರೆ.

ಮೇ 4ರಂದು ಸಭೆ

◆**ಹುಬ್ಬಳ್ಳಿ:** ನವಲಗುಂದ ವಿಧಾನಸಭಾ ಕ್ಷೇತ್ರದ ಶಾಸಕ ಎನ್.ಎಚ್.ಕೋನರಡ್ಡಿ ಹಾಗೂ ಕುಂದಗೋಳ ವಿಧಾನಸಭಾ ಮತ ಕ್ಷೇತ್ರದ ಶಾಸಕ ಎಂ.ಆರ್.ಪಾಟೀಲ್ ಅವರ ಜಂಟಿ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಮೇ 4ರಂದು ಬೆಳಗ್ಗೆ 11ಕ್ಕೆ ತಾಲೂಕು ಆಡಳಿತ ಸೌಧದ ತಾಲೂಕು ಪಂಚಾಯತ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹುಬ್ಬಳ್ಳಿ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ರಾಮಚಂದ್ರ ಹೊಸಮನಿ ತಿಳಿಸಿದ್ದಾರೆ.

ನಿಧನಸುದ್ದಿ

ಯಶವಂತರಾವ್ ಮಹಾಲೆ



◆ **ಧಾರವಾಡ:** ಸ್ಥಳೀಯ ಕಲ್ಯಾಣನಗರ ನಿವಾಸಿ ಯಶವಂತರಾವ್ ಸುಬ್ಬಾ ಮಹಾಲೆ (99) ಮಂಗಳವಾರ ನಿಧನ ಹೊಂದಿದರು. ಅವರಿಗೆ ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಳಗವಿದೆ.

ಸುರೇಂದ್ರ ಬೆಟದೂರ



◆**ಅಳ್ನಾವರ:** ಇಲ್ಲಿನ ಜೈನ ಸಮಾಜದ ಮುಖಂಡರಾಗಿದ್ದ ಸುರೇಂದ್ರ ಬೆಟದೂರ(90) ನಿಧನರಾದರು ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮರಣದ ನಂತರವೂ ಮತ್ತೊಬ್ಬರಿಗೆ ಬೆಳಕಾಗಲು ಇವರು ಡಾ.ಎಂ.ಎಂ.ಜೋಶಿ ನೇತ್ರಾಲಯಕ್ಕೆ ಕಣ್ಣು ದಾನ ಮಾಡಿದ್ದಾರೆ.



ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮಿ ಮಠದ ಟ್ರಸ್ಟ್ ಕಮಿಟಿ ವತಿಯಿಂದ ಶ್ರೀಮಠದ ಕೈಲಾಸ ಮಂಟಪದಲ್ಲಿ ತಿಂಗಳ ಸಂಗೀತ ಕಾರ್ಯಕ್ರಮ ನಡೆಯಿತು. ಖ್ಯಾತ ಹಿಂದೂ ಸ್ತಾನಿ ಗಾಯಕಿ ಮಧುವಂತಿ, ಶ್ರೀಕಾಂತ ಅಂಬೇಕರ ತಂಡದವರು ಸಂಗೀತ ನಡೆಸಿಕೊಟ್ಟರು. ಅಧ್ಯಕ್ಷತೆ ಮಾಜಿ ಚೇರಮನ್ ಚನ್ನವೀರ ಮುಂಗುರವಾಡಿ ವಹಿಸಿದ್ದರು. ಟ್ರಸ್ಟ್ ಕಮಿಟಿ ಧರ್ಮದರ್ಶಿಗಳಾದ ಉದಯಕುಮಾರ ಡಿ. ನಾಯ್ಕ, ಡಾ. ಗೋವಿಂದ ಗು. ಮಣ್ಣೂರ ಉಪಸ್ಥಿತರಿದ್ದರು.

ಬುದ್ಧ ಪೂರ್ಣಿಮೆ ಉತ್ಸವ ನಾಳೆ

◆**ಹುಬ್ಬಳ್ಳಿ:** ಹುಬ್ಬಳ್ಳಿ ಪಿರಾಮಿಡ್ ಧ್ಯಾನಿಗಳ ಸಂಘದ ವತಿಯಿಂದ ಬುದ್ಧಪೂರ್ಣಿಮೆ ಉತ್ಸವ ಕಾರ್ಯಕ್ರಮ ಮೇ 1ರಂದು ಬೆಳಿಗ್ಗೆ 5ರಿಂದ ಸಂಜೆ 5ರವರೆಗೆ ನಗರದ ಕುಸುಗಲ್ ರಸ್ತೆಯ ಶ್ರೀನಿವಾಸ ಗಾರ್ಡನ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಸಾವಕಾರ ಹೇಳಿದರು. ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 9 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಪಿ.ರಾಜೀವ್, ಬಂಡಿವಾಡದ ಎ.ಸಿ.ವಾಲಿ ಗುರೂಜಿ, ಮೈಸೂರಿನ ಸಿ. ಕೃಷ್ಣಮೂರ್ತಿ ಪಾಲ್ಗೊಳ್ಳಲಿದ್ದಾರೆ. ಗಂಗಾವತಿಯ ಲಲಿತಾ ನಾರಾಯಣ ವಗ್ಗಾ, ಹೊಸಪೇಟೆಯ ವೆಂಕಟೇಶ ಕಾಕುಬಾಳ ಉಪನ್ಯಾಸ ನೀಡಲಿದ್ದಾರೆ ಎಂದರು. ಬೆಳಗ್ಗೆ 5ರಿಂದ 8 ಗಂಟೆವರೆಗೆ ಸಂಗೀತ, ನಾದ, ಧ್ಯಾನ ಕಾರ್ಯಕ್ರಮ ನಡೆಯಲಿದೆ. ಸಂಜೆ 4 ಗಂಟೆಗೆ ಗಂಗಾವತಿ ಪ್ರಾಣೇಶ ಅವರಿಂದ ಹಾಸ್ಯ ಕಾರ್ಯಕ್ರಮ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಏ.30ರಂದು ಸಂಜೆ 7ರಿಂದ 8 ಗಂಟೆವರೆಗೆ ನೃಪತುಂಗ ಬೆಟ್ಟದ ಬಳಿಯ ಪಿರಾಮಿಡ್ ಧ್ಯಾನ ಮಂದಿರದಲ್ಲಿ ಸಾಮೂಹಿಕ ಧ್ಯಾನ ನಡೆಯಲಿದೆ ಎಂದು ತಿಳಿಸಿದರು. ಸಂಘದ ವಿಶಾಲಾಕ್ಷಿ ಆಕಳವಾಡಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಅನಾರೋಗ್ಯ, ಮಾನಸಿಕ ಒತ್ತಡ, ಕೌಟುಂಬಿಕ ಸಮಸ್ಯೆಗಳು, ದುಃಖ ಹೆಚ್ಚುತ್ತಿದೆ. ಎಲ್ಲ ಸಮಸ್ಯೆಗಳಿಗೆ ಧ್ಯಾನ ಒಂದೇ ಪರಿಹಾರವಾಗಿದೆ ಎಂದರು. ನೀಲಕಂಠ ಆಕಳವಾಡಿ, ಲಲಿತ್ ಶಾ, ಸಚಿನ್ ಆಕಳವಾಡಿ, ಜೀವನ್ ವಸ್ತದ್ ಇದ್ದರು.



ಹುಬ್ಬಳ್ಳಿ: ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ನಗರದ ವಿಮಾನ ನಿಲ್ದಾಣದಿಂದ ರೈಲ್ವೆ ನಿಲ್ದಾಣಕ್ಕೆ ನೂತನ ಬಸ್ ಸೌಲಭ್ಯಕ್ಕೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಪ್ರಿಯಾಂಗಾ ಎಂ. ಹಾಗೂ ವಿಮಾನ ನಿಲ್ದಾಣದ ನಿರ್ದೇಶಕ ರೂಪೇಶ ಕುಮಾರ ಚಾಲನೆ ನೀಡಿದರು. ನಗರ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿ ಎಂ. ಸಿದ್ದಲಿಂಗೇಶ, ಪ್ರತಾಪ ಬಿ. ವಿ., ಅರುಣ ಡಿ. ವಿ., ವಿಭಾಗೀಯ ಸಾರಿಗೆ ಅಧಿಕಾರಿಗಳಾದ ಎಸ್.ಆರ್. ಮಾಟೋಳಿ, ವಿಭಾಗೀಯ ತಾಂತ್ರಿಕ ಶಿಲ್ಪಿ ಪ್ರವೀಣ ಈಡೂರ, ಹುಬ್ಬಳ್ಳಿ ನಗರ ಸಾರಿಗೆ ಘಟಕ ವ್ಯವಸ್ಥಾಪಕ ವಿನಾಯಕ ಸಾಲಿಮಠ ಇದ್ದರು.

ಜನಾಕ್ರೋಶ ಪಾದಯಾತ್ರೆ, ಪ್ರತಿಭಟನೆ ನಾಳೆ | ತಿಪ್ಪಣ್ಣ ಮಜ್ಜಗಿ ಅಭಿಮತ

ಮೀಸಲಾತಿ ವಿರೋಧ ಸಲ್ಲ



◆**ಹುಬ್ಬಳ್ಳಿ:** ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ವಿರೋಧಿಸಿದ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳ ನಡೆ ಖಂಡಿಸಿ ರಾಜ್ಯ ಮಹಿಳಾ ಮೋರ್ಚಾದ ವತಿಯಿಂದ ಮೇ 1 ರಂದು ನಗರದಲ್ಲಿ ಜನಾಕ್ರೋಶ ಪಾದಯಾತ್ರೆ ಹಾಗೂ ಪ್ರತಿಭಟನೆ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆಗೆ ತಿಳಿಸದ ಅವರು, ಮಹಿಳಾ ಮೋರ್ಚಾ ವತಿಯಿಂದ ನಾರೀ ಶಕ್ತಿ ವಂದನಾ ಅಧಿ ನಿಯಮವನ್ನು ಜಾರಿಯಾಗಂತೆ ತಡೆದ ಮಹಿಳಾ ವಿರೋಧಿ ಕಾಂಗ್ರೆಸ್ ಹಾಗೂ ಮಿತ್ರ ಪಕ್ಷಗಳ ವಿರುದ್ಧ ಜನಾಕ್ರೋಶ ಪಾದಯಾತ್ರೆ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಆರಂಭವಾಗಿ ನೆಹರು ಮೈದಾನದಲ್ಲಿ ನಾರೀ ಶಕ್ತಿ ವಂದನಾ ಪ್ರತಿಭಟನಾ ಸಭೆ ನಡೆಯಲಿದೆ. ಪ್ರತಿಭಟನಾ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ಉಪ-ನಾಯಕ ಅರವಿಂದ ಬೆಲ್ಲದ, ಸಿ.ಸಿ.ಪಾಟೀಲ, ರಾಜ್ಯ ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷ ಸಿ. ಮಂಜುಳಾ, ಸೆಂಟ್ರಲ್ ಕ್ಷೇತ್ರದ ಶಾಸಕ ಮಹೇಶ ಟೆಂಗಿನಕಾಯಿ, ಶಾಸಕ ಎಂ.ಆರ್ .ಪಾಟೀಲ, ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ, ಎಸ್.ವಿ.ಸಂಕನೂರ, ಮಾಜಿ ಶಾಸಕರು, ವಿಧಾನ ಪರಿಷತ್ ಸದಸ್ಯರು, ಪಾಲಿಕೆ ಸದಸ್ಯರು, ಬಿಜೆಪಿ ಮುಖಂಡರು, ಮಹಿಳಾ ಪ್ರಮುಖ ಪದಾಧಿಕಾರಿಗಳು, ಮಹಿಳಾ ಕಾರ್ಯಕರ್ತರು ಸಾರ್ವಜನಿಕರು ಭಾಗವಹಿಸುವರು ಎಂದು ತಿಳಿಸಿದ್ದಾರೆ.

ಮಹಿಳಾ ವಿರೋಧಿ ನೀತಿ ಆರೋಪ

◆**ಹುಬ್ಬಳ್ಳಿ:** ಮಹಿಳಾ ಮೀಸಲಾತಿ ವಿರೋಧಿಸಿದ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳ ವಿರುದ್ಧ ಮೇ 1 ರಂದು ಏರ್ಪಡಿಸಿದ್ದ ಪ್ರತಿಭಟನಾ ಸಭೆಯ ಅಂಗವಾಗಿ ಹು-ಧಾ ಪೂರ್ವ ವಿಧಾನ ಕ್ಷೇತ್ರದಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.

ಹು-ಧಾ ಪೂರ್ವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್ ನಂ. 67,68,69 ಹಾಗೂ 71 ರ ವಾರ್ಡ್‌ನ ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಸಭೆಯಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್ ಹಾಗೂ ಅದರ ಮೈತ್ರಿಕೂಟದ ಪಕ್ಷಗಳ ಮಹಿಳಾ ವಿರೋಧಿ ನೀತಿ ಖಂಡನೀಯ ಎಂದು ಆರೋಪಿಸಿ ಸಭೆಯನ್ನುದ್ದೇಶಿಸಿ ಮಾತನಾಡಿ, ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಲಾಯಿತು. ಸಭೆಯಲ್ಲಿ ಕ್ಷೇತ್ರದ ಅಧ್ಯಕ್ಷ ಮಂಜುನಾಥ ಕಾಟಕರ,ಮಹಿಳಾ ಮೋರ್ಚಾ ಅಧ್ಯಕ್ಷ ನಾಗರತ್ನಾ ಬಳ್ಳಾರಿ, ವಾರ್ಡ್ ಅಧ್ಯಕ್ಷ ಸುಭಾಸ ಅಥಣಿ, ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷ ಸಿ.ಮಂಜುಳಾ, ಗಂಗಾಧರಯ್ಯಾ ಹಿರೇಮಠ, ನಿರ್ಮಲಾ ಇಂಡಿ, ಪೂಜಾ ರಾಯ್ಕರ, ಪ್ರಭು ನವಲಗುಂದಮಠ, ವೆಂಕಟೇಶ ಕಾಟವೆ ಭಾಗವಹಿಸಿದ್ದರು.



ಪ್ರತ್ಯೇಕ ಪಾಲಿಕೆ ನಿರಾಕರಣೆ ಗೊತ್ತುವಳಿ ಖಂಡನೆ

◆**ಧಾರವಾಡ:** ಧಾರವಾಡ ನಗರಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆಯಾಗಿ ಸ್ವೀಕರಿಸಿ ಇದೀಗ ಅದೇ ಗೊತ್ತುವಳಿಯನ್ನು ನಿರಾಕರಿಸುತ್ತಿರುವುದನ್ನು ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ವೇದಿಕೆ ತೀವ್ರವಾಗಿ ಖಂಡಿಸಿದೆ.

ಬುಧವಾರ ಸಂಜೆ ಸಭೆ ನಡೆಸಿದ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ನೀಡಬೇಕೆಂಬ ಸರ್ವಾನುಮತದ ಗೊತ್ತುವಳಿಯನ್ನು ಧಿಕ್ಕರಿಸಿ ಹಿಂದೆ ಸರಿದು ಧಾರವಾಡ ಜನಕ್ಕೆ ದ್ರೋಹ ಮಾಡುತ್ತಿರುವುದು ಖಂಡನೀಯ.

ಈ ಗೊತ್ತುವಳಿ ಸ್ವೀಕಾರ ಮಾಡಬೇಕೆಂಬ ಹುನ್ನಾರ ಹೊಂದಿರುವ ಪಾಲಿಕೆ ಸದಸ್ಯರು ಮತ್ತು ಹಾಗೂ ಶಾಸಕರು ಇತ್ತೀಚೆಗಷ್ಟೆ ನಡೆದ ತಮ್ಮ ಚುನಾವಣೆಗಳಲ್ಲಿ

ಧಾರವಾಡಕ್ಕೆ ಪ್ರತ್ತೇಕ ಪಾಲಿಕೆ ಕೊಡಿಸುವುದರ ಪರವಾಗಿ ಇದ್ದರು ಎಂದು ಸಮಿತಿ ವ್ಯಂಗ್ಯವಾಡಿದೆ. ಹೋರಾಟ ವೇದಿಕೆ ಪ್ರತ್ಯೇಕಪಾಲಿಕೆ ಬಗ್ಗೆ ಮೆರವಣಿಗೆ ನಡೆಸಿದಾಗ ಕೆಲ ಪಾಲಿಕೆ ಸದಸ್ಯರು ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಸಿಗದಿದ್ದರೆ ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಡುವುದಾಗಿಯೂ ಹೇಳಿದ್ದರು. ವಿಪರ್ಯಾಸವೆಂದರೆ ಇದೇ ಸದಸ್ಯರು ಅದಕ್ಕೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ ಸಮಿತಿ ದೂರಿದೆ. ಮಹಾಪೌರರೊಬ್ಬರು ಗುಪ್ತವಾಗಿ ಪ್ರಚಾರವನ್ನು ಮಾಡಿದ್ದರೆಂಬ ಆರೋಪವಿದೆ ಎಂದು ವೇದಿಕೆ ಕಿಡಿಕಾರಿದೆ. ಶಾಸಕ ಅರವಿಂದ ಬೆಲ್ಲದ ಅವರು ಸ್ಮಾರ್ಟ್‌ಸಿಟಿ ಯೋಜನೆ ಸಲುವಾಗಿ ಧಾರವಾಡಕ್ಕೆ ಹೊಸದಾಗಿ ಸಾವಿರ ಕೋಟಿ ಅನುದಾನ ಕೊಡಿಸುವುದಾಗಿ ಹೇಳಿದ್ದು ಇದೆಲವೂ ಸುಳ್ಳಿನ ಕಂತೆ ಎಂದು ಸಮಿತಿ ಆರೋಪಿಸಿದೆ.

ವೇದಿಕೆ ಅಧ್ಯಕ್ಷ ಮನೋಜ್ ಪಾಟೀಲ್, ಉಪಾಧ್ಯಕ್ಷ ಪ್ರೊ.ಆರ್.ಎಂ.ಷಡಕ್ಷರಯ್ಯ, ಪ್ರಧಾನ ಕಾರ್ಯದರ್ಶಿ ಎಂ.ಬಿ.ಕಟ್ಟಿ, ಜಿ.ಎಸ್.ಬ್ಯಾಡಗಿ, ಡಾ.ಪಿ.ಎ.ಪೊಲೀಸ್ ಪಾಟೀಲ್, ಪ್ರೊ.ಎಸ್.ಬಿ.ಹಿರೇಮಠ, ಡಾ.ಎಸ್.ಜಿ.ಹಿರೇಮಠ, ಸೇರಿದಂತೆ ಸದಸ್ಯರು ಇದ್ದರು.

- ಈ ಹಿಂದೆ ಬಿಡುಗಡೆಯಾದ ಸಾವಿರ ಕೋಟಿ ಅನುದಾನದಲ್ಲಿ ಧಾರವಾಡಕ್ಕೆ ಬಿಡಿಕಾಸೂ ಸಹ ಸಿಕ್ಕಿರಲಿಲ್ಲ
- ಬೆಲ್ಲದ ಅವರು ಪ್ರತಿನಿಧಿಸುವ ಹುಬ್ಬಳ್ಳಿ ಭಾಗಕ್ಕೆ ಖರ್ಚು ಮಾಡಿದ್ದರು. ಶಾಸಕ ಬೆಲ್ಲದ ಮತ್ತು ಸಂಸದ ಸಚಿವ ಪ್ರಹ್ಲಾದ ಜೋಶಿ ಅವರು ಈಗ ಅನುದಾನದ ಬಗ್ಗೆ ಮಾತನಾಡುತ್ತಿದ್ದಾರೆ. ಇದೆಲ್ಲವೂ ನಾಟಕ
- ಈ ಆಡಿದ ಮಾತು ನಿಯಮಗಳು ಆಗಿವಿಯೇ? ಇಲ್ಲವೆ ಸರ್ಕಾರಿ ಪ್ರಕಟಣೆ ಆಗಿವೆಯೇ? ಈವರೆಗೆ ತಿಳಿದ ಮಾಹಿತಿ ಎಂದರೆ ಈ ಭಾರಿ ಅನುದಾನದ ಕೆಲ ಭಾಗವನ್ನು ಮಹಾನಗರ
- ಪಾಲಿಕೆಗಳು ನೀಡಿಬೇಕಿರುವುದು ಸರಿಯೇ ಹೇಗೆ ? ಇದನ್ನು ಸ್ಪಷ್ಟಿಕರಿಸಬೇಕು ಎಂದು ವೇದಿಕೆ ಆಗ್ರಹಿಸಿದೆ

ಪವರ್ ಲಿಫ್ಟಿಂಗ್ ಸ್ಪರ್ಧೆ: ಮೊಹಮ್ಮದ್ ಹುಜೈಫ್ ಪ್ರಥಮ

◆**ಹುಬ್ಬಳ್ಳಿ:** ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆಯ ಪಿಯು ವಿಭಾಗದ ವಿದ್ಯಾರ್ಥಿ ಮೊಹಮ್ಮದ್ ಹುಜೈಫ್ ಅವರು ಹಾಸನ ಜಿಲ್ಲಾ ಇವರ ವತಿಯಿಂದ ಆಯೋಜಿಸಲಾದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಬಹುಮಾನವನ್ನು ಪಡೆದು ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ. ವಿದ್ಯಾರ್ಥಿಯ ಈ ಸಾಧನೆಗೆ ಪ್ರಾಚಾರ್ಯ ಡಾ. ಬಾಜಿರಾವ ಕಾಂಬಳೆ ಹಾಗೂ ಕಾಲೇಜಿನ ಉಪನ್ಯಾಸಕರು, ಪೋಷಕರು ಸಂತೋಷ ವ್ಯಕ್ತಪಡಿಸಿದ್ದಾರೆ.



ಮೇ 8ರಿಂದ ಶಿಲಾಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ

◆**ಕುಂದಗೋಳ:** ತಾಲೂಕಿನ ದೇವನೂರ ಗ್ರಾಮದಲ್ಲಿ ದ್ಯಾಮವ್ವ ದೇವಿ, ದುರ್ಗಾದೇವಿ, ಕರಿಯಮ್ಮ ದೇವಿಯ ನೂತನ ಶಿಲಾಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಹಾಗೂ ಗ್ರಾಮದೇವಿ ಜಾತ್ರಾ ಮಹೋತ್ಸವ ಮೇ 8ರಿಂದ 16 ಜರಗಲಿದೆ ಎಂದು ಪಂಚಗ್ರಹ ಹಿರೇಮಠ ಶಿತಿಕಂಠೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ಪಂಚಗ್ರಹ ಹಿರೇಮಠದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದ ಭಕ್ತರ ಶ್ರಮದಿಂದಾಗಿ ನೂತನ ಶಿಲಾ ದೇವಸ್ಥಾನ ನಿರ್ಮಾಣಗೊಂಡಿದ್ದು, ಈ ದೇವಸ್ಥಾನದಲ್ಲಿ ಶಿಲಾ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ವಿಧಿ ವಿಧಾನಗಳೊಂದಿಗೆ ನೆರವೇರಲಿದ್ದು, ಮೇ 8ರಂದು ಬೆಳಗ್ಗೆ 10ಕ್ಕೆ ನೂತನ ಶಿಲಾ ಮೂರ್ತಿಗಳು ಗ್ರಾಮ ಪುರ ಪ್ರವೇಶ ಮಾಡಲಿದ್ದು, ಗ್ರಾಮದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಲಿದ್ದು ಅಂದು ಪುರುಷರು ಭಂಡಾರದ ಓಕುಳಿ ಆಚರಿಸಲಿದ್ದಾರೆ. ನಂತರ ಧಾನ್ಯಾಧಿವಾಸ, ಜಲಾಧಿವಾಸ, ತಲಾಧಿವಾಸ, ಶಯನಾದಿವಾಸ ವಿವಿಧಧಾರ್ಮಿಕಕಾರ್ಯಕ್ರಮಗಳು ಜರಗಲಿವೆ. ಮೇ 14ರಂದು ಮುಂಜಾನೆ ಗಣಹೋಮ, ದುರ್ಗಾಹೋಮ, ನವಗ್ರಹ ವಾಸ್ತು ಶಾಂತಿ ಪೂಜೆಯೊಂದಿಗೆ ನೂತನ ಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಜರಗುವುದು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಮಹೋತ್ಸವ ನಡೆಯಲಿದೆ. ಮೇ 15ರಂದು ದೇವಿ ಹಣ್ಣು ಕಾಯಿ ಅರ್ಪಿಸುವುದು, 16ರಂದು ದೇವಿಗೆ ಕುಂಕುಮ ಹರಿದ್ರಾ ಪೂಜೆ ನಡೆಯುವುದು. ಮೇ 8ರಿಂದ 16 ವರಿಗೆ ಪ್ರತಿನಿತ್ಯವೂ ಧಾರ್ಮಿಕ ಸಭೆಗೆ ರಾಜ್ಯದ ವಿವಿಧ ಮಠಾಧೀಶರು, ರಾಜಕೀಯ ಮುಖಂಡರು, ಗಣ್ಯ ವ್ಯಕ್ತಿಗಳು ಆಗಮಿಸುವರು ಎಂದರು. ಪತ್ರಿಕಾಗೋಷ್ಠಿಯಲ್ಲಿ ಗ್ರಾಮದೇವಿ ಜಾತ್ರಾ ಮಹೋತ್ಸವದ ಪದಾಧಿಕಾರಿಗಳು, ಗ್ರಾಮದ ಮುಖಂಡರು ಇದ್ದರು.

> ಗ್ರಾಮದ ಮಹಿಳೆಯರಿಗೆ ಉತ್ಸವ ಸಮಿತಿಯಿಂದ ಸೀರೆ ಉಡುಗೊರೆ ನೀಡಲಾಗುವುದು. ಒಂದು ವಾರಗಳು ಗ್ರಾಮದಲ್ಲಿ ಯಾರೂ ಸಹ ಅಡಿಗೆ ಮಾಡಬಾರದು. ಸಮಿತಿ ಉಪಹಾರ, ಊಟದ ವ್ಯವಸ್ಥೆ ಮಾಡಿದೆ.
> ■ ಶಿತಿಕಂಠೇಶ್ವರ ಸ್ವಾಮೀಜಿ, ಪಂಚಗ್ರಹ ಹಿರೇಮಠ



ದ್ಯಾಮವ್ವ-ದುರ್ಗವ್ವ ದೇವಿ ಜಾತ್ರೆ



◆**ಧಾರವಾಡ:** ಮೃತ್ಯುಂಜಯ ನಗರದ ಹಾವೇರಿಪೇಟೆಯ ದ್ಯಾಮವ್ವ-ದುರ್ಗವ್ವ ಜಾತ್ರಾ ಮಹೋತ್ಸವ ಮೇ 1ರಿಂದ ಮೇ 5ರವರೆಗೆ ಐದು ದಿನಗಳು ನಡೆಯಲಿದೆ ಎಂದು ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಕೆ.ಎಸ್.ಭೀಮಣ್ಣವರ ಮಾಹಿತಿ ನೀಡಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಡಾ.ಮಲ್ಲಿಕಾರ್ಜುನ ಶ್ರೀಗಳು, ನಯಾನಗರ ಅಭಿನವ ಸಿದ್ಧಲಿಂಗ ಶ್ರೀಗಳು, ಬಂಕಾಪುರದ ಬಾನುದಾಸ ಸರವೇದ, ಹೆಬ್ಬಳ್ಳಿ ದತ್ತಾವಧೂತ ಮಹಾರಾಜ ಸಾನ್ನಿಧ್ಯ ವಹಿಸಲಿದ್ದು, ಪ್ರವಚನ ನಡೆಯಲಿದೆ ಎಂದರು.

ಮೇ 1ಕ್ಕೆ ಬೆಳಗ್ಗೆ ದೇವಿಯರಿಗೆ ಪೂಜೆ, ಉಡಿ ತುಂಬುವ, ಮಧ್ಯಾಹ್ನ 12.22ಕ್ಕೆ ದತ್ತಾವಧೂತರ ಸಾನ್ನಿಧ್ಯದಲ್ಲಿ ದೇವಿಯರ ವಿವಾಹ, ಮಲ್ಲಿಕಾರ್ಜುನ ಶ್ರೀಗಳು ಪ್ರವಚನ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮದ ಬಳಿಕ ಮಹಾಪ್ರಸಾದ ಜರುಗಲಿವೆ. ಮೇ.2ಕ್ಕೆ ಬೆಳಗ್ಗೆ ದೇವಿಯರಿಗೆ ಪೂಜೆ ಬಳಿಕ ದತ್ತಾತ್ರೇಯ ವೆಂಕಟೇಶ ಜೋಶಿ ಅವರಿಂದ ಚಂಡಿಕಾ ಹೋಮ ಮತ್ತು ಜನರಿಂದ ದೇವಿಯರಿಗೆ ಉಡಿ ತುಂಬುವ, ಅಭಿನವ ಸಿದ್ಧಲಿಂಗ ಶ್ರೀ ಪ್ರವಚನ ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ ಎಂದರು. ಮೇ 3ಕ್ಕೆ ದೇವಿಯರಿಗೆ ಪ್ರಾತಃಕಾಲದಲ್ಲಿ ಪೂಜೆ, ಬೆಳಗ್ಗೆ 8ರಿಂದ ನಿಗದಿಪಡಿಸಿದ ಸ್ಥಳದಲ್ಲಿಯೇ ದೇವಿಯರ ಹೊನ್ನಾಟ ನಡೆಯಲಿದೆ. ಮಧ್ಯಾಹ್ನ ಮಹಾಪ್ರಸಾದ ಸಂಜೆ 6ಕ್ಕೆ ಹೊನ್ನಾಟ ಮುಗಿಸಿ, ಚೌಕಿ ಮನೆಗೆ ಮರಳಿ ಬರುವುದಾಗಿ ಮಾಹಿತಿ ನೀಡಿದರು. ಬಾನುದಾನ ಸರವೇದ ಅವರಿಂದ ಕೀರ್ತನ ಕಾರ್ಯಕ್ರಮ ಸೇರಿ ರಾತ್ರಿ ಬಸಮ್ಮ ಸುಲ್ತಾನಪುರಿ ಹಾಗೂ ಲಕ್ಕಣ್ಣ ಚುಂಚನೂರ ಅವರಿಂದ ಸವಾಲ್ ಜವಾಬ್ ಪದ ನಡೆಯಲಿವೆ. ಮೇ 4ಕ್ಕೆ ದೇವಿಯರಿಗೆ ಪೂಜಾ ಕಾರ್ಯಕ್ರಮ ನೆರವೇರುವುದಾಗಿ ತಿಳಿಸಿದರು. ಬೆಳಗ್ಗೆ 8ರಿಂದ ಮಧ್ಯಾಹ್ನ 12.30ರವರೆಗೆ ನಾಗೇಂದ್ರ ತೋರಸ್ಥರ, ಬಿ.ಜಿ.ಹಟ್ಟಿ ಅವರಿಂದ ಗ್ರಾಮ ದೇವಿಯರ ಪುರಾಣ ಓದು ನಡೆಯಲಿದೆ. 12.30ಕ್ಕೆ ಮಹಾಪ್ರಸಾದ, ಪ್ರವಚನದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಮೇ 5ಕ್ಕೆ ಬೆಳಗ್ಗೆ ದೇವಿಯರಿಗೆ ಪೂಜೆ, ಬೆಳಗ್ಗೆ 8ಕ್ಕೆ ಕುಂಭಮೇಳ, ಸಕಲ ವಾದ್ಯ ಮೇಳದೊಂದಿಗೆ ಗ್ರಾಮ ದೇವಿಯರ ಭವ್ಯ ಮೆರವಣಿಗೆ ನಿಗದಿಪಡಿಸಿದ ರಸ್ತೆಯಲ್ಲಿ ಸಾಗಲಿದೆ. ಮೆರವಣಿಗೆಯಲ್ಲಿ ಭಂಡಾರ ಆಟವಂತೂ ಇರುವುದಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ವಿಜಯ ಭೋಸಲೆ, ಶಂಕರ ಕದಂ, ಆರ್.ಜಿ.ಕೆಲಗೇರಿ ಹಾಗೂ ಜಮದಾಳೆ ಇದ್ದರು.

ಕೆಲಸದ ಅವಧಿ ಬದಲಾವಣೆಗೆ ಆಗ್ರಹ

◆**ಹುಬ್ಬಳ್ಳಿ:** ಅವಳಿನಗರದಲ್ಲಿ ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದ್ದು, ಪೌರಕಾರ್ಮಿಕರ ಕೆಲಸದ ಸಮಯದ ಅವಧಿ ಬದಲಾವಣೆ ಮಾಡಬೇಕು ಎಂದು ಧಾರವಾಡ ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಪೌರಕಾರ್ಮಿಕರ ಮತ್ತು ನೌಕರರ ಸಂಘದ ವತಿಯಿಂದ ಮೇಯರ್ ಜ್ಯೋತಿ ಪಾಟೀಲ ಹಾಗೂ ಆಯುಕ್ತ ಡಾ. ರುದ್ರೇಶ ಘಾಳಿ ಅವರಿಗೆ ಮನವಿ ಸಲ್ಲಿಸಲಾಯಿತು.

ಸಂಘದ ಧಾರವಾಡ ಜಿಲ್ಲೆ ಅಧ್ಯಕ್ಷರಾದ ಡಾ. ವಿಜಯ ಎಂ. ಗುಂಟ್ರಾಳ, ಗಾಳೆಪ್ಪ ದ್ವಾಲಲಕೇರಿ, ಗಂಗವ್ವಾ ಸಿದ್ರಾಪೂರ, ಅನೀತ ಈನಗೊಂಡ, ಲಕ್ಷ್ಮೀ ಬೇತಾಪಲ್ಲಿ, ಕನಕಪ್ಪ ಕೊಟಬಾಗಿ, ಪವನ ಸಗಬಾಲ, ನರಸಿಂಹ ಮಾದರ, ಮಹೇಶ ಮಾದರ ತಾಯಪ್ಪ ಕಣೇಕಲ್ಲ ಪುಲ್ಲಯ್ಯ ಚಿಂಚಗೋಳ ರಮೇಶ ಗೊಲ್ಲರ, ಬಾಬು ಮಾದರ, ಶರೀಫಮಸರಕಲ್ಲ, ನಿಂಗವ್ವ ಹಿರಿಜನ ಆನಂದ ಕೆಳಗಿನಮನಿ ಇದ್ದರು.

ನಾಲ್ಕು ಸಾವು

ಕಳೆದ ಹಲವು ತಿಂಗಳಿನಿಂದ ತೀವ್ರ ಬಿಸಿಲಿನ ತಾಪಮಾನ ವಿಪರೀತ ಹೆಚ್ಚಾಗಿದೆ. ಅವಳಿನಗರದ ಪೌರಕಾರ್ಮಿಕರು ಇದನ್ನು ಲೆಕ್ಕಸದೆ ವಿವಿಧ ವಾರ್ಡ್‌ಗಳ ಸ್ವಚ್ಛತೆ ಕಾರ್ಯ ತೊಡಗುತ್ತಿದ್ದಾರೆ. ಆದರೆ ಬಿಸಲಿನ ತಾಪಕ್ಕೆ ಹಲವರು ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ರಾಯಚೂರನಲ್ಲಿ ಒಬ್ಬ ಪೌರಕಾರ್ಮಿಕ ಹಿಟ್ ಸ್ಟ್ರೋಕ್ ಬಲಿಯಾಗಿದ್ದಾನೆ. ರಾಜ್ಯದಲ್ಲಿ ಬಲಿಯಾದವರ ಸಂಖ್ಯೆ 4ಕ್ಕೆ ಏರಿಕೆಯಾಗಿದೆ. ಆದ್ದರಿಂದ ಆತಂಕಗೊಂಡ ಪೌರಕಾರ್ಮಿಕರಿಗೆ ಸ್ವಚ್ಚತಾ ಕೆಲಸ ನಿರ್ವಹಿಸಲು ತೊಂದರೆಯಾಗುತ್ತಿದೆ. ಬಿಸಿಲಿನ ತಾಪದಿಂದ ತಲೆ ಸುತ್ತುವುದು, ಬಲಹೀನತೆ, ತಲೆ ನೋವು, ಆರೋಗ್ಯದ ಮೇಲೆ ಇನ್ನೂ ಮುಂತಾದ ಅಡ್ಡ ಪರಿಣಾಮಗಳು ಉಂಟಾಗುತ್ತದೆ. ಕೊರೋನಾ ವೇಳೆ ಪೌರಕಾರ್ಮಿಕರಿಗೆ ಸ್ವಚ್ಛತಾ ಕೆಲಸದ ಸಮಯ ಬದಲಿಸಿದಂತೆ ಈಗಲೂ ಅನುಕೂಲ ಮಾಡಬೇಕು ಎಂದು ಆಗ್ರಹಿಸಿದರು. ಬೆಳಿಗ್ಗೆ 6 ಗಂಟೆಯಿಂದ 11ರ ವರೆಗೆ ನಿಗದಿಪಡಿಸಿ ಪೌರ ಕಾರ್ಮಿಕರ ಆರೋಗ್ಯದ ಹಿತದೃಷ್ಟಿ ಕಾಯಬೇಕು ಎಂದು ಮನವಿ ಮಾಡಿದರು.



ಜೆಎಸ್‌ಎಸ್ ವಿದ್ಯಾಪೀಠದ ಸಾಧನೆ








◆**ಕುಂದಗೋಳ:** ಪಟ್ಟಣದ ಜೆ.ಎಸ್.ಎಸ್ ವಿದ್ಯಾಪೀಠದ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, ಆಂಗ್ಲ ಮಾಧ್ಯಮ ಪ್ರೌಢಶಾಲೆ ಶೇ.100 ಫಲಿತಾಂಶ ದಾಖಲಿಸಿದೆ. ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸೌಮ್ಯ ಕರಡಿಗುಡ್ಡ 97.28 ಅಂಕಗಳೊಂದಿಗೆ ಶಾಲೆಗೆ ಪ್ರಥಮ, ಫಾತಿಮಾ ಅರ್ಷಿಯಾ 96.96 ದ್ವಿತೀಯ, ಲಕ್ಷ್ಮೀ ಚಾಕಲಬ್ಬಿ 95.84 ತೃತೀಯ, ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಮನುಶ್ರೀ ಪಾಟೀಲ 92.16, ಪ್ರೀತಿ ಸಂಶಿ 91.04 ಹಾಗೂ ವಿಜಯಲಕ್ಷ್ಮೀ ಸೊರಟೂರ 90.24 ಅಂಕಗಳನ್ನು ಗಳಿಸಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಶ್ರೀ ಗುರುದೇವ ಮಲ್ಲಿಕಾರ್ಜುನ ಕನ್ನಡ ಮಾಧ್ಯಮ ಪ್ರೌಢಶಾಲೆ ಶೇ.90.10ರಷ್ಟು ಫಲಿತಾಂಶ ಸಾಧಿಸಿದೆ. ವಿಜಯ ಮೇಟಿ 92.05, ವಿಜಯ ನಾಯ್ಕರ 88.64, ಕೀರ್ತಿ ಆಟದ 86.08, ಅಭಿಷೇಕ ಬಂಡಿ 84.48, ಸುಮನ ಬೇಗಂ 82.24 ಮತ್ತು ಮನೋಜಗೌಡ ಸಂಕನಗೌಡ 82.40 ಅಂಕ ಪಡೆದು ಸಾಧನೆ ಮಾಡಿದ್ದಾರೆ. ತಾಲೂಕು ಮಟ್ಟದಲ್ಲಿ ಸೌಮ್ಯ ಕರಡಿಗುಡ್ಡ 5ನೇ ರ್‍ಯಾಂಕ್ ಹಾಗೂ ಫಾತಿಮಾ ಅರ್ಷಿಯಾ 7ನೇ ರ್‍ಯಾಂಕ್ ಪಡೆದಿದ್ದಾರೆ. ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಯಲ್ಲಪ್ಪ ಮೆಗುಂಡಿ ಮಾತನಾಡಿ, ಶಿಕ್ಷಕರ ಶ್ರಮ ಹಾಗೂ ವಿದ್ಯಾರ್ಥಿಗಳ ಆಸಕ್ತಿ ಈ ಸಾಧನೆಗೆ ಸ್ಫೂರ್ತಿಯಾಗಿದೆ. ಜೆಎಸ್‌ಎಸ್ ವಿದ್ಯಾಪೀಠವು ಶಿಕ್ಷಣ ಕ್ಷೇತ್ರದಲ್ಲಿ ತನ್ನ ಮೆರುಗು ತೋರಿಸಿದೆ ಎಂದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಮಲ್ಲಯ್ಯ ಸ್ವಾಮೀಜಿ, ಶಿವಾನಂದ ಸ್ವಾಮೀಜಿ, ಸಂಸ್ಥೆಯ ಕಾರ್ಯದರ್ಶಿಗಳು, ಆಡಳಿತ ಮಂಡಳಿ ಸದಸ್ಯರು, ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ಹರ್ಷವ್ಯಕ್ತಪಡಿಸಿದ್ದಾರೆ.

ಧಾರ್ಮಿಕ ಸಂಸ್ಕಾರ ಶಿಕ್ಷಣ ನೀಡಿ

◆**ಕಲಘಟಗಿ:** ಛತ್ರಪತಿ ಶಿವಾಜಿ ಅವರಿಗೆ ಜೀಜಾಮಾತೆ ಧರ್ಮಗ್ರಂಥಗಳನ್ನು ಕಲಿಸಿದಂತೆ, ಈಗಿನ ಪಾಲಕರು ಮಕ್ಕಳಿಗೆ ಸಂಸ್ಕೃತಿ, ಧಾರ್ಮಿಕ ಶಿಕ್ಷಣ ನೀಡಬೇಕು ಎಂದು ಬೆಂಗಳೂರು ಶ್ರೀ ಗೋಸಾವಿ ಮಹಾಸಂಸ್ಥಾನಮಠ ಭವಾನಿ ಪೀಠದ ಅಧ್ಯಕ್ಷ ಮಂಜುನಾಥಭಾರತಿ ಸ್ವಾಮೀಜಿ ಹೇಳಿದರು.

ಅವರು ತಾಲೂಕಿನ ತಂಬೂರ ಗ್ರಾಮದೇವತೆಯರ ದರ್ಶನ ಹಾಗೂ ನೂತನವಾಗಿ ನಿರ್ಮಿತವಾಗಿರುವ ದೇವಾಲಯವನ್ನು ವೀಕ್ಷಿಸಿದ ನಂತರ ಧರ್ಮಸಭೆ ಉದ್ದೇಶಿಸಿ ಮಾತನಾಡಿ, ತಂದೆ ತಾಯಿಗಳು ಮಕ್ಕಳ ವಿದ್ಯಾಭ್ಯಾಸ, ಸಂಸ್ಕಾರ, ವ್ಯಕ್ತಿತ್ವ ನಿರ್ಮಾಣ ಕಡೆಗೆ ಗಮನ ಕೊಡದಿದ್ದರೆ ಈಗಿನ ಮಕ್ಕಳು ದುಷ್ಟರ ಸಹವಾಸ, ದುರಭ್ಯಾಸಗಳಿಗೆ ಈಡಾಗಿ ಸಮಾಜಕ್ಕೆ, ಹೆತ್ತ ತಂದೆ ತಾಯಿಗಳಿಗೆ ಕಂಟಕವಾಗುತ್ತಿದ್ದು, ಆದ್ದರಿಂದ ಪಾಲಕರು ಮಕ್ಕಳಿಗೆ ಉತ್ತಮ ಧಾರ್ಮಿಕ ಸಂಸ್ಕಾರ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಫಕೀರೇಶ ನೇಸರೇಕರ, ಮಹೇಶ ಬೆಳಗಾಂವಕರ, ಮಾಂತೇಶ ತಹಸೀಲ್ದಾರ, ಹನುಮಂತ ಸರಾವರಿ, ಅಶೋಕ ಪಾಳೇಕಾರ, ಪರಶುರಾಮ ಹುಲಗೋಡ, ಬಸಯ್ಯಾ ಆಗಡಿಮಠ, ರಾಮಣ್ಣ ಅಲ್ಲಾಪುರ, ಮಣ್ಣಪ್ಪ ಮಡಿವಾಳಕರ, ಸಂಗನಗೌಡ ಪಾಟೀಲ, ನಿಂಗಪ್ಪ ಕಾಣೋಜಿ, ಸಂಜೀವ ಪಾಳೇಕಾರ, ರಾಘವೇಂದ್ರ ಹುಲಿಹೊಂಡ, ಪ್ರವೀಣ ಅರ್ಕಸಾಲಿ, ಮಂಜುನಾಥ್ ಜ್ಯೋತಿ, ಗುರುಹಿರಿಯರು ಉಪಸ್ಥಿತರಿದ್ದರು.



ಮೇ 4ರಂದು ಪೂರ್ವಭಾವಿ ಸಭೆ, ಪದಗ್ರಹಣ

◆**ಹುಬ್ಬಳ್ಳಿ:** ರಾಜ್ಯದ ಐದು ಪ್ರಮುಖ ವಿಮಾನ ನಿಲ್ದಾಣಗಳಿಗೆ ಕನ್ನಡಿಗ ಮಹನೀಯರ ನಾಮಕರಣ ಮಾಡಬೇಕು ಎಂದು ಆಗ್ರಹಿಸಿ ಹೋರಾಟ ಹಮ್ಮಿಕೊಳ್ಳಲಾಗಿದ್ದು, ಮೇ 4 ರಂದು ಪೂರ್ವಭಾವಿ ಸಭೆ ಹಾಗೂ ರಾಜ್ಯ ನಾಮಕರಣ ಚಳುವಳಿಯ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಗೋಕುಲ ರಸ್ತೆ ಕ್ಯೂಬಿಕ್ಸ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಚಳುವಳಿಯ ಸಂಚಾಲಕ ಶಿವಾನಂದ ಮುತ್ತಣ್ಣನವರ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಕ್ರಾಂತಿ ವೀರ ಸಂಗೊಳ್ಳಿ ರಾಯಣ್ಣ, ಬೆಳಗಾವಿ ಕಿತ್ತೂರ ರಾಣಿ ಚನ್ನಮ್ಮ, ಶಿವಮೊಗ್ಗಕ್ಕೆ ರಾಷ್ಟ್ರ ಕವಿ ಕೆ.ವಿ. ಪುಟ್ಟಪ್ಪ, ವಿಜಯಪುರಕ್ಕೆ ಬಸವೇಶ್ವರ ಹಾಗೂ ಬೆಂಗಳೂರ ಟರ್ಮಿನಲ್ 2 ವಿಮಾನ ನಿಲ್ದಾಣಕ್ಕೆ ನಟ ಡಾ. ರಾಜ ಕುಮಾರ ಅವರ ಹೆಸರು ನಾಮಕರಣ ಮಾಡಬೇಕು ಎಂದು ಒತ್ತಾಯಿಸಿದರು.

ಐದು ವಿಮಾನ ನಿಲ್ದಾಣಕ್ಕೆ ಕನ್ನಡ ಮಹನೀಯರ ಹೆಸರು ನಾಮಕರಣ ಮಾಡಲು ರಾಜ್ಯ ಸರ್ಕಾರ ಅಧಿವೇಶನಲ್ಲಿ ನಿರ್ಣಯ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ. ಹಲವು ವರ್ಷ ಕಳೆದರು ಕೇಂದ್ರ ಸರ್ಕಾರ ನಿರ್ಧಾರ ತೆಗೆದುಕೊಳ್ಳದೆ ನಿರ್ಲಕ್ಷ್ಯ ಮಾಡುತ್ತಿದೆ. ಹೋರಾಟ ಮಾಡಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಮೂಲಕ ಕೇಂದ್ರ ವಿಮಾನಯಾನ ಸಚಿವ ರಾಮಮೋಹನ ನಾಯ್ಡು ಅವರಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಅವರು ಕಾಲಹರಣ ಮಾಡಲಾಗುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೇ 5 ರಂದು ಸಂಜೆ 5 ಗಂಟೆಗೆ ಕುಂದಗೋಳ ತಾಲೂಕಿನ ಯರಗುಪ್ಪಿ ಗ್ರಾಮ ಅಡಿವೆಪ್ಪ ಶಿವಳ್ಳಿ ಅವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಭೆ ನಡೆಯಲಿದ್ದು, ಶಾಸಕ ವಿಜಯಾನಂದ ಕಾಶಪ್ಪನವರ ಚಾಲನೆ ನೀಡಲಿದ್ದಾರೆ. ಈ ಹೋರಾಟಕ್ಕೆ ಕನ್ನಡ ಚಲನಚಿತ್ರರಂಗದ ನಟರಾದ ಜಯಮಾಲಾ, ಸಾ.ರಾ. ಗೋವಿಂದ, ರಾಕಲೈನ್ ವೆಂಕಟೇಶ, ಶಿವರಾಜಕುಮಾರ ಸೇರಿದಂತೆ ಹಲವು ನಟರನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿದರು.

ವಸತಿ ನಿಲಯಗಳ ಮೇಲೆ ಲೋಕಾಯುಕ್ತ ದಾಳಿ

◆**ಹುಬ್ಬಳ್ಳಿ:** ವಸತಿ ನಿಲಯಗಳಲ್ಲಿ ಮೂಲ ಸೌಕರ್ಯ ಸರಿಯಾಗಿ ನೀಡುತ್ತಿಲ್ಲ ಎಂದು ದೂರುಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ಬುಧವಾರ ಬೆಳಗ್ಗೆ ಹು-ಧಾ ಅವಳಿನಗರದ ವಸತಿ ನಿಲಯಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದರು.

ಹುಬ್ಬಳ್ಳಿಯ ಲಿಂಗರಾಜನಗರದ ತೋಳನಕೇರಿಯಲ್ಲಿರುವ ವಸತಿ ನಿಲಯ ಸೇರಿ 17 ನಿಲಯಗಳಿಗೆ ಭೇಟಿ ನೀಡಿದ ಅಧಿಕಾರಿಗಳು ಪರಿಶೀಲಿಸಿದರು. ವಿದ್ಯಾರ್ಥಿಗಳು ಸರಿಯಾದ ಊಟ ನೀಡುವುದಿಲ್ಲ, ವಸತಿ ನಿಲಯಗಳಲ್ಲಿ ಮೂಲ ಸೌಕರ್ಯ ಸಮರ್ಪಕವಾಗಿಲ್ಲ ಎಂದು ಅಧಿಕಾರಿಗಳ ಮುಂದೆ ಅಳಲು ತೋಡಿಕೊಂಡರು. ಈ ಕುರಿತು ಸಂಪೂರ್ಣ ವರದಿಯನ್ನು ಲೋಕಾಯುಕ್ತ ಎಸ್ಪಿಗೆ ಸಲ್ಲಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತ ಎಸ್ಪಿ ಸಿದ್ದಲಿಂಗಪ್ಪ ಅವರ ನೇತೃತ್ವದಲ್ಲಿ ಈ ದಾಳಿ ನಡೆದಿದ್ದು, ಡಿವೈಎಸ್‌ಪಿ ವಿಜಯ ಬಿರಾದರ್ ನೇತೃತ್ವದ ತಂಡ ವಿದ್ಯಾರ್ಥಿಗಳಿಂದ ಮಾಹಿತಿ ಸಂಗ್ರಹಿಸಿತು. ಒಟ್ಟು 17 ತಂಡಗಳು ದಾಳಿ ನಡೆಸಿದ್ದು, ಅವುಗಳಲ್ಲಿ 7 ಬಿಸಿಎಂ ವಸತಿ ನಿಲಯಗಳು, 7 ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳು ಹಾಗೂ 3 ಅಲ್ಪಸಂಖ್ಯಾತರ ವಸತಿ ನಿಲಯಗಳು ಸೇರಿವೆ.

ಕೊಲೆಗೆ ಯತ್ನ: ಕ್ಷುಲ್ಲಕ ಕಾರಣಕ್ಕೆ ವ್ಯಕ್ತಿಯೋರ್ವನಿಗೆ ಇಬ್ಬರು ಸೇರಿ ಕಟ್ಟಿಗೆಯಿಂದ ಹಲ್ಲೆ ನಡೆಸಿ ಕೊಲೆ ಮಾಡಲು ಯತ್ನಿಸಿದ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈಶ್ವರ ನಗರದ ಶಿವಕುಮಾರ ತುಮಕೂರ(29) ಎಂಬುವನ ಮೇಲೆ ಕೆಬಿ ನಗರದ ಚೇತನ ಬಳಗಾನೂರ ಹಾಗೂ ಲಕ್ಷ್ಮಣ ದೊಡ್ಡಮನಿ ಹಲ್ಲೆ ನಡೆಸಿದ್ದಾರೆ. ಶಿವಕುಮಾರ ಇವರಿಬ್ಬರ ಹೇಳಿದ ಮಾತು ಕೇಳುತ್ತಿಲ್ಲ ಎಂಬ ಕಾರಣಕ್ಕೆ ಕೋಪಗೊಂಡು ಪಾರ್ಟಿ ಮಾಡುವ ನೆಪದಲ್ಲಿ ಕರೆದುಕೊಂಡು ಹೋಗಿ ಕಟ್ಟಿಗೆ ಹಾಗೂ ಕಲ್ಲಿನಿಂದ ಹಲ್ಲೆ ನಡೆಸಿ ಕೊಲೆ ಮಾಡಲು ಯತ್ನಿಸಿದ್ದಾರೆ. ಅಷ್ಟೇ ಅಲ್ಲದೇ ಆತನ ಬೈಕ್ ಬೆಂಕಿ ಹಚ್ಚಿ ಸುಟ್ಟು ಹಾಕಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಹುಬ್ಬಳ್ಳಿ
ಗುರುವಾರ, 30 ಏಪ್ರಿಲ್ 2026
ಸಂಪುಟ 16, ಸಂಚಿಕೆ 36, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಅಭಿವೃದ್ಧಿಗೆ ಹೊಸ ಜೀವನಾಡಿ: ಮೋದಿ | ೦೭ ತಿರುಪತಿಗೆ ನಂದಿನಿ ತುಪ್ಪ | ೦೮ ಅಯೋಧ್ಯೆ ಶಿವದೇಗುಲ ಮೇಲೆ ಧ್ವಜಾರೋಹಣ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಚಿತ್ರೆ

ದಿನದ ಮಾತು

ಚಿತ್ತಶುದ್ಧಿ ಇಲ್ಲದವರಿಗೆ ಹಿತೋಕ್ತಿ ಹೇಳಿದರೇನು ಪ್ರಯೋಜನ?

▲ ಲೋಕೋಕ್ತಿ

ಗೂಂಡಾ ರಾಜ್‌ಗೆ ಹೆದರದ ಬಂಗಾಳ ಮತದಾರ

ಗುರುತರ

• ಸೋಮಶೇಖರ ಸಿ.ಜೆ.

• ಪುಟ ೬

ಕಿರುಸುದ್ದಿ

ವಿದ್ಯಾರ್ಥಿ ಆತ್ಮಹತ್ಯೆ: 3 ಪೊಲೀಸರ ಅಮಾನತು

• **ಧಾರವಾಡ:** ಪೊಲೀಸರ ಕಿರುಕುಳದಿಂದ ಬಿಎಸ್ಸಿ ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾಗಿರಿ ಪೊಲೀಸ್ ಠಾಣೆಯ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಡ್ರಗ್ಸ್ ಡ್ರೈವ್ ವೇಳೆ ಸಿಕ್ಕಿಬಿದ್ದವರಿಂದ ಪೊಲೀಸರು ಹಣ ಪಡೆಯುವುದು ಸಾಬೀತಾಗಿದೆ.ಹೆಡ್ ಕಾನಸ್ಟೇಬಲ್ ಚಂದ್ರು ನಡುವಿನಮನಿ, ಕಾನಸ್ಟೇಬಲ್‌ಗಳಾದ ಕಿರಣ್ ಡೊಕ್ಕನ್ನವರ್ ಹಾಗೂ ಸೈಯದ್ ತಹಶೀಲ್ದಾರ್ ಅಮಾನತುಗೊಂಡ ಠಾಣೆಯ ಸಿಬ್ಬಂದಿ. ಇಲ್ಲಿಯ ಗಿರಿನಗರದ, ಮೂಲತಃ ಬಾಗಲಕೋಟ ಜಿಲ್ಲೆಯ ಆದಿತ್ಯಾ ಮ್ಯಾಗೇರಿ ಆತ್ಮಹತ್ಯೆ ಪ್ರಕರಣದಲ್ಲಿ ಈ ಮೂವರನ್ನು ಅಮಾನತು ಮಾಡಲಾಗಿದೆ.

• ಪುಟ ೮

ನಿಷ್ಕ್ರಿಯ ಇಪಿಎಫ್ ಖಾತೆ ಸಕ್ರಿಯಕ್ಕಾಗಿ ಇ-ಪ್ರಾಪ್ತಿ

• ಪುಟ ೭

ಭಾರತಕ್ಕೆ ಇಂಧನ ರಫ್ತು ಹೆಚ್ಚಳಕ್ಕೆ ಹಾದಿ ಸುಗಮ

• ಪುಟ ೭

ಮಾಜಿ ಅಪರಾಧಿ ಈಗ ಹೈಕೋರ್ಟ್ ವಕೀಲ!

• ಪುಟ ೭

ಸುಧಾರಣೆ ಹೆಸರಿನಲ್ಲಿ ಧರ್ಮ ಕುಗ್ಗಿಸಲಾಗದು

• ಪುಟ ೭

ರಾಣಾ ಪೌರತ್ವ ವಾಪಸ್: ಪ್ರಕ್ರಿಯೆ ಆರಂಭಿಸಿದ ಕೆನಡಾ

• ಪುಟ ೭

653 ಕೋಟಿ ರೂ. ಮೌಲ್ಯದ ಡ್ರಗ್ಸ್ ಪತ್ತೆ

• ಪುಟ ೮

ಕುವೆಂಪು ವಿವಿಯಲ್ಲಿ ಎನ್‌ಎಸ್‌ಯುಐ ಗದ್ದಲ

• ಪುಟ ೮

ಕುಂದಾಪುರದಲ್ಲಿ ಅಪಘಾತ: ಮೂವರ ಸಾವು

• ಪುಟ ೮

ಮತದಾನೋತ್ತರ ಸಮೀಕ್ಷೆ | ಅಸ್ಸಾಂನಲ್ಲಿ ಮತ್ತೆ ಬಿಜೆಪಿ

ತ.ನಾಡಿನಲ್ಲಿ ಡಿಎಂಕೆ, ಕೇರಳದಲ್ಲಿ ಯುಡಿಎಫ್ ಆಡಳಿತ?

ಬಿಜೆಪಿಗೆ ಬಂಗಾಳ?

• **ಹೊಸದಿಲ್ಲಿ:** ಇತ್ತೀಚೆಗೆ ನಡೆದ ಐದು ರಾಜ್ಯಗಳ ವಿಧಾನಸಭೆ ಚುನಾವಣೆಯ ಮತದಾನೋತ್ತರ ಸಮೀಕ್ಷೆಗಳು ಹಲವು ಕುತೂಹಲಕರ ಅಂದಾಜುಗಳನ್ನು ನೀಡಿವೆ. ಬಹುತೇಕ ಸಮೀಕ್ಷೆಗಳು ಅಸ್ಸಾಂನಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸುವ ಸಾಧ್ಯತೆಯನ್ನು ಸೂಚಿಸುತ್ತಿದ್ದು, ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ಟಿಎಂಸಿಗೆ ಬಿಜೆಪಿ ಕಠಿಣ ಸ್ಪರ್ಧೆ ನೀಡಲಿದ್ದು, ಬಿಜೆಪಿ ಅಧಿಕಾರಕ್ಕೆ ಬರುವ ಸಾಧ್ಯತೆ ಇದೆ ಎಂದು ಹೇಳಿವೆ. ಅದೇ ವೇಳೆ ತಮಿಳುನಾಡಿನಲ್ಲಿ ಡಿಎಂಕೆ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬಹುದು ಎಂದು ಅಂದಾಜಿಸಲಾಗಿದೆ. ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ 10 ವರ್ಷಗಳ ನಂತರ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ನಿರೀಕ್ಷೆಯೂ ವ್ಯಕ್ತವಾಗಿದೆ.

ತ.ನಾಡಿನಲ್ಲಿ ಡಿಎಂಕೆ ಮುನ್ನಡೆ

ತಮಿಳುನಾಡಿನಲ್ಲಿ ಡಿಎಂಕೆ ಮೈತ್ರಿ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬ ನಿರೀಕ್ಷೆ ಇದೆ.

- ಪೀಪಲ್ಸ್ ಪಲ್ಸ್ ಪ್ರಕಾರ ಡಿಎಂಕೆ ಮೈತ್ರಿಗೆ 125-145 ಸ್ಥಾನಗಳು, ಎಐಎಡಿಎಂಕೆ-ಬಿಜೆಪಿ ಮೈತ್ರಿಗೆ 65-80 ಸ್ಥಾನಗಳು ಸಿಗಬಹುದು. ಮ್ಯಾಟ್ರಿಜ್ ಡಿಎಂಕೆಗೆ 122-132 ಸ್ಥಾನಗಳನ್ನು ಅಂದಾಜಿಸಿದೆ.
- ಒಟ್ಟು 234 ಸ್ಥಾನಗಳಿರುವ ತಮಿಳುನಾಡಿನಲ್ಲಿ ಬಹುಮತಕ್ಕೆ 118 ಸ್ಥಾನಗಳು ಅಗತ್ಯ.
- ನಟ ವಿಜಯ್ ನಿರೀಕ್ಷೆ ಹುಸಿ: ಈ ಚುನಾವಣೆಯಲ್ಲಿ ನಟ ವಿಜಯ್ ಅವರ ಟಿವಿಕೆ ಪಕ್ಷವು ಕಿಂಗ್‌ನ್ ಆಗಲಿದೆ ಎಂದು ಅಂದಾಜಿಸಲಾಗಿತ್ತು. ಆದರೆ, ಹೆಚ್ಚಿನ ಸಮೀಕ್ಷೆಗಳು ಟಿವಿಕೆಗೆ 2 ರಿಂದ 10 ಸ್ಥಾನಗಳು, 5-8 ಪ್ರತಿಶತ ಮತ ಪಡೆಯಲಿದೆ ಎಂದು ಅಂದಾಜಿಸಿವೆ. ಆಕ್ಸಿಸ್- ಮೈ ಇಂಡಿಯಾ ಸಮೀಕ್ಷೆಗಳು ಮಾತ್ರ ಟಿವಿಕೆ ಪಕ್ಷವು 98-120 ಸ್ಥಾನ ಪಡೆಯಲಿದೆ ಎಂದು ಭವಿಷ್ಯ ನುಡಿದಿದೆ.

ಅಸ್ಸಾಂನಲ್ಲಿ ಬಿಜೆಪಿ ಬಲಿಷ್ಠ

ಅಸ್ಸಾಂನಲ್ಲಿ ಬಿಜೆಪಿ ಮತ್ತು ಅದರ ಮೈತ್ರಿಕೂಟಕ್ಕೆ ಭಾರೀ ಗೆಲುವು ಸಿಗಲಿದೆ ಎಂದು ವಿವಿಧ ಸಮೀಕ್ಷೆಗಳು ಸೂಚಿಸಿವೆ.

- ಆಕ್ಸಿಸ್ ಮೈ ಇಂಡಿಯಾ ಸಮೀಕ್ಷೆ ಬಿಜೆಪಿ ಮೈತ್ರಿಗೆ 88-100 ಸ್ಥಾನಗಳನ್ನು ನೀಡಿದರೆ, ಕಾಂಗ್ರೆಸ್ ಮೈತ್ರಿಗೆ 24-36 ಸ್ಥಾನ ಸಿಗಲಿವೆ ಎಂದು ಅಂದಾಜಿಸಿದೆ.
- ಪೀಪಲ್ಸ್ ಪಲ್ಸ್ 68-72 ಸ್ಥಾನಗಳನ್ನು ಎನ್‌ಡಿಎಗೆ ಮತ್ತು 22-26 ಸ್ಥಾನಗಳನ್ನು ಕಾಂಗ್ರೆಸ್ ಮೈತ್ರಿಗೆ ನೀಡಿದೆ.
- ಮ್ಯಾಟ್ರಿಜ್ ಸಮೀಕ್ಷೆಯ ಪ್ರಕಾರ ಎನ್‌ಡಿಎ 85-95 ಸ್ಥಾನಗಳನ್ನು ಗೆಲ್ಲಬಹುದು. ಅಸ್ಸಾಂ ವಿಧಾನಸಭೆಯಲ್ಲಿ ಒಟ್ಟು 126 ಸ್ಥಾನಗಳಿದ್ದು, ಬಹುಮತಕ್ಕೆ 64 ಸ್ಥಾನಗಳು ಅಗತ್ಯ.

ಕೇರಳದಲ್ಲಿ ಯುಡಿಎಫ್ ಮುನ್ನಡೆ ಸಾಧ್ಯತೆ

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಗೆಲುವು ಸಾಧಿಸುವ ಸಾಧ್ಯತೆ ಇದೆ.

- ಆಕ್ಸಿಸ್ ಮೈ ಇಂಡಿಯಾ 78-90 ಸ್ಥಾನಗಳನ್ನು ಯುಡಿಎಫ್‌ಗೆ, 49-62 ಸ್ಥಾನಗಳನ್ನು ಎಲ್‌ಡಿಎಫ್‌ಗೆ ಮತ್ತು 0-3 ಸ್ಥಾನಗಳನ್ನು ಎನ್‌ಡಿಎಗೆ ನೀಡಿದೆ.
- ಪೀಪಲ್ಸ್ ಪಲ್ಸ್ ಸಹ ಯುಡಿಎಫ್‌ಗೆ 75-85 ಸ್ಥಾನ ಸಿಗಲಿದೆ ಎಂದು ಅಂದಾಜಿಸಿದೆ.
- ಮ್ಯಾಟ್ರಿಜ್ ಪ್ರಕಾರ, ಯುಡಿಎಫ್ 70-75 ಸ್ಥಾನಗಳನ್ನು ಗೆಲ್ಲಬಹುದು. ಕೇರಳದಲ್ಲಿ ಒಟ್ಟು 140 ಸ್ಥಾನಗಳಿದ್ದು, ಬಹುಮತಕ್ಕೆ 71 ಸ್ಥಾನಗಳು ಬೇಕಾಗಿವೆ.

ಪಶ್ಚಿಮ ಬಂಗಾಳದಲ್ಲಿ ತುರುಸಿನ ಸ್ಪರ್ಧೆ

ದಾಖಲೆಯ ಮತದಾನವಾಗಿರುವ ಪಶ್ಚಿಮ ಬಂಗಾಳದಲ್ಲಿ ತುರುಸಿನ ಸ್ಪರ್ಧೆ ಇದೆ.

- ಪೀಪಲ್ಸ್ ಪಲ್ಸ್ ಪ್ರಕಾರ ಟಿಎಂಸಿ 177-187 ಸ್ಥಾನಗಳನ್ನು ಗೆಲ್ಲಬಹುದು, ಬಿಜೆಪಿ 95-110 ಸ್ಥಾನಗಳನ್ನು ಪಡೆಯಬಹುದು.
- ಆದರೆ, ಮ್ಯಾಟ್ರಿಜ್ ಬಿಜೆಪಿ ಮುನ್ನಡೆ ಸಾಧಿಸಬಹುದು ಎಂದು ಹೇಳಿದ್ದು, 146-161 ಸ್ಥಾನಗಳನ್ನು ಅಂದಾಜಿಸಿದೆ. ಪಿ-ಮಾರ್ಕ್ ಕೂಡ ಬಿಜೆಪಿ 150-175 ಸ್ಥಾನಗಳನ್ನು ಪಡೆಯ ಬಹುದು ಎಂದು ಹೇಳಿದೆ. ಬಂಗಾಳದಲ್ಲಿ ಒಟ್ಟು 294 ಸ್ಥಾನಗಳಿದ್ದು, ಬಹುಮತಕ್ಕೆ 148 ಸ್ಥಾನ ಅಗತ್ಯ.

ಪುದುಚೇರಿಯಲ್ಲಿ ಎನ್‌ಡಿಎ ಮುನ್ನಡೆ

ಪುದುಚೇರಿಯಲ್ಲಿ ಎನ್‌ಡಿಎ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಸಮೀಕ್ಷೆಗಳು ಸೂಚಿಸಿವೆ.

- ಆಕ್ಸಿಸ್ ಮೈ ಇಂಡಿಯಾ 16-20 ಸ್ಥಾನಗಳನ್ನು ಎನ್‌ಡಿಎಗೆ ಮತ್ತು 6-8 ಸ್ಥಾನಗಳನ್ನು ಡಿಎಂಕೆ-ಕಾಂಗ್ರೆಸ್ ಮೈತ್ರಿಗೆ ನೀಡಿದೆ.
- 30 ಸ್ಥಾನಗಳಿರುವ ಈ ವಿಧಾನಸಭೆಯಲ್ಲಿ ಸಣ್ಣ ಪಕ್ಷಗಳಿಗೂ ಕೆಲವು ಸ್ಥಾನಗಳು ಸಿಗಬಹುದು.

ಪ.ಬಂಗಾಳದಲ್ಲಿ ಶೇ.92.47 ದಾಖಲೆಯ ಮತದಾನ • ಪುಟ ೭

ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ದುರಂತ

ಆಸ್ಪತ್ರೆ ಕಾಂಪೌಂಡ್ ಕುಸಿದು ಏಳು ಸಾವು



• **ಬೆಂಗಳೂರು:** ಬುಧವಾರ ಸಂಜೆ ರಾಜಧಾನಿಯಲ್ಲಿ ಸುರಿದ ಭಾರೀ ಮಳೆ ದುರಂತವನ್ನೇ ಸೃಷ್ಟಿಸಿದೆ. ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದ ಪರಿಣಾಮ ಇಬ್ಬರು ಮಕ್ಕಳು ಸೇರಿ ಏಳು ಮಂದಿ ಮೃತಪಟ್ಟಿದ್ದು, ಏಳು ಜನ ಗಾಯಗೊಂಡಿದ್ದಾರೆ.

ಇನ್ನೊಂದು ಪ್ರಕರಣದಲ್ಲಿ ಯಾರಬ್ ನಗರದ ಸೈಯದ್ ಸೂಫಿಯಾನ್ ಎಂಬ ವಿದ್ಯಾರ್ಥಿ ವಿದ್ಯುತ್ ಶಾಕ್ ತಗುಲಿ ಮೃತಪಟ್ಟಿದ್ದು, ಒಟ್ಟು 8 ಜನ ಅಸುನೀಗಿದ್ದಾರೆ.

ಭಾರೀ ಮಳೆ ಸುರಿಯುತ್ತಿದ್ದ ಸಮಯ ಅಂದರೆ ಸಂಜೆ 5ರ ವೇಳೆಗೆ ಕಾಂಪೌಂಡ್ ಕುಸಿದಿದ್ದು, ಮಳೆಯಿಂದ ಪಾರಾಗಲು ಆಶ್ರಯ ಪಡೆದಿದ್ದ ಹಾಗೂ ವ್ಯಾಪಾರ ಮಾಡುತ್ತಿದ್ದವರನ್ನು ಬಲಿ ಪಡೆದಿದೆ. ಬಟ್ಟೆ ವ್ಯಾಪಾರಿ ಮೊಹಮ್ಮದ್ ಅಬ್ದುಲ್ ಹಕ್(52), ಪಾದರಕ್ಷೆ ವ್ಯಾಪಾರಿ ಫಯಾಜ್ ಅಹಮ್ಮದ್ (39), ವಿದ್ಯಾರ್ಥಿನಿ ಮುಸವೀರ್ ಬೇಗಂ(06), ಕೇರಳ ಮೂಲದ ಲತಾ ಕೆ.ಕೆ. (52), ಸ್ಮಿತಾ (47), ಉತ್ತರ ಪ್ರದೇಶ ಮೂಲದ ವ್ಯಾಪಾರಿ ಸಲಾವುದ್ದೀನ್ ಅನ್ಸಾರಿ(36), ಅಸ್ಸಾಂ ಮೂಲದ ಸ್ಟಿಕರಿಂಗ್ ಕೆಲಸಗಾರ ನಸೀಮುಲ್ಲಾ (19) ಮೃತಪಟ್ಟವರು. ➡ಪುಟ ೪

ಕುಸಿದ ಬೌರಿಂಗ್ ಆಸ್ಪತ್ರೆ ಕಾಂಪೌಂಡ್


ಮಳೆಯಿಂದ ರಕ್ಷಣೆ ಪಡೆಯುತ್ತಿದ್ದ ಪಾದಚಾರಿಗಳು, ಬೀದಿಬದಿ ವ್ಯಾಪಾರಿಗಳು ಹಾಗೂ ಪುಟ್ಟ ಮಕ್ಕಳೂ ಇದ್ದರು. ಸಂಜೆ ಸುಮಾರು 5 ಗಂಟೆಯ ಸುಮಾರಿಗೆ ನಗರದಲ್ಲಿ ಗುಡುಗು, ಸಿಡಿಲು ಹಾಗೂ ಆಲಿಕಲ್ಲುಸಹಿತ ಭಾರೀ ಮಳೆ ಆರಂಭವಾಯಿತು. ಮಳೆಯಿಂದ ಬಚಾವಾಗಲು ಹಾಗೂ ಜತೆಯಲ್ಲಿದ್ದ ಮಕ್ಕಳು ನೆನೆಯಬಾರದು ಎಂಬ ಉದ್ದೇಶದಿಂದ ಪಾದಚಾರಿಗಳು ಮತ್ತು ವ್ಯಾಪಾರಿಗಳು ಬೌರಿಂಗ್ ಆಸ್ಪತ್ರೆಯ ಬೃಹತ್ ಕಾಂಪೌಂಡ್ ಗೋಡೆಯ ಆಶ್ರಯ ಪಡೆದಿದ್ದರು. ಆದರೆ, ಸತತ ಮಳೆಯಿಂದಾಗಿ ಗೋಡೆ ಏಕಾಏಕಿ ಕುಸಿದುಬಿದ್ದಿದೆ.

ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ

• ಪುಟ ೪

ವಾರಾಣಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ರೋಡ್ ಶೋ

ಕಾಶಿ ವಿಶ್ವನಾಥನಿಗೆ ಮೋದಿ ಪೂಜೆ



• **ವಾರಾಣಸಿ:** ಉತ್ತರಪ್ರದೇಶಕ್ಕೆ ತಮ್ಮ ಎರಡು ದಿನಗಳ ಭೇಟಿಯ ದ್ವಿತೀಯ ದಿನವಾದ ಬುಧವಾರ ಬೆಳಗ್ಗೆ ವಾರಾಣಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ರೋಡ್ ಶೋ ನಡೆಸಿದರು. ಕಾಶಿ ವಿಶ್ವನಾಥ ದೇವಾಲಯದಲ್ಲಿ ವೇದಮಂತ್ರ ಪಠಣಗಳೊಂದಿಗೆ ಶ್ರೀದೇವರಿಗೆ ಪ್ರಧಾನಿ ಮೋದಿ ಪ್ರಾರ್ಥನೆ ಸಲ್ಲಿಸಿದರು.

ವಾರಾಣಸಿಯ ಬನಾರಸ್ ಲೋಕೋಮೋಟಿವ್ ವರ್ಕ್ಸ್(ಬಿಎಲ್ ಡಬ್ಲ್ಯು)ನಿಂದ ಶುರುವಾದ ರೋಡ್ ಶೋ ಲಹರ್‌ತಾರಾ, ಕಛಾಪ್ರಿ, ಅಂಬೇಡ್ಕರ್ ಚೌರಾಹ, ಚೌಕಾಘಾಟ್, ತೆಲಿಯಾಬಾಗ್, ಲಹುರಾಬಿರ್, ಮೈದಾಜಿನ್ ಮಾರ್ಗವಾಗಿ ಕಾಶಿವಿಶ್ವನಾಥಧಾಮ್‌ನಲ್ಲಿ ಸಮಾಪನಗೊಂಡಿತು. ಕಾಶಿ ವಿಶ್ವನಾಥ ದೇವಾಲಯದಲ್ಲಿ ಪ್ರಾರ್ಥನೆ ಮುಗಿಸುತ್ತಲೇ ಸ್ಥಳೀಯರು ಪ್ರಧಾನಿ ಮೋದಿ ಅವರನ್ನು ತ್ರಿಶೂಲ, ಡಮರು ಮತ್ತು ಸಾಂಪ್ರದಾಯಿಕ ಉತ್ತರೀಯ ಪಟ್ಟಿ ನೀಡಿ ಸ್ವಾಗತಿಸಿದರು. ಪ್ರತಿಯಾಗಿ ಪ್ರಧಾನಿ ಮೋದಿ ಜನರಿಗೆ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದರು.

ಹರ ಹರ ಮಹಾದೇವ್... : ಹರ ಹರ ಮಹಾದೇವ್! ಕಾಶಿ ವಿಶ್ವನಾಥ ದೇವರ ದರ್ಶನ ಮತ್ತು ಪೂಜೆ ಸಲ್ಲಿಸುವ ಅವಕಾಶ ದೊರೆತದ್ದು ನನ್ನ ಭಾಗ್ಯ. ➡ಪುಟ ೪

ಎರಡು ವರ್ಷದಿಂದ ಸಿಗದ ಅನುದಾನ: ಸಿಎಂ ಸಿದ್ದರಾಮಯ್ಯ

ಜಲ್ ಜೀವನ್‌ಗಿಲ್ಲ ಕೇಂದ್ರದ ಹಣ



• **ಬೆಂಗಳೂರು:** ಜಲ್ ಜೀವನ್ ಯೋಜನೆಗೆ ಕೇಂದ್ರ ಸರ್ಕಾರ ಆಯವ್ಯಯದಲ್ಲಿ ಅನುದಾನ ಹಂಚಿಕೆ ಮಾಡಿದ್ದರೂ ಕಳೆದ 2 ವರ್ಷಗಳಿಂದ ಕರ್ನಾಟಕಕ್ಕೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ, ಆದರೂ ರಾಜ್ಯ ಸರ್ಕಾರ ಕೇಂದ್ರದ ಪಾಲಿನ ಅನುದಾನವನ್ನು ಭರಿಸಿ, ಯೋಜನೆ ಅನುಷ್ಠಾನ ಮುಂದುವರಿಯುವಂತೆ ನೋಡಿಕೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗೃಹಕಚೇರಿ ಕೃಷ್ಣಾದಲ್ಲಿ ಬುಧವಾರ ಕೇಂದ್ರ ಜಲಶಕ್ತಿ ಸಚಿವಾಲಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಜಲ್ ಜೀವನ್ ಮಿಷನ್ 2.0 ಸಂಬಂಧಿಸಿದ ತಿಳುವಳಿಕೆ ಪತ್ರಕ್ಕೆ ಸಹಿ ಹಾಕುವ ಕುರಿತು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್ ಪಾಟೀಲ್ ನೇತೃತ್ವದಲ್ಲಿ ನಡೆದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಮಾತನಾಡಿದರು. ➡ಪುಟ ೪

> ಜಲ್ ಜೀವನ್ ಮಿಷನ್ ಯೋಜನೆಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಕಾಲಮಿತಿ ಯೊಳಗೆ ಪೂರ್ಣಗೊಳಿಸಲು ಕರ್ನಾಟಕ ಸಂಪೂರ್ಣವಾಗಿ ಬದ್ಧವಾಗಿದೆ. ಮುಂಗಡ ವೆಚ್ಚದ ಮರುಪಾವತಿಗಳು ಸೇರಿದಂತೆ ಬಾಕಿಯಿರುವ ಎಲ್ಲಾ ಅನುದಾನವನ್ನು ಕೇಂದ್ರ ಸರ್ಕಾರ ಶೀಘ್ರವೇ ಬಿಡುಗಡೆ ಮಾಡಬೇಕು.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ಮೇ 20ರಿಂದ ಮುಷ್ಕರ

• **ಬೆಂಗಳೂರು:** ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ನಡೆದ ಸಾರಿಗೆ ನೌಕರರ ಸಂಧಾನ ಸಭೆ ವಿಫಲವಾಗಿದ್ದು, ಈ ಹಿನ್ನಲೆಯಲ್ಲಿ ಸಾರಿಗೆ ನೌಕರರು ಮೇ 20ರಿಂದ ಮುಷ್ಕರ ನಡೆಸಲು ತೀರ್ಮಾನಿಸಿದ್ದಾರೆ. ಶಾಂತಿನಗರದ ಸಾರಿಗೆ ಇಲಾಖೆಯ ಪ್ರಧಾನ ಕಚೇರಿಯಲ್ಲಿ ಬುಧವಾರ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಾರಿಗೆ ನೌಕರರ ಬೇಡಿಕೆಯನ್ನು ಆಲಿಸಿ, ನಿಮ್ಮ ಅಹವಾಲನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಆದಷ್ಟು ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.ಸರ್ಕಾರಕ್ಕೆ ಸಾರಿಗೆ ನೌಕರರ ಬಗ್ಗೆ ನಿಜವಾದ ಕಾಳಜಿ ಇದ್ದೇ ಇದೆ. ಸಾರಿಗೆ ನೌಕರರಿಗೆ ನಾಲ್ಕು ವರ್ಷ ಮೊದಲೇ 7ನೇ ವೇತನ ಆಯೋಗ ನೇಮಿಸಿ ಶೇ.27.5 ವೇತನ ಹೆಚ್ಚಳ ಘೋಷಿಸಿರುವ ರಾಜ್ಯ ಸರ್ಕಾರವು ಸಾರಿಗೆ ನೌಕರರ ವಿಷಯದಲ್ಲಿ ತಾರತಮ್ಯ ಧೋರಣೆ ಅನುಸರಿಸುತ್ತಿರುವುದು ಸಾರಿಗೆ ನೌಕರರ ಆಕ್ರೋಶಕ್ಕೆ ಕಾರಣವಾಗಿದೆ. ➡ಪುಟ ೪

ರಾಮಲಿಂಗಾರೆಡ್ಡಿ ನೇತೃತ್ವದ ಸಂಧಾನ ಸಭೆ ವಿಫಲ ಹಿನ್ನೆಲೆ

ಕಿದ್ವಾಯಿ ಆಸ್ಪತ್ರೆ ಸಾಧನೆ | ಅತಿದೊಡ್ಡ ಅಸ್ಥಿಮಜ್ಜೆ ಕಸಿ ಘಟಕ

1,092 ರೊಬೊಟಿಕ್ ಶಸ್ತ್ರಚಿಕಿತ್ಸೆ

▸ ನಂದಿನಿ ಎನ್.

• **ಬೆಂಗಳೂರು:** ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ರೊಬೊಟಿಕ್ ಯಂತ್ರ ಬಳಸಿಕೊಂಡು ವರ್ಷದಿಂದ ವರ್ಷಕ್ಕೆ ರೊಬೊಟಿಕ್ ಶಸ್ತ್ರಚಿಕಿತ್ಸೆ ಸಂಖ್ಯೆ ಹೆಚ್ಚಾಗುತ್ತಿದ್ದು, ಈವರೆಗೂ ಒಟ್ಟು 1,092 ರೊಬೊಟಿಕ್ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ.

ಕ್ಯಾನ್ಸರ್ ರೋಗಿಗಳಿಗೆ ಮತ್ತು ಬಡ ರೋಗಿಗಳಿಗೆ ಅಸ್ಥಿಮಜ್ಜೆ ಕಸಿ ಚಿಕಿತ್ಸೆ ಸುಲಭವಾಗಿ ಕೈಗೆಟುಕುವಂತೆ ಮಾಡಲಾಗುತ್ತಿದೆ. ಕಿದ್ವಾಯಿ ಸಂಸ್ಥೆಯ ಅಸ್ಥಿಮಜ್ಜೆ ಕಸಿ ಘಟಕವು ತೀವ್ರ ನಿಗಾ ಘಟಕ ಸೇರಿದಂತೆ 14 ಹಾಸಿಗೆಗಳ ಸೌಲಭ್ಯದೊಂದಿಗೆ ಭಾರತದ ಅತಿದೊಡ್ಡ ಅಸ್ಥಿಮಜ್ಜೆ ಕಸಿ ಘಟಕವಾಗಿ ಹೊರಹೊಮ್ಮಿದೆ. ಅಲ್ಲದೆ, ಬಡ ಕ್ಯಾನ್ಸರ್ ರೋಗಿಗಳಿಗೆ ಉಚಿತವಾಗಿ ಅಸ್ಥಿಮಜ್ಜೆ ಕಸಿ ಚಿಕಿತ್ಸೆ ನೀಡುತ್ತಿರುವ ಏಕೈಕ ಸರ್ಕಾರಿ ಆಸ್ಪತ್ರೆಯಾಗಿರುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಕ್ಯಾನ್ಸರ್ ಚಿಕಿತ್ಸೆಗಾಗಿ ಇರುವ ಏಕೈಕ ಸ್ವಾಯತ್ತ ಸರ್ಕಾರಿ ಆಸ್ಪತ್ರೆಯಾಗಿದೆ. ಸಂಸ್ಥೆ ಯಲ್ಲಿ ಎಲ್ಲ ಕ್ಯಾನ್ಸರ್ ಪ್ರಕಾರಗಳಿಗೆ ಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ. ಅದರಲ್ಲೂ ಕ್ಯಾನ್ಸರ್‌ಪೀಡಿತ ಮಕ್ಕಳು ಮತ್ತು ವಯಸ್ಕರಿಗೆ ಉತ್ತಮ ಸೇವೆಯನ್ನು ನೀಡುತ್ತಿದೆ. ➡ಪುಟ ೪



ಅಲ್ಪಾವಧಿಯಲ್ಲೇ ಚೇತರಿಕೆ

ಈ ಅತ್ಯಾಧುನಿಕ ತಂತ್ರಜ್ಞಾನವು ರೋಗಿ ಹಾಗೂ ವೈದ್ಯರಿಗೆ ಸಹಕಾರಿಯಾಗಿದೆ. ಸಣ್ಣದಾಗಿ ರಂಧ್ರ ಮಾಡಿ, ರೋಗಕಾರಕ ಭಾಗವನ್ನು ಮಾತ್ರ ಹೊರತೆಗೆಯಲಾಗುತ್ತದೆ. ಇದರಿಂದ ನಿಖರ ಶಸ್ತ್ರಚಿಕಿತ್ಸೆಯ ಜತೆಗೆ, ರೋಗಿಗಳು ಅಲ್ಪಾವಧಿಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ. ಸಾಂಪ್ರದಾಯಿಕ ಶಸ್ತ್ರಚಿಕಿತ್ಸಾ ವಿಧಾನದಲ್ಲಿ ದೇಹಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಾನಿಯಾಗುವ ಜತೆಗೆ, ಶಸ್ತ್ರಚಿಕಿತ್ಸೆ ಹಾಗೂ ರೋಗಿ ಚೇತರಿಸಿಕೊಳ್ಳಲು ಹೆಚ್ಚಿನ ಅವಧಿ ಬೇಕಾಗುತ್ತದೆ.

ಉಪ ಚುನಾವಣೆ: ನಮ್ಮದೇ ಗೆಲುವು

• **ವಿಜಯನಗರ:** ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ನಿಶ್ಚಿತವಾಗಿದೆ. ಈ ಬಾರಿ ಉಪಚುನಾವಣೆಯ ಫಲಿತಾಂಶದ ಪ್ರಕಟಗೊಂಡ ಬಳಿಕ ಕಾಂಗ್ರೆಸ್ ಪಕ್ಷದಲ್ಲಿ ಅಲ್ಲೋಲಕಲ್ಲೋಲ ಸೃಷ್ಟಿಯಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು. ಹೊಸಪೇಟೆಯಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬೆಂಬಲಿಗರಿಂದ ದೆಹಲಿ ದಂಡಯಾತ್ರೆ ಶುರುವಾಗಿದೆ.

• ವಿವರ ಪುಟ ೮

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,55,000 (2,60,000) ಅಪರಂಜಿ ಚಿನ್ನ: 1,37,900 (1,38,350) ಆಭರಣ ಚಿನ್ನ: 1,12,830 (1,12,200) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ) **ಷೇರು ಸೂಚ್ಯಂಕ** ಬಿಎಸ್‌ಇ 77,496 (609↑) ಎನ್‌ಎಸ್‌ಇ 24,177 (181↑) $1 = ₹94.83

ವರಿಷ್ಠರ ತೀರ್ಮಾನಕ್ಕೆ ಬದ್ಧ: ಸಚಿವ

ಬೆಂಗಳೂರು: ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ, ಪಕ್ಷದ ವರಿಷ್ಠರು ವಿಚಾರ ಮಾಡಿ ನಿರ್ಧಾರ ಮಾಡಲಿದ್ದು, ಅವರ ತೀರ್ಮಾನಕ್ಕೆ ನಾವು ತಲೆಬಾಗುತ್ತೇವೆ. ಬಹಿರಂಗವಾಗಿ ನಾನು ಏನು ಹೇಳಲ್ಲ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.



ನಗರದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ನಾಯಕತ್ವ ವಿಚಾರ ಪ್ರತಿದಿನ ಚರ್ಚೆಯಾಗುತ್ತಿದೆ. ಡೇಟ್ ಕೊಡುವಷ್ಟು ದೊಡ್ಡವರು ನಾನಲ್ಲ, ಡೇಟ್ ಕೊಟ್ಟ ಶಾಸಕರ ಬಗ್ಗೆ ಹೈಕಮಾಂಡ್ ಗಮನಿಸುತ್ತೆ. ಜಾರಕಿಹೊಳಿ ಸೇರಿ ಎಲ್ಲರಿಗೂ ಹೈಕಮಾಂಡ್ ಭೇಟಿ ಮಾಡಿ ಚರ್ಚೆ ಮಾಡಲು ಅಧಿಕಾರ ಇದೆ. ನಾನು ವಿಜಯಪುರ ಹೋಗುತ್ತಿದ್ದೇನೆ. ಖರ್ಗೆ ಅವರು ರಾಜ್ಯಕ್ಕೆ ಬಂದಾಗ ಭೇಟಿಯಾಗುತ್ತೇನೆ ಎಂದರು. ದಲಿತ ಸಿಎಂ ಕೂಗಿಗೆ ಹೈಕಮಾಂಡ್ ಉತ್ತರ ನೀಡುತ್ತೆ, ಲಿಂಗಾಯತ ಸಮುದಾಯ ಕೂಡಾ ಬೇಡಿಕೆ ಇಡಬಹುದು ಆದರೆ ಹೈಕಮಾಂಡ್‌ಎಲ್ಲ ತೀರ್ಮಾನ ಮಾಡುತ್ತೆ. ವೀರೇಂದ್ರ ಪಾಟೀಲ್ ಬಳಿಕ ಈ ಬಾರಿ ಲಿಂಗಾಯತ ಸಮುದಾಯ ಈ ಬಾರಿ ಕಾಂಗ್ರೆಸ್ ಪರವಾಗಿ ನಿಂತಿದೆ 35 ಶಾಸಕರು ಗೆದ್ದಿದ್ದೇವೆ ಎಂದರು. ಸತೀಶ್ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷ ಬೇಡಿಕೆ ಇಟ್ಟಿದ್ದಾರೆ. ಅವರಿಗೆ ಆ ಸಾಮರ್ಥ್ಯ ಇದೆ, ಉತ್ತಮ ಸಂಘಟನೆಗಾರರು. ಸಿದ್ದರಾಮಯ್ಯ ನಾಯಕತ್ವ ಡಿಕೆಶಿ ಸಂಘಟನೆ ಇದೆ. ನಾಯಕರು ಕಾರ್ಯಕರ್ತರು ಶ್ರಮಪಟ್ಟಿದ್ದಾರೆ. ಬೂತ್ ಏಜೆಂಟ್ ಕೂಡಾ ಶ್ರಮಪಟ್ಟಿದ್ದಾರೆ ಎಂದು ಹೇಳಿದರು.

ಈ ಬಾರಿ ಗಂಭೀರ ಬರ ಬರುವ ಸಾಧ್ಯತೆ ಇದೆ. ಇದಕ್ಕೆ ನಾವು ಸಿದ್ದರಾಗಬೇಕು. ಜುಲೈ ಅಂತ್ಯದವರೆಗೆ ಡ್ಯಾಮ್‌ನಲ್ಲಿ ನೀರು ಇಡಬೇಕಾಗುತ್ತೆ. ಕುಡಿಯುವ ನೀರಿಗೆ ಆದ್ಯತೆ ನೀಡಬೇಕಿದೆ. ಈ ಬಾರಿ ಹೆಚ್ಚು ನೀರು ಉಳಿಸಬೇಕಿದೆ. ನಾನು ಕೂಡ ವಿಜಯಪುರ ಜಿಲ್ಲೆಯಲ್ಲಿ ಸಭೆ ಮಾಡಿದ್ದೇನೆ ಎಂದರು.

ರಾಮ ಬಾಣ



ಶಾಸಕ ಸ್ಥಾನ ಅನರ್ಹತೆಯಲ್ಲಿ ತಾರತಮ್ಯವಿಲ್ಲ: ಖಾದರ್

ಬೆಂಗಳೂರು: ಕೊಲೆ ಆರೋಪದ ಮೇಲೆ ಶಿಕ್ಷೆಗೆ ಒಳಪಟ್ಟಿರುವ ವಿನಯ್ ಕುಲಕರ್ಣಿ ಶಾಸಕ ಅನರ್ಹತೆಯಲ್ಲಿ ಯಾವುದೇ ತಾರತಮ್ಯವಿಲ್ಲ, ನಿಯಮದ ಪ್ರಕಾರ ಯಾರೇ ಶಿಕ್ಷೆಗೆ ಒಳಪಟ್ಟಾಗ ಅನರ್ಹರಾಗುತ್ತಾರೆ. ಅದು ತನ್ನಿಂದತಾನೇ ರದ್ದಾಗಲಿದೆ. ಇಲ್ಲಿ ಬಿಜೆಪಿ, ಕಾಂಗ್ರೆಸ್ ತಾರತಮ್ಯ ಮಾಡಿಲ್ಲ ಎಂದು ಸ್ಪೀಕರ್ ಯು.ಟಿ. ಖಾದರ್ ಹೇಳಿದರು.

ವಿಧಾನಸೌಧಲ್ಲಿ ಮಾತನಾಡಿದ ಅವರು, ಯಾವೊಬ್ಬ ಸದಸ್ಯನ ಸದಸ್ಯತ್ವ ರದ್ದು ಮಾಡುವ ಅಧಿಕಾರ ಸ್ಪೀಕರ್‌ಗೆ ಇಲ್ಲ, ವಿಧಾನಸಭೆ ವ್ಯಾಪ್ತಿಯಲ್ಲಿ ಏನಾದ್ರೂ ಆದಾಗ ಮಾತ್ರ ಅದು ಅಧಿಕಾರ ಇದೆ. ಕಾರ್ಯದರ್ಶಿಗೆ ಇದನ್ನ ನೋಡಲು ಹೇಳಿದ್ದೇನೆ. ನಾವು ಮಾಹಿತಿ ಕೊಡಲು ಮಾತ್ರ ಇರೋದು, ಕಾನೂನು ವ್ಯಾಪ್ತಿಯಲ್ಲಿ ಆದೇಶ ಮಾಡಿದಾಗ ತನ್ನಿಂದ ತಾನೇ ರದ್ದು ಆಗಿದೆ ಎಂದರು.

ವಿಜಯಪುರ: ಬಿಸಿಲಿಗೆ ಬಾಲಕ ಸಾವು

ವಿಜಯಪುರ: ರಣಭಯಂಕರ ಬಿಸಿಲಿಗೆ ಓರ್ವ ಬಾಲಕ ಸಾವಿಗೀಡಾದ ಘಟನೆ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಇಂಗಳಗಿ ಗ್ರಾಮದಲ್ಲಿ ನಡೆದಿದೆ ಎನ್ನಲಾಗಿದೆ. ಇಲ್ಲಿನ ಶ್ರೀಶೈಲ ಬಿರಾದಾರ (15) ಮೃತ ಪಟ್ಟ ಬಾಲಕ. ಶ್ರೀಶೈಲ ಬಿರಾದಾರ ಬೇಸಿಗೆ ರಜೆ ಹಿನ್ನೆಲೆ ಬಿಸಿಲಿನಲ್ಲಿ ಆಟ ಆಡಿ ಅನಾರೋಗ್ಯಕ್ಕೆ ತುತ್ತಾಗಿದ್ದು, ಚಿಕಿತ್ಸೆ ಫಲಿಸದೆ ಅಸುನೀಗಿದ್ದಾನೆ ಎಂದು ಹೇಳಲಾಗುತ್ತಿದೆ. 8 ನೇ ತರಗತಿ ಪಾಸಾಗಿದ್ದ ಶ್ರೀಶೈಲ, ತಾಲೂಕು ಮಟ್ಟದ ಕಬಡ್ಡಿ, ಖೋಖೋ ಚಾಂಪಿಯನ್ ಆಗಿದ್ದ. ಮುದ್ದೇಬಿಹಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಬಾಲಕ ಶ್ರೀಶೈಲ ಬಿರಾದಾರ ಬಿಸಿಲಿನ ತಾಪದಿಂದ ಸಾವಿಗೀಡಾಗಿಲ್ಲ, ಆತನಿಗೆ ಕ್ಯಾನ್ಸರ್ ಇತ್ತು, ಅದು ಗುಣವಾಗದೇ ಮೃತಪಟ್ಟಿದ್ದಾನೆ ಎಂದು ಡಿಎಚ್ ಓ ಸಂಪತ್ತಕುಮಾರ ಗುಣಾರಿ ತಿಳಿಸಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕನೇಜಿ

ಜಾತಿಗಳೆಲ್ಲ ನಮ್ಮ ನಮ್ಮ ಮನೆಯ ಒಳಗಡೆ ಇರಲಿ, ಹೊರಗಡೆ ಬಂದಾಗ ನಾವೆಲ್ಲ ಹಿಂದುಗಳೆಂಬ ಒಗ್ಗಟ್ಟು ಬರಲಿ
-ಚಕ್ರವರ್ತಿ ಸೂಲಿಬೆಲೆ
-ಹಿಂದೂ ಎಂಬ ಸುಂದರ ಉದ್ಯಾನವನ ಉಳಿದರೆ ಮಾತ್ರ, ಜಾತಿಗಳೆಂಬ ವಿವಿಧ ಪುಷ್ಪಗಳು ಆರಲಿ ಪರಿಮಳ ಬೀರಲು ಸಾಧ್ಯ!

ದಿನ ಭವಿಷ್ಯ

ಮೇಷ ನಿರೀಕ್ಷಿತ ಕೆಲಸ ಪೂರ್ತಿಯಾಗದು. ಕೆಲಸದಲ್ಲಿ ಸಣ್ಣ ಲೋಪ ಉಂಟಾದೀತು. ಮನೆಯಲ್ಲಿ ಸ್ವಲ್ಪ ಕಿರಿಕಿರಿ ಅನುಭವಿಸುವಿರಿ.

ವೃಷಭ ಕೌಟುಂಬಿಕ ಹೊಣೆ ಹೆಚ್ಚಳ. ಹತ್ತಿರದವರೊಬ್ಬರ ವರ್ತನೆ ನಿಮಗೆ ಅಸಹನ ತರಲಿದೆ. ಸಂಘರ್ಷ ಬೇಡ, ಹೊಂದಾಣಿಕೆಯ ವರ್ತನೆ ಒಳ್ಳೆಯದು.

ಮಿಥುನ ಅಭದ್ರತೆಯ ಭಾವ ಕಾಡಬಹುದು. ಕೆಲವು ಬೆಳವಣಿಗೆ ಮನಸ್ಸಿಗೆ ಅಹಿತಕಾರಿಯಾದೀತು. ಭಾವುಕ ಸನ್ನಿವೇಶಕ್ಕೆ ಸಾಕ್ಷಿಯಾಗುವಿರಿ.

ಕಟಕ ಸ್ವ-ಪರಾಮರ್ಶೆ ನಡೆಸಿ. ನಿಮ್ಮ ಕೆಲವಾರು ಪ್ರಶ್ನೆಗಳಿಗೆ ಉತ್ತರ ಸಿಗಬಹುದು. ನಿಮ್ಮ ಲೋಪ ಮುಚ್ಚಿ ಹಾಕಲು ಪ್ರಯತ್ನಿಸಬೇಡಿ.

ಸಿಂಹ ಆತ್ಮೀಯರ ಸಂಗಡ ಕಾಲ ಕಳೆಯುತ್ತಾ ಇನ್ನಿತರ ಉದ್ವಿಗ್ನತೆ ಮರೆಯುವಿರಿ. ಆದರೆ ಕೆಲಸ ಬಾಕಿ ಉಳಿಸದಿರಿ. ಅದನ್ನು ಪೂರೈಸಿ. ಬಂಧು ಭೇಟಿ.

ಕನ್ಯಾ ಪ್ರತಿಕೂಲ ಪರಿಸ್ಥಿತಿ ಉದ್ಭವಿಸಿದರೂ ಪಾಸಿಟಿವ್ ಚಿಂತನೆ ಬಿಡಬೇಡಿ. ವಿಳಂಬವಾದರೂ ಉದ್ದೇಶ ಸಾಧಿತವಾಗಲಿದೆ. ಆರ್ಥಿಕ ಪರಿಸ್ಥಿತಿ ತೃಪ್ತಿಕರ.

ತುಲಾ ಬಾಕಿ ಇದ್ದ ಕೆಲಸ ಮುಗಿಸಲು ಗಮನ ಕೊಡಿ. ವ್ಯವಹಾರದಲ್ಲಿ ಸಣ್ಣ ಅಡ್ಡಿ. ಆಪ್ತರ ಜತೆ ಮುನಿಸು ಸಂಭವ. ತಾಳ್ಮೆಯಿಂದ ವ್ಯವಹರಿಸಿ.

ವೃಶ್ಚಿಕ ವೃತ್ತಿಯ ಒತ್ತಡ ಹೆಚ್ಚು, ಹಾಗೆಂದು ಕೌಟುಂಬಿಕ ವ್ಯವಹಾರ ಕಡೆಗಣಿಸಬೇಡಿ. ಕುಟುಂಬಸ್ಥರ ಬೇಡಿಕೆಗೆ ಕಿವಿಗೊಡಿ. ಧನವ್ಯಯ.

ಧನು ಆರಂಭದಲ್ಲಿ ಹಿನ್ನಡೆಯಾಗಿ ಕಂಡ ವಿಷಯ ಬಳಿಕ ನಿಮ್ಮ ಪಾಲಿಗೆ ಒಳಿತು ತಂದೀತು. ಅನಿರೀಕ್ಷಿತ ಧನಲಾಭ. ಹಳೆಯ ಸ್ನೇಹಿತರ ಭೇಟಿ.

ಮಕರ ಹೆಚ್ಚು ಹೊಣೆ- ನಿಮ್ಮ ಮನೆಯಲ್ಲೂ, ವೃತ್ತಿಯಲ್ಲೂ. ಹಿಡಿದ ಕೆಲಸ ಅಚ್ಚುಕಟ್ಟಾಗಿ ಪೂರೈಸಿ. ಟೀಕೆಗೆ ಆಸ್ಪದ ಕೊಡಬೇಡಿ. ವಾಗ್ವಾದ ನಡೆಸದಿರಿ.

ಕುಂಭ ಹರ್ಷದ ದಿನ. ಪ್ರೀತಿಪಾತ್ರರ ಜತೆ ಆತ್ಮೀಯ ಕಾಲಕ್ಷೇಪ. ಹಳೆ ನಿರ್ಧಾರವೊಂದು ಈಗ ಕೆಟ್ಟ ಫಲ ನೀಡಬಹುದು. ಎಚ್ಚರದ ನಡೆಯಿರಲಿ.

ಮೀನ ಎಲ್ಲ ಸುಸೂತ್ರವಾಗಿ ಸಾಗುವುದು. ಆದರೆ ಸಂಗಾತಿ ಜತೆ ಭಿನ್ನಮತ. ಇತರರ ಟೀಕಿಸದಿರಿ. ನಿಮ್ಮ ನಡೆನುಡಿ ಪರಾಮರ್ಶಿಸಿ. ನಿಮ್ಮಲ್ಲೇ ತಪ್ಪಿರಬಹುದು.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30
ಅದೃಷ್ಟ ಸಂಖ್ಯೆ : 8,3,9,4

ಮಳೆಗೆ ವ್ಯಕ್ತಿ ಸಾವು

ಚಿಕ್ಕನಾಯಕನಹಳ್ಳಿ: ತಾಲೂಕಿನ ಬಿರುಗಾಳಿ ಮಳೆಗೆ ಮರದ ಕೊಂಬೆ ಬಿದ್ದು ಓರ್ವ ವ್ಯಕ್ತಿ ಹಾಗೂ ಹಸು ಮೃತಪಟ್ಟಿರುವ ಘಟನೆ ವರದಿಯಾಗಿದೆ. ಪಟ್ಟಣವಾಸಿ ಖಾಸಗಿ ಬಸ್ ಮಾಲಿಕ ಪುಟ್ಟಣ್ಣ(68) ಮೃತ ದುರ್ದೈವಿ. ತಾಲೂಕಿನ ಹಾಲುಗೊಣ ಗ್ರಾಮದ ಸುನೀಲ್ ಎಂಬುವರ ತೋಟದಲ್ಲಿದ್ದ ಹಸುವಿನ ಮೇಲೆ ತೆಂಗಿನಮರಬಿದ್ದ ಪರಿಣಾಮ ಹಸು ಸ್ಥಳದಲ್ಲಿಯೇ ಮೃತಪಟ್ಟಿದೆ. ತಾಲ್ಲೂಕಿನ ವಮಲಗೊಂಡನಹಳ್ಳಿ, ಮದನಮಡು, ಚಿಕ್ಕರಾಂಪುರ ಮುಂತಾದಡೆ ವಿದ್ಯುತ್ ಕಂಬಗಳು ಜಖಂಗೊಂಡಿದ್ದರೆ, ಹಲವು ಗ್ರಾಮಗಳಲ್ಲಿ ಮನೆಗಳ ಛಾವಣಿ ಹಾರಿಹೋಗಿದೆ ಎಂದು ತಹಸೀಲ್ದಾರ್ ಮಮತಾ ತಿಳಿಸಿದ್ದಾರೆ.

ಸಿಡಿಲು ಬಡಿದು ಎರಡು ಹಸುಗಳ ಸಾವು

ದೊಡ್ಡಬಳ್ಳಾಪುರ: ಮಂಗಳವಾರ ರಾತ್ರಿ ಸುರಿದ ಮಳೆಯಿಂದಾಗಿ ಸಿಡಿಲು ಬಡಿದ ಪರಿಣಾಮ ಎರಡು ಸೀಮೆ ಹಸುಗಳು ಮೃತಪಟ್ಟಿರುವ ಘಟನೆ ತಾಲೂಕಿನ ತೂಬಗೆರೆ ಹೋಬಳಿ ಕಾವಲಹಳ್ಳಿ ಆಂಜನೇಯ ಸ್ವಾಮಿ ದೇವಸ್ಥಾನ ಸಮೀಪ ನಡೆದಿದೆ. ಗಂಟಿಗಾನಹಳ್ಳಿ ಗ್ರಾಮದ ರತ್ನಮ್ಮ ಚಿಕ್ಕ ಹೊನ್ನಪ್ಪ ಅವರು ತಮ್ಮ ಹಸುಗಳನ್ನು ತೋಟದಲ್ಲಿರುವ ಮರದ ಕೆಳಗೆ ಕಟ್ಟಿದ್ದರು. ಮಳೆ ಸಂದರ್ಭದಲ್ಲಿ ಸಿಡಿಲು ಬಡಿದ ಪರಿಣಾಮವಾಗಿ ಸ್ಥಳದಲ್ಲೇ 2 ಹಸುಗಳು ಮೃತಪಟ್ಟಿವೆ. ಈ ಘಟನೆ ಸ್ಥಳೀಯ ರೈತರಿಗೆ ಆತಂಕ ಮೂಡಿಸಿದೆ. ಈ ಹಿನ್ನೆಲೆಯಲ್ಲಿ ಸಂಬಂಧಿತ ಇಲಾಖೆ ತಕ್ಷಣ ಸ್ಪಂದಿಸಿ, ಸಂತ್ರಸ್ತರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ದಕ್ಷಿಣ ಮಧ್ಯ ಕ್ಷೇತ್ರದ ಬೌದ್ಧಿಕ ಪ್ರಮುಖ್ ಪ್ರೊ.ಬಿ.ವಿ.ಶ್ರೀಧರಸ್ವಾಮಿ

ಗೌರವಿಸುವ ಪದ್ಧತಿ ನಮ್ಮದು

ದೇವನಹಳ್ಳಿ: ಜಗತ್ತಿಗೆ ವಿಜ್ಞಾನ ಸೇರಿದಂತೆ ಅನೇಕ ಕೊಡುಗೆಯನ್ನು ನೀಡಿದ ಶ್ರೇಷ್ಠ ಪರಂಪರೆ ನಮ್ಮದು. ಇದರ ಜತೆಗೆ ಬದುಕಿನ ಸಾರ್ಥಕತೆ ಎಲ್ಲಿದೆ ಎಂದು ದಕ್ಷಿಣ ಮಧ್ಯ ಕ್ಷೇತ್ರದ ಬೌದ್ಧಿಕ ಪ್ರಮುಖ್ ಪ್ರೊ.ಬಿ.ವಿ.ಶ್ರೀಧರಸ್ವಾಮಿ ಹೇಳಿದರು.

ದೇವನಹಳ್ಳಿಯ ಅನಂತ ವಿದ್ಯಾನಿಕೇತನದಲ್ಲಿ ಸೋಮವಾರ ಸಂಜೆ ನಡೆದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ಸಂಘ ಶಿಕ್ಷಾ ವರ್ಗದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಸಂಘದ ಒಂದು ಚಟುವಟಿಕೆಯಲ್ಲಿ ಸಂಘ ಶಿಕ್ಷಾ ವರ್ಗ. 15 ದಿನಗಳ ಕಾಲ ನಡೆದ ಈ ಸಂಘ ಶಿಕ್ಷಾ ವರ್ಗದಲ್ಲಿ ತಪಸ್ಸಿನಂತೆ ಸ್ವಯಂಸೇವಕರು ಕಲಿತಿದ್ದಾರೆಂದರು.

ಸಮಾಜ ಮತ್ತು ದೇಶದ ಕುರಿತು ಹಾಗೂ ಸಂಘಟನೆಯ ಕುಶಲತೆಯನ್ನು ಕಲಿತುಕೊಳ್ಳುವರು. ಅದರ ಜತೆಗೆ ರಾಷ್ಟ್ರಭಕ್ತಿಯ ಸಂಸ್ಕಾರವನ್ನು ಜಾಗೃತ ಗೊಳಿಸಿಕೊಳ್ಳುತ್ತಾರೆ. ಸಮಾಜವನ್ನು ಮುನ್ನಡೆಸುವ ವ್ಯಕ್ತಿಗಳ ನಿರ್ಮಾಣ ಕೇಂದ್ರವಾಗಿ ಶಾಖೆಗಳು ನಡೆಯುತ್ತಿವೆಂದು ಹೇಳಿದರು. ಶಾಖೆಯ ಪ್ರಾರ್ಥನೆಯಲ್ಲಿ ತಾಯಿ ಭಾರತೀಯ ಕೆಲಸಕ್ಕಾಗಿ ತನ್ನ ಜೀವನವನ್ನು ಮುಡಿಪಿಡುವಂತಹ ಕಾರ್ಯಕ್ಕೆ ಸಿದ್ಧಗೊಳ್ಳುತ್ತಾರೆ. ಸಂಘಟನೆಗಿಂತ ಉನ್ನತವಾದದ್ದು ಎಂಬ ಭಾವ ಸಂಘಟನೆಯ ಸ್ವಯಂಸೇವಕರಲ್ಲಿ ಮೂಡುತ್ತದೆ. ಈ ಭಾವನೆಯನ್ನು ಸಂತರು ಮಹಂತರು ಸಹಸ್ರಾರು ವರ್ಷಗಳಿಂದ ದೇಶದ ಜನರಲ್ಲಿ ಬೆಳೆಸಿದ್ದಾರೆ. ಅದನ್ನೇ ಸಂಘ ಮುಂದುವರೆಸಿದೆ ಎಂದು ಅಭಿಪ್ರಾಯಪಟ್ಟರು.

ಅನೇಕರು ಜಗತ್ತನ್ನು ಶಕ್ತಿಯ ಬಲದಿಂದ ಜಗತ್ತನ್ನು ಗೆಲ್ಲುವ ಪ್ರಯತ್ನ ಮಾಡಿದರು. ಆದರೆ ಭಾರತ ಇಡೀ ವಿಶ್ವವೇ ಒಂದು ಕುಟುಂಬ ಎಂಬ ವಿಶಾಲ ಭಾವದ ಕಾರಣದಿಂದ ಜಗತ್ತಿನ ಮನಸ್ಸನ್ನು ಗೆಲ್ಲುವ ಕಾರ್ಯ ಮಾಡಿದ್ದೇವೆ. ಜಗತ್ತು ಭಾರತವನ್ನು ಭಕ್ತಿಯಿಂದ ಗೌರವದಿಂದ ಕಾಣಬಹುದಾಗಿದೆ. ಆದರೆ ನಾವು ಜಾತಿಯನ್ನು ಮೀರಿ ಹಿಂದುಗಳು, ಭಾರತೀಯರು ಎಂದು ಹೇಳಿಕೊಳ್ಳುವ ಭಾವ ನಮ್ಮಲ್ಲಿ ಮೂಡಬೇಕು. ನಮ್ಮ ದೇಶದ ಪರಂಪರೆಯ ಮೌಲ್ಯಗಳನ್ನು ಪ್ರಕಟಿಸುವ ಸಮಾಜ ನಮ್ಮದಾಗಬೇಕು. ಹೇಗೆ ಶರೀರದ ಎಲ್ಲಾ ಅಂಗಗಳು ಸಬಲವಾಗಬೇಕೋ, ಜೊತೆಗೆ ಸಮಾಜದ ಎಲ್ಲಾ ವರ್ಗಗಳು ಸಶಕ್ತವಾಗಬೇಕು. ಅವರೆಲ್ಲರಲ್ಲೂ ರಾಷ್ಟ್ರಭಕ್ತಿಯ ಜಾಗರಣವಾಗಬೇಕಿದೆ ಎಂದರು.

ಜಾಗತಿಕ ಸ್ಥಿತಿಯಲ್ಲಿ ಆತ್ಮನಿರ್ಭರವಾಗಬೇಕಿದೆ. ನಮ್ಮ ದೇಶಕ್ಕೆ ಬೇಕಾಗುವ ಎಲ್ಲವನ್ನೂ ನಾವೇ ನಿರ್ಮಿಸಿಕೊಳ್ಳಬೇಕು. ನಮ್ಮಲ್ಲಿ ನಮ್ಮ ಸಹಿ ಇರಬೇಕು, ಮನೆಯಲ್ಲಿ ಸ್ವಭಾಷೆಯನ್ನು ಬಳಸಬೇಕು, ಹುಟ್ಟುಹಬ್ಬದ ಆಚರಣೆ ನಮ್ಮತನದಿಂದ ಕೂಡಿರಬೇಕು. ಪರಿಸರ ಸಂರಕ್ಷಣೆ, ಪ್ಲಾಸ್ಟಿಕ್ ಬಳಕೆ ನಿಷೇಧ, ಇತರರಿಗೆ ತೊಂದರೆಯಾಗದಂತೆ ನಮ್ಮ ಜೀವನಶೈಲಿ ಇರಬೇಕು. ನಮ್ಮ ಮನೆಯ ಸಾಮಾಜಿಕ ಸಾಮರಸ್ಯವನ್ನು ಸಾರುವ, ನಮ್ಮ ಪರಂಪರೆಯನ್ನು ಮಕ್ಕಳಿಗೆ ತಿಳಿಸುವ ಪರಿವರ್ತನಾ ಕೇಂದ್ರಗಳಾಗಬೇಕು ಎಂದರು.

15 ದಿನಗಳ ಕಾಲ ನಡೆದ ವರ್ಗಗಳ ಬಗ್ಗೆ ವರ್ಗದ ವರ್ಗಾಧಿಕಾರಿ ಮಿಲಿಂದ ಗೋಖಲೆ ಅವರು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಹಾಗೂ ಪ್ರಾಂತ ಸಂಘಚಾಲಕ ಜಿ.ಎಸ್.ಉಮಾಪತಿ ಉಪಸ್ಥಿತರಿದ್ದರು. ವರ್ಗದ 350ಕ್ಕೂ ಹೆಚ್ಚು ಶಿಕ್ಷಾರ್ಥಿಗಳಿಂದ ಶಾರೀರಿಕ ಪ್ರದರ್ಶನ ಸೇರಿದಂತೆ ಸಾಹಿತ್ಯ ಮಾರಾಟ ವ್ಯವಸ್ಥೆ ಮಾಡಲಾಯಿತು.



ಭಾರತದಲ್ಲಿ ಬದಲಾವಣೆ ಪರ್ವ

ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಕೈವಾರದ ಧರ್ಮಾಧಿಕಾರಿ ಎಂ.ಆರ್. ಜಯರಾಂ ಮಾತನಾಡಿ, ಪ್ರಪಂಚ ಬದಲಾಗುತ್ತಿದೆ. ಭಾರತವೂ ಬದಲಾವಣೆಯ ಪರ್ವವನ್ನು ಕಾಣುತ್ತಿದೆ. ಪ್ರಪಂಚದಲ್ಲಿ ಧರ್ಮಸ್ಥಾಪನೆಯಾಗಬೇಕಾದರೆ ಭಾರತ ಮಾರ್ಗದರ್ಶನ ಮಾಡಬೇಕು. ನಾವು ಯಾರು, ನಮ್ಮ ಕರ್ತವ್ಯ ಏನು ಎನ್ನುವುದನ್ನು ನಾವು ಅರಿಯಬೇಕು. ನಾವು ನಮ್ಮ ದೇಶದ ಬಗ್ಗೆ ಚಿಂತನೆ ಮಾಡಬೇಕಾದರೆ, ನಮ್ಮ ದೇಶದ ಕೊರತೆಗಳನ್ನು ಮರೆತು ಸಮಭಾವ ಮತ್ತು ಸಾಮರಸ್ಯದ ಮೂಲಕ ನೋಡಬೇಕು. ಆಗ ಮುಂದಿನ ಯಾವುದೇ ಸವಾಲುಗಳನ್ನೂ ತಡೆಯಲು ನಾವು ಸಿದ್ಧರಾಗಿರುತ್ತೇವೆ ಎಂದರು.

ಮೇ 9ಕ್ಕೆ ಬಿಎಸ್‌ವೈ ಅಭಿಮಾನೋತ್ಸವ

ಬಡವರ ಕಷ್ಟಗಳಿಗೆ ಮಿಡಿದ ಮುತ್ಸದ್ದಿ

ವಿಜಯನಗರ: ರಾಜ್ಯದ ಗುಣಾತ್ಮಕ ಬದಲಾವಣೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಸಿದ ಮಹಾನ್ ನಾಯಕನಿಗೆ ಅಭಿನಂದನೆ ಸಲ್ಲಿಸಲು ಚಿತ್ರದುರ್ಗದಲ್ಲಿ ಮೇ 9ರಂದು ಏರ್ಪಡಿಸಿರುವ ಬಿಎಸ್‌ವೈ ಅಭಿಮಾನೋತ್ಸವಕ್ಕೆಪಕ್ಷದಕಾರ್ಯಕರ್ತರು ಹಾಗೂನಾಡಿನಜನರುಹೆಚ್ಚಿನಸಂಖ್ಯೆಯಲ್ಲಿ ಪಾಲ್ಗೊಂಡು ಅಭೂತಪೂರ್ವವಾಗಿ ಯಶಸ್ವಿಗೊಳಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ ಮಾಡಿದರು.

ಬಿಎಸ್‌ವೈ ಅಭಿಮಾನೋತ್ಸವದ ನಿಮಿತ್ತ ಹೊಸಪೇಟೆಯಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಬುಧವಾರ ಏರ್ಪಡಿಸಿದ್ದ ವಿಜಯನಗರ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳ ಪ್ರಮುಖರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರ 50 ವರ್ಷಗಳ ನಿಸ್ವಾರ್ಥಕತೆಯಿಂದ ಜನ ಸೇವೆಯ ಸಲ್ಲಿಸಿದ್ದಾರೆ. ರಾಜ್ಯದಲ್ಲಿ ಎಲ್ಲಿ ಬಡವರು ಕಣ್ಣೀರು ಹಾಕುತ್ತಿದ್ದಾರೋ ಅಲ್ಲಿ ಯಡಿಯೂರಪ್ಪನರು ಇರುತ್ತಿದ್ದರು. ರೈತರು ಎಲ್ಲ ಸಂಕಷ್ಟದಲ್ಲಿದ್ದರೂ ಅಲ್ಲಿ ಯಡಿಯೂರಪ್ಪನವರು ಇರುತ್ತಿದ್ದರು. ರಾಜ್ಯದಲ್ಲಿ ಹೋರಾಟ ಮತ್ತು ಪರಿಶ್ರಮಕ್ಕೆ ಯಡಿಯೂರಪ್ಪ ಹೊರತಾಗಿ ಮತ್ತೊಂದು ಹೆಸರಿಲ್ಲ, ಅವರು ಶಾಸಕನಾಗಿ, ವಿಪಕ್ಷ ನಾಯಕನಾಗಿ, ಸಚಿವರಾಗಿ ಹಾಗೂ ಮುಖ್ಯಮಂತ್ರಿ ಅಧಿಕಾರದಲ್ಲಿದ್ದಾಗ ನಾಡಿನ ಪ್ರತಿ ಜಿಲ್ಲೆಗೂ ಒಂದಿಲ್ಲೊಂದು ಕೊಡುಗೆಯನ್ನು ಅವರು ನೀಡಿದ್ದಾರೆ. ಅವರು ಸವೆಸಿದ ರಾಜಕೀಯ ಹಾದಿ, ಕೈಗೊಂಡ ಪ್ರಗತಿ ರಾಜ್ಯದ ಇತಿಹಾದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡುವಂತದ್ದು. ಅಂತಹ ಒಬ್ಬ ಪುಣ್ಯಾತ್ಮ ಹೋರಾಟಗಾರರ 50 ವರ್ಷಗಳ ರಾಜಕೀಯ ಪಯಣವನ್ನು ಅರ್ಥಪೂರ್ಣವಾಗಿ ಆಚರಿಸಿ, ಸಂಭ್ರಮಿಸಲು ಬಿಎಸ್‌ವೈ ಅಭಿಮಾನೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.



ಕಾಶಿ ವಿಶ್ವನಾಥನಿಗೆ ಮೋದಿ ಪೂಜೆ

ಪುಟ 1 ದೇಶದ ಪ್ರತಿ ಪ್ರಜೆಗೂ ನೆಮ್ಮದಿ, ಸಂಪನ್ನತೆ ಮತ್ತು ಆರೋಗ್ಯಪೂರ್ಣ ಬದುಕಿಗಾಗಿ ನಾನು ಭಗವಾನ್ ಬೋಲೆನಾಥನಲ್ಲಿ ಪ್ರಾರ್ಥಿಸಿದೆ. ತಾಯಿ ಅನ್ನಪೂರ್ಣೆ ಮತ್ತು ಗಂಗಾಮಾತೆಯ ದರುಶನದಿಂದ ನನಗೆ ಅನೂಹ್ಯ ಶಾಂತಿ ದೊರೆಯಿತು. ಅಮ್ಮನವರ ಅನುಗ್ರಹವು ಪ್ರತಿಯೊಬ್ಬರಲ್ಲೂ ಧನಾತ್ಮಕ ಶಕ್ತಿ ತುಂಬುವಂತಾಗಲಿ, ಮಗದೊಮ್ಮೆ ಕಾಶಿಯ ಎಲ್ಲಾ ಜನತೆಗೆ ನನ್ನ ನಮನಗಳು ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಬರೆದಿದ್ದಾರೆ. ಮೋದಿಯವರು ದೇವಾಲಯದಿಂದ ಹೊರಬರುತ್ತಲೇ ಅಪಾರ ಭಕ್ತಸ್ತೋಮದಿಂದ ಹರ ಹರ ಮಹಾದೇವ್, ಜೈ ಶ್ರೀರಾಮ್ ಘೋಷಣೆಗಳು ಮೊಳಗಿದವು. ಪ್ರಧಾನಿಯವರು ಎಲ್ಲರತ್ತ ಪ್ರೀತಿಯಿಂದ ಕೈಬೀಸಿದರು, ವಿನೀತರಾಗಿ ಎಲ್ಲರಿಗೂ ನಮಸ್ಕರಿಸಿದರು.

ಚಿಣ್ಣರೊಂದಿಗೆ ಬೆರೆತ ಪ್ರಧಾನಿ: ವಿಶ್ವನಾಥ ಕಾರಿಡಾರ್‌ನಲ್ಲಿ ಚಿಣ್ಣರ ಜತೆ ಪ್ರಧಾನಿ ಬೆರೆತರು, ಸಂವಾದ ನಡೆಸಿದರು. ವಾರಾಣಸಿಯ ಜನತೆ ಪ್ರಧಾನಿ ಮೋದಿ ಅವರನ್ನು ಕಾಣಲು, ಒಂದು ಕ್ಷಣ ಕಣ್ತುಂಬಿಕೊಳ್ಳಲು ತುದಿಗಾಲಲ್ಲಿದ್ದರು. ಪ್ರಧಾನಿ ರೋಡ್ ಶೋ ನಡೆದ ರಸ್ತೆಯುದ್ದಕ್ಕೂ ಪಕ್ಷದ ಕಾರ್ಯಕರ್ತರು, ಪದಾಧಿಕಾರಿಗಳು, ಸ್ಥಳೀಯ ಜನರು ಅಪಾರ ಸಂಖ್ಯೆಯಲ್ಲಿ ಪ್ರವಾಹದೋಪಾದಿಯಲ್ಲಿ ಸೇರಿದ್ದರೆಂದು ಬಿಜೆಪಿ ಮಾಧ್ಯಮ ಉಸ್ತುವಾರಿ ಅರವಿಂದ ಮಿಶ್ರಾ ಹೇಳಿದ್ದಾರೆ.

ಶಂಖ ಊದಿ ಗುಲಾಬಿ ದಳಗಳ ಸ್ವಾಗತ

ರೋಡ್ ಶೋ ಹಾದಿಯುದ್ದಕ್ಕೂ ಅಲ್ಲಲ್ಲಿ ಸ್ವಾಗತ ಕೇಂದ್ರಗಳನ್ನು ರಚಿಸಲಾಗಿತ್ತು. ಅಭಿಮಾನಿಗಳು, ಕಾರ್ಯಕರ್ತರು, ಸ್ಥಳೀಯ ಜನತೆ ಗುಲಾಬಿದಳ ವೃಷ್ಟಿ, ಡ್ರಮ್‌ವಾದನ ಮತ್ತು ಶಂಖನಾದಗಳಿಂದ ಪ್ರಧಾನಿ ಮೋದಿ ಅವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಸುಮಾರು 14 ಕಿಮೀ ವ್ಯಾಪ್ತಿವರೆಗೆ ನಡೆದ ರೋಡ್ ಶೋ, ನಗರದಲ್ಲಿ ನಡೆದ ಪ್ರಥಮ ಬೃಹತ್ ರೋಡ್ ಶೋ ಎಂದು ಬಿಜೆಪಿ ನಾಯಕರು ಬಣ್ಣಿಸಿದ್ದಾರೆ. ತಮ್ಮ ಲೋಕಸಭಾ ಕ್ಷೇತ್ರ ವಾರಾಣಸಿಗೆ ಭೇಟಿ ಮುಗಿಸಿದ ಬಳಿಕ ಉತ್ತರಪ್ರದೇಶದಲ್ಲಿ ಗಂಗಾ ಎಕ್ಸ್‌ಪ್ರೆಸ್‌ವೇಗೆ ಪ್ರಧಾನಿ ಮೋದಿ ಚಾಲನೆ ನೀಡಿದರು.

ಜಲ್ ಜೀವನ್‌ಗಿಲ್ಲ ಕೇಂದ್ರದ ಹಣ

ಪುಟ 1 ದೇಶದಲ್ಲಿಯೇ ಎರಡನೇ ಅತ್ಯಂತ ಹೆಚ್ಚಿನ ಒಣಭೂಮಿ ಹೊಂದಿರುವ ರಾಜ್ಯವಾದ ಕರ್ನಾಟಕದಲ್ಲಿ ನೀರಿಗಾಗಿ ಪರದಾಟವಿದೆಯಲ್ಲದೆ ಇದರೊಂದಿಗೆ ರಾಜ್ಯದ ಹಲವು ಭಾಗಗಳಲ್ಲಿ ಆರ್ಸೆನಿಕ್ ಹಾಗೂ ಫ್ಲೋರೈಡ್ ಮಿಶ್ರಣದ ಸಮಸ್ಯೆಯಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಗ್ರಾಮೀಣ ಕುಟುಂಬಗಳಿಗೆ ಕುಡಿಯಲು ಯೋಗ್ಯವಾದ ನೀರನ್ನು ಒದಗಿಸುವ ನಿಟ್ಟಿನಲ್ಲಿ ಜಲಮೂಲಗಳ ಸುಧಾರಣೆ ಮತ್ತು ಬೃಹತ್ ನೀರಿನ ಸರಬರಾಜು ವ್ಯವಸ್ಥೆಗೆ ಆದ್ಯತೆ ನೀಡಿದ್ದೇವೆ ಎಂದರು.

1.51 ಲಕ್ಷಕ್ಕೂ ಹೆಚ್ಚು ಮಹಿಳೆಯರಿಗೆ ನೀರಿನ ಗುಣಮಟ್ಟ ಪರೀಕ್ಷೆ ಮಾಡುವ ವಿಧಾನದ ಬಗ್ಗೆ ತರಬೇತಿ ನೀಡುವ ಮೂಲಕ ಸಮುದಾಯದ ಮಾಲೀಕತ್ವವನ್ನು ಸುಭದ್ರಪಡಿಸಲಾಗಿದೆ. 259 ಗ್ರಾಮಗಳಿಗೆ ಈಗಾಗಲೇ 24/7 ನೀರಿನ ಸರಬರಾಜು ಸಾಧಿಸಲಾಗಿದ್ದು, ಈ ಮಿಷನ್‌ಗಿರುವ ಪರಿವರ್ತನಾ ಸಾಮರ್ಥ್ಯವನ್ನು ಸಾಬೀತುಪಡಿಸಿದೆ ಎಂದು ಮುಖ್ಯಮಂತ್ರಿಗಳು ಉಲ್ಲೇಖಿಸಿದರು. ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನದಲ್ಲಿ ಕರ್ನಾಟಕ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ಗುಣಮಟ್ಟವನ್ನು ಕಾಯ್ದುಕೊಂಡಿದೆ. ಈ ಯೋಜನೆಯ ಪ್ರತಿ ಕಾಮಗಾರಿಗಳನ್ನು ಮೂರನೇ ಏಜೆನ್ಸಿ ಮೂಲಕ ಪರಿಶೀಲನೆ ನಡೆಸಲಾಗುತ್ತಿದ್ದು, ಪಾರದರ್ಶಕತೆಗೆ ಒತ್ತು ನೀಡಲಾಗಿದೆ ಎಂದು ತಿಳಿಸಿದರು. ಕೇಂದ್ರ ಸಚಿವ ವಿ.ಸೋಮಣ್ಣ ಅವರು ದೆಹಲಿಯಿಂದ ಸಭೆಯಲ್ಲಿ ಪಾಲ್ಗೊಂಡರು. ಮುಖ್ಯಮಂತ್ರಿಗಳ ಜತೆಗೆ ಸಭೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ, ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್, ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಹಾಗೂ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಶೇ.86.93ರಷ್ಟು ಪ್ರಗತಿ

ನಾವು ಇದುವರೆಗೆ 101.31 ಲಕ್ಷ ಗ್ರಾಮೀಣ ಕುಟುಂಬಗಳ ಪೈಕಿ 88.06 ಲಕ್ಷ ಮನೆಗಳಿಗೆ ನಳಸಂಪರ್ಕ ಕಲ್ಪಿಸಿದ್ದು, ಶೇ.86.93 ರಷ್ಟು ಪ್ರಗತಿ ಸಾಧಿಸಿದ್ದೇವೆ. ಈಗಾಗಲೇ ಕೈಗೊಳ್ಳಲಾಗಿರುವ 66,344 ಕಾಮಗಾರಿಗಳ ಪೈಕಿ ಸುಮಾರು 48,789 ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿವೆ. ಇದರಲ್ಲಿ ಗ್ರಾಮಗಳಲ್ಲಿ 28,809 ಕಾಮಗಾರಿಗಳು ಗ್ರಾಮಗಳಲ್ಲಿ ಹಾಗೂ 19,980 ಕಾಮಗಾರಿಗಳು ಶಾಲೆ, ಅಂಗನವಾಡಿಗಳಲ್ಲಿ ಕೈಗೊಳ್ಳಲಾಗಿದ್ದು, ಗ್ರಾಮೀಣ ಮಟ್ಟದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿದ್ದೇವೆ.

17,554 ಕೋಟಿ ರೂ. ಹೂಡಿಕೆ

ಕಳೆದ 2 ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ, ಜಲ್ ಜೀವನ್ ಯೋಜನೆಗೆ ಕರ್ನಾಟಕ 17,554.63 ಕೋಟಿ ರೂ. ಬಂಡವಾಳ ಹೂಡಿದೆ. ಇದರಲ್ಲಿ ಕೇಂದ್ರದ ಪಾಲಿನ ನಿರೀಕ್ಷೆಯಲ್ಲಿ ಹೂಡಲಾಗಿರುವ 8,880.71 ಕೋಟಿ ರೂ. ಸೇರಿದ್ದು, ಯೋಜನೆಗಳ ಪೂರ್ಣಗೊಳಿಸುವ ನಿಟ್ಟಿನಲ್ಲಿ ನಮ್ಮ ಬದ್ಧತೆಯನ್ನು ತೋರಿಸುತ್ತದೆ. ಯೋಜನೆ ಅನುಷ್ಠಾನದಲ್ಲಿ ರಾಜ್ಯ ಯಾವುದೇ ರಾಜಿ ಮಾಡದೆ, ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡುತ್ತಿದ್ದರೂ, ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಲು ವಿಳಂಬ ಮಾಡುತ್ತಿರುವುದು ದುರದೃಷ್ಟಕರ ಎಂದು ಬೇಸರ ವ್ಯಕ್ತಪಡಿಸಿದರು.

ಮೇ 20ರಿಂದ ಮುಷ್ಕರ

ಪುಟ 1 ಸಚಿವರೊಂದಿಗೆ ನಡೆದ ಸಭೆ ಬಳಿಕ ಸಾರಿಗೆ ನೌಕರರು ಸಭೆ ನಡೆಸಿ ಮುಷ್ಕರ ನಡೆಸಲು ತೀರ್ಮಾನಿಸಿದ್ದಾರೆ.

ನೌಕರರ ಬೇಡಿಕೆ: ಬಾಟಾ ಮತ್ತಿತರ ಭತ್ಯೆಗಳನ್ನು ಹೆಚ್ಚಿಸಬೇಕು, 12 ತಿಂಗಳ ಉಳಿದಿರುವ ಬಾಕಿ ಹಣವನ್ನು ಸೇವೆಯಲ್ಲಿರುವ ಹಾಗೂ ನಿವೃತ್ತ ನೌಕರರಿಗೆ ಪಾವತಿಸಬೇಕು. 26 ತಿಂಗಳ ಬಾಕಿ ಹಣ 1272 ಕೋಟಿ ರೂ.ಒಂದೇ ಕಂತಿನಲ್ಲಿ ಪಾವತಿಸಬೇಕು.

₹450 ಕೋಟಿ ಬಿಡುಗಡೆ

ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ 2021 ಜ.1ರಿಂದ 2023 ಫೆ.28ರವರೆಗಿನ 26 ತಿಂಗಳ ವೇತನ ಪರಿಷ್ಕರಣೆ ಬಾಕಿ ಹಣದಲ್ಲಿ ಮೊದಲ ಕಂತಾಗಿ 450 ಕೋಟಿ ರೂ. ಬಿಡುಗಡೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಇದರಲ್ಲಿ ಕೆಎಸ್‌ಆರ್‌ಟಿಸಿ 143 ಕೋಟಿ ರೂ., ಬಿಎಂಟಿಸಿ 137 ಕೋಟಿ ರೂ., ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 87 ಕೋಟಿ ರೂ. ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ 81 ಕೋಟಿ ರೂ. ಸೇರಿದಂತೆ ಒಟ್ಟು 140 ಕೋಟಿ ರೂ. ನಾಲ್ಕು ಸಂಸ್ಥೆಯ ಅಧಿಕಾರಿ/ನೌಕರರಿಗೆ ಈ ಅನುದಾನ ವಿತರಣೆಯಾಗಲಿದೆ.

ಆಸ್ಪತ್ರೆ ಕಾಂಪೌಂಡ್ ಕುಸಿದು ಏಳು ಸಾವು

ಪುಟ 1 ಘಟನೆ ನಡೆದ ಕೆಲ ಹೊತ್ತಿನಲ್ಲಿಯೇ ಸ್ಥಳಕ್ಕೆ ಭೇಟಿ ನೀಡಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು, ಘಟನೆ ಸಂಪೂರ್ಣ ಮಾಹಿತಿ ಪಡೆದುಕೊಂಡರಲ್ಲದೆ, ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಘಟನಾ ಸ್ಥಳಕ್ಕೆ ಜಿಬಿಎ ಮತ್ತು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಕರೆಸಿ ತೀವ್ರ ತರಾಟೆಗೆ ತೆಗೆದುಕೊಂಡ ಅವರು, ಹಳೆಯ ಗೋಡೆಗಳನ್ನು ಗುರುತಿಸಿ ಕ್ರಮ ಕೈಗೊಳ್ಳಲು ನಿಮಗೇನು ತೊಂದರೆ? ನಿಮ್ಮ ನಡುವೆ ಸಮನ್ವಯದ ಕೊರತೆ ಎದ್ದು ಕಾಣುತ್ತಿದೆ.

5 ಲಕ್ಷ ರೂ. ಪರಿಹಾರ

ಕಾಂಪೌಂಡ್ ಕುಸಿತದಿಂದ ಸಾವನ್ನಪ್ಪಿದ ಏಳು ಮಂದಿಯ ಕುಟುಂಬಗಳಿಗೆ ತಲಾ 5 ಲಕ್ಷ ರೂ. ಪರಿಹಾರವನ್ನು ಮುಖ್ಯಮಂತ್ರಿಗಳು ಸ್ಥಳದಲ್ಲೇ ಘೋಷಿಸಿದ್ದಾರೆ. ಗೋಡೆ ಕುಸಿದು ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಬಲಿಯಾಗಿದ್ದಾರೆ. ಈ ದುರಂತ ಕುರಿತು ತಕ್ಷಣವೇ ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದ್ದಾರೆ. ಬೌರಿಂಗ್ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಅವರಿಗೆ ಅತ್ಯುತ್ತಮ ಮತ್ತು ಸಂಪೂರ್ಣ ಉಚಿತ ಚಿಕಿತ್ಸೆ ನೀಡುವಂತೆ ಆಸ್ಪತ್ರೆಯ ಮುಖ್ಯಸ್ಥರಿಗೆ ಸೂಚನೆ ನೀಡಿದ್ದಾರೆ.

ಆಸ್ಪತ್ರೆ ಆವರಣದಲ್ಲಿ ಆಕ್ರಂದನ

ಏಳು ಗಾಯಾಳುಗಳಿಗೆ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಅತ್ತ ಶವಾಗಾರದ ಮುಂದೆ ಜಮಾಯಿಸಿರುವ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ನಮ್ಮ ಕುಟುಂಬಕ್ಕೆ ಆಧಾರವಾಗಿದ್ದವರನ್ನು ಕಳೆದುಕೊಂಡೆವು. ಇನ್ನುಮುಂದೆ ನಮಗ್ಯಾರು ದಿಕ್ಕು ಎಂದು ಸಂಬಂಧಿಕರು ಕಣ್ಣೀರಿಡುತ್ತಿದ್ದರು.

ಸ್ಥಳೀಯರ ಕಣ್ಣೀರು

ಬೌರಿಂಗ್ ಆಸ್ಪತ್ರೆಯ ಈ ಕಾಂಪೌಂಡ್ ಗೋಡೆ ಹಳೆಯದಾಗಿತ್ತು ಮತ್ತು ದುರ್ಬಲಗೊಂಡಿತ್ತು ಎಂದು ಸ್ಥಳೀಯರು ಆರೋಪಿಸಿದ್ದಾರೆ. ಸರಿಯಾದ ನಿರ್ವಹಣೆ ಇಲ್ಲದೆ ಮತ್ತು ಮಳೆಯ ಒತ್ತಡದಿಂದಾಗಿ ಈ ಗೋಡೆ ಕುಸಿದಿದೆ ಎನ್ನಲಾಗಿದೆ. ಕಣ್ಣೆದುರೇ ಆಟವಾಡುತ್ತಿದ್ದ ಮಕ್ಕಳು ಮತ್ತು ವ್ಯಾಪಾರ ಮಾಡುತ್ತಿದ್ದವರು ಜೀವ ಕಳೆದುಕೊಂಡಿದ್ದನ್ನು ಕಂಡು ಸ್ಥಳೀಯರು ಕಣ್ಣೀರಿಟ್ಟರು.

ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ

ಘಟನಾ ಸ್ಥಳಕ್ಕೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಜಮೀರ್ ಅಹಮ್ಮದ್ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಕೂಡಲೇ ಇಂತಹ ಶಿಥಿಲ ಕಟ್ಟಡಗಳ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದ್ದಾರೆ. ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿ ಘಟನೆಗೆ ಕಾರಣರಾದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

> ಮಳೆಗಾಲದ ಸಂದರ್ಭದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ನಗರದಾದ್ಯಂತ ಇರುವ ದುರ್ಬಲ, ಹಳೆಯ ಗೋಡೆಗಳನ್ನು ಗುರುತಿಸಿ, ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಬಿಎ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

> ರಾಜ್ಯ ಸರ್ಕಾರ ಇನ್ನಾದರೂ ಎಚ್ಚೆತ್ತುಕೊಂಡು, ಮಳೆಗೆ ಇನ್ನೊಂದು ಅವಘಡ ಸಂಭವಿಸದಂತೆ ಶಿಥಿಲ ನಿರ್ಮಾಣಗಳ ದುರಸ್ತಿ ಸೇರಿದಂತೆ ಎಲ್ಲ ಅಗತ್ಯ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು.
> ■ ಬಿ.ವೈ ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

1,092 ರೊಬೊಟಿಕ್ ಶಸ್ತ್ರಚಿಕಿತ್ಸೆ

ಪುಟ 1 ಕಿದ್ವಾಯಿ ಸಂಸ್ಥೆಯಲ್ಲಿ ರೊಬೊಟಿಕ್ ಶಸ್ತ್ರಚಿಕಿತ್ಸಾ ಸೇವೆಗಳನ್ನು 2015ರಲ್ಲಿ ಡಾ ವಿನ್ಸಿ ಕ್ಸಿ ರೊಬೊಟಿಕ್ ಶಸ್ತ್ರಚಿಕಿತ್ಸಾ ವ್ಯವಸ್ಥೆಯ ಸ್ಥಾಪನೆಯೊಂದಿಗೆ ಪ್ರಾರಂಭಿಸಲಾಯಿತು. ಇದನ್ನು ಕಾರ್ಯಾರಂಭ ಮಾಡಿದಾಗಿನಿಂದ ವಿವಿಧ ವಿಶೇಷತೆಗಳಲ್ಲಿ ವ್ಯಾಪಕ ಶ್ರೇಣಿಯ ಪ್ರಮುಖ, ಸಂಕೀರ್ಣ ಮತ್ತು ಕನಿಷ್ಠ ಆಕ್ರಮಣಕಾರಿ ಆಂಕೊಲಾಜಿಕಲ್ ಕಾರ್ಯವಿಧಾನಗಳನ್ನು ನಿರ್ವಹಿಸಲು ಈ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ಮತ್ತು ವ್ಯಾಪಕವಾಗಿ ಬಳಸಿಕೊಳ್ಳಲಾಗಿದೆ. ರೊಬೊಟಿಕ್ ನೆರವಿನ ಶಸ್ತ್ರಚಿಕಿತ್ಸೆಯ ಪರಿಚಯವು ಶಸ್ತ್ರಚಿಕಿತ್ಸಾ ನಿಖರತೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಆರಂಭದಿಂದ ಈವರೆಗೆ ಒಟ್ಟು 1,092 ರೊಬೊಟಿಕ್ ನೆರವಿನ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ.

ಪ್ರಾಸ್ಟೇಟ್ (ಮೂತ್ರನಾಳ) ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್, ತಲೆ ಮತ್ತು ಕುತ್ತಿಗೆ ಕ್ಯಾನ್ಸರ್, ಎದೆಗೂಡಿನ ಕ್ಯಾನ್ಸರ್‌ಗಳು ಸೇರಿ ಆಯ್ದ ಕ್ಯಾನ್ಸರ್ ಪ್ರಕರಣಗಳಲ್ಲಿ ರೋಗಿಗಳಿಗೆ ಈ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆ ನಡೆಸಲಾಗುತ್ತಿದೆ.

> ರೊಬೊಟಿಕ್ ಶಸ್ತ್ರಚಿಕಿತ್ಸೆಯ ಕಾರ್ಯವಿಧಾನಗಳಲ್ಲಿ ಗಣನೀಯ ಪ್ರಮಾಣವನ್ನು ಆಯುಷ್ಮಾನ್ ಭಾರತ್ -ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಉಚಿತವಾಗಿ ನಡೆಸಲಾಗಿದೆ. ಇದರಿಂದಾಗಿ ಆರ್ಥಿಕವಾಗಿ ಹಿಂದುಳಿದ ರೋಗಿಗಳಿಗೆ ಸುಧಾರಿತ ರೊಬೊಟಿಕ್ ಶಸ್ತ್ರಚಿಕಿತ್ಸೆಯ ಪ್ರಯೋಜನಗಳನ್ನು ವಿಸ್ತರಿಸಲಾಗಿದೆ.
> ■ ಡಾ. ಟಿ. ನವೀನ್, ನಿರ್ದೇಶಕರು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಸೂರ್ಯನ ತಾಪಕ್ಕೆ ಧಗಧಗಿಸುವ ಧಾರವಾಡ!

▸ಮಹಾಂತೇಶ ಕಣವಿ

◆**ಧಾರವಾಡ:** ಎತ್ತನೋಡಿದರತ್ತ ಬೆಟ್ಟಗುಡ್ಡ, ತಂಪಾದ ಹವಾಮಾನ, ಸದಾ ಹಸಿರಿನಿಂದ ಕಂಗೊಳಿಸುತ್ತಿದ್ದ ಧಾರವಾಡದ ಸ್ಥಿತಿ ಈ ಬಾರಿ ಬದಲಾಗಿದೆ. 'ವಿದ್ಯಾಕಾಶಿ' ಸೂರ್ಯನ ತಾಪಕ್ಕೆ ಧಗಧಗಿಸುತ್ತಿದೆ. ಪ್ರಖರ ಬಿಸಿಲು ಧಾರವಾಡಿಗರನ್ನು ಹೈರಾಣಾಗಿಸಿದೆ!

ತಾಪಮಾನದ ಅಂಕಿ-ಅಂಶ: ಕಳೆದ ಕೆಲವು ವಾರಗಳಿಂದ ಧಾರವಾಡದಲ್ಲಿ ತಾಪಮಾನವು ಗಣನೀಯವಾಗಿ ಏರಿಕೆಯಾಗಿದೆ. ಅಲ್ಲದೇ, ಸದ್ಯದ ತಾಪಮಾನವು ಜನತೆ, ಜಾನುವಾರು ಹಾಗೂ ಪ್ರಾಣಿ-ಪಕ್ಷಿಗಳ ಮೇಲೆ ಬಹಳಷ್ಟು ದುಷ್ಪರಿಣಾಮ ಬೀರುತ್ತಿದೆ.

ಸರಾಸರಿ ತಾಪಮಾನ: ಗರಿಷ್ಠ ತಾಪಮಾನವು 35ರಿಂದ 40ರವರೆಗೆ ದಾಖಲಾಗುತ್ತಿದ್ದು, ಇದು ಸಾಮಾನ್ಯಕ್ಕಿಂತ 2-3 ಡಿಗ್ರಿ ಹೆಚ್ಚಾಗಿದೆ. ಕಳೆದ ಎರಡು ದಿನಗಳಿಂದ ಮಳೆ ಸುರಿದ ಕಾರಣ ತಾಪಮಾನ 30ರಿಂದ 35ಕ್ಕೆ ಇಳಿಕೆ ಕಂಡಿದೆ.

ಬಿಸಿಲಿನ ತಾಪವು ಜನರ ಬದುಕಿನ ಮೇಲೆ ಪರಿಣಾಮ ಬೀರುತ್ತಿದೆ. ವಿಪರೀತ ಶಾಖದಿಂದ ಜನರು ನಿರ್ಜಲೀಕರಣ, ಸನ್ ಸ್ಟ್ರೋಕ್, ಚರ್ಮದ ಅಲರ್ಜಿ ಮಕ್ಕಳು ಮತ್ತು ವೃದ್ಧರಲ್ಲಿ ಸುಸ್ತು ಕಾಣಿಸಿಕೊಳ್ಳುತ್ತಿದೆ.

ಕೃಷಿ ವಲಯಕ್ಕೆ ಹೊಡೆತ: ಬಿಸಿಲಿನಿಂದ ಭೂಮಿಯಲ್ಲಿ ತೇವಾಂಶ ಕಡಿಮೆಯಾಗಿದೆ. ಇದು ಮಾವು ಸೇರಿ ಇತರ ಬೆಳೆಗಳ ಇಳುವರಿಯ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಧಾರವಾಡದ ಪ್ರಸಿದ್ಧ 'ಅಲ್ಫಾನ್ಸೋ' ಮಾವಿನ ಇಳುವರಿ ಈ ಬಾರಿ ಕುಂಠಿತವಾಗುವ ಆತಂಕ ಎದುರಾಗಿದೆ.

ಕುಡಿಯುವ ನೀರಿನ ಅಭಾವ: ಕೆರೆಗಳು ಮತ್ತು ಬಾವಿಗಳು ಬತ್ತುತ್ತಿರುವುದರಿಂದ ಗ್ರಾಮೀಣಭಾಗಗಳಲ್ಲಿಕುಡಿಯುವನೀರಿಗಾಗಿ ಹಾಹಾಕಾರವೂ ಕೂಡ ಶುರುವಾಗಿದೆ.

ಬಿಸಿಲಿನಿಂದ ಕಾವೇರಿದ ಹಾವೇರಿ ಜಿಲ್ಲೆ

▸ಕಿರಣ ಮಾಸಣಗಿ

◆**ಹಾವೇರಿ:** ಪ್ರಸಕ್ತ ಸಾಲಿನಲ್ಲಿ ಬೇಸಿಗೆ ಈ ಹಿಂದಿನ ಎಲ್ಲಾ ದಾಖಲೆಗಳನ್ನು ಹಿಂದಿಕ್ಕಿ ತಾಪಮಾನದ ಗರಿಷ್ಠತೆಯನ್ನು ದಾಖಲು ಮಾಡಿದೆ. ಜಿಲ್ಲೆಯಲ್ಲಿ ಎಪ್ರಿಲ್ ಮತ್ತು ಮೇ ತಿಂಗಳಲ್ಲಿ ತಾಪಮಾನದ ಗರಿಷ್ಠ ಉಷ್ಣಾಂಶ 37-38 ದಾಖಲಾಗುತ್ತಿದ್ದು, ಈವರೆಗೂ ಗರಿಷ್ಠ 39-40ರವರೆಗೆ ದಾಖಲಾಗಿದೆ. ಬಿಸಿಲಿನ ತಾಪಮಾನಕ್ಕೆ ಜಿಲ್ಲೆಯ ಜನರು ಬಸವಳಿದಿದ್ದು, ಬೇಸಿಗೆ ಯಾವಾಗ ಮುಗಿದೀತು ಎಂದು ಕಾಯುವಂತಾಗಿದೆ. ಇದರ ಜತೆಗೆ ಕೈಕೊಡುವ ವಿದ್ಯುತ್‌ನಿಂದಾಗಿ ಮನೆಯಲ್ಲಿ ಇರಲಾಗದೇ, ಹೊರಗೂ ಹೋಗಲಾಗದೇ ಕಾದ ಕಾವಲಿಯಲ್ಲಿ ಜೀವನ ಕಳೆಯುವಂತಾಗಿದೆ ಎಂದು ಬಸವಳಿದಿದ್ದಾರೆ. ಅಲ್ಲದೇ ಕಡುಬಿಸಿಲಿನ ಜತೆಗೆ ಆರೋಗ್ಯ ಸಮಸ್ಯೆಯನ್ನೂ ಉಂಟು ಮಾಡಬಹುದೆಂಬ ಆತಂಕದಲ್ಲಿ ಕಾಲ ನೂಕುತ್ತಿದ್ದಾರೆ

ಈಗಾಗಲೇ ಏಪ್ರಿಲ್ 29ರಿಂದ ಮೇ 8ರವರೆಗೆ ತಾಪಮಾನ 45ಡಿಗ್ರಿವರೆಗೂ ತಲುಪಬಹುದು ಎಂದು ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆ ಎಚ್ಚರಿಕೆ ನೀಡಿವೆ. ಬಿಸಿಲು ಹೆಚ್ಚಳದಿಂದ ಸಾರ್ವಜನಿಕರು ವಹಿಸಬೇಕಾದ ಸುರಕ್ಷತೆ ಕುರಿತ ಸುತ್ತೋಲೆ ಹೊರಡಿಸಿದ್ದು, ಇದರ ಬೆನ್ನಲ್ಲೇ ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳಲ್ಲಿ ವಿಶೇಷ ವಾರ್ಡ್‌ಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅಲ್ಲಿ ಚಿಕಿತ್ಸೆಗೆ ಬರುವವರಿಗೆತಂಪಾದವಾತಾವರಣ, ಓಆರ್ ಎಸ್, ಪ್ರಾಥಮಿಕ ಚಿಕಿತ್ಸೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವೈದ್ಯರಿಗೆ ಹಾಗೂ ವಾರ್ಡ್ ಸಿಬ್ಬಂದಿಗಳಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿ ವಾರ್ಡ್‌ಗಳನ್ನು ಸಿದ್ದವಾಗಿಟ್ಟಿದ್ದಾರೆ.

ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಬಿಸಿಲಿನಿಂದ ಇದುವರೆಗೂ ಯಾವುದೇ ದೂರು ಅಥವಾ ಹೀಟ್ ಸ್ಟ್ರೋಕ್‌ನಂತಹ ಪ್ರಕರಣ ವರದಿಯಾಗಿಲ್ಲ, ಆದಾಗ್ಯೂ ಜಿಲ್ಲೆಯ ಜನರು 8-10 ದಿನಗಳ ಕಾಲ ಬೆಳಗಿನ 11ರಿಂದ ಮಧ್ಯಾಹ್ನ 4ರ ವರೆಗೆ ಹೊರಹೋಗದಂತೆ ಸೂಚಿಸಲಾಗಿದೆ ಎಂದು ಡಿಎಚ್‌ಒ ಜಯಾನಂದ 'ಹೊಸದಿಗಂತ'ಕ್ಕೆ ಮಾಹಿತಿ ನೀಡಿದ್ದಾರೆ.



ಗಿರಿ ಜಿಲ್ಲೆಯಲ್ಲಿ 42ಡಿಗ್ರಿ ಗಡಿ ದಾಟಿದ ತಾಪ!

▸ಲಕ್ಷ್ಮಿಕಾಂತ ಕುಲಕರ್ಣಿ

◆**ಯಾದಗಿರಿ:** ಗಿರಿಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಬೇಸಿಗೆ ಬಿಸಿಲು ರುದ್ರ ತಾಂಡವವಾಡುತ್ತಿದ್ದು ಪ್ರತಿನಿತ್ಯ ಬಿಸಿಲಿನ ತಾಪಮಾನ 40 ರಿಂದ 42 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ.

ಬಿಸಿಲಿನ ಪ್ರಖರತೆಗೆ ಜಿಲ್ಲೆಯ ಗ್ರಾಮೀಣ ಭಾಗದ ಕೆರೆಕಟ್ಟೆಗಳು ಸಂಪೂರ್ಣ ಬರಿದಾಗಿದ್ದು ಜಲಚರಗಳಿಗೆ ಜೀವ ಕಂಟಕ ಎದುರಾಗಿದೆ. ಜಿಲ್ಲೆಯ ರೈತರ ಜೀವನಾಡಿಯಾಗಿರುವ ಕೃಷ್ಣ ಮತ್ತು ಭೀಮಾ ನದಿಗಳು ಬಿಸಿಲಿನ ಪ್ರಖರತೆಗೆ ಸಂಪೂರ್ಣ ಬತ್ತಿ ಹೋಗಿವೆ.

ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಜಿಲ್ಲಾಡಳಿತ ಹಲವು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ಜಿಲ್ಲೆಯಲ್ಲಿ ಒಟ್ಟು 31ನೀರಿನ ಸಮಸ್ಯಾತ್ಮಕ ಗ್ರಾಮಗಳು ಎಂದಯ ಗುರುತಿಸಲಾಗಿದ್ದು ಗ್ರಾಮದಲ್ಲಿನ ಖಾಸಗಿ ಬೋರವೆಲ್ ಗಳ ಮೂಲಕ ಬಾಡಿಗೆ ಆಧಾರದ ಮೇಲೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬದ್ದೆಪಲ್ಲಿ ತಾಂಡಾ, ತುರಕನದೊಡ್ಡಿ, ಬೂದೂರ, ಆಶಾಪುರ ತಾಂಡಾ, ಬೆಟ್ಟದಳ್ಳಿ, ಜಿ.ಬಿ.ತಾಂಡಾ ಚಪೇಟ್ಲಾ, ಚಂಡರಕಿ, ಮಿನಾಸಪುರ, ಕಾಕಲವಾರ ಗ್ರಾಮಗಳಲ್ಲಿ ನೀರಿನ ಸಮಸ್ಯೆ ತಲೆದೋರಬಹುದು ಎಂದು ಅಂದಾಜಿಸಲಾಗಿದೆ.

ಯಾದಗಿರಿ ತಾಲೂಕಿನಲ್ಲಿ ಬಸವಂತಪುರ ತಾಂಡಾ ಮತ್ತು ಬಂದಳ್ಳಿ, ಗೊಂದಡಗಿ ಗ್ರಾಮಗಳಲ್ಲಿ ನೀರಿನ ಸಮಸ್ಯೆಯಾಗಯವ ಕಾರಣ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ.

ಅಲ್ಲದೆ, ಗುರಮಠಕಲ್ ತಾಲೂಕಿನ ಯಂಪಾಡ, ಸುಭಾಷ ನಗರ, ಬುರ್ಜ್ ತಾಂಡಾ ನಂದೆಪಲ್ಲಿ, ಮಾಧ್ವಾರ ಮತ್ತು ಸಣ್ಣ ಸಂಬರ ಗ್ರಾಮಗಳಲ್ಲಿ ಬಾಡಿಗೆ ಆಧಾರದ ಮೇಲೆ ಬೊರವೆಲ್ ಗಳನ್ನು ಪಡೆದು ನೀರು ಸರಬರಾಜು ಮಾಡಲಾಗುತ್ತಿದೆ.

ಚಳಿಗಾಲದಲ್ಲಿ ಗಡಗಡ ನಡುಗುತ್ತಲೇ ಬೇಸಿಗೆಯನ್ನು ಸ್ವಾಗತಿಸಿದ್ದ ಉತ್ತರ ಕರ್ನಾಟಕದ ಜಿಲ್ಲೆಗಳು ಕಡು ಧಗೆಯಲ್ಲಿ ಈಗ ನಿಗಿನಿಗಿ ಕೆಂಡದಂತಾಗಿವೆ. ತುಸು ಮಧ್ಯಾಹ್ನ ಆರಂಭವಾಯಿತೆಂದರೆ ಸೂರ್ಯನ ಪ್ರಖರತೆ ಗಗನಕ್ಕೆ ಏರುತ್ತಿದ್ದು, ತಾಪಕ್ಕೆ ಜನ ಕಂಗೆಟ್ಟು ಹೋಗಿದ್ದಾರೆ. ಎಪ್ರಿಲ್ ತಿಂಗಳಲ್ಲಿ ಹಲವು ಜಿಲ್ಲೆಗಳ ತಾಪಮಾನ 40 ಡಿಗ್ರಿಯ ಗಡಿ ದಾಟಿದ್ದು, ಕಲಬುರ್ಗಿ ಜಿಲ್ಲೆಯಲ್ಲಿ ದೇಶದಲ್ಲೇ ಅತಿ ಹೆಚ್ಚಿನ ತಾಪಮಾನ 45.3 ಡಿಗ್ರಿ ತಾಪಮಾನ ದಾಖಲಾಗಿದೆ. ಮೇ ತಿಂಗಳ ಬೇಸಿಗೆ ದಾಟುವುದು ಹೇಗೆ ಎನ್ನುವ ಚಿಂತೆ ಜನರನ್ನು ಕಾಡಿದೆ. ಉತ್ತರ ಕರ್ನಾಟಕದ ಧಗಧಗ ಬೇಸಿಗೆಯ ನೋಟ ಇಲ್ಲಿದೆ.

ಉತ್ತರ ಕರ್ನಾಟಕ ಧಗಧಗ



ಆರೋಗ್ಯದ ಮೇಲೆ ದುಷ್ಪರಿಣಾಮ

ಅತಿಯಾದ ಬಿಸಿಲ ಬೇಗೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆ ಹೆಚ್ಚಿದ್ದು ಜನತೆ ಜಾಗ್ರತೆಯಿಂದ ಇರಬೇಕಿದೆ. ದೇಹದ ಉಷ್ಣಾಂಶದಲ್ಲಿ ಏರಿಕೆ,ಪ್ರಜ್ಞೆ ತಪ್ಪುವುದು,ವಾಂತಿ, ತಲೆ ಸುತ್ತುವುದು, ಹೃದಯ ಬಡಿತದಲ್ಲಿ ಏರುಪೇರು ಮೊದಲಾದ ಆರೋಗ್ಯ ಸಮಸ್ಯೆಗಳು ಉದ್ಭವಿಸುವ ಸಾಧ್ಯತೆ ಇದ್ದು ಜನ ಜಾಗೃತರಾಗಿರಬೇಕೆಂದು ಆರೋಗ್ಯ ಇಲಾಖೆ ಸೂಚನೆ ನೀಡಿದೆ.

ಆರೋಗ್ಯ ಇಲಾಖೆಯ ಮುನ್ನೆಚ್ಚರಿಕೆ

- ಮುಂಜಾಗ್ರತಾ ಕ್ರಮವಾಗಿ ಬಾಯಾರಿಕೆ ಇಲ್ಲದಿದ್ದರೂ ನೀರು ಸೇವಿಸುತ್ತಲೇ ಇರಬೇಕು. ಎಳನೀರು, ಮಜ್ಜಿಗೆ ಮತ್ತು ಹಣ್ಣಿನ ರಸಕ್ಕೆ ಆದ್ಯತೆ ನೀಡುವುದು ಒಳಿತು.
- ಬಿಳಿ ಬಣ್ಣದ ಹಗುರ ಹತ್ತಿ ಬಟ್ಟೆಯನ್ನು ಧರಿಸಬೇಕು.
- ಬೆಳಗ್ಗೆ 11 ಗಂಟೆ ನಂತರ ಮಕ್ಕಳನ್ನು ಹೊರಗಡೆ ಆಟ ವಾಡಲು ಬಿಡಬಾರದು.
- ಮಧ್ಯಾಹ್ನ 12 ಗಂಟೆಯಿಂದ 3ಗಂಟೆ ನಡುವಿನ ಸಮಯದಲ್ಲಿ ನೇರ ಬಿಸಿಲಿನಿಂದ ದೂರ ಇರಬೇಕು
- ಪ್ರತಿ 2 ಗಂಟೆಗೊಮ್ಮೆ 10 ನಿಮಿಷ ವಿಶ್ರಾಂತಿ ಪಡೆಯಬೇಕು.
- ಕೆಲಸದ ಸ್ಥಳದಲ್ಲಿ ಸಾಕಷ್ಟು ಒಆರ್‌ಎಸ್ ಪ್ಯಾಕೇಟ್ ಗಳನ್ನು ಹೊಂದಿರಬೇಕು.
- ಇಲ್‌ನೆಸ್ ಕಂಡು ಬಂದಲ್ಲಿ ತಕ್ಷಣ ಸಮೀಪದ ಆರೋಗ್ಯ ಕೇಂದ್ರಕ್ಕೆ ಕಳುಹಿಸಬೇಕು.



ಬಿಸಿಲಿನಲ್ಲಿ ಸುಡುತ್ತಿರುವ ರಾಯಚೂರು

▸ವಾಗೀಶ ಪಾಟೀಲ್

◆**ರಾಯಚೂರು:** ಕಳೆದ ಕೆಲ ದಿನಗಳಿಂದ ಜಿಲ್ಲೆಯಲ್ಲಿ ತಾಪಮಾನ 40-42 ಡಿಗ್ರಿ ಸೆ. ದಾಖಲಿಸುತ್ತಿದ್ದು, ಇದರಿಂದ ವಯೋ ವೃದ್ಧರು, ಚಿಕ್ಕ ಮಕ್ಕಳು, ಮಹಿಳೆಯರು ಬಸವಳಿದಿದ್ದಾರೆ.

ಬೆಳಿಗ್ಗೆ ಏಳು ಗಂಟೆಯಿಂದಲೇ ಧಗೆಯ ಅನುಭವ ಜನರಿಗೆ ಆಗತೊಡಗುತ್ತದೆ. 8ರಿಂದ 9 ಗಂಟೆಗೆ ಜನತೆ ಮನೆಯಿಂದ ಹೊರಬರುವುದಕ್ಕೆ ಹಿಂಜರಿಯುತ್ತಿದ್ದಾರೆ. 11 ಗಂಟೆಯ ನಂತರದಲ್ಲಿ ರಸ್ತೆಯಲ್ಲಿ ಜನ ನಿಭಿಡತೆ ಅತಿ ವಿರಳವಾಗುತ್ತಿದೆ. ಬಹುತೇಕ ರಸ್ತೆಗಳು ಜನರಿಲ್ಲದೆ ಬಿಕೋ ಎನ್ನುತ್ತಿರುತ್ತವೆ. ನಗರದ ಒಳ ಭಾಗಗಳಲ್ಲಿನ ಬಹುತೇಕ ಬಡಾವಣೆಗಳಲ್ಲಿ ಈ ಸಮಯದಲ್ಲಿ ಕಾರುಗಳ ಸಂಚಾರವನ್ನು ಹೊರತುಪಡಿಸಿದರೆ ದ್ವಿಚಕ್ರ ವಾಹನಗಳು ಮತ್ತಿತರ ಸಣ್ಣ ಸಣ್ಣ ವಾಹನಗಳ ಸಂಚಾರ ಕಂಡುಬರುವುದೇ ಇಲ್ಲ. ಬಿಸಿಲಿನ ತಾಪ ಹೆಚ್ಚಿರುವುದರಿಂದ ಎಲ್ಲ ವ್ಯಾಪಾರವೂ ಇಳಿಮುಖವಾಗಿದೆ. ದೇಹವನ್ನು ತಂಪಾಗಿಡುವುದಕ್ಕೆ ಜನತೆ ವಿವಿಧ ಹಣ್ಣುಗಳ, ನಿಂಬೆ ರಸ ಸೇವನೆಯ ಮೊರೆ ಹೋಗಿದ್ದಾರೆ.

> **ಸಿಗ್ನಲ್‌ಗಳಲ್ಲಿ ಹಾಕುವ ನೆರಳು ಪರದೆಗಳು ಬಹುತೇಕ ಕಡೆ ಹಾಳಾಗಿವೆ. ಇದರಿಂದ ಸಿಗ್ನಲ್‌ಗಳಲ್ಲಿ ನಿಲ್ಲುವ ದ್ವಿಚಕ್ರ ಸವಾರರು ಬಿಸಿಲಿಗೆ ಕಂಗೆಟ್ಟು ಹೋಗುತ್ತಿದ್ದಾರೆ. ಇಲ್ಲೆಲ್ಲ ಶಾಶ್ವತ ನೆರಳು ಪರದೆ ಅಳವಡಿಸಲು ಜಿಲ್ಲಾಡಳಿತ ಮುಂದಾಗಬೇಕು**
>
> ■ **ನಾಗರಾಜ ಪಲುಗುಲ, ದ್ವಿಚಕ್ರ ವಾಹನ ಸವಾರ**

ವಯೋ ವೃದ್ಧರೊಂದಿಗೆ ಯುವ ಜನತೆಯೂ ಬಿಸಿಲಿನ ತಾಪದಿಂದ ತಪ್ಪಿಸಿಕೊಳ್ಳುವುದಕ್ಕೆ ಕೊಡೆಗಳ ಆಸರೆ ಪಡೆದರೆ, ಕೆಲವರು ಟೊಪ್ಪಿಗೆ, ಬಟ್ಟೆಯಲ್ಲಿ ಆಶ್ರಯ ಪಡೆಯುತ್ತಿದ್ದಾರೆ. ಯುವಕರಂತೂ ಸಿಕ್ಕ ಕೆರೆಗಳಲ್ಲಿ ದಿನವಿಡೀ ಈಜಾಡಿ ತಾಪ ಇಳಿಸಿಕೊಳ್ಳುವ ದೃಶ್ಯ ಕಾಣಸಿಗುತ್ತಿದೆ.



ನಿಗಿನಿಗಿ ಕೆಂಡವಾದ ಧಾರವಾಡ ಜಿಲ್ಲೆ

▸ವಿಜಯಕುಮಾರ ಬೆಳ್ಳೇರಿಮಠ

◆**ಹುಬ್ಬಳ್ಳಿ:** ಬಿಸಿಲು ಹಾಗೂ ಬಿಸಿಯಾದ ಗಾಳಿಯಿಂದ ಧಾರವಾಡ ಜಿಲ್ಲೆಯ ಜನತೆ ಹೈರಾಣ ಆಗಿದ್ದಾರೆ.



ಜಿಲ್ಲೆಯಲ್ಲಿ ನಿತ್ಯ 34-37 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗುತ್ತಿದೆ. ಮಂಗಳವಾರ 39 ಡಿಗ್ರಿ ದಾಖಲಾಗಿದ್ದು, ಇದು ಇತ್ತೀಚಿನ ವರ್ಷಗಳಲ್ಲೇ ಅತಿ ಹೆಚ್ಚು ತಾಪಮಾನ ! ಮೇ ಹೊತ್ತಿಗೆ ಉಷ್ಣತೆ 40 ಡಿಗ್ರಿ ದಾಟಬಹುದು ಎಂಬ ಎಚ್ಚರಿಕೆ ನೀಡಲಾಗಿದೆ. ಬೆಳಿಗ್ಗೆ ಎಂಟು ಗಂಟೆಯಿಂದಲೇ ಬಿಸಲಿನ ತಾಪ ಹೆಚ್ಚಾಗುತ್ತಿದೆ. ಜೋರಾಗಿ ಬಿಸಿಗಾಳಿ ಬೀಸುತ್ತಿದ್ದು, ಬೆಳಿಗ್ಗೆ ಕೆಲಸ ಕಾರ್ಯಕ್ಕೆ, ಉದ್ಯೋಗಕ್ಕೆ ಹೋಗುವವರು ಬಸವಳಿದು ಹೋಗುತ್ತಿದ್ದಾರೆ.

ನಿಗಿನಿಗಿ ಕೆಂಡದಂತಹ ಬಿಸಿಲು ದಿನನಿತ್ಯದ ಚಟುವಟಿಕೆಗೆ ಅಡ್ಡಿಪಡಿಸುತ್ತಿದೆ. ಜನರಿಗೆ ಮನೆಯಲ್ಲಾಗಲಿ, ಹೊರಗಡೆಯಾಗಲಿ ಕುಳಿತರೂ, ನಿಂತರೂ ಸಮಾಧಾನವಾಗುತ್ತಿಲ್ಲ, ಕ್ಷಣಕಾಲ ಫ್ಯಾನ್, ಎಸಿ (ಹವಾನಿಯಂತ್ರಿತ) ಇಲ್ಲದಿದ್ದರೆ ಚಡಪಡಿಕೆ ಶುರುವಾಗುತ್ತದೆ. ವಿದ್ಯುತ್ ಕಡಿತವಾದರಂತೂ ಬದುಕು ಸಂಕಷ್ಟಮಯ. ರಜಾ ದಿನವಾಗಿದ್ದರಿಂದ ಶುಭಕಾರ್ಯಗಳು ಹೆಚ್ಚಾಗಿ ಜರುಗುತ್ತಿದ್ದು, ಜನರಿಗೆ ಬಿಸಿಲಿನ ಬೇಗೆ ಕಿರಿಕಿರಿ ತಂದೊಡ್ಡಿದೆ.

ಪ್ರತಿ ವರ್ಷ ಏಪ್ರಿಲ್ ಕೊನೆಯವಾರದಲ್ಲಿ ಧಾರವಾಡದಲ್ಲಿ ಬಿರು ಬಿಸಿಲಿನ ಅನುಭವವಾಗುತ್ತಿತ್ತು. ಆದರೆ ಈ ಸಲ ಮಾರ್ಚ್ ಕೊನೆಯಲ್ಲೇ ಜಿಲ್ಲೆ ಕಾದು ಕೆಂಡವಾಗಿದೆ. ಕಳೆದ 10 ದಿನದಿಂದ ಧಾರವಾಡ ಜಿಲ್ಲೆಯ 35 ಡಿಗ್ರಿ ಸೆಲ್ಸಿಯಸ್ ಗಡಿ ಮೀರಿವೆ. ಮುಂದಿನ ದಿನಗಳಲ್ಲಿ ಇದರ ಪರಿಣಾಮ ಹೆಚ್ಚಾಗಲಿದೆ ಎನ್ನುವ ಎಚ್ಚರಿಕೆಯನ್ನೂ ನೀಡಿದೆ. ಹಿಂದಿನ ಐದು ವರ್ಷಗಳಲ್ಲಿಯೇ ಗರಿಷ್ಠ ತಾಪಮಾನ ಇದಾಗಿದೆ ಎನ್ನುತ್ತಾರೆ ಇಲಾಖೆಯ ಅಧಿಕಾರಿಗಳು.

ಅಭಿಮಾನೋತ್ಸವ ಸಿದ್ಧತೆ ಪರಿಶೀಲಿಸಿದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ

ಯಡಿಯೂರಪ್ಪ ಪರಿಶ್ರಮದ ಮುಖ್ಯಮಂತ್ರಿ

◆**ಚಿತ್ರದುರ್ಗ:** ಬಿಎಸ್.ಯಡಿಯೂರಪ್ಪನವರು ಅದೃಷ್ಟದ ಮುಖ್ಯಮಂತ್ರಿಯಲ್ಲ, ಜನರಿಂದ ಆಯ್ಕೆಯಾದ ಪರಿಶ್ರಮದ ಮುಖ್ಯಮಂತ್ರಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ಹೇಳಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 50 ವರ್ಷದ ರಾಜಕೀಯ ಜೀವನದ ಹಿನ್ನಲೆಯಲ್ಲಿ ಮೇ 9ರಂದು ಚಿತ್ರದುರ್ಗದಲ್ಲಿನಡೆಯಲಿರುವಅಭಿಮಾನೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಬುಧವಾರ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿ.ಎಸ್. ಯಡಿಯೂರಪ್ಪನವರು ಅಧಿಕಾರಕ್ಕಾಗಿ ಬಂದವರಲ್ಲ, ಕರ್ನಾಟಕ ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದೇ ತರುತ್ತೇನೆ ಎಂಬ ಹಠದಲ್ಲಿ ರಾಜ್ಯದಲ್ಲಿ ಪ್ರವಾಸ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತಂದರು ಎಂದರು.

ಇಂದಿನ ಯುವ ರಾಜಕಾರಣಿಗಳಿಗೆ ಹಾಗೂ ಯುವ ಪೀಳಿಗೆಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ದಾರಿ ದೀಪವಾಗಿದ್ದಾರೆ. ಅವರ 50 ವರ್ಷದ ರಾಜಕೀಯ ಜೀವನ ಬೇರೆಯವರಿಗೆ ಮಾರ್ಗದರ್ಶನ ವಾಗಬೇಕಿದೆ. ಯಡಿಯೂರಪ್ಪನವರೆಂದರೆ ರಾಜ್ಯದಲ್ಲಿ ಹೋರಾಟ ನಡೆಸುವ ವ್ಯಕ್ತಿ ಎಂದು ಗುರುತಿಸಲಾಗಿದೆ. ಬಿಎಸ್ ವೈ ಎಂದರೆ ಹೋರಾಟ ಎಂಬ ಮನೋಭಾವ ಎಲ್ಲರಲ್ಲೂ ಮೂಡುತ್ತದೆ ಎಂದರು.

ಕೊಪ್ಪಳ, ವಿಜಯನಗರ, ಬಳ್ಳಾರಿಯ ಮುಖಂಡರು ಶ್ರೀಗಳನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಈ ಮೂರು ಜಿಲ್ಲೆಗಳಿಂದಲೇ ಸುಮಾರು 1.50 ಲಕ್ಷ ಜನ ಬರುವವರಿದ್ದಾರೆ. ಈ ಕಾರ್ಯಕ್ರಮದಲ್ಲಿ ಯಡಿಯೂರಪ್ಪನವರು ಪ್ರಾರಂಭದಲ್ಲಿ ಬಳಸಿದ ಅಂಬಾಸಿಡರ್ ಕಾರನ್ನು ಇಲ್ಲಿಗೆ ತರಲಾಗುವುದು. ಜನರು ಈ ಕಾರನ್ನು ನೋಡಲು ಅವಕಾಶ ಕಲ್ಪಿಸಲಾಗಿದೆ. ಇದು ಬಿಜೆಪಿ ಯಡಿಯೂರಪ್ಪನವರ ಅಭಿಮಾನಿಗಳು ಹಾಗೂ ಹಿರಿಯರು ಸೇರಿಕೊಂಡು ಅಭಿಮಾನದಿಂದ ಮಾಡುತ್ತಿರುವ ಕಾರ್ಯಕ್ರಮ. ಇದರಲ್ಲಿ ಜೆಡಿಎಸ್‌ನ ಕುಮಾರಸ್ವಾಮಿ ಸಹ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಆಗಮಿಸುವ ಅಮಿತ್ ಶಾ ಅವರಿಗೆ ಗೋ ಬ್ಯಾಕ್ ಎಂಬ ಮಾತು ಸಾಮಾಜಿಕ ಜಾಲತಾಣಗಳಲ್ಲಿ ಕಂಡುಬರುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕಾಂಗ್ರೆಸ್ ಪ್ರೇರಿತವಾದ ಕಾರ್ಯವಾಗಿರಬಹುದು. ಅಮಿತ್ ಶಾ ಅವರು ಭರವಸೆ ನೀಡಿದ್ದಾರೆಂದರೆ ಅದನ್ನು ಈಡೇರಿಸುತ್ತಾರೆ ಎಂಬ ಭರವಸೆ ನನಗಿದೆ. ಇದರಿಂದ ಕಾರ್ಯಕ್ರಮಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಟಿ. ಕುಮಾರಸ್ವಾಮಿ, ಖನಿಜ ನಿಗಮದ ಮಾಜಿ ಅಧ್ಯಕ್ಷ ಎಸ್. ಲಿಂಗಮೂರ್ತಿ, ರಾಜ್ಯ ಕಾರ್ಯದರ್ಶಿ ರಮೇಶ್ ಗೌಡ್ರು, ವಿಭಾಗ ಸಹಾ ಪ್ರಭಾರಿ ಎ. ಮುರಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾಧುರಿ ಗಿರೀಶ್, ವೆಂಕಟೇಶ್ ಯಾದವ್, ಮೋಹನ್ ಕುಮಾರ್, ವೀರಶೈವ ಬ್ಯಾಂಕ್ ಅಧ್ಯಕ್ಷ ಪಟೇಲ್ ಶಿವಕುಮಾರ್, ನಗರಸಭೆ ಮಾಜಿ ಸದಸ್ಯರಾದ ಬಿ.ಸುರೇಶ್, ಮಾಜಿ ಪ್ರಧಾನ ಕಾರ್ಯದರ್ಶಿಗಳಾದ ಸಂಪತ್‌ಕುಮಾರ್, ಜಿಲ್ಲಾ ವಕ್ತಾರ ನಾಗರಾಜ್ ಬೇದ್ರೆ, ಎಸ್.ಸಿ.ಮೋರ್ಚಾದ ಅಧ್ಯಕ್ಷ ಪರಶುರಾಮ್, ನಂದಿ ನಾಗರಾಜ್, ರಾಜ್ಯ ರೈತ ಮೋರ್ಚಾದ ಮಲ್ಲಿಕಾರ್ಜುನ್ ಸೇರಿದಂತೆ ಇನ್ನಿತರರಿದ್ದರು.



ದಸರಾ ಅಂಬಾರಿ ರೀತಿ ವೈಭವ..!

ಮೇ 8ರಂದು ಮೈಸೂರು ದಸರಾ ಅಂಬಾರಿ ಮೆರವಣಿಗೆ ರೀತಿಯಲ್ಲಿ ಯಡಿಯೂರಪ್ಪನವರ ಪುರಪ್ರವೇಶ ಕಾರ್ಯಕ್ರಮ ನಡೆಯಲಿದೆ. ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಲಿವೆ. ಈ ಸಮಯದಲ್ಲಿ ವಿವಿಧ ರೀತಿಯ ಜಾನಪದ ಕಲಾ ಮೇಳಗಳು, ಸ್ತಬ್ದ ಚಿತ್ರಗಳು ಇರಲಿವೆ. ಮೇ 9ರಂದು ವೇದಿಕೆ ಕಾರ್ಯಕ್ರಮ ನಡೆಯಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸುವರು. ಅಲ್ಲದೇ ಯಡಿಯೂರಪ್ಪ ಅವರನ್ನು ಸನ್ಮಾನಿಸಲಿದ್ದಾರೆ ಎಂದು ಹೇಳಿದರು.

> **ಜನಸೇವೆಗಾಗಿಯೇ ತಮ್ಮ ಜೀವನನ್ನೇ ಮುಡುಪಾಗಿಟ್ಟಿದ್ದಾರೆ. ದಲಿತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಮಹಿಳೆಯರಿಗೆ ಧ್ವನಿಯಾಗಿ ಕೆಲಸ ಮಾಡಿದ್ದಾರೆ. ಅಧಿಕಾರಕ್ಕಾಗಿ ಎಂದೂ ಹೋರಾಟ ಮಾಡಲಿಲ್ಲ. ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದ್ದಾರೆ. 50 ವರ್ಷ ಬಡವರ ಪರವಾಗಿ ಕೆಲಸ ಮಾಡಿದ್ದಾರೆ. ಸೈಕಲ್ ಮೇಲೆ ರಾಜ್ಯ ಪ್ರವಾಸ ಮಾಡಿ, ಪಕ್ಷ ಕಟ್ಟಿ ಬೆಳೆಸಿದ ಅವರ ಹೋರಾಟ ಮುಂದಿನ ಪೀಳಿಗೆಗೆ ಪ್ರೇರಣೆಯಾಗಲಿದೆ. ಜನರ ಪ್ರೀತಿ ವಿಶ್ವಾಸದ ಮೂಲಕ ಅಧಿಕಾರ ಹಿಡಿಯುವ ಪ್ರಯತ್ನ ಮಾಡಿದ್ದಾರೆ.**
>
> ■ **ಬಿ.ವೈ.ವಿಜಯೇಂದ್ರ, ರಾಜ್ಯಾಧ್ಯಕ್ಷ**

ಧರ್ಮಸ್ಥಳದಲ್ಲಿ 54ನೇ ವರ್ಷದ ಉಚಿತ ಸಾಮೂಹಿಕ ವಿವಾಹ ವೈಭವ

◆**ಉಜಿರೆ:** ನಾಡಿನ ಪವಿತ್ರ ಕ್ಷೇತ್ರ ಧರ್ಮಸ್ಥಳದಲ್ಲಿ ಬುಧವಾರ ಸಂಜೆ ಗಂಟೆ 6.40 ರ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ ನಡೆದ 54ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಸಮಾರಂಭದಲ್ಲಿ 106 ಜೊತೆ ವಧೂ-ವರರು ದಾಂಪತ್ಯ ಜೀವನಕ್ಕೆ ಪಾದಾರ್ಪಣೆ ಮಾಡಿದರು.

ಬುಧವಾರ ಬೆಳಿಗ್ಗೆ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಕುಟುಂಬದವರು ವರನಿಗೆ ಧೋತಿ, ಶಾಲು ಹಾಗೂ ವಧುವಿಗೆ ಸೀರೆ, ಮೂಗುತಿ ಮತ್ತು ರವಿಕೆ ಕಣ ವಿತರಿಸಿದರು.

ಸಂಜೆ 5 ಗಂಟೆಗೆ ವಧೂ-ವರರನ್ನು ಭವ್ಯ ಮೆರವಣಿಗೆಯಲ್ಲಿ ದೇವಸ್ಥಾನದ ಬಳಿಯಿಂದ ಅಮೃತವರ್ಷಿಣಿ ಸಭಾಭವನಕ್ಕೆ ಕರೆದೊಯ್ದು ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಗಣ್ಯ ಅತಿಥಿಗಳು ಮಂಗಳಸೂತ್ರ ವಿತರಿಸಿದರು. ಗಂಟೆ 6.40 ರ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ವೇದಘೋಷ, ಮಂಗಳವಾದ್ಯ, ಹಾರ ವಿನಿಮಯ, ಮಂತ್ರಾಕ್ಷತೆಯೊಂದಿಗೆ ವಧುವಿಗೆ ಮಂಗಳಸೂತ್ರ ಧಾರಣೆ ಮಾಡಲಾಯಿತು. ಬಳಿಕ ನೂತನ ದಂಪತಿಗಳು ದೇವರ ದರ್ಶನ ಮಾಡಿದರು.

ಸಭಾ ಕಾರ್ಯಕ್ರಮ : ಸಮಾರಂಭದ ಅಧ್ಯಕ್ಷತೆ ವಹಿಸಿದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಮಾತನಾಡಿ, ನೂತನ ದಂಪತಿಗಳು ಪರಸ್ಪರ ನಂಬಿಕೆ, ಪ್ರೀತಿ- ವಿಶ್ವಾಸದೊಂದಿಗೆ ಹೊಂದಾಣಿಕೆಯಿಂದ ಸಾರ್ಥಕ ಜೀವನ ನಡೆಸಬೇಕು ಎಂದು ಸಲಹೆ ನೀಡಿ ಆಶೀರ್ವದಿಸಿದರು.

ಧರ್ಮಸ್ಥಳದಲ್ಲಿ ಆರಂಭಿಸಿದ ಉಚಿತ ಸಾಮೂಹಿಕ ವಿವಾಹ ಯೋಜನೆಯನ್ನು ಸರ್ಕಾರ ಹಾಗೂ ಇತರ ಮಠ- ಮಂದಿರಗಳು ಮಾದರಿಯಾಗಿ ಸ್ವೀಕರಿಸಿ ಅನುಸರಿಸುತ್ತಿರುವುದಕ್ಕೆ ಅವರು ಸಂತಸ ವ್ಯಕ್ತಪಡಿಸಿದರು.

ಮದುವೆ ಬದುಕಿನ ಬದಲಾವಣೆಯ ಪರ್ವ : ಮೆಸ್ಕಾಂ ಅಧ್ಯಕ್ಷ ಕೆ. ಹರೀಶ್ ಕುಮಾರ್ ಶುಭಾಶಂಸನೆ ಮಾಡಿ, ಮದುವೆ ಎಂಬುದು ಪ್ರತಿಯೊಬ್ಬರ ಬದುಕಿನಲ್ಲಿ ಬದಲಾವಣೆಯ ಪರ್ವವಾಗಿದ್ದು ಧರ್ಮಸ್ಥಳದಿಂದ ನಡೆಸುವ ಬಹುಮುಖಿ ಸಮಾಜ ಸೇವಾ ಕಾರ್ಯಗಳಲ್ಲಿ ಉಚಿತ ಸಾಮೂಹಿಕ ವಿವಾಹ ಅತ್ಯಂತ ಪವಿತ್ರ, ಹಾಗೂ ಪುಣ್ಯದಾಯಕ ಸೇವೆಯಾಗಿದೆ ಎಂದರು.



ಶಾಸಕ ಹರೀಶ್ ಪೂಂಜ ಮಾತನಾಡಿ, ಹೆಗ್ಗಡೆ ದಂಪತಿಯ ಸಾರ್ಥಕ ಬದುಕೇ ಎಲ್ಲರಿಗೂ ಪ್ರೇರಕ ಶಕ್ತಿ ಹಾಗೂ ಮಾರ್ಗದರ್ಶಿ ಯಾಗಿದೆ ಎಂದರು.ವಿಧಾನಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್ ಉಪಸ್ಥಿತರಿದ್ದರು. ಹೇಮಾವತಿ ವೀ. ಹೆಗ್ಗಡೆ, ಡಿ. ಹರ್ಷೇಂದ್ರ ಕುಮಾರ್, ಶರ್ಮಿಳಾ ವೇದಿಕೆಯಲ್ಲಿ ಇದ್ದರು. ಬೆಂಗಳೂರಿನಲ್ಲಿರುವ ಕ್ಷೇಮವನದ ಸಿ.ಇ.ಒ. ಶ್ರದ್ಧಾಅಮಿತ್ ಸ್ವಾಗತಿಸಿದರು. ಹೆಗ್ಗಡೆಯವರ ಆಪ್ತ ಕಾರ್ಯದರ್ಶಿ ಎ.ವಿ. ಶೆಟ್ಟಿ ವಂದಿಸಿದರು. ಸಂಪತ್ ಕುಮಾರ್ ರೈ ಮತ್ತು ಶ್ರೀನಿವಾಸ ರಾವ್ ಧರ್ಮಸ್ಥಳ ಕಾರ್ಯಕ್ರಮ ನಿರ್ವಹಿಸಿದರು.

ಮೇ 3ಕ್ಕೆ ರಾಷ್ಟ್ರೀಯ ಕುಸ್ತಿಗೆ ಆಯ್ಕೆ ಪ್ರಕ್ರಿಯೆ: ಮಠಪತಿ

◆**ಧಾರವಾಡ:** ಭಾರತೀಯ ಶೈಲಿಯ ರಾಷ್ಟ್ರೀಯ 2024-25ನೇ ಸಾಲಿನ ಕುಸ್ತಿ ಸ್ಪರ್ಧೆಗೆ(ಚಾಂಪಿಯನ್ ಶಿಫ್) ಕರ್ನಾಟಕ ರಾಜ್ಯ ಭಾರತೀಯ ಶೈಲಿ ಕುಸ್ತಿ ಸಂಘ ಮೇ 3ಕ್ಕೆ ಆಯ್ಕೆ ಪ್ರಕ್ರಿಯೆ ನಡೆಸಲಿದೆ ಎಂದು ರಾಜ್ಯ ಭಾರತೀಯ ಶೈಲಿ ಕುಸ್ತಿ ಸಂಘದ ಅಧ್ಯಕ್ಷ ರತನಕುಮಾರ ಮಠಪತಿ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಮಹಾರಾಷ್ಟ್ರದ ಸಾತಾರದಲ್ಲಿ ಮೇ.14ರಿಂದ 17ರವರೆಗೆ ಭಾರತದ 52ನೇ ಹಿಂದಕೇಸರಿ ಹಾಗೂ 4ನೇ ಮಹಿಳಾ ಹಿಂದಕೇಸರಿ ಹಾಗೂ ಇತರೆ ತೂಕಗಳಲ್ಲಿ ನಡೆಯುವ ರಾಷ್ಟ್ರೀಯ ಕುಸ್ತಿ ಸ್ಪರ್ಧೆಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ಈ ಸ್ಪರ್ಧೆಗೆ ರಾಜ್ಯ ಭಾರತೀಯ ಶೈಲಿ ಕುಸ್ತಿ ಸಂಘದಿಂದ ರಾಜ್ಯ ಕುಸ್ತಿ ತಂಡವನ್ನು ಆಯ್ಕೆ ಮಾಡಲಿದೆ. ಮೇ 3ರಂದು ಬೆಳಿಗ್ಗೆ 10ರಿಂದ 12ವರೆಗೆ ಧಾರವಾಡದ ಕರ್ನಾಟಕ ಕಲಾ ಕಾಲೇಜಿನ ಮೈದಾನದಲ್ಲಿ ದೇಹ ತೂಕ ಪರಿಶೀಲನೆ ನಡೆಯಲಿದೆ. ಸಂಜೆ 5ರಿಂದ 8ವರೆಗೆ ತಂಡದ ಆಯ್ಕೆ ಜರುಗಲಿದೆ ಎಂದರು. ರಾಜ್ಯದ ಯಾವುದೇ ಭಾಗದ 18 ವರ್ಷ ಮೇಲ್ಪಟ್ಟ ಕುಸ್ತಿ ಪಟುಗಳು ಭಾಗವಹಿಸಬಹುದು. 18 ವರ್ಷದ ಒಳಗಿನವರ ಪಾಲ್ಗೊಳ್ಳಲು ಪಾಲಕರು ಅನಮುತಿ ಪತ್ರ ಹಾಗು ಫಿಟ್‌ನೆಸ್ ಕುರಿತು ವೈದ್ಯಕೀಯ ಪ್ರಮಾಣ ಪತ್ರ ತರಬೇಕು. ಇಲ್ಲವಾದರೆ ಸ್ಪರ್ಧೆಗೆ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.



ಸುದ್ದಿಗೋಷ್ಠಿಯಲ್ಲಿ ರಾಜ್ಯ ಭಾರತೀಯ ಶೈಲಿ ಕುಸ್ತಿ ಸಂಘದ ಕಾರ್ಯದರ್ಶಿ ಎಂ.ಆರ್.ಶರ್ಮಾ, ಜಿಲ್ಲಾ ಪೈಲವಾನರ ಸಂಘದ ಅಧ್ಯಕ್ಷ ನಿಂಗರಾಜ ಹಡಪದ, ಆನಂದ ಹೊಳೆಹಡಗಲಿ, ರಾಯಪ್ಪ ಬಾಗಲಕೋಟ, ನಾಗನಗೌಡ ಪಾಟೀಲ, ಕಲಂದರ ಮುಲ್ಲಾ ಇದ್ದರು.

ಸಂಪಾದಕೀಯ

ಪ್ರಜಾಪ್ರಭುತ್ವದ ನಿಜವಾದ ಹಬ್ಬ

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಎರಡನೇ ಹಾಗೂ ಅಂತಿಮ ಹಂತದ ಮತದಾನದಲ್ಲಿ ದಾಖಲಾಗಿರುವ ಭಾರೀ ಪ್ರಮಾಣದ ಪಾಲ್ಗೊಳ್ಳಿಕೆ, ಜನತಂತ್ರದ ಜೀವಂತಿಕೆಯನ್ನು ಮತ್ತೊಮ್ಮೆ ನೆನಪಿಸಿದೆ. ಸ್ವಾತಂತ್ರ್ಯಾನಂತರದ ಅತ್ಯಧಿಕ ಮತದಾನವೆಂದು ಚುನಾವಣಾ ಆಯೋಗ ಹೇಳಿರುವುದು ಕೇವಲ ಅಂಕಿಅಂಶವಲ್ಲ. ಅದು ರಾಜ್ಯದ ರಾಜಕೀಯ ಬಿಸಿ, ಜನರ ತೊಡಗಿಸಿಕೊಳ್ಳುವಿಕೆ ಮತ್ತು ಭವಿಷ್ಯದ ಕುರಿತು ಇರುವ ನಿರೀಕ್ಷೆಗಳ ಪ್ರತಿಫಲವೂ ಆಗಿದೆ.

ಈ ಬಾರಿ ಒಟ್ಟು ಮತದಾನದ ಪ್ರಮಾಣವು ಶೇ.92ಕ್ಕೂ ಮೀರಿರುವುದು, ಪ್ರಜಾಪ್ರಭುತ್ವದಲ್ಲಿ ಜನರ ನಂಬಿಕೆ ಇನ್ನೂ ಅಚಲವಾಗಿದೆ ಎಂಬುದನ್ನು ಸೂಚಿಸುತ್ತದೆ. ಆದರೆ ಈ ಅಂಕಿಯ ಹಿಂದೆ ಇರುವ ವಾಸ್ತವಿಕತೆಯನ್ನು ವಿಶ್ಲೇಷಿಸುವುದು ಅಷ್ಟೇ ಮುಖ್ಯ. ಮತದಾನದ ಹೆಚ್ಚಳವನ್ನು ಎಲ್ಲಾ ಪಕ್ಷಗಳು ತಮ್ಮದೇ ರೀತಿಯಲ್ಲಿ ವ್ಯಾಖ್ಯಾನಿಸುತ್ತಿವೆ. ಆಡಳಿತ ಪಕ್ಷಕ್ಕೆ ಇದು ತನ್ನ ಕಲ್ಯಾಣ ರಾಜಕಾರಣದ ಬೆಂಬಲವಾಗಿದ್ದರೆ, ವಿರೋಧ ಪಕ್ಷಕ್ಕೆ ಇದು ಬದಲಾವಣೆಯ ಸಂಕೇತ. ಹೀಗಾಗಿ, ಸಂಖ್ಯೆಗಳ ರಾಜಕಾರಣ ಚುನಾವಣೆಯ ನಂತರವೂ ಮುಂದುವರಿಯಲಿದೆ.

ಇಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಯ ಪರಿಣಾಮವನ್ನು ಕಡೆಗಣಿಸಲು ಸಾಧ್ಯವಿಲ್ಲ. ಲಕ್ಷಾಂತರ ಹೆಸರುಗಳು ಪಟ್ಟಿಯಿಂದ ತೆಗೆದುಹಾಕುವ ಮೂಲಕ ಮತಪಟ್ಟಿಗೆ ಜರಡಿ ಹಿಡಿದಿರುವುದು ಶೇಕಡಾವಾರು ಏರಿಕೆಗೆ ಕಾರಣವಾಗಿರಬಹುದು.

ಚುನಾವಣಾ ದಿನದ ಚಿತ್ರಣವು ಸಹ ಬಂಗಾಳದ ಪರಿಚಿತ ರಾಜಕೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದೆ. ಉದ್ದ ಸಾಲುಗಳು, ಸ್ಥಳೀಯ ಮಟ್ಟದ ಉದ್ವಿಗ್ನತೆ, ಆರೋಪ-ಪ್ರತ್ಯಾರೋಪಗಳು ಕಾಣಿಸಿವೆ. ಆದರೂ, ಹಿಂದಿನ ಚುನಾವಣೆಯೊಂದಿಗೆ ಹೋಲಿಸಿದರೆ ವ್ಯಾಪಕ ಹಿಂಸಾಚಾರ ಕಡಿಮೆ ಎನ್ನುವ ಅಂಶ ಗಮನಾರ್ಹ. ಭಾರೀ ಪ್ರಮಾಣದಲ್ಲಿ ಕೇಂದ್ರ ಭದ್ರತಾ ಪಡೆಯ ನಿಯೋಜನೆ ಇದಕ್ಕೆ ಕಾರಣವಾಗಿದೆ. ಇದನ್ನೇ ಅಲ್ಲಿನ ಆಡಳಿತ ಪಕ್ಷ ಪ್ರಮುಖವಾಗಿ ಟೀಕಿಸಿದೆ. ಆದರೆ, ಕೇಂದ್ರ ಚುನಾವಣಾ ಆಯೋಗ ಕೇಂದ್ರ ಪಡೆಗಳ ನಿಯೋಜನೆಯನ್ನು ಸಮರ್ಥನೆಯನ್ನೂ ಮಾಡಿಕೊಂಡಿದೆ.

ಒಟ್ಟಿನಲ್ಲಿ, ಈ ಬಾರಿ ಮತದಾನವು ಎರಡು ಸ್ಪಷ್ಟ ಸಂದೇಶಗಳನ್ನು ನೀಡುತ್ತದೆ. ಮೊದಲನೆಯದು ಜನರು ತಮ್ಮ ಹಕ್ಕನ್ನು ಬಳಸಲು ಉತ್ಸುಕರಿದ್ದಾರೆ. ಎರಡನೆಯದು ಜನತಂತ್ರದ ಪ್ರಕ್ರಿಯೆಯ ಮೇಲಿನ ವಿಶ್ವಾಸ ಉಳಿದಿದ್ದರೂ, ಅದರ ಪಾರದರ್ಶಕತೆ ಮತ್ತು ನ್ಯಾಯತೆಯ ಬಗ್ಗೆ ಪ್ರಶ್ನೆಗಳು ಇನ್ನೂ ಜೀವಂತವಾಗಿವೆ.

ಅಂತಿಮವಾಗಿ, ಫಲಿತಾಂಶ ಏನೇ ಬಂದರೂ, ಈ ಚುನಾವಣೆಯ ಪಾಠ ಸ್ಪಷ್ಟವಾಗಿದೆ. ಪ್ರಜಾಪ್ರಭುತ್ವದ ಬಲವು ಕೇವಲ ಹೆಚ್ಚಿನ ಮತದಾನದಲ್ಲಿಲ್ಲ, ಅದು ಸಮಾನ ಅವಕಾಶ, ನ್ಯಾಯಯುತ ಪ್ರಕ್ರಿಯೆ ಮತ್ತು ಜನರ ನಂಬಿಕೆಯನ್ನು ಉಳಿಸುವಲ್ಲಿ ಇದೆ. ಬಂಗಾಳದ ಈ ಮಹಾಮತದಾನ, ಭಾರತದ ಜನತಂತ್ರಕ್ಕೆ ಮತ್ತೊಂದು ಪರೀಕ್ಷೆಯಾಗಿ ಪರಿಣಮಿಸಿದೆ.

ಸದ್ಯ ಪಂಚರಾಜ್ಯಗಳ ಮತದಾನ ಪ್ರಕ್ರಿಯೆ ಮುಗಿದಿದ್ದು ಮೇ 4ಕ್ಕೆ ಫಲಿತಾಂಶ ಹೊರಬೀಳಲಿದೆ. ಆದರ ನಡುವೆ ಮತಗಟ್ಟೆ ಸಮೀಕ್ಷೆಗಳ ವರದಿಯೂ ಹೊರಬಿದ್ದಿದ್ದು, ಇಲ್ಲಿಂದಲೇ ಲೆಕ್ಕಾಚಾರವೂ ನಡೆಯಲಿದೆ.

ಗೂಂಡಾ ರಾಜ್‌ಗೆ ಹೆದರದ ಬಂಗಾಳ ಮತದಾರ



ಗುರುತರ
• ಸೋಮಶೇಖರ ಸಿ.ಜಿ.
sompreethi@gmail.com

ಪ್ರಜಾಪ್ರಭುತ್ವ ಎಂದರೆ ಮತದಾರ ಮಹಾಶಯ ತನ್ನ ಮನಸ್ಸಿನ ಮಾತನ್ನು ಮತಪೆಟ್ಟಿಗೆ ಮೂಲಕ ಹೇಳುವ ಅವಕಾಶ. ಆದರೆ ಪಶ್ಚಿಮ ಬಂಗಾಳದಲ್ಲಿ ಆ ಅವಕಾಶವನ್ನು ಬಲಪ್ರಯೋಗದಿಂದ, ಭಯ ಹುಟ್ಟಿಸುವುದರಿಂದ, ರಕ್ತಪಾತದಿಂದ ಕಿತ್ತುಕೊಳ್ಳಲಾಗುತ್ತಿದೆ ಎಂಬ ಆರೋಪ ಮತ್ತೆ ಮತ್ತೆ ಕೇಳಿಬರುತ್ತಿದೆ. ಈ ಬಾರಿ ಎರಡು ಹಂತಗಳಲ್ಲಿ ನಡೆದ ವಿಧಾನಸಭಾ ಚುನಾವಣೆ ಮತ್ತೊಮ್ಮೆ ಆ ಮಾತನ್ನು ಸಾಬೀತು ಮಾಡಿದೆ.

ಇತಿಹಾಸವನ್ನು ಒಮ್ಮೆ ನೋಡಬೇಕು. ಏಕೆಂದರೆ, ಪಶ್ಚಿಮ ಬಂಗಾಳದ ಚುನಾವಣಾ ಇತಿಹಾಸ ಎಂದಿಗೂ ರಕ್ತಸಿಕ್ತವಾಗಿಯೇ ಇದೆ. ಮೊದಲು ಸಿಪಿಎಂ ಆಳ್ವಿಕೆಯಲ್ಲಿ ನಡೆಯುತ್ತಿದ್ದ ರಾಜಕೀಯ ಹಿಂಸೆ, ನಂತರ ಟಿಎಂಸಿ ಅಧಿಕಾರಕ್ಕೆ ಬಂದ ಮೇಲೆ ಮತ್ತಷ್ಟು ಉಗ್ರ ಸ್ವರೂಪ ತಾಳಿದೆ. ಎನ್‌ಸಿಆರ್‌ಬಿ ದಾಖಲೆಗಳ ಪ್ರಕಾರ, 1999ರಿಂದ 2016ರ ನಡುವೆ ಪ್ರತಿ ವರ್ಷ ಸರಾಸರಿ 20 ರಾಜಕೀಯ ಹತ್ಯೆಗಳು ಪಶ್ಚಿಮ ಬಂಗಾಳದಲ್ಲಿ ನಡೆದಿವೆ. ಇದು ಭಾರತದ ಯಾವ ರಾಜ್ಯಕ್ಕೂ ಹೋಲಿಸಲಾಗದ ದುರ್ದೈವದ ದಾಖಲೆ.

2021ರ ವಿಧಾನಸಭಾ ಚುನಾವಣೆ ಫಲಿತಾಂಶ ಬಂದ ತಕ್ಷಣ ಬಂಗಾಳದಲ್ಲಿ ರಕ್ತದ ಕೋಡಿ ಹರಿಯಿತು. ಬಿಜೆಪಿ ಕಾರ್ಯಕರ್ತರ ಕುಟುಂಬಗಳು ಜೀವ ಭಯದಿಂದ ನೆರೆಯ ಅಸ್ಸಾಮ್‌ನಲ್ಲಿ ಆಶ್ರಯ ಪಡೆದ ಘಟನೆಗಳು ವರದಿಯಾಗಿದ್ದವು. ಇದು ಸ್ವಾತಂತ್ರ್ಯ ಸಿಕ್ಕ ಭಾರತದಲ್ಲಿ ಒಂದು ರಾಜ್ಯದ ಒಳಗೆ ನಡೆದ ನಿರಾಶ್ರಿತ ಪ್ರಕರಣ. ಅದು ರಾಜ್ಯ ಪ್ರಾಯೋಜಿತ ಭಯೋತ್ಪಾದನೆ ಎಂದೂ ಕರೆಯಬಹುದು. 2018ರ ಪಂಚಾಯತ್ ಚುನಾವಣೆಯಲ್ಲಿ ಶೇ.34ರಷ್ಟು ಸ್ಥಾನಗಳಲ್ಲಿ ಟಿಎಂಸಿ ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು. ವಿರೋಧ ಪಕ್ಷದ ಅಭ್ಯರ್ಥಿಗಳನ್ನು ನಾಮಪತ್ರ ಸಲ್ಲಿಸದಂತೆ ಬೆದರಿಸಲಾಗಿತ್ತು.

ಹಾಗಂತ, ಬಂಗಾಳದ ರಾಜಕೀಯ ಹಿಂಸೆ 2011ರಲ್ಲಿ ಟಿಎಂಸಿ ಬಂದಾಗ ಶುರುವಾಗಿದ್ದಲ್ಲ. ಸಿಪಿಎಂ ಆಳ್ವಿಕೆಯ 34 ವರ್ಷಗಳಲ್ಲಿ ಕೂಡ ರಾಜಕೀಯ ಹತ್ಯೆ, ಬೂತ್ ಕ್ಯಾಪ್ಚರಿಂಗ್, ವಿರೋಧಪಕ್ಷದ ಕಾರ್ಯಕರ್ತರ ಮೇಲೆ ದಮನ ಸಾಮಾನ್ಯ ಸಂಗತಿಯಾಗಿತ್ತು. ನಂದಿಗ್ರಾಮ, ಸಿಂಗೂರ್ ಹೋರಾಟಗಳಲ್ಲಿ ರೈತರ ಮೇಲೆ ಗೋಲಿಬಾರ್ ಮಾಡಿದ ಸರ್ಕಾರವನ್ನು ಸ್ವತಃ ಮಮತಾ ಬ್ಯಾನರ್ಜಿ ವಿರೋಧಿಸಿ ಅಧಿಕಾರಕ್ಕೆ ಬಂದರು. ಆದರೆ ಅಧಿಕಾರ ಸಿಕ್ಕ ಮೇಲೆ ಅದೇ ಹಿಂಸೆಯ ಮಾರ್ಗವನ್ನು ಇನ್ನಷ್ಟು ಸಂಘಟಿತವಾಗಿ ಬಳಸಿಕೊಂಡರು. ಬಂಗಾಳದ ದುರಂತ ಇದೇ. ಒಂದು ಗೂಂಡಾ ಸಂಸ್ಕೃತಿ ಮುಗಿಯಲಿಲ್ಲ, ಮತ್ತೊಂದು ಅದರ ಸ್ಥಾನ ತೆಗೆದುಕೊಂಡಿತು. ಇದರ ನಡುವೆ, ಇಡೀ ಸಿಪಿಎಂ ನಾಶವಾಗಿ ಹೋದರೆ, ಕಾಂಗ್ರೆಸ್ ತನ್ನ ನೆಲೆ ಕಳೆದುಕೊಂಡಿದೆ. ಇಲ್ಲಿ ಟಿಎಂಸಿಗೆ ಪರ್ಯಾಯವಾಗಿ ಬಿಜೆಪಿ ಬೆಳೆಯತೊಡಗಿತು. ಆದರೆ ಇದರ ಹಾದಿಗಳೂ ಸುಲಭವಾಗಿಯೇನೂ ಇಲ್ಲ. ಪಶ್ಚಿಮ ಬಂಗಾಳದ ಈ ರಕ್ತಸಿಕ್ತ ಮತ್ತು ಅಕ್ರಮ ರಾಜಕಾರಣ ಕೊನೆಗಾಣಿಸುವ ವಿಚಾರದಲ್ಲಿ ಅಲ್ಲಿ ಪ್ರಯತ್ನ ನಡೆಯುತ್ತಲೇ ಇದೆ.

ಹಾಗೆಯೇ, ಟಿಎಂಸಿ ರಾಜಕೀಯಕ್ಕೆ ಹೆಚ್ಚು ಪುಷ್ಟಿ ಕೊಟ್ಟದ್ದು ನೆರೆಯ ಬಾಂಗ್ಲಾ ಅಕ್ರಮ ನುಸುಳುಕೋರರು. ಭಾರೀ ಸಂಖ್ಯೆಯಲ್ಲಿ ಸೇರಿಕೊಂಡು, ಕ್ಷೇತ್ರಗಳಲ್ಲಿ ತಮ್ಮ ಓಟುಗಳೇ ಪ್ರಭಾವಿ ಎನ್ನಿಸಿಕೊಳ್ಳುವಷ್ಟು ಬೆಳೆದರು. ಇದನ್ನು ತಪ್ಪಿಸುವ ಸಲುವಾಗಿ ಮತ್ತು ಅಕ್ರಮ ಮತದಾರರನ್ನು ಹೊರಗಟ್ಟುವ ನಿಟ್ಟಿನಲ್ಲಿ ಬಂದದ್ದೇ ಎಸ್‌ಐಆರ್. ಮೊದಲೇ ಹೇಳಿದ ಉದ್ದೇಶ ಒಂದೇ ನಕಲಿ ಮತದಾರರನ್ನು ತೆಗೆದುಹಾಕುವುದು, ನಿಜವಾದ ಫಲಾನುಭವಿ ಎಲ್ಲರ ಹೆಸರೂ ಇರುವಂತೆ ನೋಡಿಕೊಳ್ಳುವುದು. ಆದರೆ ಟಿಎಂಸಿ ಇದನ್ನು ವಿರೋಧಿಸಿ ನ್ಯಾಯಾಲಯದ ಮೆಟ್ಟಿಲು ಹತ್ತಿತು. ಇದರ ಅರ್ಥ ಏನು? ಅಸಲಿ ಮತದಾರ ಪಟ್ಟಿ ಬಯಲಾದರೆ, ತಮ್ಮ ಭದ್ರಕೋಟೆ ಕುಸಿಯಬಹುದು ಎಂಬ ಭಯ ಟಿಎಂಸಿಗಿದೆ ಎಂದೇ ಅರ್ಥ. ಮತದಾರರ ಪಟ್ಟಿ ಶುದ್ಧೀಕರಣವನ್ನೇ ವಿರೋಧಿಸುವ ಪಕ್ಷ ಅಧಿಕಾರದಲ್ಲಿ ಇರಬಾರದು ಇದು ಸ್ಪಷ್ಟ ನೈತಿಕ ನ್ಯಾಯ.

ಟಿಎಂಸಿ ಹಿಂಸಾಚಾರವನ್ನು ಮಾತ್ರ ಅವಲಂಬಿಸಿಲ್ಲ. ರಾಜ್ಯದ ಮುಸ್ಲಿಂ ಮತದಾರರನ್ನು ಒಂದು ಬ್ಲಾಕ್ ಆಗಿ ಒಟ್ಟುಗೂಡಿಸಿ, ಅವರ ಓಲೈಕೆಯ ಮೂಲಕ ಅಧಿಕಾರ ಉಳಿಸಿಕೊಳ್ಳುವ ರಾಜಕಾರಣ ಟಿಎಂಸಿಯ ಮೂಲ ತಂತ್ರ. ರಾಜ್ಯದ ಜನಸಂಖ್ಯೆಯ ಶೇ.27ಕ್ಕೂ ಹೆಚ್ಚು ಮುಸ್ಲಿಂ ಸಮುದಾಯ ಇರುವ ಬಂಗಾಳದಲ್ಲಿ ಈ ಓಲೈಕೆ ಚುನಾವಣಾ ಲೆಕ್ಕಾಚಾರದಲ್ಲಿ ನಿರ್ಣಾಯಕ. ಆದರೆ ಇದರ ಪ್ರತಿಫಲ ಏನು? ಹಿಂದೂ-ಮುಸ್ಲಿಂ ಸಮಾಜಗಳ ನಡುವೆ ಕಂದಕ ಆಳವಾಗಿ ಬಿದ್ದಿದೆ. ಇದು ಅಭಿವೃದ್ಧಿ ರಾಜಕಾರಣವಲ್ಲ, ಒಡೆದಾಳುವ ರಾಜಕೀಯವೆಂದೇ ಹೇಳಬಹುದು.



ಇಷ್ಟೆಲ್ಲಾ ಮಾಡಿದ ಮೇಲೂ ಹಿಂಸಾಚಾರ ನಿಂತಿದೆ ಅಂದರೆ ತಪ್ಪಾದೀತು. ಈ ಬಾರಿಯೂ ರಾಜಕೀಯ ಹಿಂಸಾಚಾರಗಳು ನಡೆದೇ ಇವೆ. ಬಿಜೆಪಿ ಮತಗಟ್ಟೆ ಏಜೆಂಟ್ ಮೊಷಾರಫ್ ಮಿರ್ ಅವರನ್ನು ಕಬ್ಬಿಣದ ರಾಡ್ ಮತ್ತು ಆಯುಧಗಳಿಂದ ಹಲ್ಲೆ ಮಾಡಲಾಯಿತು. ಅವರ ತಲೆಗೆ ಆರು ಹೊಲಿಗೆ ಹಾಕಬೇಕಾಯಿತು. ದಕ್ಷಿಣ 24 ಪರಗಣಾ ಬಸಂತಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿಕಾಶ್ ಸರ್ದಾರ್, 200-250 ಟಿಎಂಸಿ ಗೂಂಡಾಗಳು ತಮ್ಮ ಕಾರಿನ ಮೇಲೆ ದಾಳಿ ಮಾಡಿ ಚಾಲಕನಿಗೆ ಹಲ್ಲೆ ಮಾಡಿದರು ಎಂದು ಆರೋಪಿಸಿದ್ದಾರೆ. ಭಾಂಗರ್‌ನಲ್ಲಿ ಐಎಸ್‌ಎಫ್ ಪ್ರತಿನಿಧಿಗಳನ್ನು ಮತಗಟ್ಟೆಯೊಳಕ್ಕೆ ಬಿಡಲಿಲ್ಲ. ಶಾಂತಿಪುರದಲ್ಲಿ ಬಿಜೆಪಿ ಶಿಬಿರ ಕಚೇರಿ ನುಚ್ಚುನೂರಾಯಿತು. ಇಷ್ಟೆಲ್ಲ ಹಿಂಸಾಚಾರ ನಡೆಯುತ್ತಿದ್ದರೂ ಮಮತಾ ಬ್ಯಾನರ್ಜಿ ಬಂಗಾಳದ ಚುನಾವಣೆಗಳು ಯಾವಾಗಲೂ ಶಾಂತಿಯುತ, ಇಲ್ಲಿ ಯಾವ ಗೂಂಡಾರಾಜ್ ಇದೆ? ಎಂದು ಪ್ರಶ್ನಿಸಿ, ಬಿಜೆಪಿ ಚುನಾವಣೆ ಕದ್ದುಕೊಳ್ಳಲು ಕೇಂದ್ರ ಪಡೆಗಳನ್ನು ಬಳಸುತ್ತಿದೆ ಎಂದು ಆರೋಪಿಸಿದರು. ಪಶ್ಚಿಮ ಬಂಗಾಳದಲ್ಲಿ ಆಡಳಿತ ಪಕ್ಷ ವಿರೋಧ ಅಭ್ಯರ್ಥಿಗಳನ್ನು ನಾಮಪತ್ರ ಸಲ್ಲಿಸದಂತೆ ತಡೆದು ಅವಿರೋಧ ಗೆಲ್ಲುವ ಉದ್ದೇಶದಿಂದ ಹಿಂಸೆ ಒಂದು ಸ್ಥಾಪಿತ ತಂತ್ರವಾಗಿ ಬಳಕೆಯಾಗಿದೆ ಎಂಬ ಸಂಶೋಧನಾ ದಾಖಲೆಗಳಿವೆ. ರಾಜ್ಯ ಸರ್ಕಾರದ ಕೃಪಾಶ್ರಯ ಇಲ್ಲದೆ ಇದು ನಡೆಯಲು ಸಾಧ್ಯವೇ ಇಲ್ಲ.

ಮಮತಾ ಸರ್ಕಾರ ಕೇವಲ ಹಿಂಸಾಚಾರ ಮತ್ತು ಓಲೈಕೆ ರಾಜಕಾರಣಕ್ಕೆ ಮಾತ್ರ ಕುಖ್ಯಾತಿ ಪಡೆದಿಲ್ಲ. ಶಿಕ್ಷಕ ನೇಮಕಾತಿ ಹಗರಣದಲ್ಲಿ ಕೋಟ್ಯಂತರ ರೂಪಾಯಿ ಲಂಚ ಪಡೆದ ಆರೋಪ ಸ್ವತಃ ಟಿಎಂಸಿ ಮಂತ್ರಿಗಳ ಮೇಲಿದ್ದು ಸುಪ್ರೀಂ ಕೋರ್ಟ್ ಮಧ್ಯಪ್ರವೇಶ ಮಾಡಬೇಕಾಯಿತು. ಅಂಗನವಾಡಿ ಕಾರ್ಯಕರ್ತೆಯರ ವೇತನದಿಂದ ಹಿಡಿದು ರಾಜ್ಯ ಗ್ರಂಥಾಲಯ ನಿಧಿಯ ವರೆಗೂ ಭ್ರಷ್ಟಾಚಾರ ಹರಡಿದೆ. ರಾಜ್ಯದ ನಿರುದ್ಯೋಗ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಿದೆ. ವ್ಯಾಪಾರ ಉದ್ಯಮ ವ್ಯವಸ್ಥೆ ಹದಗೆಟ್ಟಿದ್ದರಿಂದ ಹೂಡಿಕೆದಾರರು ಬಂಗಾಳ ಬಿಟ್ಟು ಹೋಗಿದ್ದಾರೆ. ಒಂದು ಕಾಲದಲ್ಲಿ ದೇಶದ ಆರ್ಥಿಕ ರಾಜಧಾನಿಯಾಗಿದ್ದ ಕೋಲ್ಕತ್ತಾ ಇಂದು ಹಿಂದುಳಿದ ನಗರವಾಗಿ ಪರಿವರ್ತನೆಯಾಗಿದೆ.

ಕಳೆದ ಒಂದು ವರ್ಷ ಬಂಗಾಳದ ಜನ ಟಿಎಂಸಿ ಸರ್ಕಾರ ನಡೆಸಿದ ಆಡಳಿತ ವೈಫಲ್ಯಗಳನ್ನು ಒಂದೊಂದಾಗಿ ಎದುರಿಸಿದ್ದಾರೆ. ಶಿಕ್ಷಕ ನೇಮಕಾತಿ ಹಗರಣ, ರೇಶನ್ ಭ್ರಷ್ಟಾಚಾರ, ಮತ್ತು ಎಲ್ಲಕ್ಕೂ ಮಿಗಿಲಾಗಿ ಆರ್‌ಜಿ ಕರ್ ವೈದ್ಯ ವಿದ್ಯಾರ್ಥಿನಿ ಅಭಯಾಳ ಮೇಲೆ ನಡೆದ ಅತ್ಯಾಚಾರ-ಹತ್ಯೆ ಈ ಎಲ್ಲ ಪ್ರಕರಣಗಳು ಮಮತಾ ಸರ್ಕಾರದ ವಿರುದ್ಧ ಜನಾಕ್ರೋಶ ಭುಗಿಲೆಬ್ಬಿಸಿದ್ದವು. ಅಭಯಾಳ ತಾಯಿ ರತ್ನಾ ದೇಬ್‌ನಾಥ್ ಈ ಬಾರಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಅವರ ವಾಹನವನ್ನು ಟಿಎಂಸಿ ಕಾರ್ಯಕರ್ತರು ತಡೆದ ಆರೋಪ ಕೇಳಿಬಂದಿದೆ.

ಬಿಜೆಪಿ ಬಂಗಾಳದಲ್ಲಿ ಕಟ್ಟಿ ನಿಲ್ಲಿಸುತ್ತಿರುವ ಪ್ರತಿರೋಧ ಸಾಮಾನ್ಯವಾದುದಲ್ಲ, ರಾಜ್ಯಾದ್ಯಂತ ನೂರಾರು ಕಾರ್ಯಕರ್ತರ ಪ್ರಾಣ ತೆತ್ತು, ಮನೆಮಾರು ಕಳೆದುಕೊಂಡು ಹೋರಾಡುತ್ತಿರುವ ಕಾರ್ಯಕರ್ತರ ಬಲದ ಮೇಲೆ ಪಕ್ಷ ಬೆಳೆದಿದೆ. 2019ರ ಲೋಕಸಭಾ ಚುನಾವಣೆಯಲ್ಲಿ 18 ಸ್ಥಾನ ಗೆದ್ದು, 2021ರಲ್ಲಿ 77 ಸ್ಥಾನ ಪಡೆದ ಬಿಜೆಪಿ ತ್ವರಿತ ಗತಿಯಲ್ಲಿ ಬಂಗಾಳದ ಮನೆ ಮನ ತಲುಪುತ್ತಿದೆ. ಈ ಬಾರಿ ದಕ್ಷಿಣ ಬಂಗಾಳದ ಟಿಎಂಸಿ ಭದ್ರಕೋಟೆಯಲ್ಲಿ ಬಿಜೆಪಿ ನುಗ್ಗಲು ಪ್ರಯತ್ನ ಮಾಡುತ್ತಲೇ ಇದೆ.

ಬಂಗಾಳದ ಈ ಸ್ಥಿತಿ ಕೇವಲ ಒಂದು ರಾಜ್ಯದ ಆಂತರಿಕ ವಿಚಾರವಲ್ಲ. ಬಾಂಗ್ಲಾದೇಶದ ಗಡಿ ಹಂಚಿಕೊಂಡ ರಾಜ್ಯದಲ್ಲಿ ದಶಕಗಳಿಂದ ಅಕ್ರಮ ನುಸುಳುಕೋರರ ಸಮಸ್ಯೆ ತೀವ್ರವಾಗಿದ್ದು, ಅದನ್ನು ಮತ ಬ್ಯಾಂಕ್‌ಗಾಗಿ ಬಳಸಿಕೊಳ್ಳುತ್ತಿರುವ ಟಿಎಂಸಿ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಕೂಡ ಅಪಾಯ. ಸಂಘ ಪರಿವಾರ ಸಂಘಟನೆಗಳ ಮೇಲಿನ ನಿರಂತರ ದಾಳಿ, ದುರ್ಗಾಪೂಜೆ ಮೆರವಣಿಗೆಗೆ ತಡೆ, ರಾಮ ನವಮಿ ಮೆರವಣಿಗೆಯಲ್ಲಿ ಹಿಂಸೆ, ಇವೆಲ್ಲ ಒಂದು ಸಂಘಟಿತ ಕ್ಷೇತ್ರ ದಬ್ಬಾಳಿಕೆಯ ಭಾಗ.

ಕೇಂದ್ರ ಚುನಾವಣಾ ಆಯೋಗ ಸಿಆರ್‌ಪಿಎಫ್ ನಿಯೋಜಿಸಿದ್ದೇ ಪರಿಸ್ಥಿತಿ ಎಷ್ಟು ಗಂಭೀರ ಎಂಬುದರ ಸ್ಪಷ್ಟ ಸಂದೇಶ. ಸ್ವತಂತ್ರ ಮತ್ತು ನ್ಯಾಯಸಮ್ಮತ ಚುನಾವಣೆಗಾಗಿ ಕೇಂದ್ರ ಸಶಸ್ತ್ರ ಪಡೆ ಬೇಕಾಗುವ ಪ್ರಜಾಪ್ರಭುತ್ವ ಆರೋಗ್ಯಕರ ಸ್ಥಿತಿಯಲ್ಲಿಲ್ಲ. ಬಂಗಾಳದ ಮತದಾರ ಭಯ ಕಳೆದುಕೊಂಡು ಮತಪೆಟ್ಟಿಗೆ ಮುಂದೆ ನಿಲ್ಲಲು, ರಾಜ್ಯದಲ್ಲಿ ನಿಜವಾದ ರಾಜಕೀಯ ಪ್ರಜಾಪ್ರಭುತ್ವ ಮರುಸ್ಥಾಪನೆಯಾಗಬೇಕಾಗಿದೆ. ಇಲ್ಲಿ ಯಾರು ಗೆಲ್ಲುತ್ತಾರೆ, ಸೋಲುತ್ತಾರೆ ಎಂಬುದು ಸಂಗತಿಯಲ್ಲ, ರಾಜಕೀಯ ಹಿಂಸೆಗಳು ತಪ್ಪಿ, ಇಲ್ಲೊಂದು ಶಾಂತಿಪೂರ್ಣ ಸಮಾಜ ನಿರ್ಮಾಣವಾಗಬೇಕು. ಅಕ್ರಮ ನಿರಾಶ್ರಿತರನ್ನು ಹೊರಗಟ್ಟಿ, ಸ್ಥಳೀಯರಿಗೇ ಸರ್ಕಾರದ ಫಲಾನುಭವಗಳು ಸಿಗುವಂತೆ ಆಗಬೇಕು.

ದುರ್ಬಲರು ಕೂಡಿ ಒಟ್ಟಾದರೆ....

ಸರ್ವಥಾ ಸಂಹತೈರೇವ ದುರ್ಬಲೈರ್ಬಲವಾನಪಿ ।
ಅಮಿತ್ರಃ ಶಕ್ಯತೇ ಹಂತುಂ ಮಧುಹಾ ಭ್ರಮರೈರಿವ ॥ -ಮಹಾಭಾರತ

ಜೇನುಹುಳುಗಳು ಒಟ್ಟಾಗಿ ಜೇನನ್ನು ಅಳಿಯಲು ಬಂದವರನ್ನು ಮುತ್ತಿ ಕೊಲ್ಲುವಂತೆ ದುರ್ಬಲರೂ ಕೂಡ ಒಗ್ಗಟ್ಟಾಗಿದ್ದರೆ ಮಾತ್ರ ಬಲಿಷ್ಠರನ್ನು ಕೂಡ ಮುರಿದಿಕ್ಕಬಹುದು - ಎಂಬುದು ಶ್ಲೋಕಾರ್ಥ.

ಸಂಘಟನೆಯಲ್ಲಿ ಶಕ್ತಿಯಿದೆ. ವಿಘಟನೆಯಲ್ಲಿ ದುರ್ಬಲತೆಯಿದೆ. ಯಾವುದೇ ಸಮೂಹದ ಶಕ್ತಿಯನ್ನು ಮುರಿಯಲು ವಿಘಟಿಸುವ ತಂತ್ರವನ್ನು ಬಳಸಬೇಕು. ಹೀಗೆ ಮಾಡುವುದರಿಂದ ಶತ್ರುಗಳು ದುರ್ಬಲರಾಗುತ್ತಾರೆ. ಒಂದೊಮ್ಮೆ ಶತ್ರುಗಳು ಒಟ್ಟಾಗಿ ಬಂದರೆ ನಾಲ್ಕಾರು ದಿಕ್ಕಿನಿಂದ ಆಕ್ರಮಣ ಮಾಡಬೇಕು. ಆಗ ಒಂದಾದ ಸೈನ್ಯ ನಾಲ್ಕಾರು ಕಡೆಯ ಆಕ್ರಮಣವನ್ನು ಎದುರಿಸಲು ವಿಭಜಿತಗೊಳ್ಳಬೇಕಾಗುತ್ತದೆ.



ಶ್ಲೋಕ ಸಾಗರ
• ಡಾ.ಸೋಂದಾ ಭಾಸ್ಕರ ಭಟ್

1965ರಲ್ಲಿ ಪಾಕಿಸ್ಥಾನ ಭಾರತದ ಮೇಲೆ ಆಕ್ರಮಣ ಮಾಡಿತು. ಆಗ ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನಿಯಾಗಿದ್ದರು. 1950ರಲ್ಲಿ ಚೀನಾ ದೇಶ ಟಿಬೆಟನ್ನು ಆಕ್ರಮಿಸಿಕೊಂಡಾಗ ಆರ್.ಎಸ್.ಎಸ್.ನ ಎರಡನೆ ಸರಸಂಘಚಾಲಕರಾಗಿದ್ದ ಗುರೂಜಿಯವರು 'ಚೀನಾವನ್ನು ನಂಬಬಾರದು, ಅದು ಎಂದಿದ್ದರೂ ಅಪಾಯ' ಎಂದು ಅಂದಿನ ಪ್ರಧಾನಿಯಾದ ನೆಹರೂರವರಲ್ಲಿ ಹೇಳಿದಾಗ 'ನೀವು ಸುಮ್ಮನೇ ಆರೋಪ ಮಾಡುತ್ತೀರಿ. ಸುಳ್ಳನ್ನೇ ಹೇಳುತ್ತೀರಿ. ಚೀನಾ ಭಾರತ ಬಾಯಿ ಬಾಯಿ' ಎಂದು ಹೇಳಿ ಗುರೂಜಿಯವರ ಮಾತನ್ನು ಕಡೆಗಣಿಸಿದರು. ಅದೇ ಚೀನಾ 1962ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿತ್ತು. ಭಾರತ ಸೋಲನ್ನು ಅನುಭವಿಸಿತ್ತು. ಅತ್ಯಂತ ದೊಡ್ಡದಾದ ಹಿಮಾಲಯನ್ ಭೂಭಾಗವನ್ನು ಆಕ್ರಮಿಸಿಕೊಂಡಿತ್ತು.

ಇದರ ಅರಿವಿದ್ದ ಶಾಸ್ತ್ರೀಜಿಯವರು ಪಾಕಿಸ್ತಾನ ಆಕ್ರಮಣ ಮಾಡಿದಾಗ ಗುರೂಜಿಯವರನ್ನು ಕರೆಸಿ ಸಲಹೆ ಕೇಳಿದರು. ಆಗ ಅವರು 'ಶತ್ರುಗಳಿಗೆ ಪ್ರತ್ಯಾಕ್ರಮಣವೇ ಉತ್ತರ. ನಾವು ನಾಲ್ಕು ಕಡೆಗಳಿಂದ ಆಕ್ರಮಣ ಮಾಡಿ ಶತ್ರುಗಳಿಗೆ ಆಘಾತವನ್ನುಂಟು ಮಾಡಬೇಕು' ಅಂದರು. ಅದೇ ತರ ಮಾಡಿದಾಗ ನಮಗೆ ಜಯ ದೊರೆಯಿತು. ಒಟ್ಟಾಗಿ ಆಕ್ರಮಣ, ತಂತ್ರಕ್ಕೆ ಪ್ರತಿತಂತ್ರವೇ ಗೆಲುವಿನ ಗುಟ್ಟು.

ನಾವೆಂದೂ ದುರ್ಬಲರೆಂದುಕೊಳ್ಳಬಾರದು. ದುರ್ಬಲರೂ ಒಟ್ಟಾಗಿ ಮುನ್ನುಗ್ಗಿದರೆ ಜಯವನ್ನು ಪಡೆಯಲು ಸಾಧ್ಯ. ಇತ್ತೀಚೆಗೆ ಬಂಗಾಳದ ಸಂದೇಶಕಾಲಿಯಲ್ಲಿ ನಡೆದ ಘಟನೆ ಇದಕ್ಕೆ ಸಾಕ್ಷಿ. ನಿರಂತರ ತಮ್ಮ ಮೇಲೆ ಅತ್ಯಾಚಾರ ಎಸಗುತ್ತಿದ್ದ ಟಿಎಂಸಿ ಶಾಸಕ ಹಾಗೂ ಅವರ ಸಹಚರರ ಮೇಲೆ ಮಹಿಳೆಯರು ಸಿಡಿದೆದ್ದ ಪರಿಣಾಮವಾಗಿ ಅವನನ್ನು ಬಂಧಿಸಿದರು. ದುರ್ಬಲರು ಎಂದು ಕುಳಿತುಕೊಳ್ಳದೇ ಒಟ್ಟಾದರೆ ಜಯ ಸಾಧ್ಯ. ಬಲಿಷ್ಠರನ್ನೂ ಮಣಿಸಬಹುದು.

ಜೇನುತೆಗೆಯಲು ಬಂದವನನ್ನು ಮುತ್ತಿ ಸಣ್ಣ ಸಣ್ಣ ಜೇನುಹುಳುಗಳು ಆಕ್ರಮಣವನ್ನು ಮಾಡಿ ಅವನನ್ನೇ ಕೊಲ್ಲುತ್ತವೆ. ಸಂಘಟಿತರಾದಾಗ ಅಂತಹ ಶಕ್ತಿ ಬರುತ್ತದೆ.

ಈಗಂತೂ ಕರ್ನಾಟಕದಲ್ಲಿ ನಿರಂತರ ಹಿಂದುಗಳನ್ನು ತುಳಿಯುವ ಕೆಲಸ ಸಾಗಿದೆ. ಅಲ್ಪಸಂಖ್ಯಾತರನ್ನು ಓಲೈಸುವುದಕ್ಕೆ ಸರಕಾರ ಮುಂದಾಗಿದೆ. ನಾವು ಸುಮ್ಮನೇ ಕುಳಿತರೆ ಪ್ರಯೋಜನವಿಲ್ಲ. ಹಿಂದೂ ಸಮಾಜ ಒಟ್ಟಾಗಿ ಇದನ್ನು ಒಕ್ಕೊರಲಿನಿಂದ ವಿರೋಧಿಸಬೇಕು. ಸಂಘಟಿತ ನಿರ್ಣಯಕ್ಕೆ ಬದ್ಧರಾಗಬೇಕು. ಆಗ ಸರಕಾರವೂ ತಲೆಬಾಗುತ್ತದೆ.

'ಎಲ್ ನಿನೋ'ದಿಂದ ಮಳೆ ಕಡಿಮೆಯಾಗುವುದು ನಿಜವೇ?

'ಎಲ್-ನಿನೋ'ದಿಂದಾಗಿ ಭಾರತದಲ್ಲಿ ಮುಂಗಾರು ದುರ್ಬಲವಾಗಲೇ ಬೇಕೆಂದಿಲ್ಲ. ಮುಂಗಾರು ಮೇಲೆ ಪ್ರಭಾವ ಬೀರುವ ಬೇರೆ ಅಂತಗಳೂ ಇವೆ.

▶ ದಿನೇಶ

ಭಾರತವು ಈಗ ಬಿಸಿಲ ಧಗೆಯಲ್ಲಿ ಬೇಯುತ್ತಿದೆ. ದೇಶಾದ್ಯಂತ ತಾಪಮಾನ ವಿಪರೀತಕ್ಕೇರಿದೆ. ಉಷ್ಣಹವೆ ಜನರನ್ನು ಕಂಗೆಡಿಸುತ್ತಿದೆ.

ದೇಶದಲ್ಲಿ ಹಲವಾರು ಪ್ರದೇಶಗಳು ಅತಿಯಾದ ಉಷ್ಣತೆಯನ್ನು ದಾಖಲಿಸಿವೆ. ಏಪ್ರಿಲ್ 25ರಂದು ಉತ್ತರಪ್ರದೇಶದ ಪಟ್ಟಣವೊಂದರಲ್ಲಿ ಅತ್ಯಧಿಕ, ಅಂದರೆ 47.4ಡಿಗ್ರಿ ಸೆಲ್ಸಿಯಸ್ ಉಷ್ಣತೆ ದಾಖಲಾಯಿತು. 40 ಡಿಗ್ರಿಯಿಂದ 45 ಡಿಗ್ರಿ ಉಷ್ಣತೆ ಬಹಳಷ್ಟು ನಗರಗಳಲ್ಲಿ ದಾಖಲಾಗಿದೆ.

ಈ ಬಾರಿಯ ಬೇಸಿಗೆಯು ಅವಧಿಗೆ ಮುಂಚಿತವಾಗಿಯೇ ಆಗಮಿಸಿರುವುದಲ್ಲದೆ, ಅತಿ ಉಷ್ಣತೆಯನ್ನು ತುಂಬಿಕೊಂಡು ಜನಜೀವನ ಅಸಹನೀಯಗೊಳಿಸಿರುವುದನ್ನು ಎಲ್ಲರೂ ಅನುಭವಿಸುತ್ತಿದ್ದಾರೆ.

ಅದು ಸಾಲದೆಂಬಂತೆ ಈ ಬಾರಿ 'ಸೂಪರ್ ಎಲ್-ನಿನೋ' ಕುರಿತಂತೆ ಎಲ್ಲೆಡೆ ಮಾತುಗಳು ಕೇಳಿಬರುತ್ತಿವೆ. ಮಾಧ್ಯಮಗಳೂ ಅದನ್ನು ಅತಿರೇಕವಾಗಿ ಪ್ರಚಾರ ಮಾಡುತ್ತಿವೆ. ಎಲ್-ನಿನೋ ಕಾರಣದಿಂದಾಗಿಯೇ ದೇಶದಲ್ಲಿ ಉಷ್ಣಹವೆ ಮತ್ತು ತಾಪಮಾನ ಏರಿಕೆಯಾಗಿದೆ ಎಂಬ ವಾದಗಳೂ ಕೇಳುತ್ತಿವೆ.


ಅತಿ ಉಷ್ಣತೆ, ಎಲ್ ನಿನೋ ಪ್ರಭಾವ ಸೇರಿದ ಮೇಲೆ ಮಳೆಯ ಕುರಿತಂತೆ ಮಾತು ಬರದಿದ್ದೀತೆ? ಎಲ್ ನಿನೋ ಪ್ರಭಾವದಿಂದಾಗಿ ಈ ಬಾರಿ ದೇಶದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಬಹುದು ಎಂಬ ಮಾತೂ ಎಂದಿನಂತೆ ಚಾಲ್ತಿಯಲ್ಲಿದೆ. ಮಳೆಯ ಕೊರತೆಯಿಂದಾಗಿ ಬರಗಾಲದ ಪರಿಸ್ಥಿತಿ ಬರಬಹುದು, ದೇಶದ ಕೃಷಿಗೆ ಪ್ರತಿಕೂಲವಾಗಬಹುದು, ಆ ಮೂಲಕ ದೇಶದ ಅಭಿವೃದ್ಧಿಗೂ ಹೊಡೆತ ಬೀಳಬಹುದು ಎಂಬಂತಹ ಲೆಕ್ಕಾಚಾರಗಳೂ ನಡೆಯುತ್ತಿವೆ.

ಎಲ್-ನಿನೋ ಪರಿಣಾಮ ಉಂಟಾದಾಗಲೆಲ್ಲ ಭಾರತದಲ್ಲಿ ಮಳೆ ಕಡಿಮೆಯಾಗುತ್ತದೆ, ಮುಂಗಾರು ದುರ್ಬಲವಾಗುತ್ತದೆ ಎನ್ನಲಾಗುತ್ತದೆ. ಇದು ನಿಜವೇ? ಈ ಹಿಂದೆ ಹಲವು ಬಾರಿ ಎಲ್-ನಿನೋ ಕಾರಣದಿಂದ ಮುಂಗಾರು ದುರ್ಬಲವಾಗಿರುವುದು ನಿಜವಾದರೂ ಅದಕ್ಕೆ ವಿರುದ್ಧವಾದ ವಿದ್ಯಮಾನ ಸಂಭವಿಸಿರುವುದೂ ಅಷ್ಟೇ ಸತ್ಯ.

''ಸೂಪರ್ ಎಲ್ ನಿನೋ ಕಾರಣದಿಂದಾಗಿ ತೀವ್ರ ಬರಗಾಲ ಉಂಟಾಗುವುದೆಂದು ಖಾತರಿಯಾಗಿ ಹೇಳುವಂತಿಲ್ಲ, ಬಲವಾದ ಎಲ್-ನಿನೋದಿಂದಾಗಿ ಮಳೆ ಕಡಿಮೆಯಾಗುವ ಸಾಧ್ಯತೆ ಇರುವುದು ನಿಜವಾದರೂ ಅದುವೇ ನಿರ್ಣಾಯಕವಲ್ಲ'' ಎನ್ನುತ್ತಾರೆ ಐಐಟಿ ಪ್ರೊಫೆಸರ್ ಪ್ರೀತಾ ದತ್ತಾ ಎಂಬವರು. ಕೆಲ ವರ್ಷಗಳಲ್ಲಿ ಎಲ್ ನಿನೋ ಇದ್ದಾಗಲೂ ಭಾರತದಲ್ಲಿ ಉತ್ತಮ ಮಳೆಯಾಗಿದೆ ಎನ್ನುತ್ತಾರವರು.

ಏನಿದು ಎಲ್-ನಿನೋ ?

ಎಲ್ ನಿನೋ ಎಂಬುದು ಕಾಲಕಾಲಕ್ಕೆ ಕೇಂದ್ರ ಮತ್ತು ಪೂರ್ವ ಪೆಸಿಫಿಕ್ ಸಾಗರದ ಮೇಲ್ಮೈಯಲ್ಲಿ ಉಂಟಾಗುವ ನೀರಿನ ಬಿಸಿಯೇರುವಿಕೆಯ ಪ್ರಕ್ರಿಯೆ. ಇದರಿಂದಾಗಿ ಗಾಳಿಯ ದಿಕ್ಕು ಬದಲಾಗುತ್ತದೆ. ಇದು ದಕ್ಷಿಣ ಅಮೆರಿಕದಿಂದ ಹಿಡಿದು ದಕ್ಷಿಣ ಏಷ್ಯಾದ ತನಕ ಮಳೆಯ ಮೇಲೂ ಪರಿಣಾಮ ಬೀರುತ್ತದೆ.



ಎಲ್ ನಿನೋ ಪರಿಣಾಮವನ್ನು ಸಮುದ್ರದ ನೀರಿನ ಉಷ್ಣತೆಯ ಆಧಾರದಲ್ಲಿ ವಿಂಗಡಿಸಲಾಗಿದೆ. 0.5 ಡಿಗ್ರಿಗಿಂತ ಹೆಚ್ಚಿನದ್ದನ್ನು ದುರ್ಬಲವೆಂದು, 1 ಡಿಗ್ರಿಗಿಂತ ಹೆಚ್ಚಿನದ್ದನ್ನು ಸಾಧಾರಣವೆಂದು, 1.5 ಡಿಗ್ರಿಗಿಂತ ಹೆಚ್ಚಿನದ್ದನ್ನು ಬಲಿಷ್ಠವೆಂದು, 2.5 ಡಿಗ್ರಿಗಿಂತ ಹೆಚ್ಚಿನದ್ದನ್ನು ಮಹಾಬಲಿಷ್ಠವೆಂದು ಪರಿಗಣಿಸಲಾಗುತ್ತದೆ. ಸುಪರ್ ಎಲ್ ನಿನೋ ಎಂಬುದಾಗಿ ವೈಜ್ಞಾನಿಕವಾಗಿಯೇನೂ ವಿಂಗಡಣೆ ಮಾಡಿಲ್ಲ, ಆದರೆ ಈ ಬಾರಿ ದೇಶದಲ್ಲಿ ವ್ಯಾಪಿಸಿರುವ ಅತಿ ಉಷ್ಣತೆಯ ಕಾರಣದಿಂದಾಗಿ ಕೆಲವರು ಆ ರೀತಿ ಬಣ್ಣಿಸುತ್ತಿದ್ದಾರೆ.

ಎಲ್-ನಿನೋ ಮತ್ತು ಮಳೆ

ಎಲ್-ನಿನೋ ಕಾರಣದಿಂದಾಗಿ ದೇಶದಲ್ಲಿ ಮಳೆ ಕಡಿಮೆಯಾಗಲಿದೆ ಎಂದು ಹೇಳಲಾಗುತ್ತದಾದರೂ ಎಲ್ ನಿನೋ ಮತ್ತು ಮಳೆಗೆ ನೇರ ಸಂಬಂಧವಿಲ್ಲ ಎಂದು ಹವಾಮಾನ ತಜ್ಞರು ಹೇಳುತ್ತಾರೆ. 1950ರಿಂದ ಆರಂಭಿಸಿ ಈವರೆಗೆ 16 ಬಾರಿ ಎಲ್ ನಿನೋ ಉಂಟಾಗಿದ್ದರೂ 7 ಎಲ್ ನಿನೋ ವರ್ಷಗಳಲ್ಲಿ ಮಾತ್ರ ಮಳೆಯು ಕಡಿಮೆಯಾಗಿತ್ತು. ಉಳಿದ ಸಂದರ್ಭಗಳಲ್ಲಿ ವಾಡಿಕೆಯಷ್ಟೇ ಮಳೆ ಸುರಿದಿತ್ತು. 1982, 1997 ಮತ್ತು 2015ರಲ್ಲಿ ಎಲ್-ನಿನೋ ಅತ್ಯಂತ ಬಲಿಷ್ಠವಾಗಿತ್ತು. 1982 ಮತ್ತು 20157ರಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾದುದು ನಿಜವಾದರೂ, 1997ರಲ್ಲಿ ಮಳೆಯು ವಾಡಿಕೆಯಯಷ್ಟೇ ಬಂದಿತ್ತು ಹಾಗೂ ದೇಶವು ಬರಗಾಲದ ಪರಿಸ್ಥಿತಿ ಎದುರಿಸಿರಲಿಲ್ಲ ಎನ್ನುತ್ತಾರೆ ತಜ್ಞರು.

1997ರಲ್ಲಿ ಮುಂಗಾರು ದುರ್ಬಲವಾಗದಿರಲು ಮುಖ್ಯ ಕಾರಣವೆಂದರೆ ಅತ್ತ ಎಲ್ ನಿನೋ ಜತೆಗೇ ಇತ್ತ ಹಿಂದೂ ಮಹಾಸಾಗರದಲ್ಲಿ ಉಂಟಾದ ಬಲಿಷ್ಠ ಪಾಸಿಟಿವ್ ಡೈಪೋಲ್. ಆ ಮೂಲಕ ಎಲ್ ನಿನೋ ಪರಿಣಾಮವು ನಗಣ್ಯವಾಯಿತು. ಹಾಗಾಗಿ ಮುಂಗಾರು ಮಾರುತವು ಯಾವುದೇ ಒಂದು ಅಂಶದಿಂದಷ್ಟೇ ನಿರ್ಧರಿಸಲ್ಪಡುವುದಿಲ್ಲ, ಇನ್ನೂ ಹಲವಾರು ವಿಷಯಗಳು ಮುಂಗಾರು ದುರ್ಬಲತೆ ಯಾ ಪ್ರಭಾವವನ್ನು ನಿರ್ಧರಿಸುತ್ತವೆ.

ಎಲ್ ನಿನೋ ನಗಣ್ಯಗೊಳಿಸುವ 'ಐಓಡಿ'

ಭಾರತದ ಮುಂಗಾರಿನ ಮೇಲೆ ಕೇವಲ ಎಲ್ ನಿನೋ ಪರಿಣಾಮ ಬೀರುವುದಲ್ಲ, ಇನ್ನೂ ಕೆಲವು ವಿಷಯಗಳು ಪ್ರಭಾವ ಬೀರುತ್ತವೆ. ಹಿಂದೂ ಮಹಾಸಾಗರದಲ್ಲಿ ಎಲ್ ನಿನೋ ದಂತೆಯೆ ಉಂಟಾಗುವ ಉಷ್ಣತೆಯ ಬದಲಾವಣೆಯು ಎಲ್ ನಿನೋ ಪರಿಣಆಮವನ್ನು ಹಿಂದಕ್ಕೆ ತಳ್ಳಿ ಉತ್ತಮ ಮಳೆಗೆ ಕಾರಣವಗುವುದೂ ಇದೆ. 'ಹಿಂದೂ ಮಹಾಸಾಗರ ಡೈಪೋಲ್' (ಐಓಡಿ) ಎಂಬ ಈ ಪ್ರಕ್ರಿಯೆಯನ್ನು 'ಹಿಂದೂ ಮಹಾಸಾಗರದ ಎಲ್ ನಿನೋ' ಎಂದೂ ಕರೆಯುವುದಿದೆ. ಹಿಂದೂ ಮಹಾಸಾಗರ ಡೈಪೋಲ್ ನಿಂದಾಗಿ ಬದಲಾಗುವ ಸಾಗರದ ಉಷ್ಣತೆಯ ಪ್ರಮಾಣ ಮತ್ತು ಅದು ಉಂಟಾಗುವ ಸಮಯಸಂದರ್ಭ ಕೂಡಾ ಮುಂಗಾರಿನ ಮೇಲೆ ಪರಿಣಾಮ ಬೀರುವುದು.

ಹಿಂದೂ ಮಹಾಸಾಗರ ಡೈಪೋಲ್ ಉಂಟಾದರೆ ದಕ್ಷಿಣ ಭಾರತ ಮತ್ತು ಕೇಂದ್ರ ಭಾರತಕ್ಕೆ ಉತ್ತಮ ಮಳೆಯಾಗಲಿದೆ ಎಂದು ಪರಿಣತರು ಹೇಳುತ್ತಾರೆ. ಸದ್ಯರ ಪರಿಸ್ಥಿತಿಯಲ್ಲಿ ಐಓಡಿ ಉಂಟಾಗುವ ಸಾಧ್ಯತೆ ಹೆಚ್ಚಿದೆ ಎನ್ನುತ್ತಾರವರು. ಹಿಂದೂ ಮಹಾಸಾಗರದ ಪಶ್ಚಿಮ ಭಾಗವು ಪೂರ್ವ ಭಾಗಕ್ಕಿಂತ ಹೆಚ್ಚು ಉಷ್ಣತೆ ಹೊಂದಿರುವುದು ಇದನ್ನು ಸೂಚಿಸುತ್ತದೆ ಎನ್ನುತ್ತಾರೆ.

ಅದೇರೀತಿ, ತೇವಾಂಶವನ್ನು ಹೊತ್ತು ತರುವ 'ಸೋಮಾಲಿ ಜೆಟ್' ಎಂಬ ಕಡಿಮೆ ಸ್ತರದ ಗಾಳಿ ಕೂಡಾ ಮುಂಗಾರಿನ ಮೇಲೆ ಪ್ರಭಾವ ಬೀರುವುದು. ಈ ಪರಿಣಾಮವು ಭಾರತೀಯ ಉಪಖಂಡವನ್ನು ಎಷ್ಟು ತೇವಾಂಶವು ತಲುಪುತ್ತದೆ ಎಂಬುದನ್ನು ನಿರ್ಧರಿಸುತ್ತದೆ.

ಪುಣೆಯ ಹವಾಮಾನ ಸಂಸ್ಥೆಯು ಇನ್ನೂ ಒಂದು ಸಂಶೋಧನೆಯ ಅಂಶವನ್ನು ಹೊರಗೆಡವಿದೆ. ಎಲ್ ನಿನೋ ಮತ್ತು ಮುಂಗಾರು ನಡುವಿನ ಸಂಬಂಧವು ದೇಶಾದ್ಯಂತ ಒಂದೇ ತೆರನಾಗಿರುವುದಿಲ್ಲ, ದಕ್ಷಿಣ ಭಾರತ, ಮಧ್ಯ ಭಾರತ ಮತ್ತು ಉತ್ತರ ಭಾರತದ ಮೇಲೆ ವಿಭಿನ್ನ ರೀತಿಯ ಪರಿಣಾಮ ಬೀರುತ್ತದೆ ಎಂದು ಹೇಳಿದೆ.

'ಸೂಪರ್ ಎಲ್ ನಿನೋ' ಖಾತರಿಯೇನಲ್ಲ

ಈ ವರ್ಷದ ಮಧ್ಯಭಾಗದಲ್ಲಿ ಸೂಪರ್ ಎಲ್ ನಿನೋ ವಕ್ಕರಿಸಬಹುದು ಎಂದು ಹೇಳಲಾಗುತ್ತದಾದರೂ ಅದು ಪೂರ್ಣ ಖಾತರಿಯಲ್ಲ ಎಂದೂ ಹವಾಮಾನ ತಜ್ಞರು ನುಡಿಯುತ್ತಾರೆ.

ಎಲ್ ನಿನೋ ಬರುವ ಸಂಕೇತಗಳೇನೋ ಬಲವಾಗಿವೆ. ಆದರೆ ಕೆಲವೊಮ್ಮೆ ಅದು ದಿಕ್ಕು ತಪ್ಪುವುದೂ ಇದೆ. ಸಮುದ್ರದ ಗತಿ ಯಾವತ್ತೂ ಸ್ಥಿರವಲ್ಲ, ಅನಿರೀಕ್ಷಿತ ಬದಲಾವಣೆಗಳು ಉಂಟಾಗುವುದು ಸಹಜ. ಹಠಾತ್ತನೆ ಬೀಸುವ ಗಾಳಿ, ಸಾಗರದ ಮೇಲಿನ ಇನ್ನಿತರ ಕೆಲವು ಅಂಶಗಳು ಎಲ್ ನಿನೋವನ್ನು ದುರ್ಬಲಗೊಳಿಸುವ ಸಾಧ್ಯತೆಗಳೂ ಇವೆ. ವಿಶ್ವದ ಇನ್ನಿತರ ಸಾಗರಗಳಲ್ಲಿನ ಬೆಳವಣಿಗೆಗಳೂ ಎಲ್ ನಿನೋ ಮೇಲೆ ಪರಿಣಾಮ ಬೀರುವುದಿದೆ.

ಹಾಗಾಗಿಯೇ ಕೆಲವರು ಈಗಲೇ 'ಎಲ್ ನಿನೋ'ದ ಕುರಿತಂತೆ ಪ್ರಳಯಕಾರಿಯಾಗಿ ಮಾತನಾಡುವುದು ತರವಲ್ಲವೆಂದು ಎಚ್ಚರಿಸುತ್ತಿದ್ದಾರೆ.

''ಕೇವಲ ಎಲ್ ನಿನೋ ಆಧರಿಸಿ ದೇಶದ ಮಳೆಯನ್ನು ನಿರ್ಧರಿಸುವುದು ತರವಲ್ಲ, ಸ್ಥಳೀಯ ಮಳೆಯ ಸ್ವರೂಪ, ಅದನ್ನು ಪ್ರಭಾವಿಸುವ ಸ್ಥಳೀಯ ಅಂಶಗಳನ್ನು ಆಧರಿಸಿ ಮಳೆಯ ಭವಿಷ್ಯ ನುಡಿಯಬೇಕು. ಅಲ್ಲೂ ದೀರ್ಘಾವಧಿಯ ಅಂದಾಜು ನಿರ್ಧರಿಸುವ ಬದಲಾಗಿ ಅಲ್ಪಾವಧಿಗೆ ಮಳೆಯ ಅಂದಾಜು ಲೆಕ್ಕ ಹಾಕಬೇಕು'' ಎಂದು ಹವಾಮಾನ ತಜ್ಞರೊಬ್ಬರು ಎಚ್ಚರಿಸುತ್ತಾರೆ.

ರಾಜಕಾರಣವೆಂದರೆ ಹಾಗೆಯೆ...

ಕೆಲದಿನಗಳ ಹಿಂದೆ ಹೊಸದಿಗಂತದ ಸಂಪಾದಕೀಯವು 'ಪದಬಳಕೆ ಮತ್ತು ರಾಜಕಾರಣದ ಸಭ್ಯತೆ' ವಿಷಯದ ಮೇಲೆ ಬೆಳಕು ಚೆಲ್ಲಿದೆ. ಹೌದು, ರಾಜಕಾರಣಿ, ರಾಜಕೀಯ ಎಂಬುದೆಲ್ಲ ಈಗ ಯಾವುದೇ ಸಾಮಾನ್ಯ ಎನ್ನುವ ಸಂಗತಿಗಳಿಗೆ ಹೊರತಾದವು ಎಂಬಂತೆ ಪರಿಗಣಿಸಲ್ಪಡುತ್ತಿದೆ. ರಾಜಕಾರಣಿ ಎಂಬ ಬಿರುದು ಹೊತ್ತಮೇಲೆ, ಅವರನ್ನು ಯಾರೂ ಪ್ರಶ್ನಿಸುವಂತೆಯೂ ಇಲ್ಲ ಎಂಬಂತಾಗಿದೆ. ಇದೇಕೆ ಹೀಗೆ? ಅಂದರೆ, ಅದಿರುವುದೇ ಹಾಗೆ!

ನಮ್ಮ ರಾಜಕಾರಣಿಗಳು ಬಳಸುವ ಭಾಷೆ ಹಾಗೆಯೆ. ಯಾವಾಗ, ಯಾರಿಗೆ ಬೇಕಾದರೂ, ಏನನ್ನಾದರೂ ಹೇಳಬಹುದು. ಅದೊಂದು ರೀತಿ ಅವರ ವಿಶೇಷಾಧಿಕಾರ. ಅದನ್ನು ಪ್ರಶ್ನಿಸುವಂತೆ ಇಲ್ಲ, ಆ ರಾಜಕಾರಣಿ ಅದೆಷ್ಟೇ ಹಿರಿಯವನಾಗಲಿ ಅಥವಾ ಕಿರಿಯವನಾಗಲಿ, ಅವನಾಡುವ ಮಾತನ್ನು ಅಲ್ಲಗಳೆಯಲೇ ಬಾರದು. ಕಾಂಗ್ರೆಸ್ ಹಿರಿಯ ನಾಯಕ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರು ದೇಶದ ಪ್ರಧಾನಿಯನ್ನೇ 'ಭಯೋತ್ಪಾದಕ' ಎಂದು ಟೀಕಿಸಿರುವುದು ಅದಕ್ಕೆ ನೂತನ ನಿದರ್ಶನ. ಪ್ರಾಯಶಃ, ಖರ್ಗೆಯವರಿಗೆ ಈ ಪದದ ನಿಜವಾದ ಅರ್ಥವೇ ತಿಳಿದಿಲ್ಲ ಅನ್ನಬೇಕೋ ಅಥವಾ ಟೀಕೆ ಮಾಡುವ ಭರದಲ್ಲಿ ಪ್ರಜ್ಞೆ ತಪ್ಪಿರಬಹುದೋ ಎಂಬುದೇ ಅರ್ಥವಾಗುತ್ತಿಲ್ಲ.

ಮಲ್ಲಿಕಾರ್ಜುನ ಖರ್ಗೆ ಅತ್ಯಂತ ಹಿರಿಯ ಕಾಂಗ್ರೆಸ್ ನಾಯಕ. ತೀರಾ ದಮನಿತ ವರ್ಗದಿಂದ ಮೇಲೆ ಬಂದವರು. ಭಾರತದ ಸಂವಿಧಾನದ ಪೂರಾ ಅರಿವೂ ಇದ್ದಂಥವರು. ಸಂಪಾದಕೀಯದಲ್ಲಿ ಹೇಳಿದಂತೆ ಅವರು ಬೆಂಕಿಯಿಂದ ಅರಳಿಬಂದ ಮುಖಂಡರು. ಯಾವ ಸಮಯದಲ್ಲಿ ಯಾವ ರೀತಿ ಮಾತಾಡಬೇಕು, ಮಾತಾಡುವಾಗ ಯಾವ ಯಾವ ಪದಗಳ ಬಳಕೆ ಆಗಕೂಡದು ಎಂಬೆಲ್ಲ ಅರಿವಿರುವವರು. ಇಷ್ಟಾಗಿಯೂ ಪ್ರಧಾನಿಯನ್ನು 'ವಿಷಸರ್ಪ', 'ಭಯೋತ್ಪಾದಕ' ಎಂದೆಲ್ಲ ಹೇಳಿರುವ ಹಿಂದೆ ಏನೋ ಒಂದು ಅನಿವಾರ್ಯತೆ ಇದ್ದಿರಬಹುದೆ ? ಅವರು ಬಳಸಿದ ಪದಗಳೆಲ್ಲ ಅವರ ಸ್ವಂತದ್ದಾಗಿರದೆ, ಇನ್ಯಾರನ್ನೋ ಓಲೈಸಲು ಈ ರೀತಿ ಬಳಸಿದ್ದಾಗಿರಬಹುದೆ ? ಇಂದು ಅವರು ಹೆಸರಿಗಷ್ಟೇ ಎಐಸಿಸಿ ಅಧ್ಯಕ್ಷ. ಮಾಡುವ ಕೆಲಸಗಳೆಲ್ಲ ಇನ್ನಾರದೋ ಆಣತಿಯಂತೆ ಎಂಬುದು ರಹಸ್ಯವೇನಲ್ಲ. ಟೀಕೆ ಆರೋಗ್ಯಪೂರ್ಣವಾಗಿರಬೇಕು ಎಂಬ ಜ್ಞಾನವಿದ್ದೂ ಯಾಕಿಷ್ಟು ಬದಲಾವಣೆ ಅಂತ ಕೇಳಿದರೆ ಅನಿವಾರ್ಯತೆ!? ಅಸಹಾಯಕತೆಯೋ, ತನ್ನ ಸ್ಥಾನ ಉಳಿಸಿಕೊಳ್ಳುವ ವ್ಯರ್ಥಪ್ರಯತ್ನವೋ, ಒಟ್ಟಾರೆ ಇಂತಹ ಕೆಲ ಪದಗಳನ್ನು ಬಳಸಿ ಕಾಂಗ್ರೆಸ್ ಅಧಿನಾಯಕನನ್ನು ಮೆಚ್ಚಿಸಲು ಯತ್ನಿಸುತ್ತಿರುವುದಂತೂ ಸತ್ಯ.

ಬಳಿಕ, ತಾನು ಹೇಳಿದ್ದನ್ನು ತಪ್ಪಾಗಿ ಅರ್ಥೈಸಲಾಗಿದೆ, ನಾನು ಹಾಗೆ ಹೇಳಲೇ ಇಲ್ಲ ಎನ್ನುವುದೆಲ್ಲ ರಾಜಕೀಯದ ಗಿಲೀಟಿನ ಮಾತುಗಳು. ಆದರಲ್ಲಿ ತಪ್ಪೊಪ್ಪಿಗೆಯ, ಪಶ್ಚಾತ್ತಾಪದ ಸೋಂಕೇ ಇಲ್ಲ.

-ಶಂಕರನಾರಾಯಣ ಭಟ್, ಮಾಡಗೇರಿ

ಪತ್ರ ಮಿತ್ರ

ಸ್ವಾಗತಾರ್ಹ

ಶಾಲೆಗಳಲ್ಲಿ ಪತ್ರಿಕೆ ಓದುವ ಅಭ್ಯಾಸವನ್ನು ಕಡ್ಡಾಯಗೊಳಿಸಿರುವ ಸರ್ಕಾರದ ಕ್ರಮವು ಸ್ತುತ್ಯಾರ್ಹವಾಗಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಸ್ಕ್ರೀನ್ ಟೈಮ್ ಹೆಚ್ಚಾಗಿ ಮಕ್ಕಳ ಏಕಾಗ್ರತೆ ಮತ್ತು ಸೃಜನಶೀಲತೆ ಸುಮಾರು 40% ರಷ್ಟು ಕ್ಷೀಣಿಸುತ್ತಿರುವ ಸಂದರ್ಭದಲ್ಲಿ, ಮುದ್ರಿತ ಮಾಧ್ಯಮದತ್ತ ಮಕ್ಕಳನ್ನು ಸೆಳೆಯುವುದು ಬೌದ್ಧಿಕ ಕ್ರಾಂತಿಗೆ ಮುನ್ನುಡಿಯಾಗಲಿದೆ. ದಿನಕ್ಕೆ ಕನಿಷ್ಠ 20 ನಿಮಿಷ ಪತ್ರಿಕೆ ಓದುವುದರಿಂದ ವಿದ್ಯಾರ್ಥಿಗಳಲ್ಲಿ ಭಾಷಾ ಪ್ರೌಢಿಮೆ ಹೆಚ್ಚುವುದಲ್ಲದೆ ದೇಶ-ವಿದೇಶಗಳ ವಿದ್ಯಮಾನಗಳ ಬಗ್ಗೆ ಆಳವಾದ ಜ್ಞಾನ ಲಭಿಸುತ್ತದೆ.

ಈ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಗೊಳಿಸಲು ಶಾಲೆಗಳಲ್ಲಿ ಸುದ್ದಿ ಸಂಶ್ಲೇಷಣೆ ಸಂವಾದಗಳನ್ನು ಏರ್ಪಡಿಸುವುದು ಮತ್ತು ಪತ್ರಿಕೆಯಲ್ಲಿನ ಕ್ಲಿಷ್ಟ ಪದಗಳನ್ನು ಬಳಸಿ ಮಕ್ಕಳೇ ಸ್ವತಃ ಶಬ್ದ ಭಂಡಾರ, ಗೋಡೆ ಪತ್ರಿಕೆ ಸಿದ್ಧಪಡಿಸುವಂತಹ ನವೀನ ಕ್ರಮಗಳನ್ನು ಅಳವಡಿಸಿಕೊಳ್ಳಬಹುದು. ಅಲ್ಲದೆ ಲೇಖನಗಳ ವಿಮರ್ಶೆ ಮಾಡುವ ಮೂಲಕ ಮಕ್ಕಳಲ್ಲಿ ವಿಮರ್ಶಾತ್ಮಕ ಚಿಂತನೆ ಬೆಳೆಸಲು ಸಾಧ್ಯವಿದೆ. ಪತ್ರಿಕೆಯ ಓದು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಮಾರ್ಗವಾಗಲಿ.

-ಡಾ. ವಿಜಯಕುಮಾರ್, ರಾಯಚೂರು

ಅಶ್ಲೀಲ ಕುಣಿತಕ್ಕೆ ತಡೆ

ಶಾಲೆಗಳಲ್ಲಿ ಅಶ್ಲೀಲ ಹಾಡುಗಳಿಗೆ ಮಕ್ಕಳು ನರ್ತಿಸುವಂತೆ ಮಾಡುವುದಕ್ಕೆ ಸರಕಾರವು ನಿಷೇಧ ಹೇರಿರುವುದು ಅತ್ಯಂತ ಸೂಕ್ತ ಕ್ರಮವಾಗಿದೆ. ಹಾಡಿನ ಹೆಸರಿನಲ್ಲಿ ಅಸಭ್ಯ ಪದಪ್ರಯೋಗ, ನೃತ್ಯದ ಹೆಸರಿನಲ್ಲಿ ಅಂಗಾಂಗ ಕುಣಿತ ಮುಂತಾದವು ಹೆಚ್ಚು ಪ್ರಚಾರ ಪಡೆಯುತ್ತಿರುವ ಈ ಸನ್ನಿವೇಶದಲ್ಲಿ ಸರಕಾರವು ಶಾಲಾ ಮಕ್ಕಳಿಂದ ಇಂತಹ ಅಸಭ್ಯ ಹಾಡುಗಳಿಗೆ ಅಶ್ಲೀಲ ಕುಣಿತವನ್ನು ನಿರ್ಬಂಧಿಸಲು ಹೊರಟಿರುವುದು ಶ್ಲಾಘನೀಯ ಕ್ರಮವಾಗಿದೆ.

ಶಾಲಾ ಕಾಲೇಜುಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇಂತಹ ಅಶ್ಲೀಲ ಕುಣಿತಗಳ ಪ್ರಸಂಗಗಳು ಹೆಚ್ಚುತ್ತಿವೆ. ಸಿನಿಮಾ ಹಾಡುಗಳಿಗೆ ಮೈ ಕುಣಿಸುವುದು ಕಾಣುತ್ತಿದೆ. ಬಹುತೇಕ ಬಾರಿ ಪುಟ್ಟ ಮಕ್ಕಳಿಗೆ ಈ ಹಾಡುಗಳ ಅರ್ಥವೂ ತಿಳಿದಿರುವುದಿಲ್ಲ, ತಾವು ಮಾಡುವ ಕುಣಿತವು ಅಸಭ್ಯವಾದುದೆಂದೂ ತಿಳಿದಿರುವುದಿಲ್ಲ. ಅವರು ಸಿನಿಮಾದ ಕುಣಿತಗಳನ್ನು ಅನುಕರಿಸುತ್ತಾರಷ್ಟೆ. ಆದರೆ ಶಾಲಾಕಾಲೇಜುಗಳ ಶಿಕ್ಷಕ ವೃಂದದವರಿಗಾದರೂ ಇಂತಹ ಅಶ್ಲೀಲ ಹಾಡು, ಕುಣಿತಗಳು ಸಲ್ಲದು ಎಂಬ ಅರಿವಿರಬೇಕಲ್ಲವೆ. ಆದರೆ ಅಂತಹ ಜಾಗೃತಿ ಇರುವಂತೆ ತೋರುತ್ತಿಲ್ಲ. ಹಾಗಾಗಿ ಸರಕಾರವೇ ಇಂತಹ ಕ್ರಮಕ್ಕೆ ಮುಂದಾಗಿರುವುದು ಸ್ತುತ್ಯ ಕ್ರಮ.

-ಚಿದಾನಂದ ರಾವ್, ಕುಂದಾಪುರ

ಖಂಡನೀಯ

ಸಿಇಟಿ ಪರೀಕ್ಷೆಯ ವೇಳೆ ವಿದ್ಯಾರ್ಥಿಗಳ ಜನಿವಾರವನ್ನು ಕಿತ್ತು ತೆಗೆದ ಘಟನೆಯು ವರದಿಯಾಗಿರುವುದು ಅತ್ಯಂತ ಖಂಡನೀಯ. ಬೆಂಗಳೂರು ಮತ್ತು ಚಿಕ್ಕಬಳ್ಳಾಪುರದಲ್ಲಿ ಇಂತಹ ಘಟನೆಗಳು ನಡೆದಿವೆ. ಇದು ಪರೀಕ್ಷಾ ನಿಯಮಗಳನ್ನು ಅನುಸರಿಸಿ ನಡೆಸಿರುವ ಕೃತ್ಯ ಎನ್ನುವುದಕ್ಕಿಂತಲೂ ಬ್ರಾಹ್ಮಣ ದ್ವೇಷದಿಂದಲೇ ನಡೆದಿರುವ ಕೃತ್ಯ ಎನ್ನುವುದು ಸುಸ್ಪಷ್ಟ. ಪೂರ್ವಗ್ರಹ ಪೀಡಿತರಾದ ಕೆಲವು ಸಿಬ್ಬಂದಿಗಳು ಜನಿವಾರವನ್ನು ಕಿತ್ತಿರುವುದು ನಿಚ್ಚಳವಾಗಿದೆ. ದುರಂತವೆಂದರೆ ಕೆಲವು ಕುತ್ಸಿತ ಮತಿಗಳು ಇಂತಹ ಕುಕೃತ್ಯವನ್ನೂ ಸಮರ್ಥಿಸುತ್ತಿದ್ದಾರೆ. ಬೇರೆ ಜಾತಿ ಧರ್ಮಗಳವರ ಧಾರ್ಮಿಕ ಸಂಕೇತಗಳನ್ನು ತೆಗೆಸುವ ಧೈರ್ಯ ತೋರಿಯಾರೆ? ಸರಕಾರವು ಇಂತಹ ನಡೆಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು.

-ಮಹದೇವಪ್ಪ, ಮೈಸೂರು



ಪ್ರಧಾನಿ ನರೇಂದ್ರ ಮೋದಿ ಅವರು ವಾರಾಣಸಿಯ ಕಾಶಿ ವಿಶ್ವನಾಥ ದೇವಾಲಯಕ್ಕೆ ಭೇಟಿ ನೀಡಿದ ವೇಳೆ ತ್ರಿಶೂಲ ಮತ್ತು ಡಮರು ಹಿಡಿದುಕೊಂಡಿರುವ ಕ್ಷಣ.


ತ.ನಾಡಿನಲ್ಲಿ ಡಿಎಂಕೆ, ಕೇರಳದಲ್ಲಿ ಯುಡಿಎಫ್, ಪುದುಚೇರಿಯಲ್ಲಿ ಎನ್‌ಡಿಎಗೆ ಅಧಿಕಾರ

ಬಿಜೆಪಿ ತೆಕ್ಕೆಗೆ ಬಂಗಾಳ, ಅಸ್ಸಾಂ

ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ವಿಧಾನಸಭೆ ಚುನಾವಣೆ ಮುಗಿದಿದ್ದು, ಮೇ 4ರಂದು ಅಧಿಕೃತವಾಗಿ ಫಲಿತಾಂಶ ಹೊರಬೀಳಲಿದೆ. ಅದಕ್ಕೂ ಮುನ್ನ ಮತದಾನೋತ್ತರ ಸಮೀಕ್ಷೆಗಳ ಭವಿಷ್ಯ ಬಹಿರಂಗವಾಗಿದ್ದು, ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ. ತಮಿಳುನಾಡಿನಲ್ಲಿ ಡಿಎಂಕೆ ಮೈತ್ರಿಕೂಟ ಮತ್ತೆ ಅಧಿಕಾರಕ್ಕೆ ಬರಲಿದೆ. ಆದರೆ, ಕೇರಳದಲ್ಲಿ ಈ ಬಾರಿ ಆಡಳಿತಾರೂಢ ಎಲ್‌ಡಿಎಫ್‌ಗೆ ಸೋಲಾಗಲಿದ್ದು, ಯುಡಿಎಫ್ ಗೆಲುವು ಸಾಧಿಸಲಿದೆ ಎಂದು ಸಮೀಕ್ಷೆಗಳು ಭವಿಷ್ಯ ನುಡಿದಿವೆ.

ಪ.ಬಂಗಾಳ

ದೇಶದ ಗಮನ ಸೆಳೆದಿರುವ ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದು ಹಲವು ಸಮೀಕ್ಷೆಗಳು ಹೇಳಿವೆ. ಆಡಳಿತಾರೂಢ ಟಿಎಂಸಿ ನಾಲ್ಕನೇ ಬಾರಿಗೆ ಅಧಿಕಾರಕ್ಕೇರುವ ಕನಸು ನುಚ್ಚುನೂರಾಗಲಿದೆ ಎಂದು ಅಂದಾಜಿಸಲಾಗಿದೆ.





ಪೋಲ್ ಆಫ್ ಎಕ್ಸಿಟ್
ಬಿಜೆಪಿ- 143
ಟಿಎಂಸಿ- 144
ಕಾಂಗ್ರೆಸ್- 5

ಪಿ ಮಾರ್ಕ್
ಬಿಜೆಪಿ- 150-175
ಟಿಎಂಸಿ- 118-138
ಕಾಂಗ್ರೆಸ್- ಸಿಪಿಐ- 0

ಮ್ಯಾಟ್ರೀಜ್
ಬಿಜೆಪಿ- 146-161
ಟಿಎಂಸಿ- 125-140
ಕಾಂಗ್ರೆಸ್- ಸಿಪಿಐ- 0

ಪೀಪಲ್ಸ್ ಪಲ್ಸ್
ಬಿಜೆಪಿ- 95-110
ಟಿಎಂಸಿ- 178-189
ಕಾಂಗ್ರೆಸ್- 1-3

ಚಾಣಕ್ಯ ಸ್ಟ್ರಾಟರ್ಜಿ
ಬಿಜೆಪಿ- 150-160
ಟಿಎಂಸಿ- 130-140
ಕಾಂಗ್ರೆಸ್- ಸಿಪಿಐ- 0

ಪೋಲ್ ಡೈರಿ
ಬಿಜೆಪಿ- 142-171
ಟಿಎಂಸಿ- 99-127
ಕಾಂಗ್ರೆಸ್- 3-5
ಸಿಪಿಐ- 2-3

ಕೇರಳ

ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸಿಪಿಐಎಂ ನೇತೃತ್ವದ ಎಲ್‌ಡಿಎಫ್ ಅನ್ನು ಸೋಲಿಸಿ ಅಧಿಕಾರಕ್ಕೆ ಬರಲಿದೆ. ಕಾಂಗ್ರೆಸ್‌ಗೆ ಇದು ಆಶಾಭಾವನೆ ಮೂಡಿಸಿದರೆ, ಎಡಪಕ್ಷಗಳಿಗೆ ನಿರಾಸೆ ಮೂಡುವ ಸಾಧ್ಯತೆ ಇದೆ.

ಆ್ಯಕ್ಸಿಸ್ ಮೈ ಇಂಡಿಯಾ
ಎಲ್‌ಡಿಎಫ್- 49-62
ಯುಡಿಎಫ್- 78-90
ಬಿಜೆಪಿ ಮೈತ್ರಿ- 0-3

ಪೋಲ್ ಆಫ್ ಎಕ್ಸಿಟ್
ಎಲ್‌ಡಿಎಫ್- 90
ಯುಡಿಎಫ್- 77
ಬಿಜೆಪಿ ಮೈತ್ರಿ- 2

ಪಿ-ಮಾರ್ಕ್
ಎಲ್‌ಡಿಎಫ್- 62-69
ಯುಡಿಎಫ್- 71-79
ಬಿಜೆಪಿ ಮೈತ್ರಿ- 1-4

ಮ್ಯಾಟ್ರೀಜ್
ಎಲ್‌ಡಿಎಫ್- 60-65
ಯುಡಿಎಫ್- 70-75
ಬಿಜೆಪಿ ಮೈತ್ರಿ- 3-5

ಪೀಪಲ್ಸ್ ಪಲ್ಸ್
ಎಲ್‌ಡಿಎಫ್- 55-65
ಯುಡಿಎಫ್- 75-85
ಬಿಜೆಪಿ ಮೈತ್ರಿ- 0-3



ಅಸ್ಸಾಂ

ಅಸ್ಸಾಂನಲ್ಲಿ ಸಿಎಂ ಹಿಮಂತ ಬಿಸ್ವಾ ಶರ್ಮಾ ಅವರ ನೇತೃತ್ವದಲ್ಲಿ ಮತ್ತೊಮ್ಮೆ ಭರ್ಜರಿಯಾಗಿ ಬಿಜೆಪಿ ಅಧಿಕಾರಕ್ಕೆ ಬರಲಿದೆ.



ಆ್ಯಕ್ಸಿಸ್ ಮೈ ಇಂಡಿಯಾ
ಬಿಜೆಪಿ ಮೈತ್ರಿ- 88-100
ಕಾಂಗ್ರೆಸ್? ಮೈತ್ರಿ- 24-36
ಇತರೆ- 0-3

ಪೋಲ್ ಆಫ್ ಎಕ್ಸಿಟ್
ಬಿಜೆಪಿ ಮೈತ್ರಿ- 88
ಕಾಂಗ್ರೆಸ್ ಮೈತ್ರಿ- 27
ಇತರೆ- 6

ಜೆಪಿಸಿ ಸಮೀಕ್ಷೆ
ಬಿಜೆಪಿ ಮೈತ್ರಿ- 88-101
ಕಾಂಗ್ರೆಸ್ ಮೈತ್ರಿ- 23-33
ಇತರೆ- 2-5

ಪಿ- ಮಾರ್ಕ್
ಬಿಜೆಪಿ ಮೈತ್ರಿ- 82-94
ಕಾಂಗ್ರೆಸ್ ಮೈತ್ರಿ- 30-40
ಇತರೆ- 1-5

ಪೀಪಲ್ಸ್ ಪಲ್ಸ್
ಬಿಜೆಪಿ ಮೈತ್ರಿ- 68-72
ಕಾಂಗ್ರೆಸ್ ಮೈತ್ರಿ- 22-26
ಇತರೆ- 7-15

ಪೋಲ್ ಡೈರಿ
ಕಾಂಗ್ರೆಸ್ ಮೈತ್ರಿ- 15-26
ಬಿಜೆಪಿ ಮೈತ್ರಿ- 86-101
ಇತರೆ- 3-7

ಪುದುಚೇರಿ

ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಈಗಿರುವ ಎನ್‌ಡಿಎ ಸರ್ಕಾರವೇ ಮತ್ತೆ ಅಧಿಕಾರಕ್ಕೆ ಬರಲಿದೆ ಎಂಬುದು ಸಮೀಕ್ಷೆಗಳ ಭವಿಷ್ಯ.

ಆ್ಯಕ್ಸಿಸ್ ಮೈ ಇಂಡಿಯಾ
ಬಿಜೆಪಿ ಮೈತ್ರಿ- 16-20
ಕಾಂಗ್ರೆಸ್ ಮೈತ್ರಿ- 6-8
ಇತರೆ 3-7

ಪೋಲ್ ಆಫ್ ಎಕ್ಸಿಟ್
ಬಿಜೆಪಿ ಮೈತ್ರಿ- 17
ಕಾಂಗ್ರೆಸ್ ಮೈತ್ರಿ- 9
ಇತರೆ- 3



ಪೀಪಲ್ಸ್ ಪಲ್ಸ್ ಸಮೀಕ್ಷೆ
ಬಿಜೆಪಿ ಮೈತ್ರಿ- 16-19
ಕಾಂಗ್ರೆಸ್ ಮೈತ್ರಿ- 10-12
ಇತರೆ 1-2 ಸ್ಥಾನ

ತಮಿಳುನಾಡು

ತಮಿಳುನಾಡಿನಲ್ಲಿ ಸಿಎಂ ಎಂ.ಕೆ. ಸ್ಟಾಲಿನ್ ನೇತೃತ್ವದಲ್ಲಿ ಡಿಎಂಕೆ ಮತ್ತೆ ಅಧಿಕಾರಕ್ಕೆ ಬಲಿದೆ. ದೊಡ್ಡ ಮಟ್ಟದಲ್ಲಿ ಹವಾ ಎಬ್ಬಿಸಿದ್ದ ನಟ ವಿಜಯ್ ಅವರ ಟಿವಿಕೆ ಪಕ್ಷವು ಸಾಧಾರಣ ಸಾಧನೆ ಮಾಡಲಿದೆ.



ಪೋಲ್ ಆಫ್ ಎಕ್ಸಿಟ್
ಡಿಎಂಕೆ ಮೈತ್ರಿ- 137
ಎಐಡಿಎಂಕೆ ಮೈತ್ರಿ-75
ಟಿವಿಕೆ- 17

ಪಿ-ಮಾರ್ಕ್
ಡಿಎಂಕೆ ಮೈತ್ರಿ- 125-145
ಎಐಡಿಎಂಕೆ ಮೈತ್ರಿ- 65-85
ಟಿವಿಕೆ- 16-26

ಮ್ಯಾಟ್ರಿಜ್
ಡಿಎಂಕೆ ಮೈತ್ರಿ- 122-132
ಎಐಡಿಎಂಕೆ ಮೈತ್ರಿ- 87-110
ಟಿವಿಕೆ- 10-12

ಪೀಪಲ್ಸ್ ಪಲ್ಸ್
ಡಿಎಂಕೆ ಮೈತ್ರಿ- 125-145
ಎಐಡಿಎಂಕೆ ಮೈತ್ರಿ- 65-80
ಟಿವಿಕೆ- 18-24

ಚಾಣಕ್ಯ ಸ್ಟ್ರಾಟರ್ಜಿ
ಡಿಎಂಕೆ ಮೈತ್ರಿ- 145-160
ಎಐಡಿಎಂಕೆ ಮೈತ್ರಿ- 50-65
ಟಿವಿಕೆ-0

ಬಂಗಾಳದಲ್ಲಿ ಶೇ.92 ದಾಖಲೆ ಮತ

ಕೋಲ್ಕತ್ತಾ: ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ ಎರಡನೇ ಹಾಗೂ ಅಂತಿಮ ಹಂತದಲ್ಲಿ ಸುಮಾರು ಶೇ.91.66 ಮತದಾನವಾಗಿದೆ. ಮೊದಲ ಹಂತದಲ್ಲಿ ಶೇ.93.19 ಮತದಾನವಾಗಿತ್ತು. ಆ ಮೂಲಕ ಒಟ್ಟಾರೆ ಎರಡೂ ಹಂತಗಳಲ್ಲಿ ಸುಮಾರು ಶೇ.92.47 ದಾಖಲೆಯ ಮತದಾನವಾಗಿದೆ. ಇದು ಸ್ವಾತಂತ್ರ್ಯ ನಂತರದ ರಾಜ್ಯದ ಇತಿಹಾಸದಲ್ಲೇ ಅತ್ಯಧಿಕ ಮತದಾನವೆಂದು ಚುನಾವಣಾ ಆಯೋಗ ತಿಳಿಸಿದೆ.

ಈ ಚುನಾವಣೆ ಮಮತಾ ಬ್ಯಾನರ್ಜಿ ಅವರ ಆಡಳಿತ ಮುಂದುವರಿಯುತ್ತದೆಯೋ ಅಥವಾ ಬಿಜೆಪಿ ಪ್ರಾಬಲ್ಯ ಪಡೆಯುತ್ತದೆಯೇ ಎಂಬುದನ್ನು ನಿರ್ಧರಿಸುವ ಮಹತ್ವದ ಕದನವಾಗಿದೆ. ವಿಶೇಷವಾಗಿ ದಕ್ಷಿಣ ಬಂಗಾಳದ 142 ಕ್ಷೇತ್ರಗಳಲ್ಲಿ ನಡೆದ ಮತದಾನವು ರಾಜಕೀಯವಾಗಿ ನಿರ್ಣಾಯಕವಾಗಿದ್ದು, ಕೋಲ್ಕತ್ತಾ ಸೇರಿದಂತೆ ಹಲವು ಪ್ರಮುಖ ಪ್ರದೇಶಗಳಲ್ಲಿ ಉತ್ಸಾಹಭರಿತ ಮತದಾನ ಕಂಡುಬಂದಿತು. ಭವಾನಿಪುರ ಕ್ಷೇತ್ರದಲ್ಲಿ ಮಮತಾ ಬ್ಯಾನರ್ಜಿ ಮತ್ತು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ನಡುವಿನ ಸ್ಪರ್ಧೆ ವಿಶೇಷ ಗಮನ ಸೆಳೆದಿತು.

ಈ ಕ್ಷೇತ್ರದಲ್ಲಿ ಶೇ.87 ಮತದಾನ ದಾಖಲಾಗಿದ್ದು, ಹಿಂದಿನ ಚುನಾವಣೆಗೆ ಹೋಲಿಸಿದರೆ ಹೆಚ್ಚಾಗಿದೆ. ಇಬ್ಬರೂ ನಾಯಕರು ಪರಸ್ಪರ ಆರೋಪ-ಪ್ರತ್ಯಾರೋಪಗಳನ್ನು ಮಾಡುತ್ತಾ, ಚುನಾವಣೆಯ ನಿಷ್ಠೆ ಮತ್ತು ಪಾರದರ್ಶಕತೆ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು. ರಾಜ್ಯದ ವಿವಿಧ ಭಾಗಗಳಲ್ಲಿ ಕೆಲವು ಉದ್ವಿಗ್ನ ಘಟನೆಗಳು, ಘರ್ಷಣೆಗಳು ನಡೆದಿದ್ದರೂ, ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ ಇದು ಕಡಿಮೆ ಹಿಂಸಾತ್ಮಕವಾಗಿತ್ತು.

ಇವಿಎಂಗೆ ಟೇಪ್; ಸತ್ಯವಾದರೆ ಮರು ಮತದಾನ: ಇವಿಎಂಗಳಲ್ಲಿ ಟೇಪ್ ಅಥವಾ ಮಸಿ ಬಳಸಿ ತೊಂದರೆ ಮಾಡಲಾಗಿದೆ ಎಂಬ ಆರೋಪಗಳು ಸತ್ಯವೆಂದು ತೋರಿದರೆ ಆ ಮತಗಟ್ಟೆಗಳಲ್ಲಿ ಮರು ಮತದಾನ ನಡೆಸಲಾಗುವುದು ಎಂದು ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾಧಿಕಾರಿ ಮನೋಜ್ ಅಗರ್ವಾಲ್ ತಿಳಿಸಿದ್ದಾರೆ.

ಅಭಿವೃದ್ಧಿಗೆ ಹೊಸ ಜೀವನಾಡಿ

ಹರ್ದೋಯಿ/ಲಕ್ನೋ: ಪರಿವರ್ತನಾತ್ಮಕ ಮೂಲಸೌಕರ್ಯ ಯೋಜನೆಯಾಗಿರುವ ಗಂಗಾ ಎಕ್ಸ್‌ಪ್ರೆಸ್‌ವೇ ಉತ್ತರಪ್ರದೇಶದ ಅಭಿವೃದ್ಧಿಗೆ ಹೊಸ ಜೀವನಾಡಿ ಎಂದು ಪ್ರಧಾನಿ ಮೋದಿ ಬಣ್ಣಿಸಿದ್ದಾರೆ.

ಮೀರತ್‌ನ್ನು ಪ್ರಯಾಗರಾಜ್‌ಗೆ ಸಂಪರ್ಕಿಸುವ ಗಂಗಾ ಎಕ್ಸ್‌ಪ್ರೆಸ್ ವೇಗೆ ಚಾಲನೆ ನೀಡಿ ಮಾತನಾಡಿ, ಸಹಸ್ರಾರು ವರ್ಷಗಳಿಂದ ಗಂಗಾ ಮಾತೆ ಉತ್ತರ ಪ್ರದೇಶ ಮತ್ತು ಇಡೀ ರಾಷ್ಟ್ರದ ಜೀವನಾಡಿಯಾಗಿರುವಂತೆ, ಇದೇ ಗಂಗೆಯ ಸಮೀಪದಿಂದ ಹಾದು ಹೋಗುವ ಎಕ್ಸ್‌ಪ್ರೆಸ್‌ವೇಯು ಆಧುನಿಕ ಪ್ರಗತಿ ಯುಗದಲ್ಲಿ ಬೆಳವಣಿಗೆಯ ಹೊಸ ಇಂಜಿನ್ ಆಗಲಿದೆ ಎಂದರು.

ಎಕ್ಸ್‌ಪ್ರೆಸ್‌ವೇ ವ್ಯಾಪಾರ, ಕೃಷಿ, ಲಾಜಿಸ್ಟಿಕ್ಸ್ ಉದ್ದಿಮೆ ರಂಗಗಳಲ್ಲಿ ಹೊಸ ಅವಕಾಶಗಳ ಸೃಜಿಸಲಿದೆ. ಇದೊಂದು ಹೈಸ್ಪೀಡ್ ರೋಡ್ ಅಷ್ಟೇ ಅಲ್ಲ, ಹೊಸ ಅವಕಾಶಗಳು, ಹೊಸ ಕನಸುಗಳು ಮತ್ತು ಹೊಸ ಸಾಧ್ಯತೆಗಳಿಗೆ ಗೇಟ್‌ವೇ ಆಗಿದೆ. ಸುಧಾರಿತ ಲಾಜಿಸ್ಟಿಕ್‌ಗಳು, ಮಾರುಕಟ್ಟೆ ಅವಕಾಶಗಳು ರೈತರ ಆದಾಯ ವರ್ಧನೆಗೆ ಪೂರಕವಾಗಲಿದೆ.

ಉತ್ಪಾದನಾ ರಂಗ, ಸೆಮಿಕಂಡಕ್ಟರ್‌ಗಳು, ರಕ್ಷಣಾ ಉತ್ಪಾದನಾ ರಂಗ ಮತ್ತು ಉದಯೋನ್ಮುಖ ತಂತ್ರಜ್ಞಾನ ರಂಗಗಳಲ್ಲಿ ಹೂಡಿಕೆಗಳ ಮುಖೇನ ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗುವ ನಿಟ್ಟಿನಲ್ಲಿ ಹೆಜ್ಜೆ ಹಾಕಿರುವ ಉತ್ತರ ಪ್ರದೇಶದ ಬೃಹತ್ ಆರ್ಥಿಕ ಮಹತ್ವಾಕಾಂಕ್ಷೆಯ ಸಾಕಾರಕ್ಕೆ ಪ್ರಸ್ತುತ ಯೋಜನೆಯು ಪೂರಕವಾಗಲಿದೆ ಎಂದು ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದರು.

ಉತ್ತರಪ್ರದೇಶವೀಗ 5 ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳ ಸಹಿತ 21 ವಿಮಾನ ನಿಲ್ದಾಣಗಳನ್ನು ಒಳಗೊಂಡಿದೆ. ಸದ್ಯವೇ ತಲೆ ಎತ್ತಲಿರುವ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು ಎಕ್ಸ್‌ಪ್ರೆಸ್‌ವೇ ಕಾರಿಡಾರ್‌ಗೆ ಸಂಬಂಧಪಟ್ಟಂತೆ ಸಂಪರ್ಕ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಿದೆ ಎಂದರು. ಉತ್ತರಪ್ರದೇಶದ ಕೈಗಾರಿಕಾ ಬೆಳವಣಿಗೆ ಭಾರತದ ಪಾಲಿಗೆ ನಿರ್ಣಾಯಕ ಬಲವಾಗಿ ಪರಿಣಮಿಸಿದೆ. ಬ್ರಹ್ಮೋಸ್ ಕ್ಷಿಪಣಿಗಳಂತಹ ಕ್ಷಿಪಣಿ ತಯಾರಿ ಸಹಿತ ರಾಜ್ಯದ ರಕ್ಷಣಾ ಕಾರಿಡಾರ್‌ನ ಸಾಧನೆ ಗಮನಾರ್ಹವೆಂದು ಮೋದಿ ಪ್ರಶಂಸಿಸಿದರು.

ಕಿರುಸುದ್ದಿ

ಬಸ್ ಅಪಘಾತ: ಆರು ಮಂದಿ ಸಾವು


ಗಾಂಧಿನಗರ: ಅಹಮದಾಬಾದ್-ಉದಯಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಸಗಿ ಬಸ್ ಇಕೋ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಆರು ಮಂದಿ ಮೃತಪಟ್ಟಿದ್ದು,ಎಂಟು ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಗಂಭೋಯಿ ಮತ್ತು ಹಿಮ್ಮತ್‌ನಗರ ಸಿವಿಲ್ ಆಸ್ಪತ್ರೆಗಳಿಗೆ ಸ್ಥಳಾಂತರಿಸಲಾಗಿದೆ. ಜಿಲ್ಲೆಯ ಹಿಮ್ಮತ್‌ನಗರದ ಜವಾನ್‌ಗಢ್ ಪಾಟಿಯಾದಲ್ಲಿ ವೇಗವಾಗಿ ಬಂದ ಖಾಸಗಿ ಬಸ್, ಹಿಂದಿನಿಂದ ಇಕೋ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ.

ರಾಣಾ ಪೌರತ್ವ ವಾಪಸ್: ಪ್ರಕ್ರಿಯೆ ಆರಂಭಿಸಿದ ಕೆನಡಾ

ಒಟ್ಟಾವಾ: 26/11ರ ಮುಂಬೈ ಭಯೋತ್ಪಾದಕ ದಾಳಿ ಮಾಸ್ಟರ್ ಮೈಂಡ್ ತವ್ವೂರ್ ಹುಸೇನ್ ರಾಣಾ ಅವರ ಪೌರತ್ವವನ್ನು ಹಿಂಪಡೆಯುವ ಪ್ರಕ್ರಿಯೆಯನ್ನು ಕೆನಡಾ ಸರ್ಕಾರ ಪ್ರಾರಂಭಿಸಿದೆ. ಈ ಮೂಲಕ ಹಿಂದಿನ ಜಸ್ಟಿನ್ ಟ್ರುಡೊ ಸರ್ಕಾರದ ಅವಧಿಯಲ್ಲಿ ಹದಗೆಟ್ಟಿದ್ದ ಭಾರತದೊಂದಿಗಿನ ಸಂಬಂಧಗಳನ್ನು ಮರುಹೊಂದಿಸಲು ಕೆನಡಾ ಪ್ರಯತ್ನಿಸುತ್ತಿದೆ. ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಭಾರತಕ್ಕೆ ಭೇಟಿ ನೀಡುವ ಮುನ್ನ ಈ ಕ್ರಮ ಕೈಗೊಳ್ಳಲಾಗಿದೆ.

ಭಾರತಕ್ಕೆ ಇಂಧನ ರಫ್ತು ಹೆಚ್ಚಳಕ್ಕೆ ಹಾದಿ ಸುಗಮ

ಅಬುಧಾಬಿ: ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ತೈಲ ರಫ್ತು ಮಾಡುವ ರಾಷ್ಟ್ರಗಳ ಒಕ್ಕೂಟವಾದ ಒಪೆಕ್‌ನಿಂದ(ಒಪಿಇಸಿ) ಹೊರಬಂದಿದೆ. ಮೇ 1ರಿಂದ ಜಾರಿಗೆ ಬರುವಂತೆ,



ಹಬ್ಶಾನ್-ಫುಜೈರಾ ಪೈಪ್‌ಲೈನ್ ಮೂಲಕ ಭಾರತಕ್ಕೆ ಹೆಚ್ಚಿನ ಪ್ರಮಾಣದ ಕಚ್ಚಾ ತೈಲವನ್ನು ರಫ್ತು ಮಾಡಲು ಮತ್ತು ರಾಷ್ಟ್ರೀಯ ತೈಲ ಉತ್ಪಾದನೆಯನ್ನು ವಿಸ್ತರಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಸುಮಾರು 60 ವರ್ಷಗಳ ಒಕ್ಕೂಟದ ಸದಸ್ಯತ್ವವನ್ನು ಕೊನೆಗೊಳಿಸಿರುವ ಯುಎಇ, ಇನ್ನು ಮುಂದೆ ಒಪೆಕ್ ವಿಧಿಸುವ ಉತ್ಪಾದನಾ ಮಿತಿಗಳನ್ನು ಪಾಲಿಸುವುದಿಲ್ಲ. ಇದರಿಂದ ದೇಶವು ತನ್ನ ತೈಲ ಉತ್ಪಾದನೆಯನ್ನು ದಿನಕ್ಕೆ ಹತ್ತು ಲಕ್ಷ ಬ್ಯಾರೆಲ್‌ಗಳಷ್ಟು ಹೆಚ್ಚಿಸಲು ಸಾಧ್ಯವಾಗಲಿದ್ದು, ಒಟ್ಟು ಐದು ದಶಲಕ್ಷ ಬ್ಯಾರೆಲ್‌ಗಳ ಗುರಿಯತ್ತ ಸಾಗಲಿದೆ. ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿಯು (ಎಡಿಎನ್‌ಒಸಿ) ನಿಗದಿತ ಅವಧಿಗಿಂತ ಮುಂಚಿತವಾಗಿ ಈ ಗುರಿ ತಲುಪಲು 150 ಬಿಲಿಯನ್ ಡಾಲರ್ ಹೂಡಿಕೆ ಮಾಡಿದೆ.

ಯುಎಇ, 406 ಕಿಮೀ ಉದ್ದದ ಹಬ್ಶಾನ್-ಫುಜೈರಾ ಪೈಪ್‌ಲೈನ್ ಮೂಲಕ, ಅಪಾಯಕಾರಿ ಹಾರ್ಮುಜ್ ಜಲಸಂಧಿಯನ್ನು ಬಳಸದೆಯೇ ತೈಲ ರಫ್ತು ಮಾಡಬಹುದಾಗಿದೆ. ತನ್ನ ಒಟ್ಟು ತೈಲ ಆಮದಿನ ಶೇ.10ರಷ್ಟು ಪಾಲನ್ನು ಯುಎಇಯಿಂದ ಪಡೆಯುವ ಭಾರತಕ್ಕೆ, ಈ ಮಾರ್ಗ ಪ್ರಾದೇಶಿಕ ಉದ್ವಿಗ್ನತೆಗಳ ನಡುವೆಯೂ ಸುರಕ್ಷಿತ ತೈಲ ಪೂರೈಕೆಯನ್ನು ಖಾತ್ರಿಪಡಿಸುತ್ತದೆ.

ನಿಷ್ಕ್ರಿಯ ಇಪಿಎಫ್ ಖಾತೆ ಸಕ್ರಿಯಕ್ಕಾಗಿ ಇ- ಪ್ರಾಪ್ತಿ

ಹೊಸದಿಲ್ಲಿ: ನಿಷ್ಕ್ರಿಯವಾಗಿರುವ ಭವಿಷ್ಯ ನಿಧಿ ಖಾತೆಗಳನ್ನು ಸಕ್ರಿಯಗೊಳಿಸುವುದಕ್ಕಾಗಿ ಆಧಾರ್ ಆಧಾರಿತ ಪೋರ್ಟಲ್ ಇ-ಪ್ರಾಪ್ತಿಗೆ ಇಪಿಎಫ್‌ಒ ಚಾಲನೆ ನೀಡಿದೆ. ಹಳೆ ಇಪಿಎಫ್ ಖಾತೆಗಳನ್ನು ಗುರುತಿಸುವುದು, ಯುಎಎನ್ ಲಿಂಕಿಂಗ್ ಮತ್ತು ಅವುಗಳಿಗೆ ಮರುಜೀವ ನೀಡುವ ಡಿಜಿಟಲ್ ವೇದಿಕೆಯಾಗಿದೆ ಇ-ಪ್ರಾಪ್ತಿ.

ಪ್ರಸ್ತುತ ಪೋರ್ಟಲ್, ಪಿಎಫ್ ಸದಸ್ಯರಿಗೆ ತಮ್ಮ ಹಳೆ ಪಿಎಫ್ ಖಾತೆಗಳನ್ನು ಸುರಕ್ಷಿತವಾಗಿ ಮರಳಿ ಹೊಂದಲು ಅಗತ್ಯ ಆಧಾರ್ ಆಧಾರಿತ ದೃಢೀಕರಣ ಕಾರ್ಯ ವಿಧಾನವನ್ನು ಒದಗಿಸುವುದು. ಪಿಎಫ್ ಹಳೆ ಖಾತೆಗಳು ಯುಎಎನ್ ಲಿಂಕ್ ಹೊಂದಿರುವುದಿಲ್ಲ, ಸದಸ್ಯರು ತಮ್ಮ ಸದಸ್ಯ ಪ್ರೊಫೈಲ್‌ನ್ನು ಕ್ರಮಬದ್ಧಗೊಳಿಸಿದ ನಂತರ ಯುಎಎನ್ ಲಿಂಕಿಂಗ್, ಖಾತೆಯ ಪುನಶ್ಚೇತನ ಸಾಧ್ಯವಾಗುವುದು. ಆರಂಭಿಕ ಹಂತದಲ್ಲಿ ಪೋರ್ಟಲ್ ಪಿಎಫ್ ಸದಸ್ಯರ ಮೆಂಬರ್ ಐಡಿ ಆಧಾರಿತವಾಗಿ, ಮೆಂಬರ್ ಐಡಿಗಳನ್ನು ಹೊಂದಿರುವ ಅಪಾರ ಸಂಖ್ಯೆ ಸದಸ್ಯರಿಗೆ ತಕ್ಷಣದ ಸೌಲಭ್ಯ ಕೊಡಿಸಲು ನೆರವಾಗುವುದು.

ಇನ್ನು ಹಳೆ ಮೆಂಬರ್ ಐಡಿಗಳನ್ನು ಪಡೆಯಲು ವಿಫಲರಾಗಿರುವ ಸದಸ್ಯರಿಗೆ ಇದನ್ನು ಕೊಡಿಸಲು ಇ-ಪ್ರಾಪ್ತಿ ನೆರವಾಗುವುದು. ಇ-ಪ್ರಾಪ್ತಿ ಪೋರ್ಟಲ್ ಮಾನವ ಮಧ್ಯಪ್ರವೇಶ ಸಾಧ್ಯತೆಗಳನ್ನು ಕಡಿಮೆ ಮಾಡಲಿದೆ, ದಾಖಲೀಕರಣಗಳನ್ನು ಕಡಿಮೆ ಮಾಡುವುದು ಮತ್ತು ದಕ್ಷತೆ ಹಾಗೂ ಪಾರದರ್ಶಿತ್ವಕ್ಕೆ ಆದ್ಯತೆ ನೀಡಲಿದೆ. ಇಪಿಎಫ್‌ಒ 2025-26ರಲ್ಲಿ 8.31ಕೋಟಿ ಪಿಎಫ್ ಅರ್ಜಿಗಳನ್ನು ಇತ್ಯರ್ಥಪಡಿಸಿದೆ. 2024-25ರಲ್ಲಿ ಈ ಸಂಖ್ಯೆ 6.01ಕೋಟಿಗೆ ಸೀಮಿತವಿತ್ತು. ಈ ಪೈಕಿ 5.51ಕೋಟಿ ಅರ್ಜಿಗಳು ಮುಂಗಡ ಅಥವಾ ಭಾಗಶಃ ಪಿಎಫ್ ಹಣ ಪಡೆಯುವುದಕ್ಕೆ ಸಂಬಂಧಿಸಿದವುಗಳು.

ಅಯೋಧ್ಯೆ ಶಿವ ದೇಗುಲ ಮೇಲೆ ಧ್ವಜಾರೋಹಣ

ಅಯೋಧ್ಯೆ: ಶ್ರೀ ರಾಮ ಮಂದಿರದ ಆವರಣದಲ್ಲಿರುವ ಶಿವ ಮಂದಿರದ ಮೇಲೆ ಧಾರ್ಮಿಕ ವಿಧಿವಿಧಾನಗಳ ಮೂಲಕ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಧ್ವಜಾರೋಹಣ ನೆರವೇರಿಸಿದರು.



ಧ್ವಜಾರೋಹಣದ ಬಳಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಯೋಗಿ ಆದಿತ್ಯನಾಥ್, ಜನರು ನನ್ನ ಎಲ್ಲಿ ನೋಡಿದರು ಜಯ ಶ್ರೀ ರಾಮ, ಜಯ ಶ್ರೀ ರಾಮ ಎಂದು ಹೇಳುತ್ತಾರೆ. ಶ್ರೀ ರಾಮ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದುಕೊಂಡಿದ್ದಾರೆ ಎಂದರು. ಶ್ರೀ ರಾಮ ಭಾರತವನ್ನು ಉತ್ತರದಿಂದ ದಕ್ಷಿಣಕ್ಕೆ ಬೆಸೆದರೆ, ಶ್ರೀ ಕೃಷ್ಣ ಪೂರ್ವದಿಂದ ಪಶ್ಚಿಮಕ್ಕೆ ಮತ್ತು ಶಿವ ಭಾರತದ ಕೊನೆ ಕೊನೆಯಲ್ಲಿ ಕಾಣಬಹುದು ಎಂದರು. ಸಂಜೆ 5 ಗಂಟೆಗೆ ಅಯೋಧ್ಯೆಗೆ ಆಗಮಿಸಿದ ಯೋಗಿ ಮೊದಲು ಹನುಮಾನ ಮಂದಿರದ ದರ್ಶನವನ್ನು ಪಡೆದ ನಂತರ ಶ್ರೀ ರಾಮಲಲಾ ಹಾಗೂ ಶಿವ ಮಂದಿರದ ದರ್ಶನ ಹಾಗೂ ವಿಶೇಷ ಪೂಜೆ ಸಲ್ಲಿಸಿ ವೇದಿಕೆಯ ಕಡೆಗೆ ಹೊರಟು ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ರಾಮ ಜನ್ಮಭೂಮಿ ತೀರ್ಥಕ್ಷೇತ್ರದ ಪ್ರಧಾನಕಾರ್ಯದರ್ಶಿಯಾದ ಚಂಪತರಾಯ್, ಟ್ರಸ್ಟಿಗಳಾದ ಅನಿಲ ಮಿಶ್ರಾ, ಕೃಷ್ಣಮೋಹನ್, ವಿಶ್ವ ಹಿಂದೂ ಪರಿಷತ್ ಕೇಂದ್ರಿಯ ಕಾರ್ಯದರ್ಶಿ ಗೋಪಾಲ್ ಜಿ, ಹಾಗೂ ಸಂಘ ಪರಿವಾರದ ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಭಾರತ-ಲಂಕಾ ಜಂಟಿ ನೌಕಾಭ್ಯಾಸ ಸಂಪನ್ನ

ಹೊಸದಿಲ್ಲಿ: ಕೊಲಂಬೊ ಕರಾವಳಿಯಲ್ಲಿ ನಡೆದ ದ್ವಿಪಕ್ಷೀಯ ನೌಕಾ ತಾಲೀಮಿನ ಭಾಗವಾಗಿ ಭಾರತ ಮತ್ತು ಶ್ರೀಲಂಕಾದ ನೌಕಾಪಡೆಗಳ ಸಿಬ್ಬಂದಿಗಳು ಆಳ ಸಮುದ್ರದ ಡೈವ್‌ಗಳನ್ನು ನಡೆಸಿದ್ದಾರೆ. ಈ ಮೂಲಕ ಉಭಯ ದೇಶದ ನೌಕಾಪಡೆ ನೀರೊಳಗಿನ ಹುಡುಕಾಟ, ಪಾರುಗಾಣಿಕಾ ಮತ್ತು ರಕ್ಷಣಾ ಕಾರ್ಯಾಚರಣೆಗಳಲ್ಲಿ ಜಂಟಿ ಸಾಮರ್ಥ್ಯಗಳನ್ನು ಹೆಚ್ಚಿಸಿದರು. ಭಾರತ ಮತ್ತು ಶ್ರೀಲಂಕಾ ಕೊಲಂಬೊದಲ್ಲಿ ಏ.21-28ರಿಂದ ನಡೆಸಲಾದ ಡೈವೆಕ್ಸ್ ಎಂಬ ದ್ವಿಪಕ್ಷೀಯ ಡೈವಿಂಗ್ ತಾಲೀಮಿನ ನಾಲ್ಕನೇ ಆವೃತ್ತಿಯ ಮೂಲಕ ತಮ್ಮ ಬೆಳೆಯುತ್ತಿರುವ ಕಡಲ ಪಾಲುದಾರಿಕೆಯನ್ನು ಪುನರುಚ್ಚರಿಸಿದವು. ಹಿಂದು ಮಹಾಸಾಗರ ಪ್ರದೇಶದಲ್ಲಿ ಸಮನ್ವಯವನ್ನು ಬಲಪಡಿಸುವಾಗ, ಎರಡೂ ನೌಕಾಪಡೆಗಳ ಡೈವರ್‌ಗಳು 55 ಮೀಟರ್‌ಗಿಂತ ಹೆಚ್ಚು ಆಳ ಸಮುದ್ರದ ಡೈವ್‌ಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಿದರು. ನೀರೊಳಗಿನ ಹುಡುಕಾಟ, ಪಾರುಗಾಣಿಕಾ ಮತ್ತು ರಕ್ಷಣಾ ಕಾರ್ಯಾಚರಣೆಗಳಲ್ಲಿ ಜಂಟಿ ಸಾಮರ್ಥ್ಯಗಳನ್ನು ಹೆಚ್ಚಿಸಿದರು ಎಂದು ಭಾರತೀಯ ನೌಕಾಪಡೆಯ ವಕ್ತಾರರು ತಿಳಿಸಿದ್ದಾರೆ.

ಶಬರಿಮಲೆ ಪ್ರವೇಶ ಕುರಿತಂತೆ ವಿಚಾರಣೆ | ಸುಪ್ರೀಂಕೋರ್ಟ್‌ನಿಂದ ಮಹತ್ವದ ಅಭಿಪ್ರಾಯ

ಸುಧಾರಣೆ ಹೆಸರಿನಲ್ಲಿ ಧರ್ಮವನ್ನು ಕುಗ್ಗಿಸಲಾಗದು

ಹೊಸದಿಲ್ಲಿ: ಸುಧಾರಣೆ ಎಂಬ ಹೆಸರಿನಲ್ಲಿ ಧರ್ಮವನ್ನು ನಾಶಪಡಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಹಾಗೆಯೇ, ಧಾರ್ಮಿಕ ನಂಬಿಕೆ ಹಾಗೂ ಮನಸ್ಸಿನ ವಿಷಯಗಳನ್ನು ನ್ಯಾಯಾಂಗ ಚರ್ಚೆಗೆ ಒಳಪಡಿಸಲು ಸಾಧ್ಯವಿಲ್ಲವೆಂದು ಕೋರ್ಟ್ ಹೇಳಿದೆ.

ಮಹಿಳೆಯರ ಮೇಲಿನ ಭೇದಭಾವ ಸೇರಿದಂತೆ ವಿವಿಧ ಧಾರ್ಮಿಕ ಪ್ರಶ್ನೆಗಳ ವಿಚಾರಣೆಯನ್ನು ನಡೆಸುತ್ತಿರುವ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠ, ದೀರ್ಘಕಾಲದಿಂದ ರೂಪುಗೊಂಡ ಕೆಲವು ಆಚರಣೆಗಳು ಧರ್ಮದ ಅವಿಭಾಜ್ಯ ಅಂಗಗಳಾಗಿ ಪರಿಗಣಿಸಲ್ಪಟ್ಟಿವೆ ಎಂದು ಅಭಿಪ್ರಾಯಪಟ್ಟಿತು. ಮುಖ್ಯ ನ್ಯಾ.ಸೂರ್ಯಕಾಂತ್ ನೇತೃತ್ವದ ಪೀಠವು ವಿಚಾರಣೆ ವೇಳೆ, ಧಾರ್ಮಿಕ ಸ್ವಾತಂತ್ರ್ಯದ ವಿಚಾರಗಳಲ್ಲಿ ಸಮಾನತೆ ತತ್ವವನ್ನು ಅನ್ವಯಿಸುವಾಗ, ಅದು ಆ ಧರ್ಮದ ಮೂಲ ಆಚರಣೆಗಳನ್ನು ಸಂಪೂರ್ಣವಾಗಿ ನಿರಾಕರಿಸುವ ಮಟ್ಟಕ್ಕೆ ಹೋಗಬಹುದೇ ಎಂಬ ಪ್ರಶ್ನೆ ಎತ್ತಿತು.

ಪೀಠವು ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸಂಬಂಧಿಸಿದ ಸಂವಿಧಾನಿಕ ಆಶಯವನ್ನು ಉಲ್ಲೇಖಿಸಿ, ರಾಜ್ಯವು ಕಾನೂನು ರೂಪಿಸದಿದ್ದರೆ ನ್ಯಾಯಾಂಗವು ಕ್ರಮೇಣ ಸಮಾನತೆ ತತ್ವವನ್ನು ಜಾರಿಗೊಳಿಸಬಹುದೇ ಎಂಬುದರ ಬಗ್ಗೆ





ಚರ್ಚಿಸಿತು. ಈ ಸಂದರ್ಭದಲ್ಲಿ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು, ವಿವಿಧ ರಾಜ್ಯಗಳು ವಿವಾಹ ಮತ್ತು ವಾರಸುದಾರಿಕೆ ಹಕ್ಕುಗಳನ್ನು ನಿಯಂತ್ರಿಸಲು ತಮ್ಮದೇ ನಿಯಮಗಳನ್ನು ಜಾರಿಗೆ ತಂದಿರುವುದನ್ನು ಉಲ್ಲೇಖಿಸಿ, ಸಮಾಜ ಸಿದ್ಧವಾಗುವಾಗ ಸಂಸತ್ತು ಏಕರೂಪ ನಾಗರಿಕ ಸಂಹಿತೆಯನ್ನು ತರಲಿದೆ ಎಂದು ಹೇಳಿದರು.

ವಿಚಾರಣೆ ವೇಳೆ ಹಿರಿಯ ವಕೀಲರು, ವ್ಯಕ್ತಿಗಳಿಗೆ ಸಂವಿಧಾನ ನೀಡಿರುವ ಧಾರ್ಮಿಕ ಸ್ವಾತಂತ್ರ್ಯವು ಧಾರ್ಮಿಕ ಸಂಸ್ಥೆಗಳ ಹಕ್ಕಿಗಿಂತ ಮೇಲು ಎಂಬುದಾಗಿ ವಾದಿಸಿದರು. ಆದರೆ ನ್ಯಾಯಮೂರ್ತಿಗಳು, ಶತಮಾನಗಳಿಂದ ನಡೆದುಬಂದ ಆಚರಣೆಗಳನ್ನು ಏಕಾಏಕಿ ಪ್ರಶ್ನಿಸುವುದು ಸೂಕ್ತವೇ ಎಂಬ ಪ್ರಶ್ನೆಯನ್ನು ಮುಂದಿಟ್ಟರು. ಕೆಲವು ಆಚರಣೆಗಳು ಕಾಲಕ್ರಮೇಣ ಧರ್ಮದ ಮೂಲಭೂತ ಅಂಶಗಳಾಗಿ ರೂಪುಗೊಂಡಿರುವುದರಿಂದ, ಇತಿಹಾಸವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು.

ನ್ಯಾ. ನಾಗರತ್ನ ಅವರು, ಸುಧಾರಣೆ ಹೆಸರಿನಲ್ಲಿ ಧರ್ಮವನ್ನು ಖಾಲಿ ಮಾಡಬಾರದು ಎಂದು ಎಚ್ಚರಿಕೆ ನೀಡಿದರು. ಶತಮಾನಗಳಿಂದ ನಡೆದುಬಂದ ಆಚರಣೆಗಳನ್ನು ಸಂಪೂರ್ಣವಾಗಿ ತೆರೆಯುವುದು ಧರ್ಮದ ಅಸ್ತಿತ್ವವನ್ನೇ ಹಾನಿಗೊಳಿಸಬಹುದು ಎಂದರು. ಇದೇ ವೇಳೆ, ಧಾರ್ಮಿಕ ಆಚರಣೆಗಳು ಮಹಿಳೆಯರ ಹಕ್ಕುಗಳಿಗೆ ಹಾನಿಯಾಗಿದ್ದರೆ ಪರಿಹಾರವೇನು ಎಂಬ ಪ್ರಶ್ನೆಯನ್ನೂ ವಕೀಲರು ಎತ್ತಿದರು.

ಇದಲ್ಲದೆ, ದೇವಾಲಯ ಪ್ರವೇಶ ಹಕ್ಕಿನ ವಿಚಾರದಲ್ಲಿ ಭಕ್ತ ಹಾಗೂ ಭಕ್ತರಲ್ಲದವರ ನಡುವಿನ ವ್ಯತ್ಯಾಸವನ್ನು ಪರಿಗಣಿಸುವ ಅಗತ್ಯವಿದೆ ಎಂಬ ಅಭಿಪ್ರಾಯವೂ ವ್ಯಕ್ತವಾಯಿತು. ದೀರ್ಘಕಾಲದಿಂದ ರೂಢಿಯಾದ ಆಚರಣೆಗಳನ್ನು ಏಕಾಏಕಿ ಪ್ರಶ್ನಿಸುವುದರಿಂದ ಉಂಟಾಗುವ ಪರಿಣಾಮಗಳನ್ನೂ ಪೀಠ ಗಮನಿಸಿತು.

ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ 31 ವರ್ಷ ಜೈಲು ವಾಸ

ಮಾಜಿ ಅಪರಾಧಿ ಈಗ ಹೈ ವಕೀಲ!

ಚೆನ್ನೈ: ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸಿ ಬಿಡುಗಡೆಯಾಗಿದ್ದ ಎ.ಜಿ. ಪೆರಾರಿವಾಲನ್ ಸೋಮವಾರ ತಮಿಳುನಾಡು ಮತ್ತು ಪುದುಚೇರಿ ಬಾರ್ ಕೌನ್ಸಿಲ್‌ನಲ್ಲಿ ವಕೀಲರಾಗಿ ನೋಂದಾಯಿಸಿ ಕೊಂಡಿದ್ದಾರೆ.

54 ವರ್ಷದ ಪೆರಾರಿವಾಲನ್ ಏಪ್ರಿಲ್ 27 ರಂದು ಅಧಿಕೃತವಾಗಿ ಕಪ್ಪು ಕೋಟ್ ಧರಿಸಿದರು. ಈ ಸಮಾರಂಭದಲ್ಲಿ ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸುಶ್ರುತ್ ಅರವಿಂದ್ ಧರ್ಮಾಧಿಕಾರಿ ಅವರು ಭಾಗವಹಿಸಿದ್ದರು. ಬಾರ್ ಕೌನ್ಸಿಲ್ ಅಧ್ಯಕ್ಷ ಪಿ.ಎಸ್. ಅಮಲ್‌ರಾಜ್ ಮತ್ತು ಉಪಾಧ್ಯಕ್ಷ ಎಸ್. ಪ್ರಭಾಕರನ್ ಉಪಸ್ಥಿತರಿದ್ದರು. ವಕೀಲ ಸಿ.ಕೆ. ಚಂದ್ರಶೇಖರ್ ನೋಂದಣಿ ಪ್ರಕ್ರಿಯೆಯನ್ನು ಮಂಡಿಸಿದರೆ, ಕೆ. ಬಾಲು ಪ್ರಮಾಣ ವಚನ ಬೋಧಿಸಿದರು.

ಪೆರಾರಿವಾಲನ್ ಬೆಂಗಳೂರಿನ ಡಾ. ಬಿ.ಆರ್. ಅಂಬೇಡ್ಕರ್ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಮುಗಿಸಿದ್ದಾರೆ. ಅವರು 2025ರಲ್ಲಿ ಅಖಿಲ ಭಾರತ ಬಾರ್ ಪರೀಕ್ಷೆಯಲ್ಲಿ (ಎಐಬಿಇ) ಉತ್ತೀರ್ಣರಾಗಿದ್ದಾರೆ. ಇವರ ಕಾನೂನು ವೃತ್ತಿಯ ಮೂಲಕ ಕೈದಿಗಳಿಗೆ ಕಾನೂನು ನೆರವು ನೀಡಲು ಬಯಸಿದ್ದಾರೆ.



ಕಾನೂನು ಇತಿಹಾಸ

ಸುಪ್ರೀಂ ಕೋರ್ಟ್ ಮೇ 18, 2022ರಂದು ಆರ್ಟಿಕಲ್ 142ರ ಅಡಿಯಲ್ಲಿ ಪೆರಾರಿವಾಲನ್ ಬಿಡುಗಡೆಗೆ ಆದೇಶಿಸಿತ್ತು. 1991ರಲ್ಲಿ ತಮ್ಮ 19ನೇ ವಯಸ್ಸಿನಲ್ಲಿ ಬಂಧನಕ್ಕೊಳಗಾಗಿದ್ದ ಅವರು ಒಟ್ಟು 31 ವರ್ಷಗಳ ಕಾಲ ಜೈಲಿನಲ್ಲಿ ಕಳೆದಿದ್ದರು. ಸ್ಫೋಟಕ ಸಾಧನಕ್ಕೆ 9-ವೋಲ್ಟ್ ಬ್ಯಾಟರಿ ಪೂರೈಸಿದ ಆರೋಪ ಅವರ ಮೇಲಿತ್ತು. ಕಾನೂನು ಹೋರಾಟದ ಸಮಯದಲ್ಲಿ ಅನುಭವಿಸಿದ ಘಟನೆಗಳು ತಮ್ಮನ್ನು ವಕೀಲರಾಗಲು ಪ್ರೇರೇಪಿಸಿದವು ಎಂದು ಅವರು ತಿಳಿಸಿದ್ದಾರೆ. ಪೆರಾರಿವಾಲನ್ ಮದ್ರಾಸ್ ಹೈಕೋರ್ಟ್‌ನಲ್ಲಿ ವೃತ್ತಿ ಆರಂಭಿಸಲಿದ್ದಾರೆ.

ರಾಜ್ಯದಲ್ಲಿ ₹653 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ

ಬೆಂಗಳೂರು: ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ಬಹುದೊಡ್ಡ ಸವಾಲಾಗಿ ಪರಿಣಮಿಸಿರುವ ನಿಷೇಧಿತ ಮಾದಕ ವಸ್ತು ಜಾಲದ ವಿರುದ್ಧದ ಕಾರ್ಯಾಚರಣೆ ತೀವ್ರಗೊಂಡಿದ್ದರು, ಕಳೆದ ಮೂರು ವರ್ಷ ನಾಲ್ಕು ತಿಂಗಳ ಅವಧಿಯಲ್ಲಿ ರಾಜ್ಯಾದ್ಯಂತ ಪೊಲೀಸರು ಬರೋಬ್ಬರಿ 653 ಕೋಟಿ ರೂ. ಮೌಲ್ಯದ ಡ್ರಗ್ಸ್ ಪತ್ತೆಹಚ್ಚಿದ್ದು, ಒಟ್ಟು 18,593 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ರಾಜಧಾನಿ ಬೆಂಗಳೂರು ಮಾದಕ ವಸ್ತು ಮಾರಾಟದ ಕೇಂದ್ರಬಿಂದುವಾಗಿ ಗುರುತಿಸಿಕೊಳ್ಳುತ್ತಿದೆ. 2026ರ ಕೇವಲ ನಾಲ್ಕು ತಿಂಗಳಲ್ಲಿ ಬೆಂಗಳೂರಿನಲ್ಲಿ 130.18 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ. 2024 ರಿಂದ 2026 ರ ಏಪ್ರಿಲ್ ಅಂತ್ಯದ ವರೆಗೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 25,500 ಕೆ.ಜಿ.ಗೂ ಅಧಿಕ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

2025ರಲ್ಲಿ ಸಿಸಿಬಿ ಪೊಲೀಸರ ಕ್ರಮ: ಪ್ರಸಕ್ತ ವರ್ಷದಲ್ಲಿ ಸಿಸಿಬಿ ಪೊಲೀಸರು ನಡೆಸಿದ ಕಾರ್ಯಾಚರಣೆಗಳಲ್ಲಿ ಗಮನಾರ್ಹ ಯಶಸ್ಸು ಲಭಿಸಿದೆ. ಈ ಅವಧಿಯಲ್ಲಿ ಒಟ್ಟು 71 ಪ್ರಮುಖ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದ್ದು, ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ 112 ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಲ್ಲಿ 85 ಮಂದಿ ಭಾರತೀಯ ಪ್ರಜೆಗಳಾಗಿದ್ದರೆ, 27 ಮಂದಿ ವಿದೇಶಿ ಪ್ರಜೆಗಳಾಗಿದ್ದಾರೆ. ಈ ಕಾರ್ಯಾಚರಣೆಗಳ ವೇಳೆ ಒಟ್ಟು 170.64 ಕೆ.ಜಿ. ವಿವಿಧ ಮಾದರಿಯ ಮಾದಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಜಪ್ತಿ ಮಾಡಲಾದ ಈ ಮಾದಕ ದ್ರವ್ಯಗಳ ಒಟ್ಟು ಅಂದಾಜು ಮೌಲ್ಯ ಬರೋಬ್ಬರಿ 115.49 ಕೋಟಿ ರೂ.ಎಂದು ಅಂದಾಜಿಸಲಾಗಿದೆ.



> ರಾಜ್ಯದಲ್ಲಿ ಒಂದು ದಿನವಾದರೂ ಡ್ರಗ್ಸ್ ಸಿಗದ ರೀತಿಯಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸಬೇಕು. ಬೆಂಗಳೂರು ಸೇರಿದಂತೆ ಇಡೀ ರಾಜ್ಯವನ್ನು ಡ್ರಗ್ಸ್ ಮುಕ್ತಗೊಳಿಸುವುದೇ ನಮ್ಮ ಸರ್ಕಾರದ ಗುರಿ. ಡ್ರಗ್ಸ್ ಸಾಗಾಟ, ಉತ್ಪಾದನೆ ಮತ್ತು ಉಪಯೋಗ ಈ ಮೂರೂ ವಿಷಯಗಳ ಬಗ್ಗೆ ಪೊಲೀಸರು ತೀವ್ರ ನಿಗಾ ವಹಿಸಬೇಕು.
> ■ ಡಾ.ಜಿ.ಪರಮೇಶ್ವರ, ಗೃಹ ಸಚಿವ

ಎರಡುವರೆ ವರ್ಷದಲ್ಲಿ 1,167 ಜನ ಗಡೀಪಾರು: ರಾಜ್ಯದಲ್ಲಿ ಕಾನೂನು ಬಾಹಿರ ಚಟುವಟಿಕೆ ಹಾಗೂ ಮಾದಕ ವಸ್ತುಗಳನ್ನು ಮಾರಾಟ ಮಾಡಲು ಮುಂದಾಗಿದ್ದ 1,167 ಜನ ವಿದೇಶಿಗರನ್ನು ಗಡೀಪಾರು ಮಾಡಲಾಗಿದೆ. 2024ರಲ್ಲಿ 339 ವಿದೇಶಿಗರು, 2025ರಲ್ಲಿ 401 ಹಾಗೂ 2026ರ ಏಪ್ರಿಲ್ ಅಂತ್ಯದ ವೇಳೆಗೆ 427 ಜನರನ್ನು ಗಡೀಪಾರು ಮಾಡಲಾಗಿದೆ. ಇದರಲ್ಲಿ 286 ಜನ ಬಾಂಗ್ಲಾದೇಶದವರನ್ನು ಭಾರತದ ಗಡಿ ಪ್ರದೇಶದ ಹತ್ತಿರಕ್ಕೆ ಕರೆದುಕೊಂಡು ಹೋಗಿ ಬಿಡಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ ತಿಳಿಸಿದರು.

ವರ್ಷವಾರು ಅಂಕಿ ಅಂಶಗಳ ವಿವರ

- 2023: 6,767 ಪ್ರಕರಣಗಳು ದಾಖಲಾಗಿದ್ದು, 133.95 ಕೋಟಿ ರೂ. ಮೌಲ್ಯದ 11,257 ಕೆ.ಜಿ ಡ್ರಗ್ಸ್ ಜಪ್ತಿ.
- 2024: 4,188 ಪ್ರಕರಣಗಳಡಿ 196 ಕೋಟಿ ರೂ. ಮೌಲ್ಯದ 6,066 ಕೆ.ಜಿ ಮಾದಕ ವಸ್ತು ವಶ.
- 2025: 6,827 ಪ್ರಕರಣಗಳಲ್ಲಿ 287 ಕೋಟಿ ರೂ.ಮೌಲ್ಯದ 7,421 ಕೆ.ಜಿ ಡ್ರಗ್ಸ್ ಪತ್ತೆ.
- 2026 (ಏಪ್ರಿಲ್ ವರೆಗೆ): 811 ಪ್ರಕರಣ ದಾಖಲಾಗಿದ್ದು, 166.18 ಕೋಟಿ ರೂ. ಮೌಲ್ಯದ 756 ಕೆ.ಜಿ. ಡ್ರಗ್ಸ್ ಜಪ್ತಿ ಮಾಡಲಾಗಿದೆ.



ಬೆಂಗಳೂರಿನಲ್ಲಿ ಬುಧವಾರ ಸಂಜೆ ಬಿರುಗಾಳಿ ಮಳೆಗೆ ಶಿವಾಜಿನಗರ ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದ ಪ್ರದೇಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಿರುಸುದ್ದಿ

ವಿದ್ಯಾರ್ಥಿ ಆತ್ಮಹತ್ಯೆ: ಮೂವರು ಪೊಲೀಸರ ಅಮಾನತು

ಧಾರವಾಡ: ಪೊಲೀಸರ ಕಿರುಕುಳದಿಂದ ಬಿಎಸ್ಸಿ ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿದ್ಯಾಗಿರಿ ಪೊಲೀಸ್ ಠಾಣೆಯ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ. ಡ್ರಗ್ಸ್ ಡ್ರೈವ್ ವೇಳೆ ಸಿಕ್ಕಿಬಿದ್ದವರಿಂದ ಪೊಲೀಸರು ಹಣ ಪಡೆಯುವುದು ಸಾಬೀತಾಗಿದೆ. ಹೆಡ್ ಕಾನ್ಸ್‌ಟೇಬಲ್ ಚಂದ್ರು ನಡುವಿನಮನಿ, ಕಾನ್ಸ್‌ಟೇಬಲ್‌ಗಳಾದ ಕಿರಣ್ ಡೊಕ್ಕನ್ನವರ್ ಹಾಗೂ ಸೈಯದ್ ತಹಶೀಲ್ದಾರ್ ಅಮಾನತುಗೊಂಡ ಠಾಣೆಯ ಸಿಬ್ಬಂದಿ. ಇಲ್ಲಿಯ ಗಿರಿನಗರದ, ಮೂಲತಃ ಬಾಗಲಕೋಟ ಜಿಲ್ಲೆಯ ಆದಿತ್ಯಾ ಮ್ಯಾಗೇರಿ ಆತ್ಮಹತ್ಯೆ ಪ್ರಕರಣದಲ್ಲಿ ಈ ಮೂವರನ್ನು ಅಮಾನತು ಮಾಡಲಾಗಿದೆ. ಗಾಂಜಾ ಸೇವನೆಯ ಆರೋಪದಡಿ ಆದಿತ್ಯಾ ಮ್ಯಾಗೇರಿ ಸೇರಿದಂತೆ ಹತ್ತು ಜನ ವಿದ್ಯಾರ್ಥಿಗಳನ್ನು ವಿದ್ಯಾಗಿರಿ ಠಾಣೆ ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದರು. ಆದರೆ, ಗಾಂಜಾ ಸೇವನೆಯ ವರದಿಯಲ್ಲಿ ಗಾಂಜಾ ಸೇವನೆ ಮಾಡಿರಲಿಲ್ಲ ಎಂಬ ವರದಿ ಬಂದಿತ್ತು. ಇಷ್ಟಾಗಿಯೂ ಈ ಪ್ರಕರಣದಿಂದ ಹೊರ ಬರಲು ಪೊಲೀಸರು ಹಣ ಕೇಳಿದ್ದರು. ತಂದೆ ಇಲ್ಲದ ತಾಯಿ ಆಶ್ರಯದಲ್ಲಿದ್ದ ಆದಿತ್ಯಾ ಈ ವಿಚಾರವಾಗಿ ಸೋಮವಾರ ಮನನೊಂದು ಆದಿತ್ಯಾ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದನು. ಪ್ರಕರಣ ಗಂಭೀರವಾಗಿ ಪರಿಗಣಿಸಿದ ಪೊಲೀಸ್ ಇಲಾಖೆ ಇದೀಗ ಮೂವರನ್ನು ಅಮಾನತು ಮಾಡಿದೆ.

ಭೀಕರ ಅಪಘಾತ: ಮೂವರ ಮರಣ

ಕುಂದಾಪುರ: ಕಾಲೇಜು ವಿದ್ಯಾರ್ಥಿಗಳಿದ್ದ ಬಸ್ಸೊಂದು ರಸ್ತೆ ಬದಿ ನಿಂತಿದ್ದ ಟ್ಯಾಂಕರ್ ಮತ್ತು ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಬಸ್ಸಿನಲ್ಲಿದ್ದ ಮೂವರ ಮೃತಪಟ್ಟಿರುವ ದಾರುಣ ಘಟನೆ ತ್ರಾಸಿ ಸಮೀಪದ ಮರವಂತೆ ಬೀಚ್ ಬಳಿ ಬುಧವಾರ ಮಧ್ಯಾಹ್ನ ವೇಳೆ ನಡೆದಿದೆ. ರಘು ಯಾನೆ ಉಮೇಶ, ರಂಗನಾಥ ಮತ್ತು ಹೇಮಂತ್ ಮೃತಪಟ್ಟ ದುರ್ದೈವಿಗಳು. ಶಿವಮೊಗ್ಗ ಜಿಲ್ಲೆಯ ಶಂಕರಘಟ್ಟದ ಕುವೆಂಪು ಯೂನಿವರ್ ಸಿಟಿಯ ರಂಬಾಪುರಿ ಕಾಲೇಜಿನ ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿಗಳು ಪ್ರವಾಸದ ನಿಮಿತ್ತ ಭಾನುವಾರ ಹೊರಟಿದ್ದು, ದಾಂಡೇಲಿ, ಹೊನ್ನಾವರ ಕಡೆಯಿಂದ ಪ್ರವಾಸ ಮುಗಿಸಿ, ತ್ರಾಸಿ ಮರವಂತೆ ಬೀಚ್ ಬಳಿ ರಾ.ಹೆ.66ರಲ್ಲಿ ಈ ದುರ್ಘಟನೆ ಸಂಭವಿಸಿದೆ.

ಎಸ್‌ಡಿಎ ಸಿಬ್ಬಂದಿ ಲೋಕಾ ಬಲೆಗೆ

ಕೊಪ್ಪಳ: ಪ್ರಾದೇಶಿಕ ಸಾರಿಗೆ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ರಂಜಿತ್ ಎಂಬುವವರು ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಶೋರೂಮ್ ಟ್ರೇಡ್ ಲೈಸೆನ್ಸ್ ನೀಡಲು ಹಣಕ್ಕೆ ಬೇಡಿಕೆಯಿಟ್ಟಿದ್ದ ಈ ಸಿಬ್ಬಂದಿಯನ್ನು ರೆಡ್ ಹ್ಯಾಂಡ್ ಆಗಿ ಹಿಡಿಯಲಾಗಿದೆ. ದೂರುದಾರರಾದ ನಯೀಮ್ ಎಂಬುವವರು ಕುಷ್ಟಗಿ, ಕಾರಟಗಿ ಹಾಗೂ ಹುಲಿಗಿಯಲ್ಲಿ ಹೊಸ ಶೋರೂಮ್‌ಗಳನ್ನು ತೆರೆಯಲು ಪರವಾನಿಗೆ ಕೋರಿ ಮೂರು ತಿಂಗಳ ಹಿಂದೆ ಅರ್ಜಿ ಸಲ್ಲಿಸಿದ್ದರು. ಈ ಪರವಾನಿಗೆ ನೀಡಲು ಎಸ್‌ಡಿಎ ರಂಜಿತ್ ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎನ್ನಲಾಗಿದೆ. ನಯೀಮ್ ಅವರು ನೀಡಿದ ದೂರಿನನ್ವಯ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆ ನಡೆಸಿದರು. ರಂಜಿತ್ ಅವರು 21 ಸಾವಿರ ರೂಪಾಯಿ ಲಂಚದ ಹಣವನ್ನು ವಿನಯ್ ಎಂಬಾತನ ಕೈಗೆ ನೀಡುವಂತೆ ಸೂಚಿಸಿದಾಗ, ರಾಯಚೂರು ಲೋಕಾಯುಕ್ತ ಡಿವೈಎಸ್‌ಪಿ ಲೋಕೇಶ್ ನೇತೃತ್ವದ ತಂಡ ದಾಳಿ ನಡೆಸಿ ಇಬ್ಬರನ್ನೂ ವಶಕ್ಕೆ ಪಡೆದಿದೆ.

₹136 ಕೋಟಿ ಟೆಂಡರ್ ನಿತ್ಯ 12.5 ಟನ್ ತುಪ್ಪ: ಡಿ.ಕೆ.ಸುರೇಶ್

ತಿರುಪತಿಗೆ ನಂದಿನಿ ತುಪ್ಪ

ಬೆಂಗಳೂರು: ತಿರುಪತಿಗೆ ನಂದಿನಿ ತುಪ್ಪ ಪೂರೈಕೆಗೆ 136 ಕೋಟಿ ರೂ. ಮೊತ್ತದಲ್ಲಿ ಬಮೂಲ್ ಟೆಂಡರ್ ಪಡೆದಿದ್ದು, ಪ್ರತಿನಿತ್ಯ 12.5 ಟನ್‌ನಂತೆ ಮುಂದಿನ 6 ತಿಂಗಳು ತುಪ್ಪ ಸರಬರಾಜಾಗಲಿದೆ. ಬಮುಲ್ ಒಕ್ಕೂಟ ಟಿಟಿಡಿ ಜೊತೆ ಪ್ರತ್ಯೇಕವಾಗಿ ಒಪ್ಪಂದ ಮಾಡಿಕೊಂಡಿದೆ ಎಂದು ಬಮುಲ್ ಅಧ್ಯಕ್ಷ ಸಂಸದ ಡಿ.ಕೆ. ಸುರೇಶ್ ತಿಳಿಸಿದರು.

ತಿರುಪತಿಗೆ ತುಪ್ಪ ಪೂರೈಕೆ ವಾಹನಗಳಿಗೆ ಹಸಿರು ಬಾವುಟ ತೋರಿ ಬೀಳ್ಕೊಟ್ಟ ನಂತರ ಬಮೂಲ್ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಂದಿನ 6 ತಿಂಗಳ ಕಾಲ ತಿರುಮಲ ಸನ್ನಿಧಾನಕ್ಕೆ ಬಮುಲ್‌ನಿಂದ 20 ಲಕ್ಷ ಕೆ.ಜಿ ತುಪ್ಪವನ್ನು ಸರಬರಾಜು ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸಾಗಾಣಿಕೆಗೆ ಡಿಜಿಟಲ್ ಲಾಕ್ ತಂತ್ರಜ್ಞಾನ ಬಳಸಿಕೊಳ್ಳಲಾಗಿದೆ. ನಾವು ಕೊಟ್ಟ ಪಾಸ್‌ವರ್ಡ್ ಅಲ್ಲಿ ನಮೂದಿಸಿದರೆ ಮಾತ್ರ ತೆರೆಯಬಹುದು. ಗ್ರಾಹಕರಿಗೂ ಸಹ ಇದೆ ರೀತಿ ಗುಣಮಟ್ಟದ ಪದಾರ್ಥ ನೀಡುತ್ತಿದ್ದೇವೆ. ನಂದಿನಿ ಹೆಸರನ್ನು ದುರ್ಬಳಕೆ ಮಾಡಿಕೊಂಡು ಮಾರುಕಟ್ಟೆಯಲ್ಲಿ ಅಕ್ರಮ ಎಸಗುತ್ತಿರುವವರ ವಿರುದ್ಧ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೇ ಅಂತಹವರ ವಿರುದ್ಧ ಒಕ್ಕೂಟದಿಂದ ದೂರುಗಳನ್ನು ನೀಡಲಾಗಿದೆ ಎಂದರು.

ನಾವು ಈಗ 1 ಕೋಟಿ ಲೀಟರ್ ಹಾಲಿನ ಸಂಗ್ರಹಣೆ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ವಿಶೇಷ ಹಾಲಿನ ಉತ್ಪನ್ನಗಳನ್ನು ಮಾರುಕಟ್ಟೆಗೆ ತರುವ ಬಗ್ಗೆ ಆಲೋಚನೆಯಿದೆ. ದೇಸಿ ತಳಿ ಹಾಲು, ಕೊಬ್ಬು ರಹಿತ, ಲ್ಯಾಕ್ಟೋಸ್ ಫ್ರೀ, ಪ್ರೋಬಯಾಟಿಕ್ ಮೊಸರು ಹೀಗೆ ಅನೇಕ ಉತ್ಪನ್ನಗಳ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ಮಾರುಕಟ್ಟೆಗೆ ಅನುಗುಣವಾಗಿ ನಾವು ನೀಡಬೇಕಿದೆ. ಇದರ ಬಗ್ಗೆ ಒಂದಷ್ಟು ಸಂಶೋಧನೆ ಕೂಡ ನಡೆಸುತ್ತಿದ್ದೇವೆ ಎಂದರು.



ದರ ಏರಿಕೆ ಪ್ರಸ್ತಾವನೆ ಸದ್ಯಕ್ಕಿಲ್ಲ

ಸದ್ಯಕ್ಕೆ ಹಾಲಿನ ದರ ಏರಿಕೆ ಪ್ರಸ್ತಾವನೆ ಇಲ್ಲ. ಹಾಲಿನ ದರ ಮಾರುಕಟ್ಟೆಯಲ್ಲಿ ಎಷ್ಟಿದೆ ಎಂದು ಅಧ್ಯಯನ ಮಾಡಲಾಗುವುದು. ನಮ್ಮಲ್ಲೇ ಒಂದಷ್ಟು ಲೋಪದೋಷಗಳಿವೆ. ಅದನ್ನು ಸರಿಪಡಿಸಲು ಸರ್ಕಾರದ ಮುಂದೆ ಅನುಮತಿ ಕೇಳುತ್ತೇವೆ. ಉತ್ಪನ್ನಗಳ ಪ್ಯಾಕಿಂಗ್ ಸಲಕರಣೆಗಳ ಖರೀದಿ ವೆಚ್ಚ ಹೆಚ್ಚಳವಾಗುತ್ತಿದೆ. ಈ ಬಗ್ಗೆ ಕೆಎಂಎಫ್ ಜೊತೆ ಮಾತನಾಡಿ ಚಿಂತನೆ ಮಾಡುತ್ತೇವೆ. ಖಾಸಗಿಯವರು ಹಾಲಿನ ದರವನ್ನು 2 ರೂಪಾಯಿ ಹೆಚ್ಚಳ ಮಾಡಿದ್ದಾರೆ. ನಾವು ಸರ್ಕಾರದ ಅಧೀನದಲ್ಲಿ ಇರುವ ಕಾರಣಕ್ಕೆ ಇದನ್ನು ಸರ್ಕಾರದ ಗಮನಕ್ಕೆ ತರುತ್ತೇವೆ. ನಾವು ಗುಣಮಟ್ಟದ ಪದಾರ್ಥ ನೀಡಬೇಕು ಎನ್ನುವ ಗುರಿ ಹೊಂದಿದ್ದೇವೆ ಎಂದರು.

ದಿನಕ್ಕೆ 20 ಲಕ್ಷ ಲೀಟರ್ ಹಾಲು ಸಂಗ್ರಹ ಗುರಿ

ಬಮುಲ್‌ನಲ್ಲಿ ಪ್ರತಿನಿತ್ಯ 17.5 ಲಕ್ಷ ಲೀಟರ್ ಹಾಲನ್ನು ಪ್ರತಿನಿತ್ಯ ಶೇಖರಣೆ ಮಾಡಲಾಗುತ್ತಿದೆ. ಈ ವರ್ಷದ ನಮ್ಮ ಗುರಿ 20-21 ಲಕ್ಷ ಲೀಟರ್ ಇದೆ. ಹಾಲಿನ ಹೆಚ್ಚಳಕ್ಕೆ ಉತ್ಪಾದನಾ ಸಂಘಗಳಲ್ಲಿ ವಿಶೇಷ ತರಬೇತಿ ನೀಡಲಾಗುತ್ತಿದೆ. ಹೆಚ್ಚಿನ ಹೆಣ್ಣು ಕರುಗಳೇ ಆಗಬೇಕು ಎಂದು ಕಳೆದ ಜನವರಿಯಿಂದ ಕಾರ್ಯಕ್ರಮ ರೂಪಿಸಿ ಪ್ರತಿಹಂತದಲ್ಲಿಯೂ ಮೂರು ಲಕ್ಷ ಸೆಮನ್ಸ್ ಖರೀದಿ ಮಾಡಿ ರಾಸುಗಳಿಗೆ ಹಾಕಲಾಗುತ್ತಿದೆ. ಹಸುಗಳ ಬೆಳವಣಿಗೆ, ಆರೋಗ್ಯದ ಬಗ್ಗೆ ತರಬೇತಿ ನೀಡಲಾಗುತ್ತಿದೆ ಎಂದರು.

ತಂತ್ರಜ್ಞಾನಕ್ಕೆ ಸಚಿವ ಪರಮೇಶ್ವರ ಚಾಲನೆ

112 ಸೇವೆಯಲ್ಲಿ ಎಐ

ಬೆಂಗಳೂರು: ಸಿಲಿಕಾನ್ ಸಿಟಿಯ ರಕ್ಷಣಾ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ನಗರ ಪೊಲೀಸ್ ಇಲಾಖೆಯು ನಮ್ಮ 112 ಸೇವೆ ಬಹುಭಾಷಾ ಎಐ ವ್ಯವಸ್ಥೆಯನ್ನು ಜಾರಿಗೆ ತಂದಿದೆ.

ಬುಧವಾರ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ ಈ ಹೊಸ ತಂತ್ರಜ್ಞಾನಕ್ಕೆ ಚಾಲನೆ ನೀಡಿದರು.

ದೇಶದಲ್ಲೇ ಮೊದಲು: 10ಕ್ಕೂ ಹೆಚ್ಚು ಭಾಷೆಗಳಲ್ಲಿ ಲಭ್ಯ: ದೇಶದಲ್ಲಿ ಮೊದಲ ಬಾರಿಗೆ ಇಂತಹ ಸುಧಾರಿತ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ಜಾರಿಗೆ ತರಲಾಗಿದೆ. ಕೃತಕ ಬುದ್ಧಿಮತ್ತೆ (ಎಐ) ಆಧರಿತ ಈ ಸೇವೆಯು ಕನ್ನಡ, ಹಿಂದಿ, ತಮಿಳು, ಮಲೆಯಾಳ, ಮರಾಠಿ, ಅಸ್ಸಾಮಿ ಸೇರಿದಂತೆ ಪ್ರಮುಖ ಭಾರತೀಯ ಭಾಷೆಗಳು ಮಾತ್ರವಲ್ಲದೆ ವಿದೇಶಿ ಭಾಷೆಗಳಾದ ಸ್ಪ್ಯಾನಿಷ್, ಫ್ರೆಂಚ್



ಆದಿತ್ಯ ಮ್ಯಾಗೇರಿ ಕುಟುಂಬಕ್ಕೆ ನ್ಯಾಯ ಸಿಗವರೆಗೂ ಹೋರಾಟ ನಿಲ್ಲುವುದಿಲ್ಲ ಎಂದು ಎಚ್ಚರಿಸಿದ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೂ ಮನವಿ ಸಲ್ಲಿಸಿದರು. ಇಂತಹ ಘಟನೆ ಮರುಕಳಿಸಿದಂತೆ ಪೊಲೀಸ್ ವ್ಯವಸ್ಥೆಯಲ್ಲಿ ಸುಧಾರಣೆ ತರುವಂತೆಯೂ ಸರ್ಕಾಕ್ಕೆ ಸಲ್ಲಿಸಿದ ಮನವಿಯಲ್ಲಿ ಕಾರ್ಯಕರ್ತರು ಒತ್ತಾಯಿಸಿದ್ದಾರೆ.

ಪ್ರತಿಭಟನೆಯಲ್ಲಿ ಮಾಜಿ ಶಾಸಕಿ ಸೀಮಾ ಮಸೂತಿ, ವಕೀಲ ಶಿವಾನಂದ ಕವಳಿ, ಭೀಮರಾವ್ ಸವಣೂರ, ಶ್ರೀಶೈಲ ಕಮತಿ, ಎಬಿವಿಪಿ ಕಾರ್ಯಕರ್ತರಾದ ಸಚಿನ್ ಕೋಟ್ಯಾನ, ಅಭಿಷೇಕ ದೊಡಮನಿ, ಸುದರ್ಶನ ಹೆಗಡೆ, ಗೋಪಾಲ ಸುಲಾಖೆ ಸೇರಿದಂತೆ ವಿವಿಧ ಕಾಲೇಜಿನ ನೂರಾರು ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

> **ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ಆತ್ಮಹತ್ಯೆಗೆ ಕಾರಣರಾದ ಪೊಲೀಸರ ರಕ್ಷಿಸುವ ಪ್ರಶ್ನೆಯೇ ಇಲ್ಲ. ಪ್ರಾಥಮಿಕ ತನಿಖೆ ಆಧರಿಸಿ, ಈಗಾಗಲೇ ಮೂವರನ್ನು ಅಮಾನತುಗೊಳಿಸಲಾಗಿದೆ. ಸಂಪೂರ್ಣ ಪಾರದರ್ಶಕ ತನಿಖೆ ಬಳಿಕ ಹಿರಿಯ ಅಧಿಕಾರಿಗಳು ಪ್ರಕರಣದಲ್ಲಿ ಇದ್ದರೂ, ಅವರನ್ನೂ ಸಹ ಅಮಾನತುಗೊಳಿಸಲಾಗುವುದು.**
> ■ **ಎನ್.ಶಶಿಕುಮಾರ್, ಹು-ಧಾ ಪೊಲೀಸ್ ಆಯುಕ್ತರು**

ಪೊಲೀಸ್ ಕಿರುಕುಳಕ್ಕೆ ವಿದ್ಯಾರ್ಥಿ ಆತ್ಮಹತ್ಯೆ

◆ **ಧಾರವಾಡ:** ಪೊಲೀಸರ ಕಿರುಕುಳಕ್ಕೆ ಬೇಸತ್ತು ಕಿಟಲ್ ಕಾಲೇಜಿನ ಬಿಎಸ್ಸಿ ಓದುತ್ತಿದ್ದ ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ(20) ಆತ್ಮಹತ್ಯೆಗೆ ಶರಣದ ಘಟನೆ ಮಂಗಳವಾರ ರಾತ್ರಿ ನಡೆದಿದೆ. ಗಾಂಜಾ ಪ್ರಕರಣದಲ್ಲಿ ಲಂಚ ಕೇಳಿರುವುದೇ ವಿದ್ಯಾರ್ಥಿ ಸಾವಿಗೆ ಕಾರಣ ಎಂದು ತಿಳಿದು ಬಂದಿದೆ. ಶನಿವಾರ ಗಾಂಜಾ ಸೇವನೆ ಪ್ರಕರಣದಲ್ಲಿ ತಪಾಸಣೆಗೆ ಒಳಗಾದ ಆದಿತ್ಯ ಗಾಂಜಾ ಸೇವನೆ ಮಾಡಿಲ್ಲ ಎಂಬ ವರದಿ ದೃಢಪಟ್ಟಿದೆ. ಆದಾಗ್ಯೂ 10 ಸಾವಿರ ಬೇಡಿಕೆ ಇಟ್ಟು, ಹಣ ಕೊಡದಿದ್ದರೆ ಅನ್ಯ ಅನ್ಯ ಪ್ರಕರಣ ದಾಖಲಿಸುವ ಬೇರಿಕೆ ಪೊಲೀಸರು ಹಾಕಿದ್ದರು ಎನ್ನಲಾಗಿದೆ.



10 ಸಾವಿರ ನೀಡಲಾಗದ ಆದಿತ್ಯ 2 ಸಾವಿರ ಫೋನ್ ಪೇ ಮಾಡಿದ್ದಾನೆ. ಪುನಃ 2 ಸಾವಿರ ಕೇಳಿದ್ದು, ಈ ಹಣ ಹೊಂದಿಸಲಾಗದ ಆದಿತ್ಯ ಮರ್ಯಾದೆಗೆ ಅಂಜಿ ಗಿರಿನಗರದ ತಮ್ಮ ಬಾಡಿಗೆ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ವಿದ್ಯಾಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> **ನನ್ನ ಮಗ ಗಾಂಜಾ ಸೇವಿಸಿಲ್ಲ ಎಂದರೂ, ಪೊಲೀಸರು ಕರೆದೊಯ್ದು ಕಿರುಕುಳ ನೀಡಿದ್ದಾರೆ. ಅಲ್ಲದೇ, ಬಿಡುಗಡೆ ಮಾಡಲು ಲಂಚ ಕೇಳಿದ್ದಾರೆ. ಹಣ ನೀಡದಿದ್ದರೆ ಪ್ರಕರಣ ದಾಖಲಿಸುವ ಬೆದರಿಕೆಯೂ ಹಾಕಿರುವ ಕುರಿತು ಮಗ ಹೇಳಿದ್ದು, ಇದಕ್ಕೆ ಅಂಜಿ ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮಗನ ಸಾವಿಗೆ ನ್ಯಾಯ ಬೇಕು.**
> ■ **ಕವಿತಾ ಮ್ಯಾಗೇರಿ, ಆದಿತ್ಯ ತಾಯಿ**

ಕುಟುಂಬಕ್ಕೆ ನ್ಯಾಯ ಸಿಗುವವರೆಗೂ ಹೋರಾಟ: ಜೋಶಿ

◆ **ಹುಬ್ಬಳ್ಳಿ:** ಧಾರವಾಡ ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣದಲ್ಲಿ ಕುಟುಂಬಕ್ಕೆ ನ್ಯಾಯ ಸಿಗುವವರೆಗೂ ಹೋರಾಟ ನಡೆಸುವುದಾಗಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಎಚ್ಚರಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ಧಾರವಾಡಕ್ಕೆ ಓದಲು ಬಂದಿದ್ದ ಬಾಗಲಕೋಟೆ ಮೂಲದ ವಿದ್ಯಾರ್ಥಿ ಆದಿತ್ಯ ಮ್ಯಾಗೇರಿ ಆತ್ಮಹತ್ಯೆ ಅತ್ಯಂತ ನೋವಿನ ಸಂಗತಿ ಎಂದು ತೀವ್ರ ಬೇಸರ ವ್ಯಕ್ತಪಡಿಸಿರುವ ಸಚಿವರು, ಅಮಾಯಕ ವಿದ್ಯಾರ್ಥಿಯನ್ನು ಈ ಪ್ರಕರಣದಲ್ಲಿ ಸಿಲುಕಿಸುವ ಪ್ರಯತ್ನ ನಡೆದಿದೆ ಎಂದು ಆರೋಪಿಸಿದ್ದಾರೆ. ವಿದ್ಯಾರ್ಥಿ ಆತ್ಮಹತ್ಯೆ ಪ್ರಕರಣದ ಬಗ್ಗೆ ಶೀಘ್ರವೇ ನ್ಯಾಯಯುತ ತನಿಖೆ ನಡೆಸುವಂತೆ ಹಾಗೂ ಪ್ರಕರಣದಲ್ಲಿ ಭಾಗಿಯಾದ ತಪ್ಪಿತಸ್ಥ ಪೊಲೀಸ್ ಇನ್ಸಪೆಕ್ಟರ್ ಮತ್ತು ಸಿಬ್ಬಂದಿಯನ್ನು ಕೂಡಲೇ ಅಮಾನತುಗೊಳಿಸಿ, ಕಠಿಣ ಕ್ರಮ ಕೈಗೊಳ್ಳಬೇಕೆಂದು ಪೊಲೀಸ್ ಆಯುಕ್ತರಿಗೆ ದೂರವಾಣಿ ಕರೆ ಮಾಡಿ ಸೂಚನೆ ನೀಡಿದ್ದಾರೆ. ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ತೀವ್ರ ಹದಗೆಟ್ಟಿದ್ದು, ರಾಜ್ಯ ಸರ್ಕಾರ ಇಡೀ ಪ್ರಕರಣದ ನೈತಿಕ ಹೊಣೆ ಹೊರಬೇಕು ಮತ್ತು ಮೃತ ವಿದ್ಯಾರ್ಥಿಯ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಸಚಿವ ಜೋಶಿ ಆಗ್ರಹಿಸಿದ್ದಾರೆ.

ಪ್ರಾಣಿ, ಪಕ್ಷಿಗಳಿಗೆ ದೊರೆಯದ ಸಮರ್ಪಕ ಚಿಕಿತ್ಸೆ

ಪಶುಸಂಗೋಪನಾ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ

▸ **ವಾಗೀಶ ವೀ. ಪಾಟೀಲ**

ದಿಗಂತ ವಿಶೇಷ

◆ **ರಾಯಚೂರು:** ಜಿಲ್ಲಾ ಪಶುಸಂಗೋಪನಾ ಇಲಾಖೆಯಲ್ಲಿ ಮೂರರಲ್ಲಿ ಒಂದು ಭಾಗಕ್ಕಿಂತ ಕಡಿಮೆ ಸಿಬ್ಬಂದಿ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಇನ್ನು ಎರಡು ಭಾಗದ ಸಿಬ್ಬಂದಿ ಕೊರತೆ ಇರುವುದರಿಂದ ಸಮಯಕ್ಕೆ ಸರಿಯಾಗಿ ಜಾನುವಾರುಗಳು ಸೇರಿದಂತೆ ಇತರೆ ಪಾಣಿಗಳಿಗೆ ಚಿಕಿತ್ಸೆ ದೊರೆಯದಂತಾಗಿದೆ.

ಒಟ್ಟು ಮಂಜೂರಾದ ಮಂಜೂರಾದ 447 ಹುದ್ದೆಗಳಲ್ಲಿ 142 ಹುದ್ದೆಗಳಲ್ಲಿ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದರೆ ಬರೋಬ್ಬರಿ 305 ಹುದ್ದೆಗಳು ಖಾಲಿ ಇವೆ. ಇದರಲ್ಲಿ ಪ್ರಮುಖವಾಗಿ ಪ್ರಾಣಿಗಳಿಗೆ ಚಿಕಿತ್ಸೆ ನೀಡಬೇಕಾದ ಎ-ಗ್ರೂಪ್‌ನ ಹಿರಿಯ ಪಶುವೈದ್ಯಾಧಿಕಾರಗಳ ಮಂಜೂರಾದ 39 ಹುದ್ದೆಗಳಲ್ಲಿ ಕೇವಲ 18 ಜನರಿದ್ದು 28 ಖಾಲಿಯಿವೆ. ಇತ್ತೀಚೆಗೆ 11 ವೈದ್ಯರಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದಾರೆ. ಪಶುವೈದ್ಯಾಧಿಕಾರಿಗಳ ಒಟ್ಟು 52 ಹುದ್ದೆಗಳಲ್ಲಿ 18 ವೈದ್ಯರಿದ್ದು 34 ಹುದ್ದೆಗಳು ಖಾಲಿಯಿವೆ. ಎ-ಗ್ರೂಪ್‌ನ ಮಂಜೂರಾದ 93 ಹುದ್ದೆಗಳಲ್ಲಿ 30 ಸಿಬ್ಬಂದಿಗಳಿದ್ದರೆ 63 ಖಾಲಿಯಿವೆ.

ಆಡಳಿತ ವಿಭಾಗದ ಉಪನಿರ್ದೇಶಕರಿದ್ದರೆ ಪಾಲಿಕ್ಲಿನಿಕ್ ವಿಭಾಗದ ಉಪನಿರ್ದೇಶಕರ ಹುದ್ದೆ ಖಾಲಿ ಇದೆ. ಬಿ-ಗ್ರೂಪ್‌ನ 7 ಹುದ್ದೆಗಳಲ್ಲಿ ಮೂವರು ಸಿಬ್ಬಂದಿಗಳಿದ್ದು ನಾಲ್ಕು ಖಾಲಿ ಇವೆ. ಸಿ-ಗ್ರೂಪ್‌ನಲ್ಲಿ 162 ಹುದ್ದೆಗಳಲ್ಲಿ 78 ಸಿಬ್ಬಂದಿಗಳಿದ್ದು, 84 ಖಾಲಿಯಿವೆ.

ಇದರಲ್ಲಿ ಜಾನುವಾರು ಅಧಿಕಾರಿಗಳ 23ರಲ್ಲಿ 11 ಇದ್ದು 12 ಹುದ್ದೆಗಳೂ ಖಾಲಿಯಿವೆ. 32 ಹಿರಿಯ ಪಶುವೈದ್ಯಕೀಯ ಪರೀಕ್ಷಕರಲ್ಲಿ 15 ಸಿಬ್ಬಂದಿಗಳಿದ್ದರೆ 17 ಖಾಲಿ ಇವೆ. ಪಶುವೈದ್ಯಕೀಯ ಪರೀಕ್ಷಕರ 47ರಲ್ಲಿ 17 ಸಿಬ್ಬಂದಿಗಳಿದ್ದರೆ 30 ಖಾಲಿಯಿವೆ. ಕಿರಿಯ ಪಶುವೈದ್ಯಕೀಯ ಪರೀಕ್ಷಕರ 40ರಲ್ಲಿ 22 ಸಿಬ್ಬಂದಿಗಳಿದ್ದು 18 ಖಾಲಿಯಿವೆ. ಇರುವ ಒಂದೇ ಲ್ಯಾಬ್ ಟೆಕ್ನಿಷಿಯನ್ ಹುದ್ದೆಯೂ ಖಾಲಿಯಿದೆ.

ಒಟ್ಟು 185 ಡಿ-ಗ್ರೂಪ್ ಹುದ್ದೆಗಳಲ್ಲಿ 185ರಲ್ಲಿ 31 ಸಿಬ್ಬಂದಿಗಳಿದ್ದರೆ 154 ಹುದ್ದೆಗಳು ಖಾಲಿಯಿವೆ.



ಶೂನ್ಯ ಸಿಬ್ಬಂದಿ ಕೇಂದ್ರ!

ಜಿಲ್ಲೆಯಲ್ಲಿ ಇರುವುದು ಒಟ್ಟು 37 ಪಶು ಚಿಕಿತ್ಸಾ ಕೇಂದ್ರಗಳು. ಇದರಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳು ಇವುಗಳಲ್ಲಿ 26 ಕೇಂದ್ರಗಳಲ್ಲಿ ವೈದ್ಯರೇ ಇಲ್ಲ. ಪಶು ಆಸ್ಪತ್ರೆಗಳು ಹಾಗೂ ಪಶು ಚಿಕಿತ್ಸಾ ಕೇಂದ್ರಗಳು ಸೇರಿ ಒಟ್ಟ 32 ಕೇಂದ್ರಗಳಲ್ಲಿ ಒಬ್ಬರೇ ಒಬ್ಬ ಸಿಬ್ಬಂದಿಗಳಿಲ್ಲ. ಈ ಕೇಂದ್ರಗಳನ್ನು ಶೂನ್ಯ ಸಿಬ್ಬಂದಿ ಕೇಂದ್ರಗಳೆಂದು ಗುರುತಿಸಲಾಗಿದೆ.

> **ಸಿಬ್ಬಂದಿ ಕೊರತೆ ಇದ್ದರೂ ಇದ್ದ ವೈದ್ಯರಿಗೆ 3ರಿಂದ 4 ಆಸ್ಪತ್ರೆಗಳ ವ್ಯಾಪ್ತಿಯಲ್ಲಿ ಚಿಕಿತ್ಸೆ ನೀಡುವುದಕ್ಕೆ ಸೂಚಿಸಿದ್ದೇವೆ. ಸಮಯ ಹೊಂದಿಸಿಕೊಂಡು ವೈದ್ಯರು ಆಯಾ ಆಸ್ಪತ್ರೆಗಳಿಗೆ ಭೇಟಿ ನೀಡಿ ಚಿಕಿತ್ಸೆ ನೀಡುತ್ತಿದ್ದಾರೆ. ಹೊರ ಗುತ್ತಿಗೆ ಆಧಾರದಲ್ಲಿ ಬಂದಿರುವ ಸಿಬ್ಬಂದಿಗಳಿಂದಲೂ ಹೆಚ್ಚುವರಿಯಾಗಿ ಕೆಲಸ ಪಡೆದುಕೊಳ್ಳಲಾಗುತ್ತಿದೆ.**
> ■ **ಪೋಮ್‌ಸಿಂಗ್.ಎಲ್, ಡಿಡಿ ಪಶುಪಾಲನಾ ಇಲಾಖೆ ರಾಯಚೂರು**

ಇದರಲ್ಲಿ 83 ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದುಕೊಳ್ಳಲಾಗಿದೆ. ಜಾನುವಾರುಗಳು, ಕುರಿ, ಮೇಕೆ ಸೇರಿದಂತೆ ಇತರೆ ಪ್ರಣಿ ಪಕ್ಷಿಗಳ ಸಂಖ್ಯೆಗನುಗುಣವಾಗಿ ಜಿಲ್ಲೆಯ ಪಶುಸಂಗೋಪನಾ ಇಲಾಖೆಯಲ್ಲಿ ಸಿಬ್ಬಂದಿಗಳಿಲ್ಲದೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯದೆ ಮೂಕ ಪ್ರಾಣಿಗಳ ವೇದನೆ ಕೇಳುವವರಿಲ್ಲದಂತಾಗಿದೆ.

ಮಹೇಶವಾಡಗಿ ಸೇತುವೆ ಸಂಚಾರಕ್ಕೆ ಮುಕ್ತ
ಮರಳುಗಳ್ಳರ ಕಣ್ಣು ಕೃಷ್ಣಾ ನದಿಯತ್ತ

◆ **ರಬಕವಿ-ಬನಹಟ್ಟಿ:** ಸಮೀಪದ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಮಹೇಶವಾಡಗಿ ಸೇತುವೆ ನೀರಿನ ಮಟ್ಟ ಕುಸಿತ ಕಾರಣ ಬುಧವಾರದಿಂದ ಸಂಚಾರಕ್ಕೆ ಮುಕ್ತವಾಗಿದೆ. ವರ್ಷವಿಡೀ ಬಹುತೇಕ ದಿನಗಳು ಮುಚ್ಚುವ ಈ ಸೇತುವೆ ಕೇವಲ ಬೇಸಿಗೆ ಸಂದರ್ಭ ಹೆಚ್ಚಾಗಿ ಮೇ ತಿಂಗಳಲ್ಲಿ ಸಂಚಾರಕ್ಕೆ ಅವಕಾಶವಿರುತ್ತದೆ. ಅಥಣಿಯಿಂದ ರಬಕವಿ-ಬನಹಟ್ಟಿ ಕಡೆಗೆ ಬೈಕ್ ಹಾಗೂ ಸೈಕಲ್ ಮೂಲಕ ತೆರಳುವ ಜನತೆ ಬೋಟ್‌ಗಳ ಮೂಲಕ ಸಾಗುತ್ತಾರೆ. ಇದೀಗ ಸೇತುವೆ ಸಂಚಾರಕ್ಕೆ ಅವಕಾಶವಾಗಿರುವ ಕಾರಣ ಬೋಟ್ ಸಂಚಾರ ಸ್ಥಗಿತಗೊಳಿಸಲಾಗಿದೆ.



ಮರಳು ಮಾಫಿಯಾ?: ಇದೀಗ ನೀರಿನ ಮಟ್ಟ ಭಾರಿ ಪ್ರಮಾಣದಲ್ಲಿ ಕುಸಿದಿರುವ ಕಾರಣ ಕೃಷ್ಣೆಯ ಒಡಲೊಳಗಿನ ಮರಳನ್ನು ಎತೇಚ್ಛವಾಗಿ ಅಕ್ರಮವಾಗಿ ಸಾಗಿಸಲು ಸುತ್ತಲಿನ ಗ್ರಾಮಗಳ ಕೆಲ ಖದೀಮರು ಕಣ್ಣು ಹಾಕುತ್ತಿರುವುದು ಹೊಸದೇನಲ್ಲ. ಈಗಾಗಲೇ ಸಂಬಂಧಿಸಿದ ಇಲಾಖೆಯು ಮುನ್ನೆಚ್ಚರಿಕಾ ಕ್ರಮವಾಗಿ ಮರಳು ಅಕ್ರಮ ದಂಧೆ ನಡೆಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಕ್ಕೆ ಮುಂದಾಗಿದ್ದು, ಯಾರೇ ಅಕ್ರಮ ದಂಧೆ ನಡೆಸಿದ್ದಲ್ಲಿ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವದೆಂದು ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದ್ದಾರೆ.

> **ಸರ್ಕಾರದ ಸಂಪತ್ತನ್ನು ಲೂಟಿ ಮಾಡುವ ವ್ಯವಸ್ಥೆ ಹಾಗೂ ಪಿತೂರಿಯಲ್ಲಿರುವ ಜನತೆಗೆ ಕಾನೂನು ಪ್ರಕಾರ ಕ್ರಮದೊಂದಿಗೆ ದಂಡ ವಿಧಿಸಲಾಗುವುದು. ಇದೀಗ ಕೃಷ್ಣೆಯಲ್ಲಿ ನೀರಿನ ಮಟ್ಟ ಸಂಪೂರ್ಣ ಕುಸಿದಿದೆ. ಸಾರ್ವಜನಿಕರು ಮಿತವ್ಯಯವಾಗಿ ನೀರನ್ನು ಬಳಕೆ ಮಾಡಬೇಕು.**
> ■ **ಗಿರೀಶ ಸ್ವಾದಿ, ತಹಶೀಲ್ದಾರ್**

ವೈದ್ಯರ ನಿರ್ಲಕ್ಷ್ಯಕ್ಕೆ ಮತ್ತೊಂದು ನವಜಾತ ಶಿಶು ಬಲಿ: ಪೋಷಕರ ಆಕ್ರೋಶ

◆ **ಸಿಂಧನೂರು:** ಹೆರಿಗೆ ವೇಳೆ ವೈದ್ಯರು ತೋರಿದ ನಿರ್ಲಕ್ಷ್ಯದಿಂದ ನವಜಾತ ಶಿಶು ಸಾವನ್ನಪ್ಪಿದ್ದು, ಮಗು ಸಾವಿಗೆ ತಾಯಿ ಮಕ್ಕಳ ಆಸ್ಪತ್ರೆಯ ವೈದ್ಯರ ನಿರ್ಲಕ್ಷ್ಯವೇ ಕಾರಣವೆಂದು ಆರೋಪಿಸಿ ಕುಟುಂಬಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ಮಸ್ಕಿ ತಾಲೂಕಿನ ಹಾಲಾಪೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಜಂಗಮರಹಳ್ಳಿ ಗ್ರಾಮದ ಪಾರಮ್ಮ ಗುಂಡಪ್ಪ ಎನ್ನುವವರು ತಾಯಿ ಮಕ್ಕಳ ಆಸ್ಪತ್ರೆಗೆ ಹೆರಿಗೆಗೆಂದು ದಾಖಲಾಗಿದ್ದಾರೆ. ಕಳೆದೊಂದು ವಾರದಿಂದ ಸಹಜ ಹೆರಿಗೆ ಆಗುತ್ತದೆಂದು ಚಿಕಿತ್ಸೆ ನೀಡುತ್ತಲೇ ಬಂದ ವೈದ್ಯರು ಮಂಗಳವಾರ ಬೆಳಿಗ್ಗೆ ಏಕಾಏಕಿ ಮಗುವಿನ ಉಸಿರಾಟ ಸರಿಯಿಲ್ಲ ಎಂದು ಶಸ್ತ್ರಚಿಕಿತ್ಸೆ ಮಾಡಿದ್ದು, ಮಗು ಸಾವನ್ನಪ್ಪಿದ ಬಗ್ಗೆ ಹೇಳಿದ್ದಾರೆ. ಈ ಮಗುವಿನ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಕುಟುಂಬಸ್ಥರು ಮತ್ತು ಸಾರ್ವಜನಿಕರು


ಸಾವಾಗೀಡಾದ ಮಗುವನ್ನು ಆಸ್ಪತ್ರೆಯಲ್ಲಿರಿಸಿಕೊಂಡು ವೈದ್ಯರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕಾಡುಕೋಣ ಬೇಟೆ: ಓರ್ವನ ಬಂಧನ



◆ **ಶಿರಸಿ:** ತಾಲೂಕಿನ ಹುಲೇಕಲ್ ವಲಯದ ಮತದೇವಳ ಗ್ರಾಮದ ಅರಣ್ಯ ವ್ಯಾಪ್ತಿಯಲ್ಲಿ ಕಾಡುಕೋಣವನ್ನು ಬೇಟೆಯಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹುಲೇಕಲ್ ಅರಣ್ಯ ಇಲಾಖೆ ಅಧಿಕಾರಿಗಳು ಓರ್ವನನ್ನು ಬಂಧಿಸಿದ್ದು, ಉಳಿದ ನಾಲ್ವರು ಆರೋಪಿಗಳಿಗಾಗಿ ಶೋಧ ಕಾರ್ಯ ತೀವ್ರಗೊಳಿಸಿದ್ದಾರೆ.

ಮತದೇವಳ ಗ್ರಾಮದ ಅರಣ್ಯ ಸರ್ವೆ ನಂಬರ್ 226ರಲ್ಲಿ ಕಾಡುಕೋಣವನ್ನು ಬೇಟೆಯಾಡಿರುವ ಬಗ್ಗೆ ಖಚಿತ ಮಾಹಿತಿ ಲಭಿಸಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿದರು. ಸೋದೆಪೇಟೆಯ ಅಬ್ದುಲ್ ಸಲೀಮ್ ಅಬ್ದುಲ್‌ರಬ್ಬು ಸಾಬ (44) ಎಂಬಾತನನ್ನು ಬಂಧಿಸಲಾಗಿದ್ದು, ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಈ ಪ್ರಕರಣದಲ್ಲಿ ಒಟ್ಟು ಐವರು ಭಾಗಿಯಾಗಿದ್ದು, ಉಳಿದ ಆರೋಪಿಗಳಾದ ಹಸನ್ ಮೌಲಾಲಿ ಬೆಣ್ಣಿಸಾಬ (30), ಹಾನ ಅಬ್ದುಲ್ ರಬ್ಬುಸಾಬ (37), ಸಲಿಂ ಉಸ್ಮಾನಸಾಬ (32) ಹಾಗೂ ಅಬ್ದುಲ್ ಕರಿಂ ಅಬ್ದುಲ್‌ಲಾಂಸಾಬ್ (35) ಪ್ರಸ್ತುತ ತಲೆಮರೆಸಿಕೊಂಡಿದ್ದಾರೆ. ಆರೋಪಿಗಳ ಪತ್ತೆಗಾಗಿ ಅಧಿಕಾರಿಗಳ ತಂಡ ಬಲೆ ಬೀಸಿದೆ.

ಘಟನಾ ಸ್ಥಳದಿಂದ ಕಾಡುಕೋಣದ ಮಾಂಸದ ಅವಶೇಷಗಳು, ಪ್ಲಾಸ್ಟಿಕ್ ಚೀಲ ಹಾಗೂ ಹೆಡ್ ಬ್ಯಾಟರಿ ಬೆಲ್ಟ್‌ಗಳನ್ನು ಜಪ್ತಿ ಮಾಡಲಾಗಿದೆ. ಪಶು ವೈದ್ಯಾಧಿಕಾರಿ ಪ್ರಶಾಂತ ಕೆ.ವಿ. ಹಾಗೂ ವಿಧಿ ವಿಜ್ಞಾನ ತಜ್ಞ ಮಧುಸೂಧನ ಅವರ ಮಾರ್ಗದರ್ಶನದಲ್ಲಿ ಅವಶೇಷಗಳ ಮಾದರಿಗಳನ್ನು ಸಂಗ್ರಹಿಸಿ, ಹೆಚ್ಚಿನ ತಪಾಸಣೆಗಾಗಿ ವಿಧಿ ವಿಜ್ಞಾನ ಕೇಂದ್ರಕ್ಕೆ ಕಳುಹಿಸಿಕೊಡಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ ಹಿಂದೂರಾವ್ ಸೂರ್ಯವಂಶಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹರೀಶ್ ಸಿ.ಎನ್ ಅವರ ಮಾರ್ಗದರ್ಶನದಲ್ಲಿ, ವಲಯ ಅರಣ್ಯಾಧಿಕಾರಿ ಶಿವಾನಂದ ಎಸ್. ನಿಂಗಾಣಿ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆದಿದೆ. ತಂಡದಲ್ಲಿ ಉಪ ವಲಯ ಅರಣ್ಯಾಧಿಕಾರಿ ಶರತ್ ಐಹೊಳ್ಳಿ, ಗಸ್ತು ಅರಣ್ಯ ಪಾಲಕ ಪ್ರಮೋದ ನಾರಾಯಣ ನಾಯ್ಕ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.


ಬಸವನಬಾಗೇವಾಡಿ: ತಾಲೂಕಿನ ಕೆಲವೆಡೆ ಬುಧವಾರ ಸಂಜೆ ಮಳೆ ಸುರಿಯಿತು. ಬಿಸಿಲ ಝಳದಿಂದ ಬೇಸತ್ತ ಜನತೆಗೆ ತಂಪೆರೆಯಿತು.

ಕ್ರಿಮಿನಲ್ ಮಿಸಲೇನಿಯಸ್: 72/2026
ಮಾನ್ಯ ಹಿರಿಯ ದಿವಾಣಿ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಕುಂದಗೋಳ ಇವರ ನ್ಯಾಯಾಲಯದಲ್ಲಿ
ಅರ್ಜಿದಾರ : ಬಶೀರ ಅಹಮ್ಮದ ತಂದೆ ಬೂಡೇನಸಾಬ ಶೇಖಸನದಿ ವಯಾ: 47 ವರ್ಷ. ಉದ್ಯೋಗ: ಕೂಲಿ ಸಾ॥ ಆನಂದ ನಗರ, ಹುಬ್ಬಳ್ಳಿ ಜಿ॥ ಹುಬ್ಬಳ್ಳಿ ಜಿ॥ ಧಾರವಾಡ
ವಿರುದ್ಧ
ಎದುರುಗಾರರು : ಮಾನ್ಯ ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಕಾರ್ಯಾಲಯ ಕುಂದಗೋಳ. [ಜನನ-ಮರಣ ನೋಂದಣಿ ಅಧಿಕಾರಿಗಳು ಕುಂದಗೋಳ] ಸಾ॥ ತಾ॥ ಕುಂದಗೋಳ
ಆದೇಶ 5, ನಿಯಮ 20 (1) (1ಎ) ರ ಅಡಿ
ಸಾರ್ವಜನಿಕ ನೋಟಿಸ್
ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರನ ಸಹೋದರಿಯಾದ ಸಮಸುನಿಸಾ ತಂದೆ ಬೂಡೇನಸಾಬ ಶೇಖಸನದಿ ಇವರು ದಿನಾಂಕ: 10-06-1991 ರಂದು ಕುಂದಗೋಳ ತಾಲೂಕ ಕುಂದಗೋಳ ಪಟ್ಟಣದ ಅರ್ಜಿದಾರನ ತಾಯಿಯ ತವರು ಮನೆಯಲ್ಲಿ ಮರಣ ಹೊಂದಿರುವದಾಗಿ ಮರಣದ ಕುರಿತು ನೋಂದಾಯಿಸಿಕೊಂಡು ಮರಣ ಪ್ರಮಾಣ ಪತ್ರ ಪೂರೈಸುವಂತೆ ಕೋರಿ ಮೇಲ್ಕಂಡ ಎದುರುಗಾರರ ವಿರುದ್ಧ ಮಾನ್ಯ ಹಿರಿಯ ದಿವಾಣಿ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಕುಂದಗೋಳ ಇವರಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯ ವಿಚಾರಣೆಯನ್ನು ದಿನಾಂಕ: 08/05/2026 ರಂದು ಮುಂಜಾನೆ 10:30 ಕ್ಕೆ ನೇಮಿಸಿದ್ದು, ಮೇಲ್ಕಂಡ ವಿಷಯಕ್ಕೆ ಯಾವುದೆ ತಕರಾರು ಇದ್ದಲ್ಲಿ ಸದರಿ ದಿನಾಂಕವಂದು ಸಲ್ಲಿಸಬೇಕು. ತಪ್ಪಿದಲ್ಲಿ ಸೂಕ್ತ ಆದೇಶ ಹೊರಡಿಸಲಾಗುವುದು ತಿಳಿಯಿರಿ.
ಈ ಹೊತ್ತು ದಿನಾಂಕ: 28/04/2026 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೊಹರು ಹಾಕಿ ಕೊಡಲ್ಪಟ್ಟಿತ್ತು.
ಕೋರ್ಟಿನ ಆಜ್ಞೆಯ ಮೇರಿಗೆ
ಸಹಿ/- ಶಿರಸ್ತೆದಾರ
ಮಾನ್ಯ ಹಿರಿಯ ದಿವಾಣಿ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಕುಂದಗೋಳ
ಸಹಿ/- ಶ್ರೀ ಆಯ್.ಎಮ್. ಕೋಣನವರ
ಅರ್ಜಿದಾರನ ಪರ ವಕೀಲರು, ಕುಂದಗೋಳ

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಂಚಾರಿ ಪೀಠ ಕಾರಟಗಿ
ಕ್ರಿಮಿನಲ್ ಮಿಸಲೇನಿಎಸ್ ನಂ: 385/2026
ಅರ್ಜಿದಾರ: 1) ಶ್ರೀಮತಿ ಗೌರಮ್ಮ ತಂದೆ ತಿಮ್ಮಪ್ಪ ಬಂಡಿ (ಗಂಡ ಯಮನಪ್ಪ) ವ: 74 ವರ್ಷ, ಉದ್ಯೋಗ: ಮನೆಗೆಲಸ ಸಾ: ವಾರ್ಡ ನಂ.02, ಗೌರಿ ಅಂಗಳದ ಹತ್ತಿರ, ಬಾಗೇವಾಡಿ, ತಾ: ಸಿರುಗುಪ್ಪ, ಜ: ಬಳ್ಳಾರಿ & ಇತರರು
ವಿರುದ್ಧ:
ಎದುರುದಾರರು: ಮಾನ್ಯ ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ, ಕಾರಟಗಿ
ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯಿದೆ. 1969 ಕಲಂ 13(3) ರಡಿಯಲ್ಲಿ ಈ ನ್ಯಾಯಾಲಯಕ್ಕೆ. 1.ತಾಯಿ ಹಾಗೂ ಅರ್ಜಿದಾರ ನಂ.2ರಿಂದ8ರವರ ಅಜ್ಜಿಯಾದ ದಿ॥ ಯಮನಮ್ಮ ಗಂಡ ತಿಮ್ಮಪ್ಪ ಇವರು ದಿನಾಂಕ: 25-04-1960 ರಂದು ಕೊಪ್ಪಳ ಜಿಲ್ಲೆ ಕಾರಟಗಿ ತಾಲೂಕಿನ ವಾರ್ಡ ನಂ.02, ಉಪ್ಪಾರ ಓಣಿ, ಕಾರಟಗಿಯಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ಅರ್ಜಿ ಕುರಿತಂತೆ ಯಾರಾದರೂ ತಕರಾರು/ ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ:19-5-2026ರ ಬೆಳಗ್ಗೆ 8-00ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು/ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷಿಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: 27-4-2086 ರಂದು ಸಹಿ ಮಾಡಿ ಈ ನ್ಯಾಯಾಲಯದ ಶೀಲು/ ಮುದ್ರೆಯೊಂದಿಗೆ ಕೊಡಲಾಗಿದೆ.
ಸ್ಥಳ: ಗಂಗಾವತಿ
ದಿ:22-4-2026
ನ್ಯಾಯಾಲಯದ ಆದೇಶ ಅನುಸಾರ
ಮಾನ್ಯ ಶಿರಸ್ತೇದಾರರು, ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಸಂಚಾರಿ ಪೀಠ ಕಾರಟಗಿ)
ಮುಖಾಂತರ : ಆರ್.ಎಚ್. ನೆರಬೆಂಚಿ
ಅರ್ಜಿದಾರರ ಪರ ವಕೀಲರು, ಗಂಗಾವತಿ


ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಂಚಾರಿ ಪೀಠ ಕಾರಟಗಿ
ಕ್ರಿಮಿನಲ್ ಮಿಸಲೇನಿಎಸ್ ನಂ: 386/2026
ಅರ್ಜಿದಾರ :1) ಶ್ರೀಮತಿ ಗೌರಮ್ಮ ತಂದೆ ತಿಮ್ಮಪ್ಪ ಬಂಡಿ (ಗಂಡ ಯಮನಪ್ಪ) ವ: 74 ವರ್ಷ, ಉದ್ಯೋಗ: ಮನೆಗೆಲಸ ಸಾ: ವಾರ್ಡ ನಂ.02, ಗೌರಿ ಅಂಗಳದ ಹತ್ತಿರ, ಬಾಗೇವಾಡಿ, ತಾ: ಸಿರುಗುಪ್ಪ, ಜಿ: ಬಳ್ಳಾರಿ & ಇತರರು
ವಿರುದ್ಧ:
ಎದುರುದಾರರು: ಮಾನ್ಯ ಮುಖ್ಯಾಧಿಕಾರಿಗಳು, ಪುರಸಭೆ ಕಾರ್ಯಾಲಯ, ಕಾರಟಗಿ
ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯಿದೆ 1969 ಅಧಿನಿಯಮ ಕಲಂ 13(3)ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರ ನಂ. 1 ರವರ ತಂದೆ ಹಾಗೂ ಅರ್ಜಿದಾರ ನಂ. 2ರಿಂದ 8 ರವರ ಅಜ್ಜನಾದ ದಿ ತಿಮ್ಮಪ್ಪ ತಂದೆ ಭೀಮಪ್ಪ ಬಂಡಿ ಇವರು ದಿನಾಂಕ: 10-05-1983 ರಂದು ಕೊಪ್ಪಳ ಜಿಲ್ಲೆ ಕಾರಟಗಿ ತಾಲೂಕಿನ ವಾರ್ಡ ನಂ.02, ಉಪ್ಪಾರ ಓಣಿ ಕಾರಟಗಿಯಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ಅರ್ಜಿ ಕುರಿತಂತೆ ಯಾರಾದರೂ ತಕರಾರು/ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ: 19-5-2026ರ ಬೆಳಗ್ಗೆ 11-00ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು/ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷಿಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: 27-4-2016 ರಂದು ಸಹಿ ಮಾಡಿ ಈ ನ್ಯಾಯಾಲಯದ ಶೀಲು/ ಮುದ್ರೆಯೊಂದಿಗೆ ಕೊಡಲಾಗಿದೆ.
ಸ್ಥಳ: ಗಂಗಾವತಿ
ದಿ:22-4-2026
ನ್ಯಾಯಾಲಯದ ಆದೇಶ ಅನುಸಾರ
ಮಾನ್ಯ ಶಿರಸ್ತೇದಾರರು, ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಸಂಚಾರಿ ಪೀಠ ಕಾರಟಗಿ)
ಮುಖಾಂತರ : ಆರ್.ಎಚ್. ನೆರಬೆಂಚಿ
ಅರ್ಜಿದಾರರ ಪರ ವಕೀಲರು, ಗಂಗಾವತಿ

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಲೇನಿಎಸ್ ನಂ: 628/2026
ಅರ್ಜಿದಾರರು:ರಾಮಣ್ಣ ತಂದೆ ದಿ॥ ಕೆಂಚಪ್ಪ ವ:55 ವರ್ಷ, ಉದ್ಯೋಗ: ಕೂಲಿ, ಸಾ:ಆಗೋಲಿ, ತಾ: ಗಂಗಾವತಿ, ಜಿ: ಕೊಪ್ಪಳ.
ವಿರುದ್ಧ
ಎದುರುದಾರರು : ಮಾನ್ಯ ಪೌರಾಯುಕ್ತರು ನಗರಸಭೆ ಕಾರ್ಯಾಲ, ಗಂಗಾವತಿ ಜಿ: ಕೊಪ್ಪಳ
ಸಂಬಂಧಪಟ್ಟವರು :
ಈ ಮೇಲೆ ತಿಳಿಸಿದ ಅರ್ಜಿದಾರಳು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ ಕಲಂ 13(3) ನಿಯಮ 9(3)ರ ಅಡಿಯಲ್ಲಿ ಅರ್ಜಿದಾರಳ ತಂದೆಯಾದ ಕೆಂಚಪ್ಪ ತಾಯಿ ಮನ್ನಮ್ಮ ಇವರು ದಿನಾಂಕ14-10-1998 ರಂದು ವಾರ್ಡ ನಂ.27, ಹರಿಜನವಾಡ, ಹಿರೇಜಂತಕಲ್, ಗಂಗಾವತಿ ತಾ॥ಗಂಗಾವತಿ ಜೀ ಕೊಪ್ಪಳ ನಗರದ ಸ್ವಂತ ಮನೆಯಲ್ಲಿ ಮರಣ ಹೊಂದಿದ್ದು, ಸದ್ರಿಯವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ಅರ್ಜಿಯನ್ನು ದಾಖಲು ಮಾಡಿದ್ದು, ಈ ಪ್ರಕರಣವು ದಿನಾಂಕ:25-05-2026ರಂದು ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿಯಲ್ಲಿ ಬೆಳಗ್ಗೆ 11-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೇ ಈ ಮೇಲೆ ತಿಳಿಸಿದ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ, ಅರ್ಜಿದಾರರ ಪರ ಏಕ ಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯುತಕ್ಕದ್ದು.
ಸ್ಥಳ : ಗಂಗಾವತಿ
ದಿ: 23-04-2026
ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಲಿಪಿಕಾಧಿಕಾರಿಗಳು
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಗಂಗಾವತಿ.
ಮುಖಾಂತರ : ಪ್ರಕಾಶಗೌಡ
ಅರ್ಜಿದಾರರ ಪರ ವಕೀಲರು

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹರಿಹರ, ಸಂಚಾರಿ ಪೀಠ, ಹೊನ್ನಾಳಿ.
ಓ.ಎಸ್ ಸಂಖ್ಯೆ :88/2025
ವಾದಿ: ಶ್ರೀಮತಿ ನೇತ್ರಾವತಿ,
ವಿರುದ್ಧ
ಪ್ರತಿವಾದಿಗಳು:ಶ್ರೀ ಹನುಮಂತಪ್ಪ ಕೆ.ಹಿ. ಹಾಗು ಇತರರು.
2ನೇ ಪ್ರತಿವಾದಿ: ಶ್ರೀ ಮತಿ ರೇಣುಕಮ್ಮ ಬಿನ್ ಲೇಟ್ ಪಾಂಡಪ್ಪ, ವಯಸ್ಸು 59ವರ್ಷ ಹಾಲಿ ವಾಸ : 25ನೇ ತೇರುಬೀದಿ ಅಂಕಸಮುದ್ರ ಗ್ರಾಮ, ಹಗರಿ ಬೊಮ್ಮನಹಳ್ಳಿ (ತಾ) ವಿಜಯನಗರ ಜಿಲ್ಲೆ, ಕರ್ನಾಟಕ
-: ಪತ್ರಿಕಾ ಪ್ರಕಟಣೆ :-
ಈ ಮೇಲ್ಕಂಡ ವಾದಿಯು, 2ನೇ ಪ್ರತಿವಾದಿಯಾದ ನಿಮ್ಮ ಹಾಗು ಇತರರ ವಿರುದ್ಧ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಪಾಲುವಿಭಾಗ ಪರಿಹಾರವನ್ನು ಕೋರಿ ಈ ನ್ಯಾಯಾಲಯದಲ್ಲಿ ಮೇಲ್ಕಂಡ ದಾವೆಯನ್ನು ಸಲ್ಲಿಸಿರುತ್ತಾರೆ. ಈ ಮಧ್ಯೆ ಈ ದಾವೆಯಲ್ಲಿ ನಿಮಗೆ ಜಾರಿ ಮಾಡಲಾದ ಸಮಗಳು, ತಾವುಗಳು ವಿಳಾಸದಲ್ಲಿ ವಾಸವಿಲ್ಲ ಎಂದು ಜಾರಿಯಾಗದೇ ಹಿಂದಿರುಗಿರುವುದರಿಂದ ಈ ಪತ್ರಿಕಾ ಪ್ರಕಟಣೆಯನ್ನು ನಿಮ್ಮ ವಿರುದ್ಧ ಮಾಡಲಾಗುತ್ತಿದೆ. ಈ ಸಂಬಂಧ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ದಾವೆಯಲ್ಲಿ ಕೋರಿರುವ ಪರಿಹಾರಕ್ಕೆ ನೀವು ಸಲ್ಲಿಸುವ ತಕರಾರು ಏನಾದರೂ ಇದ್ದಲ್ಲಿ ಈ ದಾವೆಯ ನ್ಯಾಯಾಲಯದ ಮುಂದಿನ ಮುದ್ದತ್ತು ದಿನಾಂಕ:17/06/2026 ರಂದು ಬೆಳಿಗ್ಗೆ 11-00ಗಂಟೆಗೆ ಖುದ್ದಾಗಿ ನೀವಾಗಲೀ ಯಾ ನಿಮ್ಮ ಪರ ಸೂಕ್ತ ಮಾಹಿತಿ ಪಡೆದ ವಕೀಲರಾಗಲೀ ಹಾಜರಾಗಿ ನಿಮ್ಮ ಪರ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನೀವು ಹೇಳುವುದು ಏನೂ ಇಲ್ಲ ಎಂದು ಪರಿಗಣಿಸಿ ದಾಖಲೆಗಳ ಲಭ್ಯತೆಯ ಆಧಾರದ ಮೇಲೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು. 2026ರ ಎಪ್ರೀಲ್ ತಿಂಗಳಿಂದ 4ನೇ ದಿನಾಂಕದಂದು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹರಿಹರ, ಸಂಚಾರಿ ಪೀಠ, ಹೊನ್ನಾಳಿ.
ನಾಗರಾಜ ಬಿ.ಕೆ.
ವಾದಿಯ ಪರ ವಕೀಲರು










1926ರ ವೈಶಾಖ ಶುಕ್ಲ ಚತುರ್ದಶಿ ಯಂದು ಅವರ ಜನನ. ಈ ವರ್ಷ ಇಂದು ಈ ಮಿತಿ ಇದೆ

ಹೊ. ವೆ. ಶೇಷಾದ್ರಿ ಶತಾಬ್ದಿ ಸಂಸ್ಮರಣೆ



▸ ಗ. ಕೃ. ವೆಂಕಟೇಶಮೂರ್ತಿ

ಶೇಷಾದ್ರಿಗಳು ಬದುಕಿದ್ದರೆ ಪಂಚಾಂಗದ ಪ್ರಕಾರ ಅವರಿಗೆ ಇದೇ ವೈಶಾಖ ಶುಕ್ಲ ಚತುರ್ದಶಿ, ಶ್ರೀ ನರಸಿಂಹ ಜಯಂತಿಯಂದು(ಏಪ್ರಿಲ್ 20, 2026) ''ಶರದ: ಶತಮ್'' (ನೂರು ವರ್ಷ) ತುಂಬುತ್ತಿತ್ತು. ಕ್ಯಾಲೆಂಡರ್ ಪ್ರಕಾರ ಅವರು ಹುಟ್ಟಿದ್ದು ಮೇ 26, 1926. ಸರಿ ಸುಮಾರು ಸಂಘ ಜನ್ಮದ ಒಂದು ವರ್ಷದ ನಂತರ.

ಕರ್ನಾಟಕದ ಸಂಘದ ಓರ್ವ ಕಾರ್ಯಕರ್ತರಾಗಿದ್ದ ಅವರು ಸಂಘದ ಅತ್ಯುಚ್ಚ ಪದವಿಗೂ ಏರಬಲ್ಲ ಸಾಮರ್ಥ್ಯ ಪಡೆದು ತ್ರಿವಿಕ್ರಮನಂತೆ ಬೆಳೆದರು. ಆದರೆ ತಮ್ಮ ಆರೋಗ್ಯ ಕಾರಣವನ್ನು ಮುಂದು ಮಾಡಿ ಅವರೇ ಸ್ವತಃ ಆ ಸ್ಥಾನವನ್ನು ನಿರಾಕರಿಸಿದಂತಹ ಉದಾಹರಣೆ ಇತರ ಸಂಘ ಸಂಸ್ಥೆಗಳಲ್ಲಿ ಸಿಗಲಾರದು.

ವ್ಯಾಸರಿಗೆ ಗಣೇಶನಂತೆ, ಸಾಕ್ರಟೀಸ್‌ಗೆ ಪ್ಲೇಟೋನಂತೆ ಹಾಗೂ ಪೂಜನೀಯ ಗುರೂಜಿಯವರಿಗೆ ಅವರು ಲಿಪಿಕಾರರಾಗಿದ್ದು ಈಗ ಇತಿಹಾಸ.

ಗುರೂಜಿಯವರ ಬೌದ್ಧಿಕ್ ಅಥವಾ ಬೈಠಕ್ ಗಳು ಹೆಚ್ಚಾಗಿ ಹಿಂದಿಯಲ್ಲಿ ಇರುತ್ತಿದ್ದವು. ಪ್ರಾರಂಭದಲ್ಲಿ ಗುರೂಜಿಯವರ ಬೌದ್ಧಿಕ ಅನ್ನು ರಿಲೇ ರೇಸ್ ನಂತೆ ಐದು ಜನ ವೃತ್ತಾಕಾರದಲ್ಲಿ ಕುಳಿತು ಒಬ್ಬರ ನಂತರ ಒಬ್ಬರು ಬರೆದುಕೊಳ್ಳುತ್ತಿದ್ದರು. ಆಮೇಲೆ ಅದನ್ನು ಆಗ ಇದ್ದ ಭೂತಾಕಾರದ ಟೇಪ್ ರೆಕಾರ್ಡರ್ ನಲ್ಲಿ, ಅಷ್ಟೇನೂ ತಾಂತ್ರಿಕ ಜ್ಞಾನ ಮುಂದುವರೆಯದಿದ್ದ ಕಾಲದಲ್ಲಿ, ಕೇಳಿ ವಿಷಯ ವಿಂಗಡಣೆ ಮಾಡಿ, ಮೊದಲು ಇಂಗ್ಲಿಷ್ ನಲ್ಲಿ ಬರೆದು ಗುರೂಜಿಯವರಿಂದಲೇ ''ಸೈ'' ಅನ್ನಿಸಿಕೊಂಡವರು ಶೇಷಾದ್ರಿಗಳು! ವೇದಗಳನ್ನು, ಪುರಾಣಗಳನ್ನು ವಿಂಗಡಿಸಿದ ವ್ಯಾಸರ ಕಾರ್ಯದೊಡನೆ ಹೋಲಿಸಬಹುದಾದ ಕಾರ್ಯ ಅದಾಗಿತ್ತು! ಶೇಷಾದ್ರಿಗಳ ವ್ಯಕ್ತಿತ್ವದ ವಿಶ್ಲೇಷಣೆ ಈ ಲೇಖನದ ಉದ್ದೇಶವಲ್ಲ. ಅದು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ. ಕೇವಲ ಅವರೊಡನೆ ನನ್ನ ಒಡನಾಟದ ಕೆಲವು ಪ್ರಸಂಗಗಳ ಝಲಕು, ಶತಾಬ್ದಿ ಸಂಸ್ಮರಣೆ ರೂಪದಲ್ಲಿ ಇಲ್ಲಿದೆ.

ಪ್ರತಿ ಅಕ್ಷರಕ್ಕೂ ಇದೆ ಸೌಂದರ್ಯ !

ಅದು 1972. ತಿಪಟೂರಿನಲ್ಲಿ ನಡೆದಿತ್ತು ಸಂಘ ಶಿಕ್ಷಾ ವರ್ಗ. ನಾನಾಗ ದ್ವಿತೀಯ ವರ್ಷದ ಸಂಘ ಶಿಕ್ಷಾ ವರ್ಗ ಮುಗಿಸಿದ್ದೆ. ತಿಪಟೂರಿನ ವರ್ಗದ ಬೌದ್ಧಿಕ ವಿಭಾಗದಲ್ಲಿ ಪ್ರಬಂಧಕನಾಗಿ ಕೆಲಸ ಮಾಡುತ್ತಿದ್ದೆ. ನನಗೆ ನೆನಪಿರುವಂತೆ ವರ್ಗದ ಸಮಾರೋಪ ಸಮಾರಂಭದಲ್ಲಿ ಮಾನ್ಯ ಬಾಬಾ ಸಾಹೇಬ ಆಪಟೆ ಅವರಿದ್ದರು. ಅಷ್ಟು ಹೊತ್ತಿಗಾಗಲೇ ನಾನು ನನ್ನ ದುಂಡಕ್ಷರದಿಂದ ಖ್ಯಾತಿ ಪಡೆದಿದ್ದೆ. ಕಾರ್ಯಕ್ರಮದ ಘಟನಾವಳಿಗಳನ್ನು ಹಿಂದಿಯಲ್ಲಿ ಬರೆದು ವೇದಿಕೆಯ ಮೇಲೆ ಇಡುವ ಕೆಲಸ ನನ್ನ ಪಾಲಿಗೆ ಬಂತು. ನಾನು ಆಗ ಹಿಂದಿಯ ल '' ಎಂಬ ಅಕ್ಷರವನ್ನು ಬರೆಯುವಾಗ, 3 ಎಂಬ ಅಂಕೆಯನ್ನು ಮಲಗಿರುವಂತೆ ಬರೆದು ಅದರ ಮೇಲೆ ಗೆರೆ ಎಳೆಯುತ್ತಿದ್ದೆ. ನಾನು ಬರೆದ ಕರಡು ಪ್ರತಿಯನ್ನು ನೋಡಿದ ಶೇಷಾದ್ರಿಗಳು '' 'ल' ದ ಮೊದಲನೇ ಉಬ್ಬನ್ನು ದೊಡ್ಡದಾಗಿ ತುಂಬಿಕೊಂಡಿರುವಂತೆ ಬರೆದು, ಎರಡನೆಯದನ್ನು ಚಿಕ್ಕದಾಗಿರುವಂತೆ ಬರೆದರೆ ಚೆನ್ನಾಗಿರುತ್ತದೆ'' ಎಂದು ಹೇಳಿ ಬರೆದು ತೋರಿಸಿದರು. ''ಪ್ರತಿ ಅಕ್ಷರಕ್ಕೂ ಒಂದು ಸೌಂದರ್ಯವಿರುತ್ತದೆ'' ಎಂದು ನನಗೆ ಅರಿವಾದುದೇ ಆಗ. ಹೀಗೆ ನನ್ನಲ್ಲಿ ಬೀಜಾಂಕುರ ಆದ ''ಅಕ್ಷರಗಳ ಸೌಂದರ್ಯ ಪ್ರಜ್ಞೆಯು'' ಬೃಹದಾಕಾರವಾಗಿ ಬೆಳೆದು, ನಾನೀಗ ಕನ್ನಡ ಮತ್ತು ಇಂಗ್ಲಿಷ್ ನಲ್ಲಿ ಕೈಬರಹದ ಕುರಿತು ಪುಸ್ತಕಗಳನ್ನು ಬರೆದಿದ್ದೇನೆ, ಯೂಟ್ಯೂಬ್ ವಿಡಿಯೋಗಳನ್ನು ಮಾಡಿದ್ದೇನೆ.

ಅಕ್ಷರಗಳ ಸೌಂದರ್ಯಕ್ಕಾಗಿ ಅವರು ನೀಡುತ್ತಿದ್ದ ಒಂದು ಟಿಪ್, ಈಗಲೂ ನನಗೆ ನೆನಪಿದೆ ?

'' ಸೊನ್ನೆಯನ್ನು ದೊಡ್ಡದಾಗಿ ಬರೆದರೆ, ಅದು ದುಂಡಾಗಿರುವ ಸಂಭವ ಕಡಿಮೆ. ಚಿಕ್ಕದಾಗಿ ಬರೆದರೆ ಅದು ದುಂಡಾಗಿರುವಂತೆ ಬರೆಯುವುದು ಸುಲಭ''

ಕೇಶವಕೃಪಾದಲ್ಲಿ ಮಾನನೀಯ ಯಾದವರಾವ್ ಜೋಶಿ ಯವರ ಕೈಬರಹ (ಹಿಂದಿ, ಮರಾಠಿ ಅಥವಾ ಇಂಗ್ಲಿಷ್) ಅಷ್ಟಕ್ಕಷ್ಟೇ. ಅವರು ಕೆಲವು ಬಾರಿ ತಾವು ಬರೆದುದನ್ನೇ ಓದಲಾಗದೆ ಸಾನಂದ ಗಣೇಶರಿಗೆ ''ಸಾನಂದ, ನಾನು ಇದು ಏನು ಬರೆದಿದ್ದೇನೆ ಅಂತ ಸ್ವಲ್ಪ ಓದಿ ಹೇಳು'' ಎಂದು ಕೇಳುತ್ತಿದ್ದರು!.

ಯಾದವರಾಯರ ಕುರಿತು ಅತ್ಯಂತ ಪೂಜ್ಯ ಭಾವ ಹೊಂದಿದ್ದರೂ ಶೇಷಾದ್ರಿಗಳು, ಅವರನ್ನೂ ಕಿಚಾಯಿಸುವುದರಲ್ಲಿ ರಿಯಾಯಿತಿ ತೋರುತ್ತಿರಲಿಲ್ಲ. ತಮಾಷೆಯಾಗಿ ಅವರು ಸಾನಂದರಿಗೆ ಹೇಳುತ್ತಿದ್ದರು ''ಸಾನಂದ, ಅವರು (ಯಾದವರಾಯರು) ಯಾವ ಭಾಷೆಯಲ್ಲಿ ಬರೆದಿದ್ದಾರೆ ಅಂತ ಮೊದಲು ಕೇಳಿ ಬಿಡಪ್ಪ!''.

ನನ್ನ ಗೂಗ್ಲಿಗೆ ಅವರ ಸಿಕ್ಸರ್!

ಸ್ವಯಂಸೇವಕನಾಗಿ ನಾನು ಅವರ ಮೊಟ್ಟಮೊದಲ ಬೈಠಕ್ ನಲ್ಲಿ ಭಾಗವಹಿಸಿದ್ದು ಶಿವಮೊಗ್ಗದಲ್ಲಿ. ನಾನಾಗ ಸಹ್ಯಾದ್ರಿ ಕಾಲೇಜು ವಿದ್ಯಾರ್ಥಿ. ಅದು 1968 ಇರಬಹುದು. ಬಿ. ಹೆಚ್. ರಸ್ತೆಯ ಒಂದು ಸಭಾಂಗಣದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆಂದೇ ನಡೆದ ಬೈಠಕ್ ಅದು. ಸುಮಾರು 80 ವಿದ್ಯಾರ್ಥಿಗಳು ಸೇರಿದ್ದಿರಬಹುದು. ಶೇಷಾದ್ರಿಗಳು ಅಂದಿನ ವಿಷಯವಾದ ''ಯುವಕರಿಗೆ ಸಂಘದ ಬಗ್ಗೆ ಆಕರ್ಷಣೆ ಏಕೆ? '' ಎಂಬುದನ್ನು ಮಂಡನೆ ಮಾಡಿ, ಒಬ್ಬೊಬ್ಬರದೇ ಪ್ರತಿಕ್ರಿಯೆ ಕೇಳುತ್ತಿದ್ದರು. ಇಬ್ಬರು ಅಥವಾ ಮೂರು ಯುವಕರು ತಮ್ಮ ವಿಚಾರವನ್ನು ಹೇಳಿದ್ದಿರಬಹುದು. ಆಗ ನಾನು ಎದ್ದು ನಿಂತೆ. ನನ್ನ ಮನಸ್ಸಿನಲ್ಲಿ ''ಆಕರ್ಷಣೆ'' ಎಂದರೆ ಆಯಸ್ಕಾಂತವು ಕಬ್ಬಿಣದ ಚೂರುಗಳನ್ನು ಆಕರ್ಷಿಸಿದಾಗ ಅವು ತುಪತುಪನೇ ಬಂದು ಅಂಟಿಕೊಳ್ಳುವಂತೆ ಎಂದಿತ್ತು. ನಾನು ಹೇಳಿದೆ ''ಸಂಘದಲ್ಲಿ ಅಂತಹ ಆಕರ್ಷಣೆ ಏನೂ ಇಲ್ಲ!''. ವಿಷಯವನ್ನೇ ಪೂರ್ತಿ ನಿರರ್ಥಕಗೊಳಿಸಿ, ಶೇಷಾದ್ರಿಗಳನ್ನೇ ಅವಕ್ಕಾಗಿಸಬಹುದಾಗಿದ್ದ ''ಗೂಗ್ಲಿ'' ಇದಾಗಿತ್ತು. ಶೇಷಾದ್ರಿಗಳು ಕಿಂಚಿತ್ತೂ ವಿಚಲಿತರಾಗಲಿಲ್ಲ. ಅವರ ಸಮಯ ಪ್ರಜ್ಞೆ (ಪ್ರೆಸೆನ್ಸ್ ಆಫ್ ಮೈಂಡ್) ಅದ್ಭುತ! '' ಸರಿಯಪ್ಪಾ, ಹೇಳು. 'ಸಂಘದಲ್ಲಿ ಏನೂ ಆಕರ್ಷಣೆ ಇಲ್ಲ. ಇದಕ್ಕೆ ನಾನೇ ಸಾಕ್ಷಿ. ನಾನು ಸಂಘದ ಬೈಠಕ್‌ಗೆ ಬಂದಿದ್ದೀನಿ ನೋಡಿ' ಅಂತ ಎಲ್ಲರಿಗೂ ಹೇಳಿ ಬಿಡಪ್ಪ'' ಅಂದರು ಶೇಷಾದ್ರಿಗಳು. ಬೌಂಡರಿ ಆಚೆ ಅಲ್ಲ, ಸ್ಟೇಡಿಯಂ ಆಚೆಗೇ ಬೀಳುವಂತೆ ಕ್ರಿಸ್ ಗೇಲ್ ಹೊಡೆದ ಸಿಕ್ಸರ್ ನಂತೆ ಸಿಡಿದ ಈ ಮಾತಿನಿಂದ ನಾನು ಮಂಕಾಗಿಬಿಟ್ಟೆ!





ಒಂದು ಲೇಖನಕ್ಕೆ ಪ್ರೇರಣೆಯಾದ ಆ ಮಾತು

ನಾನು 1970 – 71 ರಲ್ಲಿ, ಒಂದು ವರ್ಷ ಕೇಶವ ಕೃಪಾದಲ್ಲಿದ್ದೆ. ನನ್ನ ಕೈಬರಹ ದುಂಡಾಗಿದ್ದುದರಿಂದ ನನಗೆ ಸಾಕಷ್ಟು ಬರೆಯುವ ಕೆಲಸ ಸಿಗುತ್ತಿತ್ತು. ಶೇಷಾದ್ರಿಗಳು ಉತ್ಥಾನಕ್ಕಾಗಿ ಪೆನ್ಸಿಲ್ ನಲ್ಲಿ ಬರೆದ ಲೇಖನಗಳ ಅಂದವಾದ ಪ್ರತಿ ತಯಾರಿಸಿ ಕೊಡಬೇಕಾಗುತ್ತಿತ್ತು. ಶೇಷಾದ್ರಿಗಳ ಕೈಬರಹ ಸುಂದರವಾಗಿಯೇ ಇತ್ತು. ಆದರೆ ಅವರ ಲೇಖನದ ಕರಡು ಪ್ರತಿಯಲ್ಲಿ ಸಾಕಷ್ಟು ತಿದ್ದುಪಡಿ ಇರುತ್ತಿತ್ತು. ಹಾಗೂ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸಬೇಕಾದ ಪದಗಳು ಹಾಗೂ ವಾಕ್ಯಗಳು, ಬಾಣದ ಗುರುತಿನಿಂದ ಸೂಚಿಸಲ್ಪಡುತ್ತಿದ್ದವು. ಶೇಷಾದ್ರಿಗಳು ತಾವು ಉಪಯೋಗಿಸುವ ಒಂದೊಂದು ಪದವನ್ನೂ ಅಳೆದೂ ತೂಗಿ ಉಪಯೋಗಿಸುತ್ತಿದ್ದರು.



ಗುರೂಜಿಯವರ ವಿಚಾರಗಳ ಸಂಗ್ರಹವಾದ ''ಬಂಚ್ ಆಫ್ ಥಾಟ್ಸ್'' ಅನ್ನು ಹಿರಿಯ ಕನ್ನಡ ಲೇಖಕರೊಬ್ಬರು ಕನ್ನಡಕ್ಕೆ ಭಾಷಾಂತರಿಸಿದ್ದರು. ಆ ಭಾಷಾಂತರವನ್ನು ಶೇಷಾದ್ರಿಗಳು ಮತ್ತು ಶಿವರಾಮು ಒಟ್ಟಿಗೆ ಕುಳಿತು, ಒಂದೊಂದೇ ವಾಕ್ಯ ಹಾಗೂ ಪದಗಳ ಕುರಿತು ವಿಮರ್ಶೆ ಮಾಡಿ, ತಿದ್ದುತ್ತಿದ್ದರು. ಆದರ ಅಂದವಾದ, ಮುದ್ರಣಕ್ಕೆ ಕಳಿಸುವ ಪ್ರತಿಯನ್ನು ತಯಾರಿಸುವ ಕೆಲಸವು ನನ್ನ ಪಾಲಿಗೇ ಬಂದಿತ್ತು. ಅದರಲ್ಲಿ ಎಷ್ಟು ನನ್ನ ತಲೆಯೊಳಗೆ ಇಳಿದಿದೆಯೋ ಗೊತ್ತಿಲ್ಲ, ಆದರೆ ನಾನು ''ಚಿಂತನಗಂಗಾ'' ಪುಸ್ತಕ ಮುದ್ರಣಕ್ಕೆ ಹೋಗುವ ಇಡೀ ಪ್ರತಿಯನ್ನು ನನ್ನ ಕೈಬರಹದಲ್ಲೇ ಬರೆದಿದ್ದೇನೆ. (ಇಂದಿನಂತೆ ಆಗ ''ವಾಯ್ಸ್ ಟು ಟೆಕ್ಸ್ಟ್'' ಇರಲಿಲ್ಲ !)


ಸದಾ ಕೆಲಸದ ಒತ್ತಡದಲ್ಲಿರುತ್ತಿದ್ದ ಶ್ರೀ ಅಜಿತ್ ಕುಮಾರರ ಅನೇಕ ಲೇಖನಗಳ ಅಂದವಾದ ಪ್ರತಿ ಮಾಡುವುದೂ ನನ್ನ ಕೆಲಸವೇ ಆಗಿತ್ತು. ಮಾನನೀಯ ಶ್ರೀ ಯಾದವರಾವ್ ಜಿ ಯವರು ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಬರೆಯುತ್ತಿದ್ದ ಪತ್ರಗಳನ್ನು ನಾನು ಸುಂದರವಾಗಿ ಬರೆದುಕೊಡುತ್ತಿದ್ದೆ. ನನಗೆ ಚೆನ್ನಾಗಿ ನೆನಪಿದೆ. ಅವರು ಹೇಳುತ್ತಿದ್ದರು ''ಇಷ್ಟು ಸುಂದರವಾದ ಅಕ್ಷರಗಳ ಪತ್ರಕ್ಕೆ ಸಹಿ ಮಾಡಲು ನನಗೆ ನಾಚಿಕೆ ಆಗುತ್ತದೆ ಎಂದು !''

ಆಗ ಚೆನ್ನೇನಹಳ್ಳಿ ಯಲ್ಲಿ ಜನ ಸೇವಾ ವಿದ್ಯಾ ಕೇಂದ್ರದ ಕಟ್ಟಡ ನಿರ್ಮಾಣ ಆಗುತ್ತಿತ್ತು. ರಾಜ್ಯದ ಮೂಲೆ ಮೂಲೆಗಳಿಂದ ಮತ್ತು ಹೊರಗಿನಿಂದಲೂ ಬ್ಯಾಂಕ್ ಚೆಕ್ ರೂಪದಲ್ಲಿ ದಾನ ಬರುತ್ತಿತ್ತು. ಪ್ರತಿದಿನ ಸುಮಾರು 20 – 30 ಚೆಕ್ ಗಳು ಇರುತ್ತಿದ್ದವು. ನಾನು ಮತ್ತು ಈಗ ಉಡುಪಿಯಲ್ಲಿರುವ ಶ್ರೀ ಹರಿದಾಸ್ ನಾಯಕ್ (ಆಗ ಅವರು ಪ್ರಚಾರಕ್) ಸೇರಿ ಚೆಕ್ ಗಳನ್ನು ಬ್ಯಾಂಕಿಗೆ ಪ್ರೆಸೆಂಟ್ ಮಾಡಲು ಚಲನ್ ಗಳನ್ನು ಬರೆಯುತ್ತಿದ್ದೆವು. ಬರೆಯುವುದು ಹೆಚ್ಚಾಗಿ ಕೆಲವು ಬಾರಿ ಬೆನ್ನು ನೋವು ಕಾಣಿಸಿಕೊಳ್ಳುತ್ತಿತ್ತು.

ಇಷ್ಟೆಲ್ಲಾ ಪುರಾಣ ಏಕೆ ಎಂದು ನಿಮಗೆ ಖಂಡಿತಾ ಅನ್ನಿಸಿರುತ್ತದೆ. ಆದರೆ ಮುಂದಿನ ಕಥನಕ್ಕೆ ಇದು ಕೇವಲ ಪೀಠಿಕೆ ಅಷ್ಟೇ.

1971 ರ ಜೂನ್ ತಿಂಗಳಲ್ಲಿ ನನ್ನನ್ನು ಗೌರಿಬಿದನೂರಿಗೆ ಸಂಘ ಕಾರ್ಯಕ್ಕಾಗಿ ನಿಯೋಜನೆ ಮಾಡಲಾಯಿತು. ನನಗಾಗಿ ಕೇಶವಕೃಪಾದಲ್ಲಿ ಒಂದು ಪುಟ್ಟ ಬೀಳ್ಕೊಡುಗೆ ಕಾರ್ಯಕ್ರಮ ಇಟ್ಟುಕೊಂಡಿದ್ದರು. ಇದು ನಡೆದಿದ್ದು ಈಗ ಕೇಶವ ಕೃಪಾದಲ್ಲಿ ಅಭಿಲೇಖಾಗಾರದ ಕೊಠಡಿ ಆಗಿರುವ, ಆದರೆ ಹಿಂದೆ ಶೇಷಾದ್ರಿಗಳದ್ದಾಗಿದ್ದ ಕೊಠಡಿಯಲ್ಲಿ. ಆ ದಿನ ಶೇಷಾದ್ರಿಗಳು ಪ್ರವಾಸದಲ್ಲಿದ್ದರು. ಅಂದು ಇದ್ದ ಪ್ರಮುಖರೆಂದರೆ ಶ್ರೀ ಅಜಿತ್ ಕುಮಾರ್. ಒಂದಿಷ್ಟು ತಿನಿಸು, ಸಿಹಿ ಸೇವನೆ ಆದಮೇಲೆ ಲೋಕಾಭಿರಾಮವಾಗಿ ಮಾತನಾಡುತ್ತಾ ''ಈಗ ನೀನು ಕಾರ್ಯಕ್ಷೇತ್ರಕ್ಕೆ ಹೋಗುತ್ತಿದ್ದೆಯಲ್ಲ, ಹೊರಡುವ ಮುನ್ನ ಏನಾದರೂ ಸಂದೇಶ ನೀಡು'' ಎಂದು ಎಲ್ಲರೂ ನನ್ನನ್ನು ಒತ್ತಾಯಿಸಿದರು. ನಾನು ಲಘು ಧಾಟಿಯಲ್ಲೇ ತಮಾಷೆಗಾಗಿ ''ನಾವು ಸಂಘದ ಕೆಲಸ ಚೆನ್ನಾಗಿ ಮಾಡಬೇಕು ಎಂದಿದ್ದರೆ ನಮ್ಮ ಕೈಬರಹ ದುಂಡಾಗಿರ ಬಾರದು!'' ಎಂದು ಹೇಳಿದೆ. ಹಿನ್ನೆಲೆಯ ಅರಿವಿದ್ದ ಅಲ್ಲಿನ ಎಲ್ಲರೂ ಘೊಳ್ಳೆಂದು ನಕ್ಕರು.





ಈ ನನ್ನ ಸಂದೇಶವು, ಈಗಿನ ಭಾಷೆಯಲ್ಲಿ ಹೇಳುವುದಾದರೆ, ತುಂಬಾ ''ವೈರಲ್'' ಆಯಿತು. ಅದು ಶೇಷಾದ್ರಿಗಳ ಕಿವಿಗೂ ಬಿತ್ತು. ಅವರು ಆ ವಿಷಯವಾಗಿಯೇ ಸಾಕಷ್ಟು ಚಿಂತಿಸಿ, ಒಂದು ಲೇಖನವನ್ನೇ ಬರೆದರು ''ವರವೇ ಶಾಪವಾದಾಗ ''. ದುಂಡಾಗಿ ಅಕ್ಷರ ಬರೆಯುವ ಅಥವಾ ಇನ್ನೂ ಯಾವುದೇ ''ವರ'' ವೂ ಸಂಘ ಕಾರ್ಯಕ್ಕೆ ಪೂರಕವಾಗದಿದ್ದರೆ ''ಶಾಪ'' ಆಗಬಹುದು ಎಂಬುದೇ ಆ ಲೇಖನದ ಸಾರಾಂಶ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಯಾರೋ ಆಡಿದ ಮಾತೊಂದು ಶೇಷಾದ್ರಿಗಳ ಲೇಖನದ ''ವಸ್ತು'' ಆಗುತ್ತಿತ್ತು !

ಸಾಹಿತ್ಯ ಕೇಸರಿ, ಸಾಹಿತ್ಯಕ್ಕೇ ಸರಿ

1973 ರಲ್ಲಿ ನಾನು ನಾಗಪುರದ ತೃತೀಯ ವರ್ಷದ ಶಿಕ್ಷಣವನ್ನು ಮುಗಿಸಿ ಗೌರಿಬಿದನೂರಿಗೆ ಹಿಂತಿರುಗಿದ್ದೆ. ಅಂದಿನ ಅವಿಭಜಿತ ಕೋಲಾರ ಜಿಲ್ಲೆಯ ಜಿಲ್ಲಾ ಬೈಠಕ್ ಚಿಕ್ಕಬಳ್ಳಾಪುರದ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ನಡೆದಿತ್ತು. ಮಾನವೀಯ ಶ್ರೀ ಶೇಷಾದ್ರಿಗಳು ಬೈಠಕ್ ತೆಗೆದುಕೊಂಡಿದ್ದರು. ಅಷ್ಟು ಹೊತ್ತಿಗೆ, ನಾನು ''ನುಡಿದಂತೆ ನಡೆದವನ ಅಡಿಗೆನ್ನ ನಮನ'' ಎಂಬ ಡಾಕ್ಟರ್ ಜಿ ಯವರ ಕುರಿತು ಬರೆದ ಗೀತೆ, ವಿಕ್ರಮದಲ್ಲಿ ಯುಗಾದಿಯ ದಿನವೇ ಪ್ರಕಟವಾಗಿತ್ತು. ''ಪ್ರಜಾಮತ'' ಎಂಬ ಆಗಿನ ವಾರಪತ್ರಿಕೆಯಲ್ಲಿ ನಾನು ಬರೆದ ''ಓದೋ ಹಾಗೆ ಮಾಡೋದು ಹೇಗೆ?'' ಎಂಬ ಲೇಖನ ಪ್ರಕಟವಾಗಿತ್ತು. ಶೇಷಾದ್ರಿಗಳ ಉತ್ಥಾನದ ಅಂಕಣ 'ಪರಿಪ್ರಶ್ನ' ಕ್ಕೆ ನಾನು ಕೇಳಿದ ಎರಡು ಮೂರು ಪ್ರಶ್ನೆಗಳಿಗೆ ಶೇಷಾದ್ರಿಗಳ ಉತ್ತರ ಪ್ರಕಟವಾಗಿತ್ತು. ಜಿಲ್ಲಾ ಬೈಠಕ್ ನ ಕಡೆಯ ಹಂತದಲ್ಲಿ ನನ್ನನ್ನು ಎದ್ದು ನಿಲ್ಲಲು ಹೇಳಿ ''ಇವರು 'ಸಾಹಿತ್ಯ ಕೇಸರಿ', 'ಸಾಹಿತ್ಯಕ್ಕೇ ಸರಿ' (ಅಂದರೆ ಸಂಘ ಕಾರ್ಯಕ್ಕೆ ಸೂಕ್ತವಲ್ಲವೇ? ನನಗೆ ಗೊತ್ತಿಲ್ಲ!). ಆದ್ದರಿಂದ ಇವರು ಇನ್ನು ಮುಂದೆ ಕೇಶವಕೃಪಾಗೆ ಬಂದಿರುತ್ತಾರೆ'' ಎಂದು ಪ್ರಕಟಿಸಿದರು.

ನನ್ನಲ್ಲಿನ ಲೇಖನ ಕಲೆ ಗುರುತಿಸಿದ್ದ ಶೇಷಾದ್ರಿಗಳ ಗುಣಗ್ರಾಹಕತೆ ಮತ್ತು ಅದನ್ನು ಪ್ರಕಟಿಸಿದ ಶೇಷಾದ್ರಿಗಳ ವಿಶೇಷ ಹಾಸ್ಯ ಶೈಲಿ ಇಲ್ಲಿ ಗಮನಾರ್ಹ.



ನಾನೂ ಮೂರು ಪತ್ರ ಬರೆಯಬೇಕೆಂದಿದ್ದೇನೆ

1973ರಲ್ಲಿ ನಾಗಪುರದ ತೃತೀಯ ವರ್ಷದ ಶಿಕ್ಷಣ ಮುಗಿಸಿ, ಗೌರಿಬಿದನೂರಿಗೆ ಹೋಗುವ ಮೊದಲು ಎರಡು ದಿನ ನಾನು ಕೇಶವ ಕೃಪಾದಲ್ಲೇ ಇದ್ದೆ. ಆ ದಿನಗಳಲ್ಲಿ ಶೇಷಾದ್ರಿಗಳಿಗೆ ಅನಾರೋಗ್ಯ ಕಾಡುತ್ತಿತ್ತು. ಅವರು ಒಂದು ದಿನ ಕೇಶವಕೃಪಾದಲ್ಲೇ ಅತ್ತಿಂದಿತ್ತ ಓಡಾಡುತ್ತಿದ್ದರು.
'' ಹೇಗಿದ್ದೀರಿ ಶೇಷಾದ್ರಿಗಳೇ? '' ಎಂದು ಒಬ್ಬ ಹಿರಿಯ ಕಾರ್ಯಕರ್ತರು ಅವರ ಯೋಗಕ್ಷೇಮ ವಿಚಾರಿಸಿದರು.
'' ನಾನೂ ಮೂರು ಪತ್ರಗಳನ್ನು ಬರೆಯಬೇಕೆಂದಿದ್ದೇನೆ!'' ಥಟ್ಟನೆ ಹೇಳಿದರು ಶೇಷಾದ್ರಿಗಳು.
ಹಿನ್ನೆಲೆ : ಆಗ ತಾನೇ ಪೂಜನೀಯ ಗುರೂಜಿ ನಿಧನರಾಗಿದ್ದರು. ತಮ್ಮ ಸಾವನ್ನು ಮೊದಲೇ ನಿರೀಕ್ಷಿಸಿದ್ದ ಗುರೂಜಿ, ಮೂರು ಪತ್ರಗಳನ್ನು ಬರೆದು, ತಮ್ಮ ಸಾವಿನ ನಂತರ ಅವನ್ನು ತೆರೆಯಬೇಕೆಂದು ಸೂಚಿಸಿದ್ದರು. ಆ ಮೊದಲ ಪತ್ರದಲ್ಲಿ, ಮುಂದಿನ ಸರಸಂಘಚಾಲಕರ ನಿಯುಕ್ತಿ, ಎರಡನೇ ಪತ್ರದಲ್ಲಿ ತಮಗೆ ಯಾವ ಸ್ಮಾರಕವೂ ಬೇಡ ಎಂಬ ನಿರಾಕರಣೆ ಮತ್ತು ಮೂರನೇ ಪತ್ರದಲ್ಲಿ ತಮ್ಮ ಮಾತುಕತೆಯಿಂದ ಯಾರಿಗಾದರೂ ನೋವಾಗಿದ್ದರೆ ಕ್ಷಮಾಯಾಚನೆ ಇದ್ದವು. ಶೇಷಾದ್ರಿಗಳ ಹಾಸ್ಯ ಪ್ರಜ್ಞೆ ಯಾವ ಮಟ್ಟದಲ್ಲಿ ಇರುತ್ತಿತ್ತು ಎಂಬುದಕ್ಕೆ ಥಟ್ಟನೆ ಅವರ ಬಾಯಿಂದ ಹೊರಬಂದ ಉದ್ಗಾರವೇ ಸಾಕ್ಷಿ. ನಾನು ಇನ್ನೂ ಹಲವಾರು ಪ್ರಸಂಗಗಳನ್ನು ಪೋಣಿಸುತ್ತಾ ಹೋದರೆ ಲೇಖನ ತುಂಬಾ ದೀರ್ಘವಾದೀತು. ''ಅತಿ ಸರ್ವತ್ರ ವರ್ಜಯೇತ್'' ಅಲ್ಲವೇ?





ಕಿರುಸುದ್ದಿ

ಪ್ರತಿಬಂಧಕಾಜ್ಞೆ ಜಾರಿ

•**ಗದಗ:** ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಜರುಗುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-2 ಏ.30 ರಿಂದ ಮೇ 13ರವರೆಗೆ ಬೆಳಗ್ಗೆ 10.15 ರಿಂದ ಸಂಜೆ 4.15ರವರೆಗೆ ನಡೆಸಲಿದೆ. ಪರೀಕ್ಷಾ ಸುಗಮವಾಗಿ ನಡೆಸಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಿಲ್ಲೆಯ 7ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವನ್ನಾಗಿ ಘೋಷಿಸಲಾಗಿದೆ. ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿ ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಅದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು ಅಥವಾ ಪ್ರವೇಶಿಸುವುದನ್ನು ನಿರ್ಬಂಧಿಸಲಾಗಿದೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಝರಾಕ್ಸ್ ಅಂಗಡಿ, ಬುಕ್ ಸ್ಟಾಲ್, ಫೋಟೋ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ಪರೀಕ್ಷೆ ನಡೆಯುವ ಸಮಯದಲ್ಲಿ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಂಧಿಸಿದೆ. ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳ ಗೆ ವಿದ್ಯಾರ್ಥಿಗಳು ಆಗಮಿಸುವ ಸಮಯ ಮತ್ತು ಹೊರಹೋಗುವ ಸಮಯದಲ್ಲಿ ಮಾತ್ರ ಚಿತ್ರೀಕರಿಸಲು ಮಾಧ್ಯಮದವರಿಗೆ ಅವಕಾಶವಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಹೊರತುಪಡಿಸಿ ಸಾಮಾನ್ಯ ಮೊಬೈಲ್ ಇರಿಸಿಕೊಳ್ಳಲು ಅವಕಾಶವಿದೆ. ಉಳಿದ ಎಲ್ಲ ಪರೀಕ್ಷಾ ಸಿಬ್ಬಂದಿ, ವಿದ್ಯಾರ್ಥಿಗಳು ಮೊಬೈಲ್ ಫೋನ್ ಮತ್ತು ಇತರ ಸಂವಹನ ಸಲಕರಣೆಗಳನ್ನು ತರುವುದನ್ನು ಉಪಯೋಗಿಸುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಪ್ರಯಾಣಕ್ಕೆ ಅವಕಾಶ

•**ಗದಗ:** ಏ.30 ರಿಂದ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆ-2ಕ್ಕೆ ಹಾಜರಾಗುವ ವಿದ್ಯಾರ್ಥಿಗಳಿಗೆ ಅವರ ವಿದ್ಯಾಸಂಸ್ಥೆಯ ಹೊರತಾಗಿ ಇತರೆ ವಿದ್ಯಾ ಸಂಸ್ಥೆಗಳಲ್ಲಿ ಪರೀಕ್ಷಾ ಕೇಂದ್ರಗಳ ನಿಯೋಜನೆಯಾಗಿರುವುದರಿಂದ ವಿದ್ಯಾರ್ಥಿಗಳಿಗೆ ವಾಸಸ್ಥಳದಿಂದ ಪರೀಕ್ಷಾ ಕೇಂದ್ರಗಳವರೆಗೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ದ್ವಿತೀಯ ಪಿ.ಯು.ಸಿ ಪರೀಕ್ಷೆ-2 ನಡೆಯುವ ದಿನಾಂಕಗಳಾದ ಏ.30 ರಿಂದ ಮೇ 13ರವರೆಗೆ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ದ್ವಿತೀಯ ಪಿ.ಯು.ಸಿ ಪರೀಕ್ಷೆಯ ಪ್ರವೇಶ ಪತ್ರ ತೋರಿಸಿ ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಗಳಿಗೆ ಹೋಗಲು ಹಾಗೂ ಪರೀಕ್ಷೆ ಮುಗಿಸಿ ವಾಸಸ್ಥಳಕ್ಕೆ ಹಿಂದಿರುಗಲು ಸಂಸ್ಥೆಯ ನಗರ, ಹೊರವಲಯ, ಸಾಮಾನ್ಯ, ವೇಗದೂತ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಬಹುದಾಗಿದೆ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ತರಬೇತಿ ಇಂದು

•**ಗದಗ:** ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) 2013ರ ಕಾಯ್ದೆ ಕುರಿತು ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆ 1961, ಹಾಗೂ ವಧು-ವರದಕ್ಷಿಣೆ ನಿಷೇಧ ತಡೆಗಟ್ಟುವ ಕರ್ನಾಟಕ ನಿಯಮಗಳು 2004ರ ಹಿನ್ನಲೆಯಲ್ಲಿ ವರದಕ್ಷಿಣೆ ಪದ್ಧತಿಯನ್ನು ತಡೆಗಟ್ಟುವ ಕುರಿತು ಏ.30 ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾ ಪಂಚಾಯತ್ ಸಭಾಭವನದಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಮೇ 10ಕ್ಕೆ ಪ್ರತಿಭಾ ಪುರಸ್ಕಾರ

•**ನರಗುಂದ:** 2025-26ನೇ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.90ಕ್ಕಿಂತಲೂ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳುವ ಪೂರ್ವದಲ್ಲಿ ಮೇ 25 ರಂದು ನಡೆದ ಸಭೆಯಲ್ಲಿ ನಿರ್ಣಯಿಸಿದಂತೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಮೇ 10ರಂದು ಸಂಜೆ 4 ಗಂಟೆಗೆ ವೀರರಾಣಿ ಕಿತ್ತೂರ ಚನ್ನಮ್ಮಾ ಸಮುದಾಯ ಭವನ ನಿರ್ಮಾಣಗೊಳ್ಳುತ್ತಿರುವ ನಿವೇಶನದಲ್ಲಿ ಹಮ್ಮಿಕೊಳ್ಳಲಾಗಿದೆ. ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳು ಅಂಕಪಟ್ಟಿ, ಆಧಾರಕಾರ್ಡ್ ಹಾಗೂ ಇತ್ತೀಚಿನ ತಮ್ಮ ಭಾವಚಿತ್ರಗಳನ್ನು ಎರಡು ಪ್ರತಿಗಳಲ್ಲಿ ಸಮಾಜ ಸಂಘಟನೆಯ ಕಾರ್ಯದರ್ಶಿ ಅಜಿತಗೌಡ ಎಸ್.ಪಾಟೀಲ ಇವರಲ್ಲಿ ಮೇ 5 ಮಂಗಳವಾರ ಸಂಜೆ 5 ಗಂಟೆಯೊಳಗಾಗಿ ಕೊಟ್ಟು ತಮ್ಮ ಹೆಸರನ್ನು ದಾಖಲಿಸಿಕೊಳ್ಳಬೇಕೆಂದು ಪಂಚಮಸಾಲಿ ಸಮಾಜದ ತಾಲೂಕು ಅಧ್ಯಕ್ಷ ಡಾ.ಸಿ.ಕೆ. ರಾಚನಗೌಡ್ರ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜಿ ಶೇಂಗಾ	4213-6713
ಅಲಸಂದಿ	3477-5739
ಕಡಲೆ	2077-5561
ಒಣಮೆಣಸಿನಕಾಯಿ	5289-36109
ಹೆಸರು	1024-7335
ಹುರಳಿ	4300-4300
ಜೋಳ	2837-4667
ಮಡಕಿ	10659-10659
ಗೋವಿನಜೋಳ	1801-1801
ಕುಸಬಿ	4900-5939
ಸೂರ್ಯಕಾಂತಿ	5726-6422
ಗೋಧಿ	1744-4314



ಲಕ್ಷ್ಮೇಶ್ವರ: ಮೇ 1 ಮತ್ತು 2ರಂದು ನಡೆಯುವ ಶಿರಹಟ್ಟಿ ಫಕೀರೇಶ್ವರ ಮಠದ ಜಾತ್ರಾಮಹೋತ್ಸವ ಹಿನ್ನೆಲೆ ಶಿರಹಟ್ಟಿ 13ನೇ ಪೀಠಾಧ್ಯಕ್ಷ ಫಕೀರ ಸಿದ್ಧರಾಮ ಜಗದ್ಗುರು ಲಕ್ಷ್ಮೇಶ್ವರದಲ್ಲಿ ವರ್ಷಾಸನೆ ಸಂಪ್ರದಾಯ ನೆರವೇರಿಸಿದರು. ಫಕೀರ ಸಿದ್ಧರಾಮ ಜಗದ್ಗುರುಗಳು ಮೆರವಣಿಗೆ ಮೂಲಕ ಭಕ್ತರ ಮನೆಗಳಿಗೆ ಭೇಟಿ ನೀಡಿ, ಕಾಣಿಕೆ, ದವಸ, ಧಾನ್ಯ ಸ್ವೀಕರಿಸಿ ಆಶೀರ್ವದಿಸಿ ಶ್ರೀಮಠದ ಜಾತ್ರೆಗೆ ಬರುವಂತೆ ತಿಳಿಸಿದರು.

ಮಸೂದೆ ವಿರೋಧಕ್ಕೆ ಬಿಜೆಪಿ ಖಂಡನೆ

•**ಮುಂಡರಗಿ:** ಪಟ್ಟಣದಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸಿದ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ನಡೆಯನ್ನು ಬಿಜೆಪಿ ಮುಂಡರಗಿ ಮಂಡಲದ ಮಹಿಳಾ ಮೋರ್ಚಾ ಕಾರ್ಯಕರ್ತರು ಖಂಡಿಸಿ ಪ್ರತಿಭಟನೆ ನಡೆಸಿದರು. ಬಿಜೆಪಿ ಮುಂಡರಗಿ ಮಂಡಲ ಮಹಿಳಾಮೋರ್ಚಾ ಅಧ್ಯಕ್ಷೆ ಪವಿತ್ರಾ ಕಲ್ಲಕುಟಗರ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ನಾರೀಶಕ್ತಿ ವಂದನಾ ಅಧಿನಿಯಮವನ್ನು ಜಾರಿಯಾಗದಂತೆ ತಡೆದ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ನಡೆ ಖಂಡನೀಯ. ಮೋದಿ ಅವರು ಮಹಿಳಾ ಮೀಸಲಾತಿ ಮೂಲಕ ಮಹಿಳೆಯರು ಸಹ ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕೆ ಅವಕಾಶ ನೀಡುವುದಕ್ಕೆ ಮುಂದಾಗಿದ್ದರು. ಆದರೆ ಕಾಂಗ್ರೆಸ್ ಮಿತ್ರ ಪಕ್ಷಗಳು ವಿರೋಧಿಸಿದ್ದು ಮಹಿಳಾ ವಿರೋಧಿಯಾಗಿದೆ. ಬರುವ ದಿನದಲ್ಲಿ ಬಿಜೆಪಿ ಬಹುಮತದಿಂದ ಶೇ.33ರಷ್ಟು ಮಹಿಳಾ ಮೀಸಲಾತಿ ಜಾರಿ ತರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಬಿಜೆಪಿ ಮುಂಡರಗಿ ಮಂಡಲ ಅಧ್ಯಕ್ಷ ಡಾ.ಕುಮಾರಸ್ವಾಮಿ ಹಿರೇಮಠ ಮಾತನಾಡಿ, ಕಾಂಗ್ರೆಸ್ ಮತ್ತು ಆದರ ಮಿತ್ರ ಪಕ್ಷಗಳು ದೇಶದ ಮಹಿಳೆಯರಿಗೆ ಅವಮಾನ ಮಾಡಿದೆ. ಬಿಜೆಪಿ ಮಹಿಳೆಯರ ಧ್ವನಿಯಾಗಿ ಕೆಲಸ ಮಾಡಲಿದೆ. ಮಹಿಳೆಯರು ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು. ಪ್ರಮುಖ ಕರಬಸಪ್ಪ ಹಂಚಿನಾಳ, ಪುರಸಭೆ ಮಾಜಿ ಅಧ್ಯಕ್ಷೆ ಕವಿತಾ ಉಳ್ಳಾಗಡ್ಡಿ, ಮಾಜಿ ಸದಸ್ಯೆ ಜ್ಯೋತಿ ಹಾನಗಲ್ ಮಾತನಾಡಿದರು.



ಮುಂಡರಗಿ: ಪಟ್ಟಣದಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸಿದ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ನಡೆಯನ್ನು ಬಿಜೆಪಿ ಮುಂಡರಗಿ ಮಂಡಲದ ಮಹಿಳಾ ಮೋರ್ಚಾ ಕಾರ್ಯಕರ್ತರು ಖಂಡಿಸಿ ಪ್ರತಿಭಟನೆ ನಡೆಸಿದರು. ಬಸವರಾಜ ಬಿಳಿಮಗ್ಗದ, ಪ್ರಶಾಂತ ಗುಡದಪ್ಪನವರ, ಅರುಣಾ ಪಾಟೀಲ, ಪು?ಪ್ಪಾ ಉಕ್ಕಲಿ, ರಾಧಾ ಬಾರಕೇರ, ವೀಣಾ ಬೂದಿಹಾಳ, ಮಂಜುಳಾ ಹುಬ್ಬಳ್ಳಿಮಠ, ರೇಖಾ ಬಾರಕೇರ, ಬಸಮ್ಮ ಸತ್ರಿ, ರಜನಿಕಾಂತ ದೇಸಾಯಿ, ಕೊಟ್ರೇಶ ಅಂಗಡಿ, ಶಿವಪ್ಪ ಚಿಕ್ಕಣ್ಣವರ, ಮೈಲಾರಪ್ಪ ಕಲಕೇರಿ, ಪವನ ಮೇಟಿ, ಸಿದ್ದು ದೇಸಾಯಿ, ಶಿವು ಕುರಿ, ರವಿ ಪಾಟೀಲ, ಚೆನ್ನಪ್ಪ ವಡ್ಡಟ್ಟಿ, ಸೋಮು ಹಕ್ಕಂಡಿ ಇತರರಿದ್ದರು.

ತಾಲೂಕು ಮಟ್ಟದ ಅಧಿಕಾರಿಗಳ ಸಾಮಾನ್ಯ ಸಭೆ | ಬಿಆರ್‌ಸಿ ಮಾಹಿತಿ

ಶೇ.25ರಷ್ಟು ಫಲಿತಾಂಶ ಏರಿಕೆ



•**ರೋಣ:** ತಾಲೂಕಿನಲ್ಲಿ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಹೇಗಿದೆ? ಕಳೆದ ಬಾರಿಗಿಂತ ಈ ಬಾರಿ ಉತ್ತಮವಾಗಿದೆಯಾ ಎಂದು ತಾಲೂಕಾಡಳಿತಾಧಿಕಾರಿ ಡಾ. ನಂದಾ ಹಣಬರಟ್ಟಿ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಪ್ರಶ್ನಿಸಿದರು.

ಅವರು ಬುಧವಾರ ತಾಪಂ ಸಭಾಭವನದಲ್ಲಿ ಜರುಗಿದ ತಾಲೂಕು ಮಟ್ಟದ ಅಧಿಕಾರಿಗಳ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದಕ್ಕೆ ಉತ್ತರಿಸಿದ ಬಿಆರ್‌ಸಿಯ ಎಂ.ಎ.ಫಣಿಬಂದ್, ಕಳೆದ ಬಾರಿಗಿಂತ ಈ ಬಾರಿ ರೋಣ ತಾಲೂಕಿನಲ್ಲಿ ಎಸ್ ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಶೇ.25ರಷ್ಟು ಏರಿಕೆಯಾಗಿದ್ದು, ಖಾಸಗಿ ಶಿಕ್ಷಣ ಸಂಸ್ಥೆಗಳಿಗಿಂತ ಸರ್ಕಾರಿ ಶಾಲೆಗಳು ಉತ್ತಮ ಪ್ರಗತಿ ಸಾಧಿಸಿದೆ. ಈ ಬಾರಿ ಕನ್ನಡ, ಆಂಗ್ಲ,ಉರ್ದು ಭಾಷೆಗಳಲ್ಲಿ ರೋಣ ತಾಲೂಕಿನ ವಿದ್ಯಾರ್ಥಿಗಳು ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದಿರುವುದು ವಿಶೇಷತೆಯಾಗಿದೆ ಎಂದರು.

ಪರೀಕ್ಷಾ ಫಲಿಂತಾಶ ಸುಧಾರಿಸುವಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಜೊತೆಗೆ ವಿದ್ಯಾರ್ಥಿಗಳಿಗೆ ಅಗತ್ಯ ತರಬೇತಿಯನ್ನು ನಿಡಲಾಯಿತು. ಇನ್ನು ಓದಿನ ಮನೆ ಎಂಬ ನಿಯಮ ಜಾರಿಗೆ ತಂದು ವಿದ್ಯಾರ್ಥಿಗಳಿಗೆ ರಾತ್ರಿ ಸಮಯದಲ್ಲಿಯೂ ಶಿಕ್ಷಣವನ್ನು ನೀಡಲಾಯಿತು. ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಶಾಲಾ ಶಿಕ್ಷಕರು ಪಾಲ್ಗೊಂಡ ಪರಿಣಾಮ ಇಂದು ಖಾಸಗಿ ಶಾಲೆಗಳಿಗಿಂತ ಸರ್ಕಾರಿ ಶಾಲೆಗಳು ಪ್ರಗತಿ ಸಾಧಿಸಲು ಸಾಧ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಯೋಜನಾಧಿಕಾರಿ ಸಿ.ಎಸ್.ನಿಲಗುಂದ ಉಪಸ್ಥಿತರಿದ್ದರು.

ಗೈರಿಗೆ ಆಕ್ರೋಶ

ತಾಲೂಕಾಡಳಿತಾಧಿಕಾರಿಗಳು ಕರೆದ ಸಭೆಗೆ ಪ್ರತಿ ಬಾರಿ ಗೈರಾಗುತ್ತಿರುವ ಪಿಆರ್‌ಡಿ ಎಇಇ ರಾಘವೇಂದ್ರ ಪುರೋಹಿತ ಹಾಗೂ ಪಿಡಬ್ಲೂಡಿ ಎಇಇ ಜೆ.ಎಸ್.ಪಾಟೀಲ ಈ ಬಾರಿಯ ಸಭೆಗೂ ಗೈರಾಗಿದ್ದಕ್ಕೆ ಆಡಳಿತಾಧಿಕಾರಿ ತೀವ್ರ ಆಕ್ರೋಶ ಹೊರಹಾಕುತ್ತಿದ್ದಂತೆ ಮಧ್ಯ ಪ್ರವೇಶಿಸಿದ ತಾಪಂ ಇಒ ಚಂದ್ರಶೇಖರ ಕಂದಕೂರ ಅವರು ರಜೆ ಇದ್ದಾರೆ ಎಂದು ತಿಳಿಸಿದರು. ಆಗ ಪಿಡಬ್ಲೂಡಿ ಕಚೇರಿಯಿಂದ ಸಿಬ್ಬಂದಿ ವಿಠಲ ವರದಿ ಒಪ್ಪಿಸಲು ಬರುತ್ತಿದ್ದಂತೆ ನಿಮ್ಮ ಸಾಹೇಬರೆಲ್ಲಿ ಎಂದು ಆಡಳಿತಾಧಿಕಾರಿಗಳು ಪ್ರಶ್ನಿಸಿದಾಗ, ಅವರು ಕಚೇರಿಗೆ ಬಂದು ನನಗೆ ಕಳುಹಿಸಿದರು ಮೇಡಂ ಎನ್ನುತ್ತಿದ್ದಂತೆ ಮತ್ತಷ್ಟು ಆಕ್ರೋಶಗೊಂಡ ಡಾ. ನಂದಾ ಹನಬರಟ್ಟಿ ಅವರು ಜಿಪಂ ಸಿಇಒಗೆ ಪಿಡಬ್ಲೂಡಿ ಎಇಇ ಜೆ.ಎಸ್.ಪಾಟೀಲ ಮೇಲೆ ರಿಪೋರ್ಟ್ ಮಾಡಿ ಎಂದು ಸೂಚಿಸಿದರು. ಇದೇ ಮಾದರಿಯಲ್ಲಿ ಪಿಆರ್‌ಡಿ ಎಇಇ ರಾಘವೇಂದ್ರ ಪುರೋಹಿತ ಕೂಡ ಕಚೇರಿಗೂ ಬಾರದೆ ಸಭೆಗಳಿಗೂ ಹಾಜರಾಗದೆ ತಮ್ಮ ಸಿಬ್ಬಂದಿ ಕಳುಹಿಸುತ್ತಿರುವ ಘಟನೆಗಳ ಬಗ್ಗೆ ತಾಲೂಕಾಡಳಿತಾಧಿಕಾರಿಗಳು ಖಂಡಿಸಿದರು. ತಾಲೂಕಿನಲ್ಲಿ ಇಂತಹ ಅಧಿಕಾರಿಗಳಿದ್ದರೆ ಅಭಿವೃದ್ಧಿ ಕಾರ್ಯಗಳು ನಡೆಯಲು ಸಾಧ್ಯವೇ ಎಂದು ಬೇಸರ ವ್ಯಕ್ತಪಡಿಸಿದ ಅವರು, ಇವರ ಮೇಲೂ ರಿಪೋರ್ಟ್ ಹಾಕಿ ಮತ್ತು ಅಬಕಾರಿ ಇಲಾಖೆಯ ಅಧಿಕಾರಿಗಳು ಸಹ ಯಾವ ಸಭೆಗೂ ಬರುತ್ತಿಲ್ಲ, ಅವರೇನು ನಾಪತ್ತೆಯಾಗಿದ್ದಾರಾ ಎಂದು ಪ್ರಶ್ನಿಸುವ ಮೂಲಕ ಅವರಿಗೆ ನೋಟಿಸ್ ಜಾರಿ ಮಾಡುವಂತೆ ತಾಪಂ ಇಒಗೆ ಸೂಚಿಸಲಾಯಿತು.

> ನೀರಾವರಿ, ರೇಷ್ಮೆ, ಅರಣ್ಯ, ಲ್ಯಾಂಡ್ ಆರ್ಮಿ, ದೇವರಾಜು ಅರಸು ನಿಗಮ, ಅಲ್ಪಸಂಖ್ಯಾತ, ಕೈಗಾರಿಕೆ ಸೇರಿ ಅನೇಕ ಇಲಾಖೆಗಳ ಅಧಿಕಾರಿಗಳು ಸಭೆಗೆ ಬಂದಿಲ್ಲ. ಇವರಿಗೆ ಸಭೆಗಳ ಮಹತ್ವ ಗೊತ್ತಿಲ್ಲವೆ? ಇವರಿಗೆಲ್ಲರಿಗೂ ನೋಟಿಸ್ ಜಾರಿ ಮಾಡಿ. ಇಂದಿನ ಸಭೆಯಲ್ಲಿ ಠರಾವು ಮಾಡಿ. ಈ ಇಲಾಖೆಗಳ ಹಿರಿಯ ಅಧಿಕಾರಿಗಳ ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ತರಬೇಕು.
>
> ■ ಡಾ. ನಂದಾ ಹನಬರಟ್ಟಿ, ಆಡಳಿತಾಧಿಕಾರಿ

ಬದುಕಿನ ಕಷ್ಟಗಳಿಗೆ ಜ್ಞಾನವೇ ಆಧಾರ

•**ಮುಂಡರಗಿ:** ಜೀವನ ನಡೆಸಲು ಶಿಕ್ಷಣವೇ ಬೇಕು ಅಂತ ಇಲ್ಲ, ಬುದ್ಧಿ ಇದ್ದರೆ ಉತ್ತಮ ರೀತಿ ಜೀವನ ನಡೆಸಬಹುದು. ಮನುಷ್ಯ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು ಎನ್ನುವ ಅರಿವು ಹೊಂದಬೇಕು. ಮನುಷ್ಯ ಜೀವನದಲ್ಲಿ ಇಚ್ಛಾಶಕ್ತಿಯಿಂದ ಬಾಳಬೇಕು ಎಂದು ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ ಹೇಳಿದರು.

ಪಟ್ಟಣದ ಜಗದ್ಗುರು ತೋಂಟದಾರ್ಯ ಶಾಖಾಮಠದಲ್ಲಿ ಜರುಗಿದ 62ನೇ ತ್ರೈಮಾಸಿಕ ಶಿವಾನುಭವದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಮನುಷ್ಯನಿಗೆ ಜ್ಞಾನವನ್ನು ಪ್ರಕೃತಿಯು ನೀಡುತ್ತದೆ. ಬದುಕಿನ ಕಷ್ಟಗಳಿಗೆ ಜ್ಞಾನವೇ ಆಧಾರ. ಶರಣರು ವಾಸ್ತವಿಕವಾಗಿ ಅನುಭಾವ ತಿಳಿಪಡಿಸಿದರು. ಅನುಭಾವ ಅರಿತು ಬಾಳಿದರೆ ಸುಂದರ ಜೀವನ ಸಾಧ್ಯ. ಅರಿವಿನ ಪ್ರಜ್ಞೆ ಹೊಂದಿದರೆ ಅದುವೇ ಅನುಭಾವ. ವ್ಯಕ್ತಿಯು ತನ್ನ ವೃತ್ತಿಯನ್ನು ಪ್ರಾಮಾಣಿಕತೆಯಿಂದ ಮಾಡಬೇಕು ಎಂದರು.

ನಿವೃತ್ತ ಪ್ರಾಧ್ಯಾಪಕ ಪ್ರಭು ಸೊಪ್ಪಿನ ಮಾತನಾಡಿ, ಬಸವಣ್ಣನವರು ಸಮಾಜದಲ್ಲಿ ಅಂಧಕಾರ, ಮೂಢನಂಬಿಕೆ ತೊಲಗಿಸಿ ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದರು. ಶರಣರ ನುಡಿಯಿಂದ ಬದುಕು ಸುಂದರವಾಗಿರುತ್ತದೆ. ಕಾಯಕದ ಮಹತ್ವವನ್ನು ಅರಿಯಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಪದಕ ವಿಜೇತ ಪೊಲೀಸ್ ಕಾನ್‌ಸ್ಟೇಬಲ್ ಜಾಫರ್ ಬಚ್ಚೇರಿ, ಅತ್ಯುತ್ತಮ ಗ್ರಂಥಪಾಲಕ ಪುರಸ್ಕೃತ ಹಾಲಪ್ಪ ಕೊರ್ಲಹಳ್ಳಿ, ಭಕ್ತಿಸೇವೆ ವಹಿಸಿಕೊಂಡಿದ್ದ ಮುಖ್ಯಶಿಕ್ಷಕ ಡಾ.ನಿಂಗು ಸೊಲಗಿ ಹಾಗೂ ಪಿಯುಸಿಯ ಕಲಾ, ವಾಣಿಜ್ಯ, ವಿಜ್ಞಾನ ವಿಭಾಗದಲ್ಲಿ ಮತ್ತು ಎಸ್ಸೆಸ್ಸೆಲ್ಸಿಯಲ್ಲಿ ತಾಲೂಕಿಗೆ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಜಯಶ್ರೀ ಅಳವಂಡಿ, ಶರಣಪ್ಪ ಕುಬಸದ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಸುಧಾ ಗುಡಿ ಧರ್ಮಗ್ರಂಥ ಪಠಿಸಿದರು. ನಂದಿತಾ ದಂಡಿನ ವಚನ ಚಿಂತನ ಮಾಡಿದರು. ಮುಕ್ತಾಯಕ್ಕ ಬಳಗದವರು ಪ್ರಾರ್ಥಿಸಿದರು. ಪ್ರವಚನ ಸಮಿತಿ ಅಧ್ಯಕ್ಷ ಬಸಯ್ಯ ಗಿಂಡಿಮಠ ಉಪಸ್ಥಿತರಿದ್ದರು. ಕೊಟ್ರೇಶ ಅಂಗಡಿ ನಿರೂಪಿಸಿದರು.



14 ಕಳ್ಳತನ ಪ್ರಕರಣ ಭೇದಿಸಿ 11 ಆರೋಪಿಗಳ ವಶ

•**ಗದಗ:** ಕಳೆದ ಒಂದು ವರ್ಷದ ಅವಧಿಯಲ್ಲಿ ಅವಳಿ ನಗರ ವ್ಯಾಪ್ತಿಯಲ್ಲಿ ನಡೆದ 14 ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ 11 ಜನ ಆರೋಪಿಗಳನ್ನು ಬಂಧಿಸಿ 1.26 ಕೋಟಿ ರೂ. ಮೌಲ್ಯದ ಚಿನ್ನಾಭರಣ, ಬೆಳ್ಳಿ ಆಭರಣ ಹಾಗೂ ಬೆಲೆ ಬಾಳುವ ವಸ್ತುಗಳನ್ನು ಜಿಲ್ಲೆಯ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಆ ಪೈಕಿ 703 ಗ್ರಾಂ. ಬಂಗಾರದ ಆಭರಣಗಳು, 4,337 ಗ್ರಾಂ. ಬೆಳ್ಳಿ ಆಭರಣಗಳು, ಕಳ್ಳತನಕ್ಕೆ ಬಳಕೆ ಮಾಡುತ್ತಿದ್ದ ಎರಡು ಮೋಟಾರ್ ಸೈಕಲ್, ಒಂದು ಟಾಟಾ ಕಂಪನಿಯ ಇಂಟ್ರಾ ಪಿಕಪ್ ಗೂಡ್ ವಾಹನ ಹಾಗೂ ಮಾರುತಿ ಸುಜುಕಿ ಸ್ವಿಫ್ಟ್ ಕಾರು ಸೇರಿ ಅಪಾರ ಪ್ರಮಾಣದ ಬೆಲೆಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳಲು ಯಶಸ್ವಿಯಾಗಿದ್ದಾರೆ.

ಒಂಟಿ ಮನೆ ಹಾಗೂ ಬೀಗ ಹಾಕಿರುವ ಮನೆ ಟಾರ್ಗೆಟ್ ಮಾಡಿ, ಆ ಸ್ಥಳದಲ್ಲಿನ ಸಿಸಿ ಕ್ಯಾಮೆರಾಗಳ ಬಗ್ಗೆ ಪರಿಶೀಲಿಸಿ ಹೊಂಚು ಹಾಕುತ್ತಿದ್ದ ಖದೀಮರು ದೂರದಲ್ಲಿಯೇ ವಾಹನ ನಿಲ್ಲಿಸಿ, ಮುಖಕ್ಕೆ ಮಾಸ್ಕ್, ಕೈಗೆ ಹ್ಯಾಂಡ್ ಗ್ಲೌಸ್ ಬಳಸಿಕೊಂಡು ಯಾವುದೇ ರೀತಿ ಸುಳಿವು ಬಿಡದೆ ಕಳ್ಳತನ ಮಾಡಿ, ಜನರಿಗೆ ಗೊಂದಲವಾಗುವಂತೆ, ಕಾನೂನು ಸುವ್ಯವಸ್ಥೆ ಧಕ್ಕೆ ಮಾಡುವಂತೆ ರಾತ್ರಿ ವೇಳೆ ಕಳ್ಳತನ ಮಾಡಿ ಪರಾರಿಯಾಗುತ್ತಿದ್ದರು. ಮೊಬೈಲ್ ಫೋನ್ ಬಳಸದೆ ಚಾಣಾಕ್ಷತನದ ರೀತಿಯಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪಿಗಳು ಹೇಗೆ ಬಂದು ಹೇಗೆ ಹೋದರು ಎಂಬುದು ತಿಳಿಯುತ್ತಿರಲಿಲ್ಲ, ಜೊತೆಗೆ ಸಿಸಿ ಕ್ಯಾಮೆರಾದಲ್ಲಿ ಪತ್ತೆಯಾಗುತ್ತಿರಲಿಲ್ಲ. ಇಂತಹ ಚಾಲೆಂಜಿಂಗ್ ಪ್ರಕರಣ ಭೇದಿಸಲು ಜಿಲ್ಲೆಯ ಪೊಲೀಸರು ಮೂರು ವಿಶೇಷ ತಂಡ ರಚಿಸಿ, ಮಧ್ಯಪ್ರದೇಶ, ಮಹಾರಾಷ್ಟ್ರದ ಸೊಲ್ಲಾಪುರ, ಸಾವಂತವಾಡಿ, ರಾಜ್ಯದ ಬೆಳಗಾವಿ, ಹಳಿಯಾಳ, ಕಾರವಾರ, ಧಾರವಾಡ ಸೇರಿ ಇತರೆಡೆ ತಿಂಗಳಾನುಗಟ್ಟಲೇ ಶೋಧ ನಡೆಸಿದ್ದರು. ಪ್ರಮುಖ 11 ಪ್ರಕರಣಗಳ ಪೈಕಿ ಜಿಲ್ಲೆಯ ಬಡಾವಣೆ ಠಾಣೆಗೆ ಸಂಬಂಧಿಸಿದ 4, ಶಹರ ಠಾಣೆಗೆ ಸಂಬಂಧಿಸಿದ 3 ಹಾಗೂ ಬೆಳಗಾವಿ ಜಿಲ್ಲೆಯ ಮಾರಿಹಾಳ ಠಾಣೆಗೆ ಸಂಬಂಧಿಸಿದ 4 ಪ್ರಕರಣಗಳಲ್ಲಿ ದೊರೆತ ಒಂದು ಸಣ್ಣ ಸುಳಿವು ಆರೋಪಿಗಳನ್ನು ಪತ್ತೆ ಹಚ್ಚಲು ನೆರವಾಗಿದ್ದು, ಒಟ್ಟಾರೆ ಪ್ರಕರಣವನ್ನು ಪೊಲೀಸರು ಭೇದಿಸಿ ಯಶಸ್ವಿಯಾಗಿದ್ದಾರೆ.

> ಜಿಲ್ಲೆ ಸೇರಿ ಬೆಳಗಾವಿಯಲ್ಲಿ ನಡೆದಿರುವ ಕಳ್ಳತನ ಪ್ರಕರಣ ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶಕ್ಕೆ ಲಿಂಕ್ ಇರುವುದರಿಂದ ಆಪರೇಷನ್ ಕರ್ನಾಟಕಕ್ಕೆ ಮಾತ್ರ ಸೀಮಿತವಾಗದೆ ಅಂತಾರಾಜ್ಯ ಕಳ್ಳತನ ಪ್ರಕರಣವಾಗಿ ತೆಗೆದುಕೊಳ್ಳಲಾಗಿತ್ತು. ಪ್ರಕರಣದ ಪತ್ತೆಗೆ ಶ್ರಮಿಸಿದ ಎಲ್ಲ ಸಿಬ್ಬಂದಿಗೂ ಸೂಕ್ತ ಬಹುಮಾನ ನೀಡಲಾಗುತ್ತಿದೆ.
>
> ■ ರೋಹನ್ ಜಗದೀಶ್, ಎಸ್ಪಿ

ಆರೋಪಿಗಳೆಲ್ಲರೂ ಸಂಬಂಧಿಕರು: ಚಿಂದಿ ಆಯುವ ಕೆಲಸ ಮಾಡುತ್ತಿದ್ದ ಆರೋಪಿಗಳು ಒಂದೇ ಊರಿನವರಾಗಿರದಿದ್ದರೂ ಒಬ್ಬರಿಗೊಬ್ಬರು ಸಂಬಂಧಿಕರಾಗಿದ್ದರು. ಮೊಬೈಲ್ ಬಳಸದೆ ಒಂದು ಸಣ್ಣ ಮೆಸೆಜ್ ಮೂಲಕ ಕಳ್ಳತನದಲ್ಲಿ ಭಾಗಿಯಾಗುತ್ತಿದ್ದರು. ಬೆಳಗಾವಿ ಜಿಲ್ಲೆಯ ಕಿತ್ತೂರು ತಾಲೂಕಿನ ಕಾದ್ರೋಳಿಯ ಸುರೇಶ, ಸಣ್ಣಸುರೇಶ ಸಿಂಗನೂರ, ಧಾರವಾಡ ಜಿಲ್ಲೆಯ ಅಳ್ನಾವರದ ನಾಗಪ್ಪ ದುರಗಮುರಗಿ, ಗದಗದ ಶಿವು ಬೆಳಗಂಟಿ, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ದಡ್ಡಿ ಗ್ರಾಮದ ಸುರೇಶ ತಮ್ಮಣ್ಣವರ, ಧಾರವಾಡ ಜಿಲ್ಲೆಯ ವೆಂಕಟಾಪೂರದ ಶಂಕರ ಕರಿ, ಧಾರವಾಡದ ಮಂಜುನಾಥ ಬಾದಗಿ, ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಬೆಳಗಾಲಪೇಟೆಯ ಹುಲಗೆಪ್ಪ ಬೆಳಗಾಲಪೇಟೆ, ಧಾರವಾಡ ಜಿಲ್ಲೆಯ ಮುನವಳ್ಳಿಯ ಆನಂದ ಯರಗಣ್ಣವರ ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.



ಗದಗ: ಒಂದು ವರ್ಷದ ಅವಧಿಯಲ್ಲಿ ಅವಳಿ ನಗರ ವ್ಯಾಪ್ತಿಯಲ್ಲಿ ನಡೆದ 14 ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ 11 ಜನ ಆರೋಪಿಗಳನ್ನು ಬಂಧಿಸಿ 1.26 ಕೋಟಿ ರೂ.ಮೌಲ್ಯದ ಚಿನ್ನಾಭರಣ, ಬೆಳ್ಳಿ ಆಭರಣ ಹಾಗೂ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಜನ್ಮದಿನ: ಸಾಮಾಜಿಕ ಸೇವಾಕಾರ್ಯ



•**ನರಗುಂದ:** ಪಟ್ಟಣದ ವಿವಿಧ ಕಡೆಗಳಲ್ಲಿ ಶಾಸಕ ಸಿ.ಸಿ. ಪಾಟೀಲ ಅವರ ಪುತ್ರ ಉಮೇಶಗೌಡ ಪಾಟೀಲ ಅವರ 41ನೇ ಜನ್ಮದಿನದ ನಿಮಿತ್ತ ಸಾಮಾಜಿಕ ಸೇವಾಕಾರ್ಯಗಳು ಜರುಗಿದವು. ಉಮೇಶಗೌಡ ಪಾಟೀಲ ಅವರ ಜನ್ಮದಿನದ ನಿಮಿತ್ತ ಅವರ ಅಭಿಮಾನಿ ಬಳಗವು 2025-26ನೇ ಸಾಲಿನಲ್ಲಿ ಎಸ್‌ಎಸ್‌ಎಲ್ಸಿ ಹಾಗೂ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಬಾಬಾಸಾಹೇಬ ಭಾವೆ ಸರ್ಕಾರಿ ತಾಲೂಕಾಸ್ಪತ್ರೆಯ ಒಳರೋಗಿಗಳಿಗೆ ಮತ್ತು ಸಿಬ್ಬಂದಿಗೆ ಹಣ್ಣು ಹಂಪಲ ವಿತರಿಸಲಾಯಿತು. ಪಟ್ಟಣದ ಹೊರವಲಯದಲ್ಲಿನ ಬಸವೇಶ್ವರ ನಗರದಲ್ಲಿ ಸಸಿ ನೆಟ್ಟು ಹುಟ್ಟುಹಬ್ಬ ಆಚರಿಸಲಾಯಿತು. ಶಾಸಕ ಸಿ.ಸಿ. ಪಾಟೀಲ, ಪುತ್ರ ಉಮೇಶಗೌಡ ಪಾಟೀಲ, ನಾಗನಗೌಡ ತಿಮ್ಮನಗೌಡ್ರ, ಶಿವಾನಂದ ಮುತ್ತವಾಡ, ಎಸ್.ಆರ್. ಪಾಟೀಲ, ಅನೀಲ ಧರಿಯಣ್ಣವರ, ಪವಾಡೆಪ್ಪ ವಡ್ಡಿಗೇರಿ, ಚಂದ್ರು ದಂಡಿನ, ಬಸಪ್ಪ ಮಳಗಿ, ಮಲ್ಲಪ್ಪ ಮೇಟಿ, ಗುರಣ್ಣ ಆದೆಪ್ಪನವರ, ಈರಣ್ಣ ಹೊಂಗಲ, ಗೌಸ ತಾಲೀಮನವರ, ಸಿದ್ದೇಶ ಹೂಗಾರ, ಸಂತೋಷ ಹಂಚಿನಾಳ ಇತರರಿದ್ದರು.

ಬಿಜೆಪಿ ಸದಸ್ಯರ ಸದಸ್ಯತ್ವ ಊರ್ಜಿತ

•**ಗದಗ:** ನಕಲಿ ಠರಾವು ಸೃಷ್ಟಿಸಿದ ಆರೋಪದ ಮೇಲೆ ಗದಗ ಬೆಟಗೇರಿ ನಗರಸಭೆಯ ಮೂವರು ಬಿಜೆಪಿ ಸದಸ್ಯರ ಸದಸ್ಯತ್ವ ರದ್ದು ಮಾಡಿ ಆದೇಶಿಸಿದ್ದ ಏಕಸದಸ್ಯ ಪೀಠದ ತೀರ್ಪನ್ನು ಧಾರವಾಡ ಹೈಕೋರ್ಟ್‌ನ ದ್ವಿಸದಸ್ಯ ಪೀಠ ರದ್ದುಪಡಿಸಿದ್ದು, ಬಿಜೆಪಿಯ ಉಷಾ ದಾಸರ, ಅನಿಲ್ ಅಬ್ಬಿಗೇರಿ ಹಾಗೂ ಮುತ್ತು ಮುಶಿಗೇರಿ ಅವರ ಸದಸ್ಯತ್ವವನ್ನು ಊರ್ಜಿತಗೊಳಿಸಿ ಬುಧವಾರ ಆದೇಶಿಸಿದೆ. ನಕಲಿ ಠರಾವು ಸೃಷ್ಟಿಸಿ, ಪೌರಾಯುಕ್ತರ ಸಹಿ ಫೋರ್ಜರಿ ಮಾಡಿದ ಆರೋಪದ ಮೇಲೆ ಗದಗ ಬೆಟಗೇರಿ ನಗರಸಭೆಯ ಬಿಜೆಪಿ ಸದಸ್ಯರಾದ ಉಷಾ ದಾಸರ, ಅನಿಲ್ ಅಬ್ಬಿಗೇರಿ ಹಾಗೂ ಮುತ್ತು ಮುಶಿಗೇರಿ ಅವರ ಸದಸ್ಯತ್ವವನ್ನು ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರು ಅನರ್ಹಗೊಳಿಸಿದ್ದರು. ಪ್ರಾದೇಶಿಕ ಆಯುಕ್ತರು ಸರಿಯಾಗಿ ತನಿಖೆ ನಡೆಸದೇ ಬಿಜೆಪಿ ಸದಸ್ಯರ ಸದಸ್ಯತ್ವ ಅನರ್ಹಗೊಳಿಸಿದ್ದಾರೆ. ನಮಗೆ ಸದಸ್ಯತ್ವ ಮರಳಿಸಬೇಕು ಎಂದು ಬಿಜೆಪಿಗ ಸದಸ್ಯರು ಧಾರವಾಡ ಹೈಕೋರ್ಟ್‌ನ ದ್ವಿಸದಸ್ಯ ಪೀಠಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಪ್ರಕರಣ ಇತ್ಯರ್ಥಗೊಳ್ಳದೇ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಬಾರದು ಎಂದು ಸುಪ್ರೀಂ ಕೋರ್ಟ್‌ನಿಂದ ತಡೆ ಆದೇಶ ತಂದಿದ್ದರು.

ಪ್ರಾಣ ಪ್ರತಿಷ್ಠಾಪನೆ ಕಾರ್ಯ ಇಂದು

•**ಲಕ್ಷ್ಮೇಶ್ವರ:** ಅಂಬಾಭವಾನಿ ದೇವಸ್ಥಾನಕ್ಕೆ ಹೊಂದಿಕೊಂಡ ಜಾಗದಲ್ಲಿ ಸುಮಾರು 2.50 ಕೋಟಿ ರೂ. ವೆಚ್ಚದಲ್ಲಿ ಶ್ರೀ ಸಹಸ್ರಾರ್ಜುನ ಸಮುದಾಯ ಭವನ ನಿರ್ಮಾಣಗೊಂಡು ಉದ್ಘಾಟನೆಗೊಳ್ಳಲಿದೆ.

ಏ.30 ರಂದು ಬೆಳಗ್ಗೆ 8 ಗಂಟೆಯಿಂದ ದೇವಸ್ಥಾನದ ಆವರಣದಲ್ಲಿ ನೂತನವಾಗಿ ಪ್ರತಿಷ್ಠಾಪಿಸಿರುವ ಗಣಪತಿ, ಸುಬ್ರಮಣ್ಯ, ಸಿಂಹ, ಕೂರ್ಮ ಮತ್ತು ಶ್ರೀ ದೇವಿಯ ಪಾದುಕಾ ಪ್ರಾಣ ಪ್ರತಿಷ್ಠಾಪನೆ ಕಾರ್ಯ, ಮೇ 1ರಂದು ಬೆಳಗ್ಗೆ 9 ಗಂಟೆಗೆ ಅಂಭಾಭವಾನಿ ದೇವಸ್ಥಾನದ ಕಳಸಾರೋಹಣ ಕಾರ್ಯಕ್ರಮವನ್ನು ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ನೆರವೇರಿಸಲಿದ್ದಾರೆ. ನಂತರ ಸಹಸ್ರಾರ್ಜುನ ಸಮುದಾಯ ಭವನವನ್ನು ಅಖಿಲ ಭಾರತ ಎಸ್‌ಎಸ್‌ಕೆ ಸಮಾಜದ ಚೇರಮನ್ ಸ್ವಾಮಿಸಾ ಖೋಡೆ ಉದ್ಘಾಟಿಸಲಿದ್ದಾರೆ. ನೂತನ ಗಣಪತಿ ದೇವಸ್ಥಾನಕ್ಕೆ ಎಸ್‌ಎಸ್‌ಕೆ ಸಮಾಜದ ರಾಜ್ಯಾಧ್ಯಕ್ಷ ಡಾ.ಶಶಿಕುಮಾರ ಮೆಹರವಾಡೆ ಪುಷ್ಪಾರ್ಪಣೆ ಸಲ್ಲಿಸಲಿದ್ದಾರೆ. ನಂತರ ನಡೆಯುವ ವೇದಿಕೆ ಕಾರ್ಯಕ್ರಮದ ಸಾನಿಧ್ಯವನ್ನು ಕೊಪ್ಪಳ ಗವಿಸಿದ್ದೇಶ್ವರ ಶ್ರೀಗಳು ವಹಿಸಲಿದ್ದು, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಲಕ್ಷ್ಮೇಶ್ವರ ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷ ಪರಶುರಾಮಸಾ ಬದಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಎಸ್‌ಎಸ್‌ಕೆ ಸಮಾಜದ ಅಧ್ಯಕ ಪರಶುರಾಮಸಾ ಬದಿ ಕಾರ್ಯಕ್ರಮದ ರೂಪರೇಷೆಗಳನ್ನು ಪೂರ್ವಭಾವಿ ಸಭೆಯಲ್ಲಿ ತಿಳಿಸಿದರು. ಈ ವೇಳೆ ಲಕ್ಷ್ಮಣಸಾ ರಾಜೋಳಿ, ತುಕಾರಾಮಸಾ ಬದಿ, ವಿಠ್ಠಲಸಾ ಶಿದ್ಲಿಂಗ, ತಿಪ್ಪಣ್ಣಸಾ ಬಾಕಳೆ, ಭರತ ಬಾಕಳೆ, ಗಣೇಶ ಬದಿ, ರಂಗನಾಥಸಾ ಬದಿ ಇದ್ದರು.

ಕುಸಿದ ಶೇಂಗಾ ಆವಕ: ವ್ಯಾಪಾರ ವಹಿವಾಟಿಗೆ ಹೊಡೆತ!

▶ಸಿ.ಎಸ್.ಅರಸನಾಳ

•**ಮುಂಡರಗಿ:** ಈ ವರ್ಷವೂ ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಶೇಂಗಾ ಆವಕ ತೀರ ಕಡಿಮೆಯಾಗುತ್ತಿದ್ದು, ಎಪಿಎಂಸಿ ವ್ಯಾಪಾರ ವಹಿವಾಟಿನಲ್ಲಿ ಹಿನ್ನಡೆ ಅನುಭವಿಸುವಂತಾಗಿದೆ. ಕಳೆದ ಎರಡು ವರ್ಷಗಳಿಂದ ಈ ಸಮಸ್ಯೆ ಎದುರಾಗುತ್ತಿದೆ. ಹಾಗೆಯೆ ಶೇಂಗಾ ದರವು ಸಹ ಕಳೆದ ತಿಂಗಳಿಗಿಂತ ಈ ತಿಂಗಳಿನಲ್ಲಿ ಕಡಿಮೆಯಾಗಿದ್ದು, ರೈತರನ್ನು ಸಂಕಷ್ಟಕ್ಕೆ ದೂಡಿದೆ.

ರೈತರು ಹೆಚ್ಚಾಗಿ ಮಾರ್ಚ್ ಮತ್ತು ಏಪ್ರಿಲ್ ನಲ್ಲಿ ಗೆಜ್ಜೆಶೇಂಗಾ (ಬಳ್ಳಿಶೇಂಗಾ) ಬೆಳೆಯನ್ನು ಒಕ್ಕಲು ಮಾಡುತ್ತಾರೆ. ಎರಡು ವರ್ಷಗಳ ಹಿಂದೆ ಇದೇ ತಿಂಗಳಲ್ಲಿ ಇಲ್ಲಿನ ಎಪಿಎಂಸಿಯಲ್ಲಿ ಎಲ್ಲಿ ನೋಡಿದರೂ ಶೇಂಗಾ ರಾಶಿ ಕಾಣುತ್ತಿತ್ತು. ಕನಿಷ್ಠ 5ಸಾವಿರ ಚೀಲದಿಂದ 7ಸಾವಿರ ಚೀಲದವರೆಗೂ ಶೇಂಗಾ ಆವಕವಾಗುತ್ತಿತ್ತು. ಆದರೆ ಪ್ರಸ್ತುತ ಶೇಂಗಾ ಆವಕವು 2 ಸಾವಿರದಿಂದ 3ಸಾವಿರ ಚೀಲಕ್ಕೆ ಕುಸಿದಿದೆ. ಇದರಿಂದ ವ್ಯಾಪಾರ ವಹಿವಾಟಿಗೆ ಹಿನ್ನಡೆಯಾಗುತ್ತಿದೆ. ಇದು ಇನ್ನಿತರ ವ್ಯಾಪಾರಗಳ ಮೇಲೂ ಪರಿಣಾಮ ಬೀರುತ್ತಿದೆ. ಎಪಿಎಂಸಿಯಲ್ಲಿ ಕಳೆದ ವಾರ 2000ಕಿಂತಲೂ ಹೆಚ್ಚು ಚೀಲಗಳ (ಪ್ರತಿಚೀಲ 30ಕೆಜಿ ತೂಕ) ಆವಕವಾಗಿದ್ದು, ಬರುಬರುತ್ತಾ 500 ಚೀಲಕ್ಕೆ ಬಂದು ನಿಂತಿದೆ.



- ವಿವಿಧ ಕಡೆ ಗೆಜ್ಜಿಶೇಂಗಾ ಬದಲಾಗಿ ಸೂರ್ಯಕಾಂತಿ, ಗೋವಿನಜೋಳ, ರಾಗಿ ಬೆಳೆ ಬೆಳೆದಿದ್ದರಿಂದ ಶೇಂಗಾ ಇಳುವರಿ ಕಡಿಮೆ
- ಕೊಪ್ಪಳದ ವಿವಿಧ ಗ್ರಾಮಗಳು, ಹೂವಿನಹಡಗಲಿ, ಹರಪನಹಳ್ಳಿ, ಕೊಟ್ಟೂರ, ಹಗರಿಬೊಮ್ಮನಹಳ್ಳಿ ಇನ್ನಿತರ ಕಡೆಗಳಿಂದ ರೈತರು ಶೇಂಗಾ ಮಾರಾಟಕ್ಕೆ ಆಗಮಿಸುತ್ತಿದ್ದರು. ಆದರೆ ಅದೇ ಭಾಗದ ಕೆಲವೆಡೆ ಖರೀದಿ ಪ್ರಕ್ರಿಯೆ ನಡೆಯುತ್ತಿದ್ದು, ಇಲ್ಲಿ ಸಿಗುತ್ತಿದ್ದ ದರ ಅಲ್ಲಿಯೂ ದೊರೆಯುತ್ತಿದೆ

ಎಪಿಎಂಸಿಗೆ 495 ಚೀಲಗಳ ಆವಕ

ಏ.29ರಂದು ಮುಂಡರಗಿ ಎಪಿಎಂಸಿಗೆ 495 ಚೀಲಗಳ ಆವಕವಾಗಿದೆ. ಪ್ರತಿಕ್ವಿಂಟಾಲ್ ಶೇಂಗಾಗೆ ಕನಿಷ್ಠ 4750 ರೂ ದಿಂದ ಗರಿಷ್ಠ 6,912ರೂ.ವರೆಗೆ ಮಾರಾಟವಾಗಿದೆ. ಶೇಂಗಾ ಆವಕ ಕಡಿಮೆ ಇದ್ದಾಗ ಕೆಲವೊಮ್ಮೆ ದರ ಹೆಚ್ಚಳವಾಗುತ್ತಿತ್ತು. ಆವಕ ಹೆಚ್ಚಾದಾಗ ದರ ಕಡಿಮೆ ಆಗುತ್ತಿತ್ತು. ಆದರೆ ಕಡಿಮೆ ಆವಕ ಇದ್ದರೂ ಸಹ ದರದಲ್ಲಿ ಬದಲಾವಣೆ ಕಾಣುತ್ತಿಲ್ಲ ಎನ್ನುತ್ತಿದ್ದಾರೆ ರೈತರು.

> ಪ್ರತಿ ಎಕರೆ ಶೇಂಗಾ ಬೆಳೆಯುವುದಕ್ಕೆ ಬೀಜ, ಗೊಬ್ಬರ, ಕೂಲಿ, ನಿರ್ವಹಣೆ ಸೇರಿ ಸುಮಾರು 40ಸಾವಿರ ರೂ.ಗಿಂತ ಹೆಚ್ಚು ಖರ್ಚು ಮಾಡುತ್ತೇವೆ. ಈ ಬಾರಿ ಇಳುವರಿಯೂ ಕಡಿಮೆಯಾಗಿದೆ. ಕಾರಣ ಏನೂ ಅಂತ ಗೊತ್ತಾಗುತ್ತಿಲ್ಲ. ಈ ಹಿಂದೆ ಎಕರೆ 25ಚೀಲ ಬರುತ್ತಿತ್ತು. ಇದೀಗ 15ರಿಂದ 20 ಚೀಲಕ್ಕೆ ಕುಸಿದಿದೆ. ಮಾರುಕಟ್ಟೆಯಲ್ಲಿ ಕಳೆದ ತಿಂಗಳು ಪ್ರತಿ ಕ್ವಿಂಟಾಲ್‌ಗೆ ಸುಮಾರು 10ಸಾವಿರ ರೂ. ವರೆಗೂ ಮಾರಾಟವಾಗಿದೆ. ಆದರೆ ಈ ತಿಂಗಳಲ್ಲಿ ದರ ಕಡಿಮೆ.
>
> ■ ಫಕೀರಡ್ಡಿ ಹಾದಿಮನಿ, ಬೆಣ್ಣಿಹಳ್ಳಿ ರೈತ

ದಿಗಂತ ವಿಶೇಷ

> ಎಪಿಎಂಸಿಗೆ ಶೇಂಗಾ ಆವಕ ಕಡಿಮೆಯಾಗಿದೆ. ಗುಣಮಟ್ಟ ಪ್ರಮಾಣ ಕಡಿಮೆ ಇರುವುದರಿಂದಲೂ ದರದಲ್ಲಿ ಬದಲಾವಣೆಯಾಗುತ್ತಿದೆ. ವಾತಾವರಣದಲ್ಲಿ ಬದಲಾವಣೆ ಹಿನ್ನಲೆ ಶೇಂಗಾ ಇಳುವರಿ ಮತ್ತು ಅದರ ಗುಣಮಟ್ಟ ಕಡಿಮೆ ಆಗಿದೆ. ಶೇಂಗಾ ಬಿತ್ತನೆ ಮಾಡಿ ಬೆಳೆಯುವುದಕ್ಕೆ ಖರ್ಚು ಹೆಚ್ಚು ಬರುತ್ತಿದೆ. ಇದರಿಂದಾಗಿಯೂ ಬಿತ್ತನೆ ಕಡಿಮೆಯಾಗುತ್ತಿದೆ.
>
> ■ ಪವನ ಚೋಪ್ರಾ, ಕಾರ್ಯದರ್ಶಿ ಎಪಿಎಂಸಿ ವರ್ತಕರ ಸಂಘ, ಮುಂಡರಗಿ

ಕಡು ಬೇಸಿಗೆಯಲ್ಲೂ ಕಂಗೊಳಿಸುವ ಗುಲ್ ಮೊಹರ್ ಮರ

▶ಮೆಹಬೂಬ ಎಚ್ ಮೋತೆಖಾನ್

•**ರೋಣ:** ರಾಜ್ಯದಲ್ಲಿ 40 ಡಿ.ಸೆ. ಉಷ್ಣಾಂಶದ ಮಧ್ಯೆ ಸಂಚಾರ ಮಾಡುವವರಿಗೆ ಗುಲ್ ಮೊಹರ್ ಮರವು ನೆರಳು ಒದಗಿಸುತ್ತಿದೆ.

ಇಷ್ಟೊಂದು ಪ್ರಮಾಣದ ಬಿಸಿಗಾಳಿ ಮಧ್ಯೆ ಕಡುಗಂಪು ಮತ್ತು ಕಿತ್ತಳೆ ಬಣ್ಣದ ರೀತಿಯಲ್ಲಿ ಅರಳುವ ಈ ಹೂವು ನೋಡುಗರ ಮನ ತಣಿಸುತ್ತಿದೆ. ಬೃಹತ್ ಆಕಾರದಲ್ಲಿ ಬೆಳೆದು ನಿಲ್ಲುವ ಈ ಮರಗಳು ಟೊಂಗೆ ಟೊಂಗೆಗೆ ತಾಗಿಕೊಂಡು ದಾರಿ ಸಂಚಾರ ಮಾಡುವವರಿಗೆ ನೆರಳಾಗಿ ನಿಲ್ಲುವುದು ವಾಡಿಕೆ. ಹೀಗಾಗಿ ಫೋಟೋ ಪ್ರಿಯರಿಗೆ ಗುಲ್‌ಮೊಹರ ಮರಗಳು ಆಕರ್ಷಣೆಯ ತಾಣವಾಗಿವೆ. ಈ ಮರವು ಬಿಸಿಲು ದಿನಗಳಲ್ಲಿ ಆಕರ್ಷಕ ಬಣ್ಣಗಳ ಹೂ ಅರಳಿಸುವ ಗುಣ ಹೊಂದಿದೆ. ಭಾರತ ದೇಶದ ಅತೀ ಹೆಚ್ಚು ಉಷ್ಣಾಂಶವಿರುವ ಪ್ರದೇಶದಲ್ಲಿ ವಿರಳ ಎಂಬಂತೆ ಈ ಮರಗಳು ನಮಗೆ ಕಾಣಸಿಗುತ್ತವೆ. ಇದು ಪತನಶೀಲ ಮರವಾಗಿದ್ದು ಶುಷ್ಕ ಋತುವಿನಲ್ಲಿ ತನ್ನ ಎಲೆಗಳನ್ನು ಹೆಚ್ಚಿನ ರೀತಿ ಕಳೆದುಕೊಳ್ಳುತ್ತಿರುವುದು ಬಹುಮುಖ್ಯ ಲಕ್ಷಣವಾಗಿದ್ದು, ಹೂಗಳು ಸಹ ಜ್ವಾಲೆಯಲ್ಲಿ ಸುಟ್ಟಿರುವ ಹಾಗೆ ಕಾಣಸುತ್ತವೆ ಎನ್ನುವುದು ಕೂಡ ಇಲ್ಲಿ ಮುಖ್ಯವಾಗಿದೆ. ಈ ಮರಗಳು ರೋಣ ಜಕ್ಕಲಿ ರಸ್ತೆ, ಸವಡಿ ಗದಗ ರಸ್ತೆ, ಎಂಆರ್‌ಬಿಸಿ ಪ್ರವಾಸಿ ಮಂದಿರ ರೋಣ, ತಹಶೀಲ್ದಾರ್ ಕಚೇರಿ ಪ್ರದೇಶದಲ್ಲಿ ಗುಲ್‌ಮೊಹರ್ ಗಿಡಗಳು ಹೆಚ್ಚಿವೆ. ರೋಣದ ಎಂಆರ್‌ಬಿಸಿ ಪರೀವಿಕ್ಷಣಾ ಮಂದಿರದ ಬಳಿ ಬೆಳೆದು ನಿಂತಿರುವ ಗುಲ್ ಮೊಹರ್ ಮರಗಳು ಪಿಕ್‌ನಿಕ್ ಸ್ಪಾಟ್ ಎಂಬಂತೆ ಕಂಡು ಬರುತ್ತಿವೆ. ಇಲ್ಲಿ ಕುಟುಂಬ ಸಮೇತ ಫೋಟೋ ಶೂಟ್ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಜನರು ಬರುತ್ತಿದ್ದಾರೆ. ಗುಲ್‌ಮೊಹರ್, ಸಂಕೇಶ್ವರ ಮರ, ಮೇ ತಿಂಗಳಲ್ಲಿ ಹೂ ಬಿಡುವ ಹಿನ್ನಲೆಯಲ್ಲಿ ಮೇ ಫ್ಲವರ್, ಡೆಲೋನಿಕ್ಷ ರೆಜಿಯಾ, ಫ್ಲೇಮ್ ಟ್ರೀ, ರಾಯಲ್ ಪೋಯಿನ್ಸಿಯಾನ್ ಎಂದಲೂ ಕರೆಯುತ್ತಾರೆ.



ಗುಲ್‌ಮೊಹರ್ ಔಷಧಿಗೆ ಬಳಕೆ

ಗುಲ್‌ಮೊಹರ್ ಮರವು ವಿಶಾಲ ರೀತಿಯಲ್ಲಿ ನೆರಳು ನೀಡುವ ಗುಣ ಹೊಂದಿದ್ದು, ಮೇ ತಿಂಗಳಲ್ಲಿ ಹೆಚ್ಚು ಹೂಗಳನ್ನು ಬಿಡುವ ಲಕ್ಷಣ ಹೊಂದಿದೆ. ಈ ಮರವು ಔಷಧಿ ಬಳಕೆಗೂ ಸಹ ಬರುತ್ತದೆ. ಅತೀ ಉಷ್ಣಾಂಶ ಪ್ರದೇಶದಲ್ಲಿ ಹೆಚ್ಚಿನ ರಿತಿಯಲ್ಲಿ ಕಾಣ ಸಿಗುತ್ತದೆ ಎನ್ನುತ್ತಾರೆ ರೋಣ ಅರಣ್ಯಾಧಿಕಾರಿ ಅನ್ವರ್ ಕೊಲ್ಹಾರ ತಿಳಿಸಿದ್ದಾರೆ.

ನಿರೋಧಕ ಗುಣ ಹೊಂದಿದ ಮರ

ಗುಲ್‌ಮೊಹರ್‌ನ ಎಲೆ, ಹೂ, ತೊಗಟೆ ಸಾಂಪ್ರದಾಯಿಕ ಪರಿಹಾರವಾಗಿ ಬಳಸುವ ಪ್ರಾಥಮಿಕ ಭಾಗವಾಗಿದ್ದು, ಸಂಧಿವಾತ, ಜೀರ್ಣಕಾರಿ ಸಮಸ್ಯೆಗಳಂತಹ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು, ಆ್ಯಂಟಿಮೈಕ್ರೋಬಿಯಲ್, ಉರಿಯೂತ ನಿವಾರಕ ಉತ್ಕರ್ಷಣ ನಿರೋಧಕ ಗುಣಗಳನ್ನು ಹೊಂದಿದೆ ಎನ್ನುತ್ತಾರೆ ತಜ್ಞರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ
ಬಿಎಸ್‌ವೈ ಅಭಿಮಾನೋತ್ಸವ ಯಶಸ್ವಿಗೊಳಿಸಿ



ವಿಜಯನಗರ: ರಾಜ್ಯದಲ್ಲಿ ಕಳೆದ 50 ವರ್ಷಗಳಿಂದ ಬಡವರು, ರೈತರು ಹಾಗೂ ಶೋಷಿತ ಸಮುದಾಯಗಳ ಜನರ ಪರವಾಗಿ ಧ್ವನಿ ಎತ್ತುವ ಏಕೈಕ ನಾಯಕ ಎಂಬುದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಹೆಗ್ಗಳಿಕೆ. ರಾಜ್ಯದಗುಣಾತ್ಮಕ ಬದಲಾವಣೆಗಾಗಿ ತಮ್ಮಜೀವನವನ್ನೇ ಮುಡುಪಾಗಿಸಿದ ಮಹಾನ್ ನಾಯಕನಿಗೆ ಅಭಿನಂದನೆ ಸಲ್ಲಿಸಲು ಚಿತ್ರದುರ್ಗದಲ್ಲಿ ಮೇ 9 ರಂದು ಏರ್ಪಡಿಸಿರುವ ಬಿಎಸ್‌ವೈ ಅಭಿಮಾನೋತ್ಸವಕ್ಕೆ ಪಕ್ಷದ ಕಾರ್ಯಕರ್ತರು ಹಾಗೂ ನಾಡಿನ ಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅಭೂತಪೂರ್ವವಾಗಿ ಯಶಸ್ವಿಗೊಳಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮನವಿ ಮಾಡಿದರು.

ಚಿತ್ರದುರ್ಗದಲ್ಲಿ ಮೇ 9 ರಂದು ಬೃಹತ್ ಕಾರ್ಯಕ್ರಮ

ಬಿಎಸ್‌ವೈ ಅಭಿಮಾನೋತ್ಸವದನಿಮಿತ್ತ ಹೊಸಪೇಟೆಯಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಬುಧವಾರ ಏರ್ಪಡಿಸಿದ್ದ ವಿಜಯನಗರ, ಬಳ್ಳಾರಿ, ಕೊಪ್ಪಳ ಜಿಲ್ಲೆಗಳ ಪ್ರಮುಖರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರ 50 ವರ್ಷಗಳ ನಿಸ್ವಾರ್ಥಕತೆಯಿಂದ ಜನ ಸೇವೆಯ ಸಲ್ಲಿಸಿದ್ದಾರೆ. ಅಂತಹ ಒಬ್ಬ ಪುಣ್ಯಾತ್ಮ ಹೋರಾಟಗಾರರ 50 ವರ್ಷಗಳ ರಾಜಕೀಯ ಪಯಣವನ್ನು ಅರ್ಥಪೂರ್ಣವಾಗಿ ಆಚರಿಸಿ, ಸಂಭ್ರಮಿಸಲು ಬಿಎಸ್‌ವೈ ಅಭಿಮಾನೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ರಾಜ್ಯದಲ್ಲಿ ಹಿಂದೆಂದೂಕೂಡ ಸೇರದಷ್ಟು ಸಾವಿರಕ್ಕೂ ಹೆಚ್ಚು ರಾಜ್ಯದ ಮಠ ಮಾನ್ಯದ ಗುರುಗಳು, ಜಗದ್ಗುರುಗಳು, ಸ್ವಾಮೀಜಿಗಳು, ಎಲ್ಲಾ ಸಮಾಜದ ಕನಿಷ್ಠ 10 ಲಕ್ಷ ಜನ ಅಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಯಡಿಯೂರಪ್ಪನವರು ಯಾವತ್ತೂ ಒಂದು ಜಾತಿಗೆ ಸೀತಿರಾಗಿ ಯೋಚನೆಯನ್ನು ಮಾಡಲಿಲ್ಲ. ಯಡಿಯೂರಪ್ಪನವರ ಮನೆಗೆ ರಾಜ್ಯದಲ್ಲಿ ಲಕ್ಷಾಂತರ ಕಾರ್ಯಕರ್ತರವನ್ನು ಬೆಳೆಸಿದ್ದಾರೆ. ನಾಲ್ಕು ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ. ಇಂತಹ ಹೋರಾಟಗಾರನ 50 ವರ್ಷಗಳ ರಾಜಕೀಯ ಪಯಣದ ಸಂಭ್ರಮೋತ್ಸವ ಕಾರ್ಯಕ್ರಮವು ಮುಂದಿನ ರಾಜ್ಯದ ಭವಿಷ್ಯವನ್ನು ಬದಲಾವಣೆ ಮಾಡುವಂತಹ ಶಕ್ತಿ ಅಭಿನೋತ್ಸವಕ್ಕೆ ಇದೆ ಎಂದು ಅವರು ಹೇಳಿದರು.

> ಬಿ.ಎಸ್.ಯಡಿಯೂರಪ್ಪ ಎಂದರೆ ಅದೊಂದು ದೊಡ್ಡ ಶಕ್ತಿಯಾಗಿದೆ. ಯಡಿಯೂರಪ್ಪನವರು ಬಿಜೆಪಿಯಲ್ಲಿ ಎಲ್ಲರನ್ನೂ ಬೆಳಸಿದ್ದಾರೆ. ಅವರ ಋಣ ತೀರಿಸಲು ಇದೊಂದು ಸದಾವಕಾಶ.
> ■ **ಬಿ. ಶ್ರೀರಾಮುಲು, ಮಾಜಿ ಸಚಿವ**

ಮಾಜಿ ಸಚಿವ ಬಿ. ಶ್ರೀರಾಮುಲು ಮಾತನಾಡಿ, ಬಳ್ಳಾರಿ, ವಿಜಯನಗರ, ಕೊಪ್ಪಳ ಮೂರು ಜಿಲ್ಲೆಗಳಿಂದ ಒಂದುವರೆ ಲಕ್ಷ ಜನರು ಕಾರ್ಯಕ್ರಮದಲ್ಲಿ ಸೇರಿಸಬೇಕು. ಪ್ರತಿ ಬೂತ ಮಟ್ಟದಿಂದ ಕನಿಷ್ಠ 100 ಜನರನ್ನು ಕರೆತರಬೇಕು. ಇದು ಬಿಜೆಪಿಯ ಒಗ್ಗಟ್ಟಿನ ಅಭಿಮಾನೋತ್ಸವ ಆಗಬೇಕು ಎಂದರು.

ಮಾಜಿ ಸಚಿವ ಬಿ. ಎಸ್. ಆನಂದ್ ಸಿಂಗ್ ಮಾತನಾಡಿ, ಬಿ.ಎಸ್.ವೈ ಅವರೊಂದಿಗೆ ಎರಡು ದಶಕಗಳ ಒಡನಾಟ ನಮ್ಮದು. ನಾನು, ಜನಾರ್ದನ ರೆಡ್ಡಿ ಹಾಗೂ ಶ್ರೀರಾಮುಲು ಶಾಸಕರಾಗಲು ಬಿ.ಎಸ್.ಯಡಿಯೂರಪ್ಪ ಅವರೇ ಕಾರಣ. ನಮ್ಮನ್ನು ಸಚಿವರನ್ನಾಗಿಸಿದರು. ವಿಜಯನಗರ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಒದಗಿಸಿದ್ದರಲ್ಲದೇ, ಈ ಭಾಗದ ಜನರ ಅನುಕೂಲಕ್ಕಾಗಿ ವಿಜಯನಗರ ಜಿಲ್ಲೆಯನ್ನು ಘೋಷಿಸಿದ ಕೀರ್ತಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ ಎಂದರು.

ಮಾಜಿ ಸಚಿವ ಜಿ. ಜನಾರ್ದನ ರೆಡ್ಡಿ, ಗೋವಿಂದ ಕಾರಜೋಳ, ಮುಖ್ಯ ಸಚೇತರು ವಿಧಾನಸಭೆಯ ದೊಡ್ಡನಗೌಡ ಪಾಟೀಲ್, ಶಾಸಕರಾದ ಕೃಷ್ಣನಾಯಕ್, ವೈ ಎಂ ಸತೀಶ್, ಮುಖಂಡರಾದ ಹೇಮಲತಾ ನಾಯಕ್, ಹಾಲಪ್ಪ ಆಚಾರ್, ಪಿ ರಾಜೀವ್, ಶರಣು ತಳ್ಳಿಕೆರೆ, ಸುರೇಶ್ ಬಾಬು, ಸೋಮಲಿಂಗಪ್ಪ, ಕೆ ಎಸ್ ದಿವಾಕರ್, ಬಸವರಾಜ ಕ್ಯಾಟವರ್, ಅಮರನಾಥ್ ಪಾಟೀಲ್, ಚನ್ನಬಸವನಗೌಡ ಪಾಟೀಲ್, ಅರುಣ್ ಶಹಪುರ್, ಬಲ್ಲಹುಣಸಿ ರಾಮಣ್ಣ, ಸಂಜೀವ ರೆಡ್ಡಿ, ಅನಿಲ್ ಕುಮಾರ್ ಮೋಕ, ನವೀನ್ ಗುಳಗಣ್ಣವರ, ದಡೆಸುಗೂರು ಬಸವರಾಜ್ ಸೇರಿದಂತೆ ಇತರರು ಸಭೆಯಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್‌ನಿಂದ ಭ್ರಷ್ಟಾಚಾರ

ರಾಜ್ಯದ ಕಾಂಗ್ರೆಸ್ ಸರ್ಕಾರದ ಬಗ್ಗೆ ಛೀ ಎಂದು ಜನ ಉಗಿಯುತ್ತಿದ್ದಾರೆ. ರಾಜ್ಯದಲ್ಲಿ ಭ್ರಷ್ಟಾಚಾರ ಎಷ್ಟರ ಮಟ್ಟಿಗೆ ನಡೆಯುತ್ತಿದೆ ಎಂದರೆ ಊಹಿಸಿಕೊಳ್ಳಲು ಆಗುತ್ತಿಲ್ಲ. ಜನರು ಕಾಂಗ್ರೆಸ್ ಸರ್ಕಾರಕ್ಕೆ ಶಾಪವನ್ನು ಹಾಕುತ್ತಿದ್ದಾರೆ. ಯಾವುದೇ ಕ್ಷೇತ್ರದಲ್ಲಿ ಯಾವುದೇ ವ್ಯಕ್ತಿ ಬಿಜೆಪಿ ಅಭ್ಯರ್ಥಿಯಾಗಿದ್ದರೂ, ಅವರನ್ನು ಗೆಲ್ಲಿಸುವ ಸಂಕಲ್ಪವನ್ನು ನಾಡಿನ ಜನ ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಕೈಗಾರಿಕಾಭಿವೃದ್ಧಿಯಿಂದ ನಗರ ಸುಧಾರಣೆ



ಹುಬ್ಬಳ್ಳಿ: ಯಾವುದೇ ಪ್ರದೇಶದ ಅಭಿವೃದ್ಧಿ ಸರ್ಕಾರದಿಂದ ಮಾತ್ರ ಅಸಾಧ್ಯ. ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು ಹಾಗೂ ಸಾರ್ವಜನಿಕರ ಸಹಭಾಗಿತ್ವ ಬಹಳ ಅವಶ್ಯಕವಾಗಿದೆ. ಒಂದು ನಗರ ಸುಧಾರಣೆಯಾಗಬೇಕಾದರೆ ಕೈಗಾರಿಕಾ ಅಭಿವೃದ್ಧಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ತಿಳಿಸಿದರು.

ನಗರದ ಎಪಿಎಂಸಿ ಆವರಣದ ವಿವಿಧೋದ್ದೇಶ ಕೈಗಾರಿಕಾ ಮತ್ತು ವಾಣಿಜ್ಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಮ್ಮಿಕೊಂಡಿರುವ 'ಇನ್‌ಕಾಮೆಕ್ -2026 ಬೃಹತ್ ವಸ್ತುಪ್ರದರ್ಶನದ ಅಂಗವಾಗಿ ಮಹಿಳಾ ಉದ್ಯಮಿದಾರರ ಸಮಾವೇಶ ಹಾಗೂ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಐದು ದಿನಗಳ ಕಾಲ ನಡೆದ ಇನ್ ಕಾಮೆಕ್ಸ್ ವಸ್ತು ಪ್ರದರ್ಶನದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕಾಭಿವೃದ್ಧಿ ಸಾರಿಗೆ ಸಂಪರ್ಕ ಹಾಗೂ ಮುಂದಿನ ಮೂರು ವರ್ಷದಲ್ಲಿ 3 ಸಾವಿರ ನವೋದ್ಯಮಿಗಳಿಗೆ ಪ್ರೋತ್ಸಾಹಿಸಿ ಸ್ಥಾಪಿಸುವ ಗುರಿಯನ್ನು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹೊಂದಿದೆ ಎಂದರು.

ಮಹಿಳಾ ಉದ್ಯಮಿಗಳನ್ನು ಸಹ ಪ್ರೋತ್ಸಾಹಿಸಲು ನಿರ್ಧರಿಸಿದ್ದು, ಉತ್ತರ ಕರ್ನಾಟಕ ಕೈಗಾರಿಕಾ ಭವಿಷ್ಯ ಸೃಷ್ಟಿಸಲು ಮುಂದಾಗಿದ್ದಾರೆ. ಈ ಭಾಗವೂ ವಿದ್ಯಾಕಾಶಿಯಾಗಿದ್ದು,ಮುಂದಿನ ದಿನಗಳಲ್ಲಿ ವಾಣಿಜ್ಯ ಕಾಶಿ ಆಗಬೇಕು. ಇದಕ್ಕೆ ಸಂಪೂರ್ಣ ಜಿಲ್ಲಾಡಳಿತ ನಿಮಗೆ ಕೈ ಜೊಡಿಸಲಿದೆ ಎಂದು ತಿಳಿಸಿದರು.

ಇನ್‌ಕಾಮೆಕ್ಸ್ 2026 ನ ಚೇರಮನ್ ಮಹಾದೇವ ಕರಮರಿ ಮಾತನಾಡಿ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಿಂದ 1996 ರಿಂದ ಇನ್‌ಕಾಮೆಕ್ಸ್ ವಸ್ತು ಪ್ರದರ್ಶನ ಆಯೋಜಿಸಲಾಗುತ್ತಿದೆ. ಇದು ಆರನೇ ಇನ್‌ಕಾಮೆಕ್ಸ್ ಪ್ರದರ್ಶನವಾಗಿದ್ದು, ಕೈಗಾರಿಕೋದ್ಯಮಿಗಳು, ನವೋದ್ಯಮಿಗಳು, ವ್ಯಾಪಾರಸ್ಥರು, ಗ್ರಾಹಕರನ್ನು ಒಂದೆ ಸೂರಿನಡಿ ಸೇರಿಸಿ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಅನುಕೂಲವಾಗಿದೆ. ಐದು ದಿನಗಳ ಕಾಲ ಸುಮಾರು 1 ಲಕ್ಷ ಜನರು ಪ್ರದರ್ಶನ ವೀಕ್ಷಿಸಿದ್ದಾರೆ ಎಂದರು.

ಇದು ಆರ್ಥಿಕ ಅಭಿವೃದ್ಧಿಗೆ ತಳಪಾಯವಾಗಲಿದೆ. ಮಳಿಗೆದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇನ್ ಕಾಮೆಕ್ಸ್ ವಸ್ತು ಪ್ರದರ್ಶನ ಫಲಪ್ರದವಾಗಿದೆ. 9 ಎಕರೆ ಜಾಗದ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರವು ಇನ್ನೂ ಹೆಚ್ಚು ಅಭಿವೃದ್ಧಿ ಹೊಂದಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಇನ್‌ಕಾಮೆಕ್ಸ್‌ನಲ್ಲಿ ಪಾಲ್ಗೊಂಡಿದ್ದ ಮಳಿಗೆದಾರರಿಗೆ ಪಾರಿತೋಷಕ ಮತ್ತು ಪ್ರಮಾಣಪತ್ರ ಪ್ರದಾನ ಮಾಡಿದರು.

ಕೆಸಿಸಿಐ ಮಾಜಿ ಅಧ್ಯಕ್ಷರಾದ ಮಹೇಂದ್ರ ಲದ್ದಡ, ವಿನಯ ಜವಳಿ, ರಮೇಶ ಪಾಟೀಲ, ಪದಾಧಿಕಾರಗಿಳಾದ ಉದಯ ರೇವಣಕರ, ಪ್ರವೀಣ ಅಗಡಿ, ಸಿದ್ದೇಶ್ವರ ಕಮ್ಮಾರ, ವೀರಣ್ಣ ಕಲ್ಲೂರ, ಜಯಪ್ರಕಾಶ ಟೆಂಗಿನಕಾಯಿ, ಪ್ರಕಾಶ ಶೃಂಗೇರಿ, ಅಶೋಕ ಗಡಾದ, ಶಶಿಧರ ಶೆಟ್ಟರ, ನಿಂಗಪ್ಪ ಬಿರಾದಾರ ಇತರರಿದ್ದರು.

ಅನುದಾನ ನೀಡಲಿ

ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಹು-ಧಾ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರ ಇಂತಹ ಬೃಹತ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಕ್ತ ಸ್ಥಳವಾಗಿದೆ. ಕೆಲವು ಪ್ರದರ್ಶನಗಳು ಖಾಸಗಿ ಸ್ಥಳಗಳಲ್ಲಿ ಜರುಗುತ್ತಿದ್ದು, ಟ್ರಾಫಿಕ್ ಹಾಗೂ ಪಾರ್ಕಿಂಗ್ ಸಮಸ್ಯೆಗಳು ಎದುರಾಗುತ್ತಿವೆ. ಆದ್ದರಿಂದ ಜಿಲ್ಲಾಧಿಕಾರಿಗಳು ಮುಂದಿನ ದಿನಗಳಲ್ಲಿ ಎಲ್ಲ ಪ್ರಮುಖ ಪ್ರದರ್ಶನಗಳು ಇದೇ ಕೇಂದ್ರದಲ್ಲಿ ಜರುಗುವಂತೆ ಕ್ರಮ ಕೈಗೊಳ್ಳಬೇಕು. ಕೇಂದ್ರದಲ್ಲಿ ಅರ್ಧಕ್ಕೆ ನಿಂತ ಮಳಿಗೆಗಳ ಕಾಮಗಾರಿ ಶೀಘ್ರದಲ್ಲಿ ಪೂರ್ಣಗೊಳಿಸಬೇಕು. ಇದಕ್ಕೆ ಬೇಕಾದ ಅನುದಾನ ಒದಗಿಸಲು ಕೆಸಿಸಿಐ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ಆಗ್ರಹಿಸಿದರು.

ಕಿರುಸುದ್ದಿ


ನಾಯಿ ದಾಳಿ: ನಾಲ್ಕು ಮಕ್ಕಳಿಗೆ ಗಾಯ

ಹಾವೇರಿ: ಜಿಲ್ಲೆಯ ಎರಡು ಕಡೆ ಪ್ರತ್ಯೇಕವಾಗಿ ಮಕ್ಕಳ ಮೇಲೆ ನಾಯಿಗಳು ದಾಳಿ ನಡೆಸಿದ ಪರಿಣಾಮ ನಾಲ್ವರು ಮಕ್ಕಳು ಗಾಯಗೊಂಡ ಘಟನೆ ನಡೆದಿದೆ. ಜಿಲ್ಲೆ ಬ್ಯಾಡಗಿ ತಾಲೂಕಿನ ಹೀರೆಹಳ್ಳಿ ಹಾಗೂ ಹಾವೇರಿಯ ಶಿವಾಜಿ ನಗರದಲ್ಲಿ ಮನೆಯ ಎದುರು ಆಟವಾಡುತ್ತಿದ್ದ ವೇಳೆ ಮಕ್ಕಳ ಮೇಲೆ ನಾಯಿ ದಾಳಿ ನಡೆದಿದೆ. ಈ ಘಟನೆಯಲ್ಲಿ ಹೀರೆಹಳ್ಳಿ ಗ್ರಾಮದ ಓರ್ವ ಬಾಲಕನಿಗೆ ರಕ್ತಪಾತವಾದ ಗಾಯವಾಗಿದೆ. ನಾಯಿ ದಾಳಿಗೆ ಒಳಗಾದ ಪ್ರತೀಕ್ (7), ಯಶವಂತ (3), ಫಾತಿಮಾ (5), ಅಹ್ಮದ್ ಖಾಲಿ(4) ಮಕ್ಕಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

1.74 ಕೋಟಿ ರೂ. ವಂಚನೆ

ಯಲ್ಲಾಪುರ: ಡಿಜಿಟಲ್ ವಂಚನೆಯಿಂದ ಬರೊಬ್ಬರಿ 1.74 ಕೋಟಿ ಕಳೆದುಕೊಂಡ ಘಟನೆ ತಾಲೂಕಿನ ಉಮ್ಮಚಗಿಯಲ್ಲಿ ನಡೆದಿದೆ. ಎಲ್‌ಐಸಿ ಏಜೆಂಟ್ ಹಾಗೂ ಕೃಷಿಕ ಆಗಿರುವ ಉಮ್ಮಚಗಿಯ ಶಿವಾನಂದ ಹೆಗಡೆ (69) ಎಂಬುವರಿಗೆ ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಪಂಗನಾಮ ಬಿದ್ದಿದೆ. ಏ.21ರಂದು ತಾನು ಮುಂಬೈ ಪೊಲೀಸ್ ಹೆಡ್ ಕ್ವಾರ್ಟರ್ಸ್‌ದಿಂದ ಕರೆ ಮಾಡುವುದಾಗಿ ಹೇಳಿ, ಯಾರೋ ಉಗ್ರಗಾಮಿಗಳು ನಿಮ್ಮಹೆಸರಿನಲ್ಲಿರುವ ಆಧಾರ್ ಕಾರ್ಡನ್ನು ಬಳಸಿಕೊಂಡು ಕೆನರಾ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದು ಅದರಿಂದ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆಸಿದ್ದಾರೆ. ಹೀಗಾಗಿ ನಿಮ್ಮ ಹೆಸರಿನಲ್ಲಿರುವ ಬ್ಯಾಂಕ್ ಖಾತೆಯ ಮೇಲೆ ಮನಿ ಲಾಂಡ್ರಿಂಗ್ ನಡೆಸಿದ ಬಗ್ಗೆ ಮುಂಬೈ ಕ್ರೈಂ ಬ್ರಾಂಚ್ ನಲ್ಲಿ ಎಫ್‌ಐಆರ್ ದಾಖಲಾಗಿದೆ ಎಂದು ಶಿವಾನಂದ ಹೆಗಡೆಯವರಿಗೆ ಹೆದರಿಸಿ ಹಣ ವರ್ಗಾವಣೆ ಮಾಡಿಕೊಂಡಿದ್ದಾರೆ. ಕೆಲ ದಿನಗಳ ನಂತರ ತಾನು ಮೋಸ ಹೋಗಿರುವುದನ್ನು ಅರಿತ ಶಿವಾನಂದ ಹೆಗಡೆ ಕಾರವಾರ ಸೈಬರ್ ಕ್ರೈಮ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಗೋಪಾಲ ನಾಗರಕಟ್ಟೆಯವರಿಗೆ ಸಮ್ಮಾನ



ಶಿರಸಿ: ಡಾ. ಹೆಡ್ಗೇವಾರ್ ಸ್ಮಾರಕ ಸಮಿತಿ, ನಾಗಪುರ ವತಿಯಿಂದ ನಡೆದ ಭವ್ಯ ಸಮ್ಮಾನ ಸಮಾರಂಭದಲ್ಲಿ ವಿಶ್ವ ಹಿಂದೂ ಪರಿಷತ್ತಿನ ಅಖಿಲ ಭಾರತೀಯ ಸಹ ಕಾರ್ಯದರ್ಶಿ ಗೋಪಾಲಜೀ ನಾಗರಕಟ್ಟೆ ಅವರನ್ನು ಸಮ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಾನನೀಯ ಸರಸಂಘಚಾಲಕ ಮೋಹನ್ ಭಾಗವತ್ ಸನ್ಮಾನ ಪತ್ರ ಪ್ರದಾನಮಾಡಿ ಗೌರವಿಸಿದರು. ಈ ಸಂದರ್ಭದಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಖಜಾಂಚಿ ಗೋವಿಂದ ದೇವ್ ಗಿರಿ ಜೀ ಮಹಾರಾಜ್, ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಾನನೀಯ ಸುರೇಶ ಜೋಶಿ ಕೂಡ ಉಪಸ್ಥಿತರಿದ್ದರು.

ಗೋಪಾಲಜಿ ನಾಗರಕಟ್ಟೆ ಅವರು ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರದಲ್ಲಿ ಶ್ರೀ ರಾಮಲಲಾರ ಭವ್ಯ ಮಂದಿರ ನಿರ್ಮಾಣ ಕಾರ್ಯದಲ್ಲಿ ನೀಡಿದ ಮಹತ್ವದ ಕೊಡುಗೆಯನ್ನು ಗುರುತಿಸಿ ಈ ಸನ್ಮಾನ ಪ್ರದಾನಿಸಲಾಯಿತು.

ಸನ್ಮಾನ ಪತ್ರದಲ್ಲಿ ಅವರ ತ್ಯಾಗ, ಸಮರ್ಪಣೆ ಮತ್ತು ರಾಷ್ಟ್ರಸೇವೆಯ ಭಾವನೆಗೆ ಮೆಚ್ಚುಗೆ ವ್ಯಕ್ತಪಡಿಸಲಾಗಿದ್ದು, 500 ವರ್ಷಗಳ ಹೋರಾಟದ ನಂತರ ನಿರ್ಮಾಣಗೊಂಡ ಶ್ರೀರಾಮ ಮಂದಿರವು ಭಾರತದ ಸಾಂಸ್ಕೃತಿಕ ವೈಭವದ ಪ್ರತೀಕವಾಗಿ ವಿಶ್ವದ ಗಮನ ಸೆಳೆಯುತ್ತಿದೆ ಎಂದು ಉಲ್ಲೇಖಿಸಲಾಗಿದೆ.

"ಭಾರತದ ಇತಿಹಾಸದಲ್ಲಿ ಅತ್ಯಂತ ಪುಣ್ಯಮಯ, ರಾಷ್ಟ್ರೀಯ ಅಸ್ಮಿತೆ

ಶ್ರೀ ರಾಮಮಂದಿರ ನಿರ್ಮಾಣದ ಅತೀ ಅಪರೂಪದ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಗೋಪಾಲ ಜೀ ಅವರಿಗೆ ಡಾ. ಹೆಡ್ಗೇವಾರ್ ಸ್ಮಾರಕ ಸಮಿತಿಯಿಂದ ಸಮ್ಮಾನಿಸಿರುವುದು ಅತ್ಯಂತ ಸಂತಸದ ಸಂಗತಿ. ಶ್ರೀಯುತ ಗೋಪಾಲ ಜೀ ಅವರ ಸಮರ್ಪಣಾ ಭಾವ, ಸಂಘಟನಾ ಚತುರತೆ ಹಾಗೂ ರಾಷ್ಟ್ರಮಂದಿರ ನಿರ್ಮಾಣದ ಈ ವಿಶಿಷ್ಟ ಕಾರ್ಯ ಸಾಮಾಜಿಕ ಕಾರ್ಯಕರ್ತರಿಗೆಲ್ಲ ಪ್ರೇರಣೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ ಹೆಗಡೆ ಪ್ರತಿಕ್ರಿಯಿಸಿದರು.

ಭಾವಿಕೇರಿ ಗ್ರಾಮ ಅಣು ವಿದ್ಯುತ್ ಯೋಜನೆಗೆ ಸೂಕ್ತವಲ್ಲ
ಜಿಲ್ಲಾಧಿಕಾರಿಯಿಂದ ಸರ್ಕಾರಕ್ಕೆ ವರದಿ

ಕಾರವಾರ: ಅಂಕೋಲಾ ತಾಲೂಕಿನ ಭಾವಿಕೇರಿ ಗ್ರಾಮ ವ್ಯಾಪ್ತಿಯ ಭೂಮಿಯು ಅಣು ವಿದ್ಯುತ್ ಯೋಜನೆ ಸ್ಥಾಪನೆಗೆ ಸೂಕ್ತವಿರುವುದಿಲ್ಲವೆಂಬ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮಿ ಪ್ರಿಯಾ ತಿಳಿಸಿದ್ದಾರೆ.



ಈ ಬಗ್ಗೆ ಈಗಾಗಲೇ ಎದ್ದಿರುವ ವಿವಾದದ ಹಿನ್ನೆಲೆಯಲ್ಲಿ ಅವರು ಈ ಸ್ಪಷ್ಟನೆ ನೀಡಿದ್ದಾರೆ.

ಭಾವಿಕೇರಿ ಗ್ರಾ.ಪಂ ವ್ಯಾಪ್ತಿಯಲ್ಲಿ ಎನ್.ಟಿ.ಪಿ.ಸಿ(ಅಣು ವಿದ್ಯುತ) ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದಿಂದ ವರದಿ ಸಲ್ಲಿಸಲು ನಿರ್ದೇಶಿಸಲಾಗಿತ್ತು. ಅದರಂತೆ, ಭಾವಿಕೇರಿ ಗ್ರಾಮವು ಪ್ರಸ್ತಾಪಿತ ಭಾರತೀಯ ನೌಕಾಪಡೆ ವಿಮಾನ ನಿಲ್ದಾಣ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದು, ನೌಕಾಪಡೆ ಆವರಣಗಳು ಗ್ರಾಮ ಮಿತಿಯೊಳಗೆ ಬರುತ್ತವೆ. ಈ ಕಾರಣದಿಂದ ಈ ಪ್ರದೇಶವು ತಂತ್ರಮೂಲಕ ಹಾಗೂ ಭದ್ರತಾ ದೃಷ್ಟಿಯಿಂದ ಅತ್ಯಂತ ಸಂವೇದನಾಶೀಲವಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಕೈಗಾ ಅಣು ವಿದ್ಯುತ್ ಸ್ಥಾವರವು, ಭಾವಿಕೇರಿ ಗ್ರಾಮದಿಂದ ಸುಮಾರು 45-50 ಕಿ.ಮೀ. ವೈಮಾನಿಕ ದೂರದಲ್ಲಿ ಸ್ಥಿತಿಯಲ್ಲಿದ್ದು, ಈ ಪ್ರದೇಶವು ಭದ್ರತಾ ದೃಷ್ಟಿಯಿಂದ ಮಹತ್ವದ ವಲಯವಾಗಿದೆ.ಭಾವಿಕೇರಿ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಮತ್ತು ನೌಕಾನೆಲೆ ಯೋಜನೆಗಳಲ್ಲಿ ಭೂಮಿ ಕಳೆದುಕೊಂಡಿರುವ ಭೂನಿರಾಶ್ರಿತರು ನೆಲೆಸಿದ್ದಾರೆ. ಈ ಎಲ್ಲಾ ಅಂಶಗಳನ್ನು ಒಟ್ಟಾರೆಯಾಗಿ ಪರಿಶೀಲಿಸಿದಾಗ, ವಿಶೇಷವಾಗಿ ಭದ್ರತಾ ಹಾಗೂ ತಂತ್ರಮೂಲಕ ಪರಿಗಣನೆಗಳ ಹಿನ್ನೆಲೆಯಲ್ಲಿ, ಭಾವಿಕೇರಿ ಗ್ರಾಮ ವ್ಯಾಪ್ತಿಯ ಭೂಮಿಯು ಎನ್.ಟಿ.ಪಿ.ಸಿ ಯೋಜನೆ ಸ್ಥಾಪನೆಗೆ ಸೂಕ್ತವಿರುವುದಿಲ್ಲವೆಂಬ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ. ಲಕ್ಷ್ಮಿ ಪ್ರಿಯಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯೋಗ: ರಾಷ್ಟ್ರಮಟ್ಟಕ್ಕೆ ಆಯ್ಕೆ



ಹೊನ್ನಾವರ: ಬೆಂಗಳೂರಿನಲ್ಲಿ ಆಯೋಜಿಸಿದ್ದ 'ವರ್ಲ್ಡ್ ಫಿಟ್ನೆಸ್ ಫೆಡರೇಶನ್ ಆಫ್ ಯೋಗಾಸನ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್'ನಲ್ಲಿ ತಾಲೂಕಿನ ಕುಳಕೋಡದ ಸಮರ್ಥ ಗಂಗಾಧರ ಮೇಸ್ತ ಟ್ರೆಡಿಷನಲ್ ಯೋಗಾಸನ ಸ್ಪರ್ಧೆಯಲ್ಲಿ ತೃತೀಯ ಹಾಗೂ ಪ್ರಭಾತನಗರದ ನಂದನ ದೇವರಾಜ ಕರ್ಕಿ ಕಲಾತ್ಮಕ ಯೋಗಾಸನ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದು ಜಾರ್ಖಂಡ್‌ನಲ್ಲಿ ನಡೆಯುವ ರಾಷ್ಟ್ರ ಮಟ್ಟದ ಯೋಗಾಸನ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಸಮರ್ಥ ಗಂಗಾಧರ ಮೇಸ್ತ ಪ್ರಭಾತನಗರ ಶಾಲೆಯಲ್ಲಿ 4ನೇ ತರಗತಿ ಓದುತ್ತಿದ್ದಾನೆ. ನಂದನ ದೇವರಾಜ ಕರ್ಕಿ ಎಂಪಿಇ ಸೊಸೈಟಿಯ ಸೆಂಟ್ರಲ್ ಸ್ಕೂಲ್ 7ನೇ ತರಗತಿಯ ಓದುತ್ತಿದ್ದಾನೆ. ಇವರಿಬ್ಬರೂ ಹೊನ್ನಾವರದ ಚೈತನ್ಯ ವಿಕಸನ ಯೋಗ ಕೇಂದ್ರದಲ್ಲಿ ರಾಜೇಶ್ವರಿ ಹೆಗಡೆ ಅವರಿಂದ ಯೋಗ ತರಬೇತಿ ಪಡೆಯುತ್ತಿದ್ದಾರೆ.

ವಾಡಿಯ ಇರ್ಫಾನ್ ಕೊಲೆ ಪ್ರಕರಣ
ಏಳು ಜನ ಆರೋಪಿತರ ಬಂಧನ

ಕಲಬುರಗಿ: ವಾಡಿ ಪಟ್ಟಣದಲ್ಲಿ ನಡೆದಿದ್ದ ಇರ್ಫಾನ್ ಪಟೇಲ್ ಕೊಲೆ ಪ್ರಕರಣವನ್ನು ಭೇದಿಸುವಲ್ಲಿ ಯಶಸ್ವಿಯಾಗಿರುವ ಜಿಲ್ಲಾ ಪೊಲೀಸರು, ಒಟ್ಟು ಏಳು ಮಂದಿ ಆರೋಪಿತರನ್ನು ಬಂಧಿಸಿದ್ದಾರೆ. ಹಳೆ ವೈಷಮ್ಯದ ಹಿನ್ನೆಲೆಯಲ್ಲಿ ನಡೆದ ಈ ಭೀಕರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ವಿವಿಧೆಡೆ ದಾಳಿ ನಡೆಸಿ ಆರೋಪಿತರನ್ನು ವಶಕ್ಕೆ ಪಡೆದಿದ್ದಾರೆ.

ಬಂಧಿತರನ್ನು ಮೊಹ್ಮದ್ ಅಫೈಲ್, ಕಿಟ್ಟಾ ಕ್ರಿಸ್ಟೋಫರ್, ಸದ್ದಾಂ ಶೇಖ ಮಹಿಬೂಬ್, ಜಾವೀದ ಪಟೇಲ್, ಮೊಹ್ಮದ್ ಗೌಸ್ ಪಾಷಾ, ಸೈಯದ್ ಸಲ್ಮಾನ್ ಹಾಗೂ ಅಶೋಕ ತಳವಾರ ಎಂದು ಗುರುತಿಸಲಾಗಿದೆ. ಬಂಧಿತರಿಂದ ಕೃತ್ಯಕ್ಕೆ ಬಳಸಲಾದ ಒಂದು ಕಂಟ್ರಿ ಪಿಸ್ತೂಲ್, ಮೂರು ಜೀವಂತ ಗುಂಡುಗಳು, ವಿವಿಧ ಮಾರಕಾಸ್ತ್ರಗಳು ಹಾಗೂಕೃತ್ಯಕ್ಕೆಮತ್ತು ಪರಾರಿಯಾಗಲು ಬಳಸಿದ ಒಟ್ಟು ನಾಲ್ಕು ಕಾರುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಪ್ರಕರಣದ ಹಿನ್ನೆಲೆ: ಕಳೆದ ಏಪ್ರಿಲ್ 20ರಂದು ಮಧ್ಯಾಹ್ನ ವಾಡಿಯ ಸೇವಾಲಾಲ ಗುಡಿ ಹತ್ತಿರ ಇರ್ಫಾನ್ ಪಟೇಲ್ ಸ್ಕೂಟಿ ಮೇಲೆ ಬರುತ್ತಿದ್ದಾಗ, ದುಷ್ಕರ್ಮಿಗಳು ಕಾರಿನಿಂದ ಡಿಕ್ಕಿ ಹೊಡೆಸಿದ್ದರು. ಬಳಿಕ ಅವರ ಮೇಲೆ ಗುಂಡಿನ ದಾಳಿ ನಡೆಸಿ, ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ, ತಲೆ ಮೇಲೆ ಕಲ್ಲು ಎತ್ತಿ ಹಾಕಿ ಬರ್ಬರವಾಗಿ ಕೊಲೆ ಮಾಡಲಾಗಿತ್ತು. ಈ ಕುರಿತು ವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಅವರ ಮಾರ್ಗದರ್ಶನದಲ್ಲಿ, ಶಹಾಬಾದ್ ಡಿವೈಎಸ್‌ಪಿ ಶಂಕರಗೌಡ ಪಾಟೀಲ ನೇತೃತ್ವದ ವಿಶೇಷ ತಂಡಗಳು ಹೈದರಾಬಾದ್, ತಾಂಡೂರು, ಸೇಡಂ ಮತ್ತು ಬೆಂಗಳೂರಿನಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿತರನ್ನು ಬಂಧಿಸುವಲ್ಲಿ ಯಶಸ್ವಿಯಾಗಿವೆ. ತ್ವರಿತವಾಗಿ ಕಾರ್ಯಾಚರಣೆ ನಡೆಸಿದ ತಂಡವನ್ನು ಎಸ್ಪಿ ಅವರು ಶ್ಲಾಘಿಸಿದ್ದಾರೆ. ಆರೋಪಿತರನ್ನು ಸದ್ಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ತನಿಖೆ ಮುಂದುವರಿದಿದೆ.

ಹುಲಿಗೆಮ್ಮದೇವಿ ದೇವಸ್ಥಾನದ ಹುಂಡಿ ಎಣಿಕೆ
36 ದಿನಗಳಲ್ಲಿ 82 ಲಕ್ಷ ರೂ. ಸಂಗ್ರಹ

ಮುನಿರಾಬಾದ್: ಸಮೀಪದ ಹುಲಿಗಿಯ ಶ್ರೀ ಹುಲಿಗೆಮ್ಮ ದೇವಸ್ಥಾನದಲ್ಲಿ ಬುಧವಾರ ಹುಂಡಿ ಎಣಿಕೆ ಕಾರ್ಯ ನಡೆಯಿತು. ಕಳೆದ ಕೇವಲ 36 ದಿನಗಳ ಅವಧಿಯಲ್ಲಿ ಭಕ್ತರು ಒಟ್ಟು 81,96,760 ರೂಪಾಯಿ ನಗದು ಸೇರಿದಂತೆ ಭಾರಿ ಪ್ರಮಾಣದ ಚಿನ್ನ ಮತ್ತು ಬೆಳ್ಳಿಯನ್ನು ಕಾಣಿಕೆಯಾಗಿ ಅರ್ಪಿಸಿದ್ದಾರೆ. ಸುಮಾರು 36 ದಿನಗಳಲ್ಲಿ 81,96,760 ರೂಪಾಯಿ ನಗದು, 169ಗ್ರಾಂ ಚಿನ್ನ ಹಾಗೂ 7 ಕೆಜಿ ಬೆಳ್ಳಿಯನ್ನು ಭಕ್ತರು ದೇವಿಗೆ ಸಮರ್ಪಿಸಿದ್ದಾರೆ. ಎಣಿಕೆ ಕಾರ್ಯದಲ್ಲಿ ಭಕ್ತರು, ಸ್ವಯಂಸೇವಕರು, ಪೊಲೀಸ್ ಮತ್ತು ಗೃಹರಕ್ಷಕ ದಳದ ಸಿಬ್ಬಂದಿ ಪಾಲ್ಗೊಂಡಿದ್ದರು.

ಹುಲಿಗೆಮ್ಮ ದೇವಿ ದೇವಸ್ಥಾನ ಕಾರ್ಯದರ್ಶಿ ಎಂ.ಎಚ್.ಪ್ರಕಾಶ ರಾವ್, ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ ಪ್ರಾಧಿಕಾರದ ಸದಸ್ಯರು ಸೇರಿದಂತೆ ಭಕ್ತರು ಇದ್ದರು.

ಅಡಿಗಾಸ್ ನಿಂದ ಬಂಪರ್ ಕೊಡುಗೆ, ಪ್ರವಾಸಿಗರಿಗೆ ಭಾರಿ ಡಿಸ್ಕೌಂಟ್ ಆಫರ್!
ವಿದೇಶಿ ಪ್ರವಾಸಗಳಲ್ಲಿ 20 ಸಾವಿರ ರೂ.ವರೆಗೆ ದರ ಕಡಿತ!

ಬೆಂಗಳೂರು: ರಾಜ್ಯದ ಪ್ರತಿಷ್ಠಿತ ಟ್ರಾವೆಲ್ ಸಂಸ್ಥೆಯಾದ ಅಡಿಗಾಸ್ ಯಾತ್ರಾ ಇದೀಗ ತನ್ನ ಪ್ರವಾಸಿಗರಿಗೆ ಬಂಪರ್ ರಿಯಾಯಿತಿಯ ವಿಶೇಷ ಕೊಡುಗೆಯನ್ನು ಘೋಷಿಸಿದೆ. ವಿದೇಶ ಪ್ರವಾಸದಲ್ಲಿ ಅದ್ದೂರಿ, ಅತ್ಯಾಧುನಿಕ ಸೌಲಭ್ಯಗಳು, ಪುಷ್ಕಳ ಊಟೋಪಚಾರ ಮತ್ತು ಅದ್ಭುತ ಪ್ರವಾಸಿ ಅನುಭವವನ್ನು ಕಟ್ಟಿಕೊಡುವುದರಲ್ಲಿ ಸದಾ ಮುಂದಿರುವ ಅಡಿಗಾಸ್ ಯಾತ್ರಾ, ತನ್ನ ಅಂತಾರಾಷ್ಟ್ರೀಯ ಪ್ರವಾಸಗಳ ದರಗಳಲ್ಲಿ ಭಾರಿ ರಿಯಾಯಿತಿಯನ್ನು ಪ್ರಕಟಿಸಿದೆ.

ಸಂಸ್ಥೆಯ ನಮ್ಮ ಗ್ಯಾರಂಟಿ ಯೋಜನೆಯ ಅಡಿಯಲ್ಲಿ, ಎಲ್ಲ ವಿದೇಶಿ ಪ್ರವಾಸಗಳಿಗೆ 2000 ದಿಂದ ಗರಿಷ್ಠ 20,000 ರೂಪಾಯಿಗಳವರೆಗೆ ಡಿಸ್ಕೌಂಟ್ ದರದ ಅನುಕೂಲವನ್ನು ಪ್ರವಾಸಿಗರು ಪಡೆಯಬಹುದು.

ಒಂದು ವೇಳೆ ಅಂತಾರಾಷ್ಟ್ರೀಯ ಪ್ರವಾಸದಲ್ಲಿ ಗರಿಷ್ಠ ಡಿಸ್ಕೌಂಟ್ ಅನ್ನು ಬಳಸದಿದ್ದರೆ, ದೇಶೀಯ ಪ್ರವಾಸದಲ್ಲಿ ಅದರ ಜೊತೆಗೆ 5,000 ರೂಪಾಯಿಗಳ ಹೆಚ್ಚುವರಿ ಕೊಡುಗೆಯನ್ನೂ ಯಾವುದೇ ಸ್ವದೇಶಿ ಅಥವಾ ವಿದೇಶಿ ಪ್ರವಾಸಗಳಲ್ಲಿ ರಿಯಾಯತಿ ಪಡೆಯಬಹುದು!

ಅಡಿಗಾಸ್ ಯಾತ್ರಾ ಸೀಮಿತ ಅವಧಿಗೆ ಈ ಕೊಡುಗೆಯನ್ನು ನೀಡುತ್ತಿದ್ದು, ಕೂಡಲೇ ಇದರ ಪ್ರಯೋಜನವನ್ನು ಪಡೆಯುವಂತೆ ಸಂಸ್ಥೆಯ ಸ್ಥಾಪಕರಾದ ಕೆ. ನಾಗರಾಜ ಅಡಿಗ ಅವರು ಪ್ರವಾಸಿಗರಿಗೆ ಮನವಿ ಮಾಡಿದ್ದಾರೆ.

ಕಳೆದೊಂದು ವರ್ಷದಿಂದೀಚೆಗೆ ನಾನಾ ಜಾಗತಿಕ ಬಿಕ್ಕಟ್ಟು, ರುಪಾಯಿ ಮೌಲ್ಯ ಕುಸಿತ, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಇರಾನ್- ಅಮೆರಿಕ ಯುದ್ಧ ಸೇರಿದಂತೆ ಹಲವು ಕಾರಣಗಳಿಂದ ಅಂತಾರಾಷ್ಟ್ರೀಯ ಪ್ರವಾಸೋದ್ಯಮ ದುಬಾರಿಯಾಗಿದೆ. ಹೀಗಿದ್ದರೂ, ಪ್ರವಾಸಿಗರಿಗೆ ದೇಶ- ವಿದೇಶಗಳ ಸಂದರ್ಶನ, ಮೋಜು-ಮಸ್ತಿಯ ಸಮೃದ್ಧ ಅನುಭವಕ್ಕೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಅಡಿಗಾಸ್ ಯಾತ್ರಾ ಈ ವಿಶೇಷ ಡಿಸ್ಕೌಂಟ್ ಆಫರ್ ಅನ್ನು ನೀಡುತ್ತಿದೆ. ಸೀಮಿತ ಅವಧಿಗೆ ಲಭ್ಯವಿರುವ ಈ ಕೊಡುಗೆಯನ್ನು ಪ್ರವಾಸಿಗರು ಬಳಸಿಕೊಳ್ಳಬೇಕು ಎಂದು ಕೆ. ನಾಗರಾಜ ಅಡಿಗ ಅವರು ತಿಳಿಸಿದ್ದಾರೆ.

ಯಾವೆಲ್ಲ ದೇಶಗಳಿಗೆ ಆಫರ್ ಲಭ್ಯ: ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಗ್ಲೆಂಡ್, ಯುರೋಪ್, ಸಿಂಗಾಪೂರ,ಮಲೇಷ್ಯ, ಥಾಯ್ಲೆಂಡ್, ಸೌತ್ ಆಫ್ರಿಕಾ, ವಿಯೆಟ್ನಾಂ, ಕಾಂಬೋಡಿಯಾ, ಬಾಲಿ, ಶ್ರೀಲಂಕಾ, ನೇಪಾಳ-ಮುಕ್ತಿನಾಥ, ಕೈಲಾಸ ಮಾನಸ ಸರೋವರ ಯಾತ್ರಾಗೆ ರಿಯಾಯಿತಿಯ ಪ್ರಯೋಜನವನ್ನು ಪಡೆಯಬಹುದು.

ಅಡಿಗಾಸ್ ಯಾತ್ರಾ ಈ ಹಿಂದಿನಿಂದಲೂ ಪ್ರವಾಸಿಗರಿಗೆ ಒದಗಿಸುವ ಸೇವೆಗಳ ಗುಣಮಟ್ಟದಲ್ಲಿ ಯಾವುದೇ ರಾಜಿಯನ್ನು ಮಾಡುವುದಿಲ್ಲ. ಪ್ರವಾಸಿಗರೇ ಪ್ರಭುಗಳುಭಿಭ ಎನ್ನುತ್ತಾರೆ ನಾಗರಾಜ ಅಡಿಗರು. ವಿದೇಶಿ ಪ್ರವಾಸದಲ್ಲಿ ವೈಭವಯುತ ತಾರಾ ಹೋಟೆಲ್‌ಗಳಲ್ಲಿ ವಾಸ್ತವ್ಯ, ಶ್ರೇಷ್ಠ ಮತ್ತು ವೈವಿಧ್ಯಮಯ ಊಟೋಪಚಾರಗಳು, ವಿಶ್ವವಿಖ್ಯಾತ ತಾಣಗಳಲ್ಲಿ ಪ್ರವಾಸಿ ಟಿಕೆಟ್ ದುಬಾರಿಯಾಗಿದ್ದರೂ, ಬಿಡದೆ ಪ್ರವಾಸಿಗರಿಗೆ ಒದಗಿಸಿ ಅದ್ಭುತ ಪ್ರವಾಸದ ಅನುಭವಗಳನ್ನು ಕಟ್ಟಿಕೊಡುವುದರಲ್ಲಿ ಅಡಿಗಾಸ್ ಯಾತ್ರಾ ಮನೆಮಾತಾಗಿದೆ. ಹಾಗಿದ್ದರೆ ಈಗಲೇ ತ್ವರೆ ಮಾಡಿ, ಭಾರಿ ಡಿಸ್ಕೌಂಟ್ ಆಫರ್ ಅನ್ನೂ ನಿಮ್ಮದಾಗಿಸಿ!

ಆಸಕ್ತರು ಹೆಚ್ಚಿನ ಮಾಹಿತಿಗೆ ನೇರವಾಗಿ ನಮ್ಮ ಎಲ್ಲ ಕಚೇರಿಗಳನ್ನು ಅಥವಾ ದೂರವಾಣಿ 080-26616678 / 7022259008 / 9449478944 ಸಂಪರ್ಕಿಸಿ ಅಥವಾ ನಮ್ಮ ವೆಬ್ಸೈಟ್ www. adigasyatra.com ವನ್ನು ಸಂದರ್ಶಿಸಬೇಕೆಂದು ವ್ಯವಸ್ಥಾಪಕಿ ಆಶಾ ಎನ್ ಅಡಿಗ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿತ

ವಿಜಯನಗರ: ರಾಜ್ಯದಲ್ಲಿ ಬಿಸಿಲಿನ ತಾಪಮಾನಏರುತ್ತಿದೆ.ಜನರಿಗೆಕುಡಿಯುವ ನೀರಿಲ್ಲ, ಜಾನುವಾರುಗಳು ಮೇವು, ನೀರಿಲ್ಲದೇ ಸಾಯುತ್ತಿವೆ. ಆದರೆ ಸರ್ಕಾರ ಮಾತ್ರ ಸಮಾವೇಶಗಳ ಚರ್ಚೆಯಲ್ಲಿ ಮುಳುಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಹೇಳಿದರು ಹೊಸಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಸ್ತುವಾರಿ ಸಚಿವರು ನೆಪಮಾತ್ರಕ್ಕೆ ಆಗೊಮ್ಮೆ, ಈಗೊಮ್ಮೆ ಜಿಲ್ಲೆಗೆ ಭೇಟಿ ನೀಡುತ್ತಿ ದ್ದಾರೆ. ಸರ್ಕಾರದ ಜನವಿರೋಧಿ ಧೋರಣೆಗಳಿಂದಾಗಿ ಜನರ ಕೋಪಕ್ಕೆ ಕಾಂಗ್ರೆಸ್ ಪಕ್ಷ ಭಸ್ಮವಾಗುವುದು ಖಚಿತ ಎಂದು ಅವರು ಭವಿಷ್ಯ ನುಡಿದರು. ಬಳ್ಳಾರಿ ಯಲ್ಲಿ ಯಾವುದೇ ಅನುಮತಿ ಪಡೆಯದೆ ರಾಜಾರೋಷವಾಗಿ ಗಿಡಮರಗಳನ್ನು ಕಡಿಯಲಾಗುತ್ತಿದೆ. ಪರಿಸರ ನಾಶದ ವಿರುದ್ಧ ತಾವು ನ್ಯಾಯಾಲಯದಲ್ಲಿ ಅಧಿಕಾರಿಗಳ ವಿರುದ್ಧ ಖಾಸಗಿ ದೂರು ದಾಖಲಿಸುವುದಾಗಿ ಬಿ. ಶ್ರೀರಾಮುಲು ಎಚ್ಚರಿಕೆ ನೀಡಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಮರುಮೌಲ್ಯಮಾಪನದಲ್ಲಿ ನಮ್ರತಾಗೆ 10ನೇ ಸ್ಥಾನ

◆ **ಕುಮಟಾ:** ಕೊಂಕಣ ಎಜುಕೇಶನ್ ಟ್ರಸ್ಟ್‌ನ ಸರಸ್ವತಿ ಪಿ.ಯು ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ನಮ್ರತಾ ಭರತ ಭಂಡಾರ್ಕರ್ ಮರುಮೌಲ್ಯಮಾಪನದ ಮೂಲಕ ಗಮನಾರ್ಹ ಸಾಧನೆ ಮಾಡಿ ರಾಜ್ಯ ಮಟ್ಟದಲ್ಲಿ 10ನೇ ಸ್ಥಾನವನ್ನು ಪಡೆದುಕೊಂಡಿದ್ದಾಳೆ.



ಮರುಮೌಲ್ಯಮಾಪನದ ಬಳಿಕ ನಮ್ರತಾಳಿಗೆ ಒಟ್ಟು 7 ಅಂಕಗಳ ಹೆಚ್ಚಳವಾಗಿದ್ದು, ಅರ್ಥಶಾಸ್ತ್ರದಲ್ಲಿ 5 ಅಂಕಗಳು ಮತ್ತು ಇಂಗ್ಲೀಷ್ ವಿಷಯದಲ್ಲಿ 2 ಅಂಕಗಳು ಹೆಚ್ಚುವರಿಯಾಗಿ ದೊರೆತಿವೆ. ಈ ಹೆಚ್ಚುವರಿ ಅಂಕಗಳೊಂದಿಗೆ ಅವಳು ಒಟ್ಟು 591 ಅಂಕಗಳನ್ನು ಗಳಿಸಿ ರಾಜ್ಯದ ಟಾಪ್ 10 ಪಟ್ಟಿಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾಳೆ.ಈಕೆಯು ಇಂಗ್ಲೀಷ್‌ನಲ್ಲಿ 94, ಸಂಸ್ಕೃತದಲ್ಲಿ 100, ಅರ್ಥಶಾಸ್ತ್ರದಲ್ಲಿ 99, ಬಿಸಿನೆಸ್ ಸ್ಟಡೀಸ್‌ನಲ್ಲಿ 100, ಅಕೌಂಟೆನ್ಸಿಯಲ್ಲಿ 99 ಹಾಗೂ ಸ್ಟಾಟಿಸ್ಟಿಕ್ಸ್‌ನಲ್ಲಿ 99 ಅಂಕಗಳನ್ನು ಪಡೆದುಕೊಂಡಿದ್ದಾಳೆ. ನಮ್ರತಾಳ ಈ ಸಾಧನೆಗೆ ಕೊಂಕಣ ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷರು, ಆಡಳಿತ ಮಂಡಳಿಯ ವಿಶ್ವಸ್ತರು, ಕಾಲೇಜಿನ ಪ್ರಾಂಶುಪಾಲರು, ಉಪಪ್ರಾಂಶುಪಾಲರು ಹಾಗೂ ಉಪನ್ಯಾಸಕ ವೃಂದದವರು ಹರ್ಷ ವ್ಯಕ್ತಪಡಿಸಿ ಅಭಿನಂದನೆಗಳನ್ನು ಸಲ್ಲಿಸಿ, ಮುಂದಿನ ವಿದ್ಯಾಭ್ಯಾಸಕ್ಕೂ ಶುಭಾಶಯಗಳನ್ನು ಕೋರಿದ್ದಾರೆ.

ಅಣುಸ್ಥಾವರ ನಿರ್ಮಾಣ ಯೋಜನೆ ಕೈ ಬಿಡಿ: ಅಸ್ನೋಟಿಕರ್

◆ **ಅಂಕೋಲಾ:** ಕೈಗಾ ಅಣುಸ್ಥಾವರ ಮತ್ತು ನೌಕಾನೆಲೆ ಯೋಜನೆಯಿಂದ ತೀವ್ರ ಅನ್ಯಾಯಕ್ಕೊಳಗಾಗಿರುವ ಕಾರವಾರ ಅಂಕೋಲಾ ಭಾಗದಲ್ಲಿ ಇನ್ನೊಂದು ಅಣುಸ್ಥಾವರ ನಿರ್ಮಾಣಕ್ಕೆ ಯೋಜನೆ ರೂಪಿಸುತ್ತಿರುವುದು ಖಂಡನೀಯವಾಗಿದ್ದು ಅಂಕೋಲಾ ತಾಲೂಕಿನ ಬಾವಿಕೇರಿಯಲ್ಲಿ ಅಣುವಿದ್ಯುತ್ ಸ್ಥಾವರ ನಿರ್ಮಾಣದ ಪ್ರಸ್ತಾವನೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಕೈ ಬಿಡಬೇಕು ಎಂದು ಮಾಜಿ ಸಚಿವ ಆನಂದ ಅಸ್ನೋಟಿಕರ್ ಹೇಳಿದ್ದಾರೆ.



ಕೈಗಾ ಅಣುಸ್ಥಾವರ ಯೋಜನೆಯ ನಿರಾಶ್ರಿತರ ಮಕ್ಕಳಿಗೆ ಯೋಜನೆಯಲ್ಲಿ ಉದ್ಯೋಗಕ್ಕೆ ಪರಿಗಣಿಸಲಾಗಿಲ್ಲ ಉದ್ಯೋಗವಿಲ್ಲದೆ ಕೂಲಿಗಾಗಿ ಅಲೆಯುವ ಸ್ಥಿತಿ ಬಂದಿದೆ ಅಣುಸ್ಥಾವರದ ದುಷ್ಪರಿಣಾಮ ಸುತ್ತ ಮುತ್ತಲಿನ ಪ್ರದೇಶಗಳ ಜನರ ಆರೋಗ್ಯದ ಮೇಲೆ ಕಂಡು ಬರತೊಡಗಿದೆ ಇಂಥ ಪರಿಸ್ಥಿತಿಯ ನಡುವೆ ಅಂಕೋಲಾದಲ್ಲಿ ಇನ್ನೊಂದು ಅಣುಸ್ಥಾವರ ಯೋಜನೆಯ ಮೂಲಕ ಅಲ್ಲಿನ ಜನರ ನೆಮ್ಮದಿ ಕೆಡಿಸಲು ಹೊರಟಿರುವುದು ಸರಿಯಲ್ಲ ಸರ್ಕಾರಗಳು ಈ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಸ್ಥಳೀಯ ಜನರ ಜೊತೆ ನಿಂತು ಹೋರಾಟಕ್ಕಿಳಿಯಲಿದ್ದು ಪ್ರತಿಯೊಂದು ಹೋರಾಟದಲ್ಲಿ ಸ್ಥಳೀಯ ಜನರಿಗೆ ಬೆಂಬಲ ನೀಡುವುದಾಗಿ ಅಸ್ನೋಟಿಕರ್ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

◆ **ಮುಂಡಗೋಡ:** ಮುಂಡಗೋಡ ಪಟ್ಟಣದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2026-27ನೇ ಸಾಲಿಗೆ ಡಿಪ್ಲೋಮಾ ಪ್ರಥಮ ವರ್ಷದ ಪ್ರವೇಶಕ್ಕೆ ಎಸ್.ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಪ್ರಾಂಶುಪಾಲ ಕೃಷ್ಣಪ್ಪ ಪಿ. ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೊದಲನೇ ಹಂತ ಮೇ2 ಅಂತಿಮ ದಿನಾಂಕ ವಾಗಿರುತ್ತದೆ. ಸಿವಿಲ್ ಇಂಜಿನಿಯರ್, ಕಂಪ್ಯೂಟರ್ ಸೈನ್ಸ್ ಇಂಜಿನಿಯರ್, ಇಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್ ಗೆ ಅರ್ಜಿ ಸಲ್ಲಿಸಬಹುದಾಗಿದೆ. ಮೆರಿಟ್ ಹಾಗೂ ರೋಸ್ಟರ್ ಮೂಲಕ ಆಫ್ ಲೈನ್ ಮುಖಾಂತರ ಮೊದಲನೇ ಹಂತದಲ್ಲಿ ಪ್ರವೇಶ ಪ್ರಕ್ರಿಯೆ ಮುಗಿದ ನಂತರ ಮೇ 6ರಿಂದ ದ್ವಿತೀಯ, ತೃತೀಯ ಹಂತದ ಪ್ರವೇಶವನ್ನು ಮೊದಲು ಬಂದವರಿಗೆ ಮೊದಲ ಆದ್ಯತೆ ಮೇರೆಗೆ ಸಂಸ್ಥೆಯ ಹಂತದಲ್ಲಿ ಆಫ್ ಲೈನ್ ಮೂಲಕ ನೀಡಲಾಗುತ್ತಿದೆ. ಹೆಚ್ಚಿನ ಮಾಹಿತಿಗಾಗಿ ತಮ್ಮನ್ನು ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60089	71299
ಬಿಳಿಗೋಟು	22199	37699
ಕೆಂಪುಗೋಟು	23118	36999
ಬೆಟ್ಟೆ	41099	51699
ರಾಶಿ	50111	53699
ಚಾಲಿ	43100	48300
ಬಿ.ಕಾಳುಮೆಣಸು	86899	91899



ಅಂಕೋಲಾ: ಅಂಕೋಲೆಯ ಹೊನ್ನಮ್ಮ ನಾಯಕರ ಮನೆಯಂಗಳ ಶ್ರೀಹರಿಸುತದಲ್ಲಿ ಹಿರಿಕಿರಿಯ ಸಾಹಿತಿಗಳ ಉಪಸ್ಥಿತಿಯಲ್ಲಿ ಜರುಗಿದ ಕವಯಿತ್ರಿ ಹೊನ್ನಮ್ಮ ನಾಯಕರ ಕೃತಿಗಳ ಅವಲೋಕನ, ಕವನವಾಚನ ಕಾರ್ಯಕ್ರಮ ಅರ್ಥಪೂರ್ಣವಾಗಿ ಜರುಗಿತು. ಕತೆಗಾರ, ಪ್ರತಿಷ್ಠಾನದ ಅಧ್ಯಕ್ಷ ರಾಮಕೃಷ್ಣ ಗುಂದಿ, ಕವಿಯತ್ರಿ ಹೊನ್ನಮ್ಮ ನಾಯಕರ, ಕಾರ್ಯದರ್ಶಿ ಜಗದೀಶ ನಾಯಕ ಹೊಸ್ಕೇರಿ ಮತ್ತಿತರರು ಇದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಭೀಮಣ್ಣ ಚಾಲನೆ

◆ **ಸಿದ್ದಾಪುರ:** ತಾಲೂಕಿನ ಗ್ರಾಮೀಣ ಭಾಗದ ಮೂಲಭೂತ ಸೌಲಭ್ಯಗಳಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಸುಮಾರು 88 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಭೀಮಣ್ಣ ನಾಯ್ಕ ಮಂಗಳವಾರ ಭೂಮಿಪೂಜೆ ನೆರವೇರಿಸಿದರು.

ಮನಮನೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಿಂಭಾಗದಲ್ಲಿ 8 ಲಕ್ಷ ರೂಪಾಯಿ ವೆಚ್ಚದ ತಡೆಗೋಡೆ ನಿರ್ಮಾಣ ಕಾಮಗಾರಿಗೆ, ಕೊರ್ಲಕೈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು 60 ಲಕ್ಷ ರೂಪಾಯಿ ವೆಚ್ಚದ ಮೂರು ಪ್ರಮುಖ ರಸ್ತೆ ಕಾಮಗಾರಿಗಳಿಗೆ, ಕೊರ್ಲಕೈ ಗೌಡರ ಕೇರಿ ರಸ್ತೆ ಸುಧಾರಣೆ (20 ಲಕ್ಷ ರೂ.), ಕೊರ್ಲಕೈ ಗಣಪತಿ ದೇವಸ್ಥಾನದಿಂದ ಊರ ಒಳಗಿನ ರಸ್ತೆ ಸುಧಾರಣೆ (20 ಲಕ್ಷ ರೂ.), ಶೆಟ್ಟಳ್ಳಿ ಊರ ಒಳಗಿನ ರಸ್ತೆ ಸುಧಾರಣಾ ಕಾಮಗಾರಿ (20 ಲಕ್ಷ ರೂ.), ಹಲಗೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಅಡುಕಟ್ಟಾ ರಸ್ತೆಯಿಂದ ಬಕ್ಕನಕೇರಿ ರಸ್ತೆ ಸುಧಾರಣಾ ಕಾಮಗಾರಿಗೆ (20 ಲಕ್ಷ ರೂಪಾಯಿ) ಶಿಲಾನ್ಯಾಸ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಶಾಸಕ ಭೀಮಣ್ಣ ನಾಯ್ಕ ಮಾತನಾಡಿ, ನಿಗದಿತ ಅವಧಿಯೊಳಗೆ ಗುಣಮಟ್ಟದ ಕಾಮಗಾರಿ ಮುಗಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು ಎಂದು ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ತಾಲೂಕಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ.ನಾಗರಾಜ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಸಂತ ನಾಯ್ಕ ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.



ಸಿದ್ದಾಪುರ: ತಾಲೂಕಿನ ಗ್ರಾಮೀಣ ಭಾಗದ ಮೂಲಭೂತ ಸೌಲಭ್ಯಗಳಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಸುಮಾರು 88 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಭೀಮಣ್ಣ ನಾಯ್ಕ ಮಂಗಳವಾರ ಭೂಮಿಪೂಜೆ ನೆರವೇರಿಸಿದರು.

ಜನತೆಯ ನಿದ್ದೆಗೆಡಿಸಿದ ಮಣ್ಣು ಪರೀಕ್ಷೆ | ಆಡಳಿತ ವ್ಯವಸ್ಥೆ ವಿರುದ್ಧ ಆಕ್ರೋಶ

ಅಣುಸ್ಥಾವರ ಯೋಜನೆಗೆ ಭಾರೀ ವಿರೋಧ

▶ ನಾಗರಾಜ ಶೆಟ್ಟಿ

◆ **ಅಂಕೋಲಾ:** ತಾಲೂಕಿನ ಬಾವಿಕೇರಿಯಲ್ಲಿ ಪರಮಾಣು ವಿದ್ಯುತ್ ಘಟಕ ಸ್ಥಾಪನೆಗೆ ಯೋಜನೆಯೊಂದರ ಕುರಿತು ಸರ್ಕಾರದ ಮಟ್ಟದಲ್ಲಿ ಪ್ರಸ್ತಾಪಿಸಲ್ಪಟ್ಟು ಮಣ್ಣು ಪರೀಕ್ಷೆ ಸಹ ನಡೆಸಲಾಗಿದೆ ಎನ್ನುವ ಸಂಗತಿ ಬಾವಿಕೇರಿಯಷ್ಟೇ ಅಲ್ಲದೇ ಇಡೀ ಅಂಕೋಲಾ ತಾಲೂಕಿನ ಜನತೆಯ ನಿದ್ದೆಗೆಡಿಸಿದ್ದು ಒಂದು ಪ್ರದೇಶದ ಜನಜೀವನ, ಪ್ರಾಕೃತಿಕ ಸೊಬಗನ್ನು ನಾಶಮಾಡುವಂತ ಭಸ್ಮಾಸುರ ರೂಪಿ ಯೋಜನೆಗಳು ಗೌಪ್ಯವಾಗಿ ರೂಪಗೊಳ್ಳುತ್ತಿರುವ ಕುರಿತಂತೆ ಆಡಳಿತ ಮತ್ತು ಅಧಿಕಾರ ವ್ಯವಸ್ಥೆಯ ಕುರಿತಂತೆ ಆಕ್ರೋಶ ವ್ಯಕ್ತವಾಗತೊಡಗಿದೆ.

ಅಣುಸ್ಥಾವರದಂತ ಯೋಜನೆಗಳು ಬಾವಿಕೇರಿಯಂತ ಪ್ರದೇಶಕ್ಕೆ ಸೂಕ್ತವಲ್ಲ ಎಂದು ಜಿಲ್ಲಾಡಳಿತದ ವತಿಯಿಂದ ಸರ್ಕಾರದ ಗಮನಕ್ಕೆ ತರಲಾಗಿದೆ ಎನ್ನುವುದು ಸಮಾಧಾನಕರ ಸಂಗತಿಯಾದರೂ ಯೋಜನೆ ಅನುಷ್ಠಾನದ ಪ್ರಸ್ತಾಪವನ್ನು ಸರ್ಕಾರದಿಂದ ಕೈಬಿಡಲಾಗಿದೆಯೇ ಎನ್ನುವ ಕುರಿತು ಯಾವುದೇ ಸ್ಪಷ್ಟತೆ ಇಲ್ಲವಾಗಿದೆ.

ಬೃಹತ್ ಮತ್ತು ಮಾರಕ ಯೋಜನೆಯೊಂದರ ಪ್ರಸ್ತಾವನೆ ಸರ್ಕಾರದ ಮಟ್ಟದಲ್ಲಿ ಚರ್ಚೆಯಾಗಿ ಎರಡು ತಿಂಗಳುಗಳ ಹಿಂದೆಯೇ ಹಿರಿಯ ಅಧಿಕಾರಿಗಳು, ಜಿಲ್ಲಾಡಳಿತದ ಮಟ್ಟದಲ್ಲಿ ವಿಡಿಯೋ ಸಂವಾದಗಳು ನಡೆದರೂ ಜಿಲ್ಲೆಯ ಜನಪ್ರತಿನಿಧಿಗಳಿಗೆ ಈ ವಿಷಯ ಗೊತ್ತೇ ಆಗಿಲ್ಲವೇ ಎನ್ನುವುದು ಸ್ಥಳೀಯ ಜನರನ್ನು ಕಾಡುತ್ತಿದ್ದು ಕೈಗಾ ಅಣುಸ್ಥಾವರದಿಂದ ಈಗಾಗಲೇ ಇಡೀ ಜಿಲ್ಲೆಯ ಜನರು ಕ್ಯಾನ್ಸರ್ ನಂತ ಕಾಯಿಲೆಗೆ ತುತ್ತಾಗುತ್ತಿದ್ದು ಕೈಗಾದಲ್ಲಿ ಎರಡು ಹೆಚ್ಚುವರಿ ಘಟಕಗಳ ಜೊತೆಗೆ ಜನವಸತಿ ಮತ್ತು ಜೀವ ವೈವಿಧ್ಯತೆಗಳ ತಾಣವಾಗಿರುವ ಅಂಕೋಲಾ ಸುತ್ತ ಮುತ್ತಲಿನ ಪರಿಸರದಲ್ಲಿ ಮತ್ತೊಂದು ಪರಮಾಣು ಯೋಜನೆಗೆ ರತ್ನಗಂಬಳಿ ಹಾಸಿ ಸ್ವಾಗತಿಸಲು ಹೊರಟಿದ್ದಾರೆಯೇ ಎನ್ನುವ ಮಾತು ಕೇಳಿಬರತೊಡಗಿದೆ.



ಸಾಂದರ್ಭಿಕ ಚಿತ್ರ

ಮಾರಿ ಕಣ್ಣು ಬಾವಿಕೇರಿ ಮೇಲೆ

ಇತ್ತೀಚೆಗೆ ಬಹುತೇಕ ಯೋಜನೆಗಳ ಸ್ಥಾಪನೆಗೆ ಬಾವಿಕೇರಿ ಮೇಲೆ ಕಣ್ಣು ಬೀಳುತ್ತಿರುವುದು ಹೆಚ್ಚಾಗಿದ್ದು ಈಗಾಗಲೇ ನೌಕಾನೆಲೆ,ವಿಮಾನ ನಿಲ್ದಾಣ ಯೋಜನೆಗೆ ಇಲ್ಲಿನ ಜನ ಭೂಮಿ ಕಳೆದುಕೊಂಡಿದ್ದಾರೆ. ವಾಣಿಜ್ಯ ಬಂದರು ಬೃಹತ್ ಯೋಜನೆಯೊಂದನ್ನು ಹೇರಲು ಸಿದ್ಧತೆ ನಡೆದಿದೆ.ಇದೀಗ ಅಣುಸ್ಥಾವರ ಯೋಜನೆಗೂ ಬಾವಿಕೇರಿಯನ್ನು ಗುರುತಿಸಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಯೋಜನೆಗೆ ಮಣ್ಣು ಪರೀಕ್ಷೆಯನ್ನು ಸಹ ಸ್ಥಳೀಯ ಜನರನ್ನು ಕತ್ತಲಲ್ಲಿ ಇಟ್ಟು ನಡೆಸಲಾಗಿದ್ದು ಇದರಿಂದ ಜನರು ಆಡಳಿತ ವ್ಯವಸ್ಥೆಯ ಮೇಲೆ ಭರವಸೆ ಕಳೆದುಕೊಳ್ಳುವಂತಾಗಿದೆ ಮುಂದಿನ ದಿನಗಳಲ್ಲಿ ಯಾವುದೇ ಸರ್ವೆ ಕಾರ್ಯಗಳು ನಡೆದರೂ ಆದಕ್ಕೆ ವಿರೋಧ ಎದುರಾದರೆ ಆಶ್ಚರ್ಯಪಡಬೇಕಿಲ್ಲ ಎನ್ನುವಂತಾಗಿದೆ.

ಅಸಮಾಧಾನ

ಕೈಗಾ ಅಣುಸ್ಥಾವರದ ದುಷ್ಪರಿಣಾಮಗಳು ಹೆಚ್ಚತೊಡಗಿದ್ದು ಅಲ್ಲಿ 5 ಮತ್ತು 6 ನೇ ಘಟಕದ ತಯಾರಿ ನಡೆದಿದೆ ಹೀಗಿರುವಾಗ ಮತ್ತೆ ಉತ್ತರ ಕನ್ನಡ ಜಿಲ್ಲೆಯ ಬಾವಿಕೇರಿಯನ್ನು ಅಣುವಿದ್ಯುತ್ ಯೋಜನೆಗೆ ಗುರುತಿಸಿದ್ದು ಯಾವ ನ್ಯಾಯ ಎಂದು ಜನರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಕೈಗಾ ಅಣುಸ್ಥಾವರ ಸೇರಿದಂತೆ ದೇಶದ ಏಳು ಕಡೆಗಳಲ್ಲಿ 22 ಪರಮಾಣು ಘಟಕಗಳು ಕಾರ್ಯ ನಿರ್ವಹಿಸುತ್ತಿದ್ದು 8780 ಮೆಗಾ ವ್ಯಾಟ್ ಸಾಮರ್ಥ್ಯ ಹೊಂದಿದೆ. ಈ ಸಾಮರ್ಥ್ಯವನ್ನು 22480 ಮೆಗಾವ್ಯಾಟ್ ಗೆ ಹೆಚ್ಚಿಸುವ ಗುರಿಯೊಂದಿಗೆ ದೇಶದ 10 ಕಡೆ ಹೊಸ ಸ್ಥಾವರಗಳ ಸ್ಥಾಪನೆಗೆ

ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದು ಪರಮಾಣು ಕ್ಷೇತ್ರದಲ್ಲಿ ಖಾಸಗಿ ಹೂಡಿಕೆಗೆ ಮಹತ್ವ ನೀಡಲಾಗುತ್ತಿದೆ. ರಾಜ್ಯದಲ್ಲಿ ಅಂಕೋಲಾ ತಾಲೂಕಿನ ಬಾವಿಕೇರಿ ಸೇರಿದಂತೆ ಐದು ಕಡೆಗಳಲ್ಲಿ ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಸ್ಥಳ ಗುರುತಿಸಲಾಗಿದ್ದು ಭಾವಿಕೇರಿ ಸುತ್ತ ಮುತ್ತಲಿನ ಸುಮಾರು 1200 ಎಕರೆ ಜಮೀನಿನಲ್ಲಿ 2000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಉದೇಶ ಇದೆ ಎನ್ನಲಾಗುತ್ತಿದೆ.

ಯೋಜನೆಯ ಅನುಷ್ಠಾನದ ಕುರಿತಂತೆ ಸರ್ಕಾರದ ಪ್ರಸ್ತಾಪಕ್ಕೆ ಉತ್ತರ ನೀಡಿರುವ ಜಿಲ್ಲಾಧಿಕಾರಿ ಯೋಜನೆಗೆ ಸರ್ಕಾರಿ ಜಮೀನಿನ ಲಭ್ಯತೆ ಇಲ್ಲ, ಕೃಷಿ ಮತ್ತು ಖಾಸಗಿ ಜಮೀನು ಸ್ವಾಧೀನಪಡಿಸಿ ಕ್ರಿಯಾ ಯೋಜನೆ ನಡೆಸಬೇಕು ಅಲ್ಲದೇ ಈ ಜಾಗ ಅಣುಸ್ಥಾವರ ಯೋಜನೆಗೆ ಸೂಕ್ತವಲ್ಲ ಎಂದು ಲಿಖಿತ ಉತ್ತರ ನೀಡಿದ್ದಾರೆ.

ಆರೋಗ್ಯ ಜೀವನಕ್ಕೆ ಮುನ್ನೆಚ್ಚರಿಕೆ ವಹಿಸಿ

◆ **ಅಂಕೋಲಾ:** ಇಂದಿನ ಒತ್ತಡದ ಜೀವನಶೈಲಿಯಲ್ಲಿ ಯುವಜನತೆ ತಮ್ಮ ಆರೋಗ್ಯದ ಕಡೆಗೆ ನಿರ್ಲಕ್ಷ್ಯ ವಹಿಸುತ್ತಿರುವುದು ಆತಂಕಕಾರಿ ವಿಷಯ. ಕೇವಲ ರೋಗ ಬಂದಾಗ ಚಿಕಿತ್ಸೆ ಪಡೆಯುವುದಕ್ಕಿಂತ, ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸುವುದು ಮುಖ್ಯ. ವಿದ್ಯಾರ್ಥಿ ಜೀವನದಲ್ಲಿಯೇ ಸಮತೋಲಿತ ಆಹಾರ, ನಿಯಮಿತ ವ್ಯಾಯಾಮ ಮತ್ತು ಯೋಗವನ್ನು ರೂಢಿಸಿಕೊಳ್ಳಬೇಕು ಎಂದು ತಾಲೂಕು ಆರೋಗ್ಯಾಧಿಕಾರಿಗಳಾದ ಡಾ.ಜಗದೀಶ ನಾಯ್ಕ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ಕೆಎಲ್‌ಇ ಸಂಸ್ಥೆಯ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ತಾಲೂಕು ಆರೋಗ್ಯಾಧಿಕಾರಿ ಕಚೇರಿ, ಅಂಕೋಲಾ ಹಾಗೂ ನಮ್ಮ ಕ್ಲಿನಿಕ್, ಮುರಲಕ್ಕಿಬೇಣ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಶಿಕ್ಷಕರು ಸಮಾಜದ ದಾರಿದೀಪಗಳಿದ್ದಂತೆ, ನೀವು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿದ್ದರೆ ಮಾತ್ರ ಶಕ್ತಿಯುತವಾದ ಮುಂದಿನ ಪೀಳಿಗೆಯನ್ನು ಬೆಳೆಸಲು ಸಾಧ್ಯ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಉಪನ್ಯಾಸಕ ಮಂಜುನಾಥ ಇಟಗಿ, ಶಿಕ್ಷಣ ಮತ್ತು ಆರೋಗ್ಯ ಎಂಬುದು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಶಿಕ್ಷಕ ತರಬೇತಿ ಪಡೆಯುತ್ತಿರುವ ನೀವು ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸದಿದ್ದರೆ,ಅನಾರೋಗ್ಯ ಪೀಡಿತರಾಗುತ್ತೀರಿ ಎಂದರು.

ನಮ್ಮ ಕ್ಲಿನಿಕನ ಮೆಡಿಕಲ್ ಅಧಿಕಾರಿಗಳಾದ ಡಾ. ಎಡ್ಲಿನ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶೈಲಜಾ ಭಂಡಾರಿ ಹಾಗೂ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಇಂದಿರಾ ನಾಯ್ಕ, ಹಾಗೂ ಉಪನ್ಯಾಸಕಿ ಪ್ರವೀಣಾ ನಾಯಕ,ರೇಖಾ ಬೂದಿಹಾಳ, ಅಶ್ವಿನಿ ಗೌಡ, ಭರತ ಆಗೇರ ಉಪಸ್ಥಿತರಿದ್ದರು.

ಗಗನಾ ನಾಯಕ ಸ್ವಾಗತಿಸಿದರು. ಅಂಕಿತಾ ಅಂಕೋಲೆಕರ ವಂದಿಸಿದರು. ಶ್ರೀನಿಧಿ ನಾಯಕ ನಿರೂಪಿಸಿದರು. ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಸೇರಿದಂತೆ ಒಟ್ಟು 64 ಜನರು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ನುರಿತ ವೈದ್ಯರ ತಂಡವು ರಕ್ತದೊತ್ತಡ, ಹಿಮೋಗ್ಲೋಬಿನ್, ಮಧುಮೇಹ ಸೇರಿದಂತೆ ವಿವಿಧ ಸಾಮಾನ್ಯ ತಪಾಸಣೆಗಳನ್ನು ನಡೆಸಿದರು.



ಜಾತ್ಯಾತೀತ ಸಂದೇಶ ಸಾರಿದ ಬಿ.ಆರ್. ಅಂಬೇಡ್ಕರ್

◆ **ಯಲ್ಲಾಪುರ:** ಡಾ.ಬಿ.ಆರ್. ಅಂಬೇಡ್ಕರ್ ಕೇವಲ ಒಂದು ವ್ಯಕ್ತಿಯಾಗಿರದೇ ಜಗತ್ತಿನ ಶಕ್ತಿಯಾಗಿದ್ದಾರೆ. ಮಾನವತಾವಾದಿ, ಅಂಬೇಡ್ಕರ್ ಜಾತ್ಯಾತೀತ ಸಂದೇಶವನ್ನು ಜಗತ್ತಿಗೆ ಸಾರಿದ್ದಾರೆ. ಅವರ ಮಾನವೀಯ ಕಳಕಳಿ ಅನುಕರಣೀಯ ಎಂದು ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು.

ಅವರು ಮಂಗಳವಾರ ಪಟ್ಟಣದ ಅಡಿಕೆ ಭವನದಲ್ಲಿ ಜಿಲ್ಲಾ ಅಂಬೇಡ್ಕರ್ ಮೆಮೊರಿಯಲ್ ಟ್ರಸ್ಟ್, ಅಂಬೇಡ್ಕರ್ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳನ್ನು, ಸಾಧಕರನ್ನು ಸನ್ಮಾನಿಸಿ ಮಾತನಾಡಿದ ಅವರು, ವಿದ್ಯೆಯಿಂದ ಸಮಾಜವನ್ನು ಮೇಲಕ್ಕೆತ್ತಬಹುದಾಗಿದ್ದು, ಮಕ್ಕಳು ಪುಸ್ತಕದ ಜ್ಞಾನದ ಜೊತೆ ಸಾಮಾಜಿಕ ಆಗು ಹೋಗುಗಳ ಬಗೆಗೂ ಅರಿವು ಹೊಂದಬೇಕು.ಜಗತ್ತಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಇಂಗ್ಲೀಷ್ ಹಾಗೂ ಕಂಪ್ಯೂಟರ್‌ನಲ್ಲೂ ಪರಿಪೂರ್ಣ ಜ್ಞಾನ ಹೊಂದಬೇಕು ಎಂದರು.

ವಿಪ ಸದಸ್ಯ ಶಾಂತಾರಾಮ ಸಿದ್ದಿ ಮಾತನಾಡಿ, ಜಾತಿಯನ್ನು ಕೇವಲ ಸೌಲಭ್ಯಕ್ಕಾಗಿ ಬಳಸಿಕೊಂಡು, ಜಾತಿಯನ್ನು ಸಾರ್ವಜನಿಕವಾಗಿ ಹೇಳಿಕೊಳ್ಳಲು ಹಿಂಜರಿಯ ಬಾರದು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಭಗವದ್ಗೀತೆ ಎಷ್ಟು ಪ್ರಮುಖ್ಯತೆ ಪಡೆದಿದಿಯೋ, ಸಂವಿಧಾನದವೂ ಭೌತಿಕವಾಗಿ ಅಷ್ಟೇ ಮುಖ್ಯವಾಗಿದೆ. ಸಂವಿಧಾನ ಭೌತಿಕ ಜೀವನದ ಭಗವದ್ಗೀತೆ ಯಾಗಿದೆ ಎಂದರು.

ಕೆಪಿಸಿಸಿ ಸದಸ್ಯ ವಿವೇಕ್ ಹೆಬ್ಬಾರ್ ,ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಸುಬ್ರಾಯ ಬಿದ್ರೆಮನೆ, ವಿವಿಧ ಸಂಘಟನೆಗಳ ಪ್ರಮುಖರಾದ ಎಸ್. ಫಕೀರಪ್ಪ, ಚಿದಾನಂದ ಹರಿಜನ, ಭೀಮಶಿ ವಾಲ್ಮೀಕಿ, ಮಾರುತಿ ಬೋವಿವಡ್ಡರ್, ನಾಗೇಶ ಬೋವಿವಡ್ಡರ್, ದ್ಯಾಮಣ್ಣ ಬೋವಿವಡ್ಡರ್, ಅರ್ಜುನ ಬೆಂಗೇರಿ, ಗಿರೀಶ ಎಸ್.ಎಸ್., ಸುಮನ್ ಜಿ. ಹರಿಜನ, ಹನುಮಂತಪ್ಪ, ಎಂ.ಡಿ. ಮುಲ್ಲಾ, ರಾಮು ನಾಯ್ಕ, ಗಣೇಶ ಹೆಗಡೆ ಪಣತಗೇರಿ, ವಿ.ಎಸ್. ಭಟ್ಟ ಉಪಳೇಶ್ವರ, ವಿಲ್ಸನ್ ಫರ್ನಾಂಡಿಸ್, ಎ.ಎ. ಶೇಖ್, ನರಸಿಂಹ ನಾಯ್ಕ, ಎಲಿಶಾ ಎಲಕಪಾಟಿ, ಯಲ್ಲಪ್ಪ ಹೊಸ್ಮನಿ, ಜಗನಾಥ ರೇವಣಕರ, ಹನುಮಂತ ಕೊರವರ, ಸಂತೋಷ ಪಾಟಣಕರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇದೇ ವೇಳೆ ಎಸ್ಎಸ್ಎಲ್ ಸಿ, ಪಿಯುಸಿ ಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು, ಕ್ರೀಡಾ ಸಾಧಕರನ್ನು ಗೌರವಿಸಲಾಯಿತು. ಕೇಬಲ್ ನಾಗೇಶ ನಿರೂಪಿಸಿದರು.



ಬಿಎಸ್‌ಎನ್‌ಎಲ್ ಟವರ್ ಲೋಕಾರ್ಪಣೆ

◆ **ಹಳಿಯಾಳ:** ತಾಲೂಕಿನ ಭಾಗವತಿ ಗ್ರಾಪಂ ವ್ಯಾಪ್ತಿಯ ಬಾಳಶೆಟ್ಟಿಕೊಪ್ಪ ಗ್ರಾಮದಲ್ಲಿ ಈ ಭಾಗದ ಜನರ ಬಹು ದಿನಗಳ ಕನಸಾದ ದೂರಸಂಪರ್ಕ ಸೇವೆಯ ಬಿಎಸ್‌ಎನ್‌ಎಲ್ ಟವರ್‌ನ್ನು ಬುಧವಾರ ಉತ್ತರ ಕನ್ನಡ ಲೋಕಸಭಾ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಉದ್ಘಾಟಿಸಿ ಲೋಕಾರ್ಪಣೆ ಮಾಡಿದರು.

ಈ ಭಾಗದಲ್ಲಿ 100 ಕ್ಕೂ ಹೆಚ್ಚಿನ ಟವರ್ ಗಳ ಅವಶ್ಯಕತೆ ಇದೆ. ಅದರಲ್ಲಿ ಕೆಲವು ಮಂಜೂರಾಗಿ ಶೀಘ್ರದಲ್ಲಿ ಲೋಕಾರ್ಪಣೆ ಗೊಳ್ಳಲಿವೆ. ಆದರೆ ಬಹುತೇಕ ಟವರ್ ಗಳ ನಿರ್ಮಾಣಕ್ಕೆ ಅರಣ್ಯ ಇಲಾಖೆ ಮತ್ತು ಕೆಇಬಿ ಇಲಾಖೆಗಳ ಅಸಹಕಾರ ದಿಂದಾಗಿ ಕೆಲಸ ನಿಧಾನವಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಈ ಸಂದರ್ಭದಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಸುನಿಲ್ ಹೆಗಡೆ, ಮಂಗೇಶ್ ದೇಶಪಾಂಡೆ, ವಿಠ್ಠಲ್ ಸಿದ್ದಣ್ಣವರ ಹಾಗೂ ಬಿ ಎಸ್ ಎನ್ ಎಲ್ ಅಧಿಕಾರಿಗಳು, ಶಿವಾಜಿ ನರಸಾನಿ, ಸಂತೋಷ್ ಘಟಕಾಂಬಳೆ , ಅಜೋಬಾ ಕರಂಜೆಕರ್, ಅನಿಲ್ ಮುತ್ನಾಳೆ, ಬಾಬುನಿ ಗೌಡಾ, ಹನುಮಂತ ಚಿನಗಿನಕೊಪ್ಪ, ಸುಭಾಶ ಪಾಟೀಲ್, ಗೋಕುಲ್ ಚೌಗಲೆ, ತುಕಾರಮ ಗೌಡಾ, ಡೊಂಡು ಎಡಗೆ, ಗೋಪಾಲ ರಾಠೋಡ, ಜ್ಯೋತಿಭಾ ಮಾಂಡಲೀಕ್, ದಶರಥ ಪೂಜಾರಿ ಹಾಗೂ ಭಾಗವತಿ ಪಂಚಾಯತಿಯ ಪ್ರಮುಖರು ಊರಿನ ಸಮಸ್ತ ಸಾರ್ವಜನಿಕರು ಉಪಸ್ಥಿತರಿದ್ದರು.



ಕವಯಿತ್ರಿ ಹೊನ್ನಮ್ಮರ ಸಾಹಿತ್ಯ ಕೃತಿಗಳು ಮಾನವೀಯ ಮೌಲ್ಯಗಳ ಕಣಜ

◆ **ಅಂಕೋಲಾ:** ಇಂದಿನ ಸಮಾಜದಲ್ಲಿ ಮಾನವೀಯಮೌಲ್ಯಗಳ ಅದಃಪತನ ಕಾಣುತ್ತಿದ್ದೇವೆ. ಸಾಹಿತಿಗಳು ನಮ್ಮ ಕೃತಿಗಳ ಮೂಲಕ ಸಮಾಜದಲ್ಲಿ ಮಾನವೀಯ ಮೌಲ್ಯಗಳ ಮರುಪೂರಣ ಕಾರ್ಯ ಮಾಡಬೇಕಿದೆ. ಅಂಕೋಲೆಯ ಕವಯಿತ್ರಿ ಹೊನ್ನಮ್ಮ ನಾಯಕ ತಮ್ಮ ಕೃತಿಗಳ ಮೂಲಕ ಸಮಾಜದಲ್ಲಿ ಸದಾಶಯಗಳನ್ನು ಬಿತ್ತುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯವೆಂದು ಕತೆಗಾರ, ಪ್ರತಿಷ್ಠಾನದ ಅಧ್ಯಕ್ಷ ರಾಮಕೃಷ್ಣ ಗುಂದಿ ಹೇಳಿದರು.

ಅವರು ಅಂಕೋಲೆಯ ಡಾ.ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನದ ಮನೆಯಂಗಳದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಅಂಕೋಲೆಯ ಹೊನ್ನಮ್ಮ ನಾಯಕರ ಮನೆಯಂಗಳ ಶ್ರೀಹರಿಸುತದಲ್ಲಿ ಹಿರಿಕಿರಿಯ ಸಾಹಿತಿಗಳ ಉಪಸ್ಥಿತಿಯಲ್ಲಿ ಜರುಗಿದ ಕವಯಿತ್ರಿ ಹೊನ್ನಮ್ಮ ನಾಯಕರ ಕೃತಿಗಳ ಅವಲೋಕನ, ಕವನವಾಚನ ಕಾರ್ಯಕ್ರಮ ಅರ್ಥಪೂರ್ಣವಾಗಿ ಜರುಗಿತು.

ಪ್ರಾರಂಭದಲ್ಲಿ ಕವಯಿತ್ರಿ ಹೊನ್ನಮ್ಮತನ್ನ ಸಾಹಿತ್ಯಕ್ಕೆ ಪ್ರೇರಣೆ ಕುರಿತು ಮಾತನಾಡಿದರು. ತನ್ನಗುರುವರ್ಯ ಸು.ರಂ. ಎಕ್ಕುಂಡಿ, ಆನಂದಾಶ್ರಮ ಶಾಲೆಯ ಸಾಹಿತ್ಯಿಕ ವಾತಾವರಣ, ದಿನಕರ ದೇಸಾಯಿ ಎನ್. ಆರ್.ನಾಯಕ, ವಿಷ್ಣು ನಾಯಕರ ಸಾಹಿತ್ಯದ ಪರಿಣಾಮ ತಾನು ಸಾಹಿತ್ಯ ಕ್ಷೇತ್ರದಲ್ಲಿ ಅಲ್ಪಸ್ವಲ್ಪ ಕೃಷಿ ಮಾಡುವಂತಾಯಿತೆಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಹಿರಿಯ ಸಾಹಿತಿ ಶಾಂತಾರಾಮ ಹಿಚಕಡ ಕಾವ್ಯ ಬಿಟ್ಟು ಬದುಕಿಲ್ಲ, ಮಾನವ ಮನುಷ್ಯನಾಗಲು ಸಾಹಿತ್ಯದ ಸ್ಪರ್ಶ ಅವಶ್ಯವೆಂದರು.

ಶಿಕ್ಷಕಿವೀಣಾ ಜೋಶಿಯವರಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಜಗದೀಶ ನಾಯಕ ಹೊಸ್ಕೇರಿ ಪ್ರಾಸ್ತಾವಿಕವಾಗಿ ಮಾತನಾಡಿ, ದಿನಕರದೇಸಾಯಿ ಸ್ಮಾರಕ ಪ್ರತಿಷ್ಠಾನ, ಬೆಳೆದು ಬಂದದಾರಿ, ದಿನಕರರ ತತ್ವಾದರ್ಶಗಳು, ಹೊನ್ನಮ್ಮಅವರ ಕೃತಿಗಳ ಪ್ರಸ್ತುತತೆಕುರಿತು ವಿವರಿಸಿ ಎಲ್ಲರನ್ನು ಸ್ವಾಗತಿಸಿದರು.

ಜೆ.ಪ್ರೇಮಾನಂದ, ಪುಷ್ಪಾ ನಾಯ್ಕ, ವಿಠ್ಠಲ ಗಾಂವಕಾರ, ಜಿ.ಆರ್.ತಾಂಡೇಲ, ಶ್ರೀಧರ ನಾಯ್ಕ, ಅಮಿತಾ ನಾಯ್ಕ, ರಾಮಮೂರ್ತಿ ನಾಯಕ, ರವೀಂದ್ರ ಕೇಣಿ, ಕೃಷ್ಣ ಹಿಚಕಡ, ದೇವಿದಾಸ ಸುವರ್ಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಹೊನ್ನಮ್ಮರೊಂದಿಗಿನಒಡನಾಟ ಹಾಗೂ ಅವರಕವಿತೆಗಳನ್ನು ವಾಚಿಸಿದರು. ಹೊನ್ನಮ್ಮನವರ ಕವನಗಳಲ್ಲಿ ಅಂತರಂಗದ ಭಾವತೀವ್ರತೆ, ತುಡಿತ ಮಿಡಿತ ಹಾಗೂ ಆದರ್ಶ, ಪ್ರಾಮಾಣಿಕತೆಯನ್ನುಕಾಣಬಹುದೆಂಬುದು ಒಟ್ಟಾರೆ ಅಭಿಪ್ರಾಯವಾಗಿತ್ತು. ಶಿಕ್ಷಕ ಜಯಶೀಲ ಆಗೇರ ವಂದಿಸಿದರು. ಲೇಖಕ ಮಹಾಂತೇಶ ರೇವಡಿ ಕಾರ್ಯಕ್ರಮ ನಿರೂಪಿಸಿದರು. ಅನೇಕ ಸಾಹಿತ್ಯಾಸಕ್ತರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜನಮನ ರಂಜಿಸಿದ ಕಲಾಭಾರತಿಯ ಚೈತ್ರ ಉತ್ಸವ

◆ **ಅಂಕೋಲಾ:** ಕಲಾಭಾರತಿ ಟ್ರಸ್ಟ್ (ರಿ) ಅಂಕೋಲಾ ಇದರ ವಾರ್ಷಿಕೋತ್ಸವದ ಅಂಗವಾಗಿ ಇಲ್ಲಿಯ ಸ್ವಾತಂತ್ರ್ಯ ಸಂಗ್ರಾಮ ಭವನದಲ್ಲಿ ಆಯೋಜಿಸಿದ್ದ ಚೈತ್ರ ಉತ್ಸವ -2026 ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಹುಬ್ಬಳ್ಳಿಯ ಸದ್ಗುರು ಸಮರ್ಥ ಡಾ. ಎ.ಸಿ. ವಾಲಿ ಮಹಾರಾಜರು ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, 'ನಾನು' ಎನ್ನುವ ಅಹಂಕಾರವನ್ನು ತೊರೆದು ಬದುಕಿದಾಗ ಮಾತ್ರ ಜೀವನ ಅರ್ಥಪೂರ್ಣವಾಗುತ್ತದೆ. ಬದುಕಿನ ಅವಧಿ ಮುಖ್ಯವಲ್ಲ, ಆ ಅವಧಿಯಲ್ಲಿ ಮಾಡಿದ ಸತ್ಕಾರ್ಯಗಳೇ ನಿಜವಾದ ಮೌಲ್ಯಯುತವಾದವು. ಸಾಂಸ್ಕೃತಿಕ ಪರಂಪರೆಯ ರಾಯಭಾರಿಯಾಗಿದ್ದ ಡಾ. ರಾಜಕುಮಾರರು ಮಾತು ಮತ್ತು ನಡೆ ಒಂದಾಗಿದ್ದ ಮಹಾನ್ ವ್ಯಕ್ತಿತ್ವ ಎಂದು ಶ್ಲಾಘಿಸಿದರು.

ಧ್ಯಾನದಿಂದ ಉತ್ತಮ ಆರೋಗ್ಯ ಸಂಪಾದಿಸಬಹುದು. ಮುಂದಿನ ದಿನಗಳಲ್ಲಿ ಪ್ರಶಾಂತ ಶೆಟ್ಟಿ ನೇತೃತ್ವದಲ್ಲಿ ಅಂಕೋಲಾದಲ್ಲಿ 'ಪಿರಮಿಡ' ಧ್ಯಾನಮಂದಿರ ನಿರ್ಮಿಸಲು ಎಲ್ಲರೂ ಕೈಜೋಡಿಸಿ ಎಂದರು.

ವಿಶೇಷ ಆಹ್ವಾನಿತರಾಗಿದ್ದ ಹಿರಿಯ ಚಲನಚಿತ್ರ ನಟ ರಾಮಕೃಷ್ಣ ನೀರ್ನಳ್ಳಿ ಮಾತನಾಡಿ, ಕೃಷಿ ಹಿನ್ನೆಲೆಯಿಂದ ಕಲೆಯತ್ತ ಬೆಳೆದ ತಮ್ಮ ಪಯಣವನ್ನು ಡಾ. ರಾಜಕುಮಾರರೊಂದಿಗೆ ನಟಿಸಿದ ಅನುಭವವನ್ನು ಸ್ಮರಿಸಿಕೊಂಡರು.



ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಹಾಗೂ ಮಾಜಿ ಶಾಸಕಿ ರೂಪಾಲಿ ಎಸ್. ನಾಯ್ಕ ಮಾತನಾಡಿ,ಕೆಲಸದ ಒತ್ತಡದ ನಡುವೆ ಮನಸ್ಸಿಗೆ ಹಿತ ನೀಡುವ ಇಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲೆಡೆ ನಡೆಯಬೇಕು. ಸಂಸ್ಕೃತಿ ಮತ್ತು ಸಂಗೀತ ಮನುಷ್ಯನಿಗೆ ನಿಜವಾದ ಸಂತೋಷ ನೀಡುತ್ತವೆ. ಮನಸ್ಸು ಹಗುರವಾಗಿಸಲು, ಬದುಕು ಹರ್ಷವಾಗಿಸಲು ಇವುಗಳ ಪಾತ್ರ ಅಪಾರ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ ನಾವಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಎನ್. ವಾಸರೆ, ಹೊಸದಿಗಂತ ಪತ್ರಿಕೆಯ ಹುಬ್ಬಳ್ಳಿ ಬ್ಯುರೋ ಮುಖ್ಯಸ್ಥ ವಿಠ್ಠಲದಾಸ್ ಕಾಮತ್, ಹಿರಿಯ ವಕೀಲ ನಾಗರಾಜ ನಾಯಕ, ಚಲನಚಿತ್ರ ಕಲಾವಿದೆ ಜ್ಯೋತ್ಸ್ನಾ ನಾರ್ವೇಕರ್ ಮಾತನಾಡಿದರು. ವೇದಿಕೆಯಲ್ಲಿ ಬೆಳಂಬಾರದ ನಾಟಿ ವೈದ್ಯ ಹನುಮಂತ ಗೌಡ, ಬೆಂಗಳೂರಿನ ಉದ್ಯಮಿ ಶಂಕರ ಗೋಕರ್ಣ, ಪತ್ರಕರ್ತರ ಸಂಘದ ಅಧ್ಯಕ್ಷ ರಾಘು ಕಾಕರಮಠ, ಉಪನ್ಯಾಸಕ ಮಹೇಶ್ ನಾಯಕ ಉಪಸ್ಥಿತರಿದ್ದರು.

ಕಲಾಭಾರತಿ ಟ್ರಸ್ಟ್ ಅಧ್ಯಕ್ಷ ಪ್ರಶಾಂತ ಶೆಟ್ಟಿ ಪ್ರಾಸ್ತಾವಿಕ ಮಾತನಾಡಿ, ಧ್ಯಾನಕ್ಕಾಗಿ ಅಂಕೋಲಾದಲ್ಲಿ ಪಿರಮಿಡ್ ನಿರ್ಮಿಸುವ ಆಶಯ ವ್ಯಕ್ತಪಡಿಸಿದರು. ದರ್ಶಿನಿ ಪ್ರಶಾಂತ ಶೆಟ್ಟಿ ಸ್ವಾಗತಿಸಿದರು. ಸುಧಾ ಪ್ರಶಾಂತ ಶೆಟ್ಟಿ ,ನಿತಿನ್ ನಾಯ್ಕ ಪರಿಚಯಿಸಿದರು. ವರ್ಷಿಣಿ ಪ್ರಶಾಂತ ಶೆಟ್ಟಿ ಪ್ರಾರ್ಥಿಸಿದರು. ಬೆಂಗಳೂರಿನ ಜ್ಯೂನಿಯರ್ ರಾಜಕುಮಾರ ಅವರು ಡಾ.ರಾಜಕುಮಾರ ಅವರ ಅಭಿನಯ, ಹಾಡುಗಳು ಮತ್ತು ಮಿಮಿಕ್ರಿ ಮೂಲಕ ರಂಜಿಸಿದರು. ತಾಲೂಕಿನ ಉದಯೋನ್ಮುಖ ಗಾಯಕ ಗಾಯಕಿಯರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ತಿಮ್ಮಣ್ಣ ಭಟ್ ವಂದಿಸಿದರು. ಕಾರ್ಯಕ್ರಮವನ್ನು ವನಿತಾ ಕಾರವಾರ, ನಿತಿನ ಅಂಕೋಲಾ, ಮೋಹಿತ್ ಹೊನ್ನಾವರ ನಿರ್ವಹಿಸಿದರು.

ಸಾಧಕರಿಗೆ ಸನ್ಮಾನ

ಕಲಾವಿದ, ಸಂಗೀತ ನಿರ್ದೇಶಕ ನಾಗರಾಜ ಜಾಂಬಳೇಕರ, ನಿವೃತ್ತ ಉಪನ್ಯಾಸಕರಾದ ಅನಂತ ವಿ. ಶೆಟ್ಟಿ, ಉಪನ್ಯಾಸಕ ಮಹೇಶ ನಾಯಕ, ಪಹರೆ ವೇದಿಕೆಯ ಅಧ್ಯಕ್ಷ ನಾಗರಾಜ ನಾಯಕ, ಚಲನಚಿತ್ರ ಕಲಾವಿದೆ ಜ್ಯೋತ್ಸ್ನಾ ನಾರ್ವೇಕರ, ಲೇಖಕ ಕೃಷ್ಣ ನಾಯ್ಕ, ಸಂಗಮ ಸೇವಾ ಸಂಸ್ಥೆಯ ಅಧ್ಯಕ್ಷ ರವೀಂದ್ರ ಎನ್. ಶೆಟ್ಟಿ ಬಾಳೆಗುಳಿ, ಡಾ.ರಾಜಕುಮಾರ ಹಿರಿಯ ಅಭಿಮಾನಿ ದಿಗಂಬರ ಲಕ್ಷೇಶ್ವರ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಮಕ್ಕಳಿಗೆ ಶೇ.100ರಷ್ಟು ಶಿಕ್ಷಣ ನೀಡುವುದು ಸರ್ಕಾರದ ಉದ್ದೇಶ

◆ **ಶಿರಸಿ:** ದೇವಸ್ಥಾನವನ್ನು ಚಿಕ್ಕದು ಮಾಡಿ, ಶಾಲೆಯನ್ನ ದೊಡ್ಡದು ಮಾಡಬೇಕು ಎಂಬ ಅಭಿಪ್ರಾಯ ನನ್ನದು. ಮಕ್ಕಳಿಗೆ ಮೊದಲನೇ ಸ್ಥಾನ. ದೇವರಿಗೆ ಎರಡನೇ ಸ್ಥಾನ. ಮಕ್ಕಳನ್ನು ಎಂದಿಗೂ ಎರಡನೇ ಸ್ಥಾನದಲ್ಲಿ ನೋಡಲು ಸಾಧ್ಯವಿಲ್ಲ ಎಂದು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ನಗರದ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆಯಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಶಿರಸಿ-ಸಿದ್ದಾಪುರ ತಾಲೂಕಿನ ರ‍್ಯಾಂಕ್ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿ, ಕಳೆದ ಮೂರು ವರ್ಷಗಳಿಂದ ಸರ್ಕಾರದಿಂದ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆ ಮಾಡಲಾಗಿದೆ. ಶೆ.100 ರಷ್ಟು ಮಕ್ಕಳಿಗೆ ಶಿಕ್ಷಣ ಸಿಗಬೇಕು ಎಂಬ ಉದ್ದೇಶ ನಮ್ಮದಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಭೀಮಣ್ಣ ನಾಯ್ಕ ಮಾತನಾಡಿ, ಕಳೆದ ಬಾರಿಯೂ ರ‍್ಯಾಂಕ್ ವಿಜೇತರಿಗೆ ಸನ್ಮಾನ ಮಾಡಲಾಗಿತ್ತು. ಈ ಬಾರಿಯೂ ಗೌರವಿಸಲಾಗಿದೆ. ಇದೇ ರೀತಿ ಹೆಚ್ಚಿನ ಸಾಧನೆ ವಿದ್ಯಾರ್ಥಿಗಳಿಂದ ಬರಬೇಕಿದೆ ಎಂದರು.



ಶಿರಸಿ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕ ಡಿ.ಆರ್.ನಾಯ್ಕ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ, ಶಿರಸಿ-ಸಿದ್ದಾಪುರ ತಾಲೂಕುಗಳಿಂದ ರಾಜ್ಯಕ್ಕೆ 28 ರ‍್ಯಾಂಕ್ ಬಂದಿದೆ. ಒಟ್ಟೂ 104 ಪ್ರೌಢಶಾಲೆಯಲ್ಲಿ 58 ಶಾಲೆಯಲ್ಲಿ ಶೆ.100 ರಷ್ಟು ಫಲಿತಾಂಶ ಬಂದಿದೆ. ಆದೇ ರೀತಿ ಸಿದ್ದಾಪುರ ತಾಲೂಕು ರಾಜ್ಯಕ್ಕೆ ದ್ವಿತೀಯ ಸ್ಥಾನ ಬಂದಿದೆ. ಶಿರಸಿ ಶೈಕ್ಷಣಿಕ ಜಿಲ್ಲೆಯು ಈ ಬಾರಿ ರಾಜ್ಯಕ್ಕೆ 6 ನೇ ಸ್ಥಾನ ಬಂದಿದ್ದು, ಕಳೆದ ಬಾರಿಗಿಂತ ಉತ್ತಮ ಫಲಿತಾಂಶ ಬಂದಿದೆ ಎಂದರು.

ಈ ಸಂದರ್ಭದಲ್ಲಿ ನಗರಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಗದೀಶ ಗೌಡ, ಗ್ಯಾರಂಟಿ ಯೋಜನೆ ತಾಲೂಕಾಧ್ಯಕ್ಷೆ ಸುಮಾ ಉಗ್ರಾಣಕರ, ಬಗರ್ ಹುಕುಂ ಸದಸ್ಯ ಎಸ್.ಕೆ.ಭಾಗ್ವತ್, ಬಿಇಒ ನಾಗರಾಜ ನಾಯ್ಕ, ಎಚ್. ಎಮ್.ನಾಯ್ಕ, ನೌಕರರ ಸಂಘದ ಜಿಲ್ಲಾಧ್ಯಕ್ಷ ಕಿರಣ್ ನಾಯ್ಕ, ಕೆ.ಎನ್. ಹೊಸ್ಮನಿ, ಗೀತಾ ಶೆಟ್ಟಿ, ಶ್ರೀನಿವಾಸ ನಾಯ್ಕ, ಸ್ಕೊಡ್ವೆಸ್ ಸಂಸ್ಥೆಯ ವೆಂಕಟೇಶ ನಾಯ್ಕ, ಅಬ್ಬಾಸ್ ತೋನ್ಸೆ, ಮಾರಿಕಾಂಬಾ ಪಿಯು ಕಾಲೇಜು ಪ್ರಾಂಶುಪಾಲ ಬಾಲಚಂದ್ರ ಭಟ್ ಗೌರೀಶ ನಾಯ್ಕ ಇತರರು ಇದ್ದರು.

ಕಿರುಸುದ್ದಿ

ದತ್ತಿ ಉಪನ್ಯಾಸ ಕಾರ್ಯಕ್ರಮ

ಹಾವೇರಿ: ಸ್ಥಳೀಯ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮಲ್ಲಮ್ಮ ನಾಗಪ್ಪ ಕರಿಗಾರ ಅವರ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಏಪ್ರಿಲ್ 30 ರಂದು ಬೆಳಿಗ್ಗೆ 10.30ಕ್ಕೆ ಕಾಗಿನೆಲೆಯ ಕನಕಾಂಗಣದಲ್ಲಿ ಆಯೋಜಿಸಲಾಗಿದೆ.

ಕನಕದಾಸರ ಸಾಹಿತ್ಯದಲ್ಲಿ ಸ್ತ್ರೀಪರ ನಿಲುವುಗಳು ಎಂಬ ವಿ?ಯದ ಕುರಿತು ವಿಶೇ? ಉಪನ್ಯಾಸ ನಡೆಯಲಿದ್ದು ಕನಕದಾಸರ ಕೃತಿಗಳಲ್ಲಿನ ಮಹಿಳಾ ಸಂವೇದನೆ ಹಾಗೂ ಸಾಮಾಜಿಕ ಕಳಕಳಿಯನ್ನು ವಿಶ್ಲೇಷಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಮುಕ್ಕಣ್ಣ ಕರಿಗಾರ ವಹಿಸಲಿದ್ದಾರೆ, ಗದಗದ ಸಾಹಿತ್ಯ ಕರ್ತರಾದ ಹನುಮಂತಪ್ಪ ಸೋಮನಕಟ್ಟಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಹಾನಗಲ್‌ನ ಸ.ಪ್ರ.ದ ಕಾಲೇಜಿನ ಕನ್ನಡ ಉಪನ್ಯಾಸಕರಾದ ಡಾ.ಪು?ಪಾವತಿ ಶಲವಡಿಮಠ ಅವರು ಉಪನ್ಯಾಸ ನೀಡಲಿದ್ದಾರೆ. ಪ್ರಾಧಿಕಾರದ ಲೆಕ್ಕಾಧೀಕ್ಷಕರಾದ ಸಿ.ಬಿ. ಸಪ್ಪಿನ ಉಪಸ್ಥಿತರಿರುವರು. ಸಾಹಿತ್ಯಾಸಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 3ಕ್ಕೆ ಅಯ್ಯಾಚಾರ, ಶಿವದೀಕ್ಷೆ

ಗುತ್ತಲ: ಸಮೀಪದ ನೆಗಳೂರ ಗ್ರಾಮದ ಶ್ರೀಗುರುಶಾಂತೇಶ್ವರ ಸಂಸ್ಥಾನ ಹಿರೇಮಠದಲ್ಲಿ ಮೇ 3 ರಂದು ಬೆ.6ಕ್ಕೆ ಜಂಗಮ ವಟುಗಳಿಗೆ ಅಯ್ಯಾಚಾರ ಹಾಗೂ ಭಕ್ತಾಧಿಗಳಿಗೆ ಶಿವದೀಕ್ಷಾ ಕಾರ್ಯಕ್ರಮ ಜರುಗಲಿದೆ. ಶ್ರೀಮಠದ ಗುರುಶಾಂತೇಶ್ವರ ಶಿವಯೋಗಿ ಶಿವಾಚಾರ್ಯರ ಸ್ವಾಮೀಜಿ ಸಾನ್ನಿಧ್ಯದಲ್ಲಿ ದೀಕ್ಷಾ ಕಾರ್ಯಕ್ರಮದ ಧಾರ್ಮಿಕ ವಿಧಿ ವಿಧಾನಗಳು ನೇರವೇರುವವು. ದೀಕ್ಷಾ ಸಂಸ್ಕಾರ ಪಡೆಯಲು ಇಚ್ಛಿಸುವರು ಮೇ 1 ರೊಳಗಾಗಿ ತಮ್ಮ ಹೆಸರನ್ನು ಶ್ರೀಮಠದ ಕಾರ್ಯಾಲಯದಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು, ಹೆಸರು ನೋಂದಾಯಿಸಿಕೊಳ್ಳಲು ಆಧಾರ ಕಾರ್ಡ ಝುರಾಕ್ಸ್ ಪ್ರತಿ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ನೀಡುವುದು ಕಡ್ಡಾಯವಾಗಿದೆ. ಹೆಚ್ಚಿನ ಮಾಹಿತಿಗೆ ಮೊ: 9741117174, 9731381099 ಇಲ್ಲಿ ಸಂಪರ್ಕಿಸಬಹುದು.

ಹಲ್ಲೆ : ದೂರು ದಾಖಲು

ಹಾವೇರಿ: ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ಮಾಡಿದ್ದಲ್ಲದೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ ಆರೋಪದಡಿ ಏಳು ಜನರ ವಿರುದ್ಧ ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕನವಳ್ಳಿಯ ಅಬ್ದುಲ್‌ಖಾದರ ಗಡ್ಡದ, ಹಾವೇರಿಯ ಅಬ್ಬಾಸ ಆಸಿಮವಾಲೆ, ತೌಶೀಫ ಶೇಖ, ಕನವಳ್ಳಿಯ ಮಹ್ಮದಯೂಸೂಫ ಗಡ್ಡದ, ನೂರಅಹ್ಮದ ಬೋಗಲ್ಲಿ, ಜೀಲಾನಿ ಮಿರ್ಜಾನವರ, ಅಬ್ಬಾಸ ಅಲಿ ಎಂಬುವವರ ವಿರುದ್ಧ ಮುಸ್ತುಫಾ ಅಗಸನಹಳ್ಳಿ ಅವರು ದೂರು ಸಲ್ಲಿಸಿದ್ದಾರೆ.

ಘಟನೆ ಹಿನ್ನೆಲೆ: ಕನವಳ್ಳಿ ಗ್ರಾಮದಲ್ಲಿ ಪುಟ್ಟಪ್ಪ ಸೂರದ ಎಂಬುವವರು ಸಿ.ಸಿ ರಸ್ತೆ ಮಾಡಿಸುವ ಸಂಬಂಧ ಅಬ್ದುಲ್‌ಖಾದರ ಗಡ್ಡದ ಜತೆಗೆ ಜಗಳ ಮಾಡಿಕೊಂಡು, ಎಂಎಲ್‌ಸಿ ಮಾಡಿಸಲು ಜಿಲ್ಲಾಸ್ಪತ್ರೆಗೆ ತೆರಳಿದ್ದಾರೆ. ಪುಟ್ಟಪ್ಪ ಸೂರದ ಇವರು ಗಾಯಾಳು ಆಗಿದ್ದರಿಂದ ದೂರುದಾರ ಮುಸ್ತುಫಾ ಅಗಸನಹಳ್ಳಿ ಆರೋಗ್ಯ ವಿಚಾರಿಸಲು ತೆರಳಿದ್ದಾಗ, ಈತನ ಕುಮ್ಮಕ್ಕಿನಿಂದಲೇ ಪುಟ್ಟಪ್ಪ ಎಂಎಲ್‌ಸಿ ಮಾಡಿಸಲು ಬಂದಿದ್ದಾನೆ ಎಂದು ಆರೋಪಿಸಿ, ದೂರುದಾರರನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ ಹಲ್ಲೆ ಮಾಡಿದ್ದಾರೆ. ಅವಾಚ್ಯ ಪದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂಜಾಟ: 8 ಜನರ ಮೇಲೆ ದೂರು ದಾಖಲು

ಹಾವೇರಿ: ತಾಲೂಕಿನ ದೇವಿಹೊಸೂರು ಗ್ರಾಮದ ಸಂತೆ ಮೈದಾನ ಬಳಿ ಇಸ್ಪೀಟ್ ಜೂಜಾಟವಾಡುತ್ತಿದ್ದ ಎಂಟು ಜನರ ವಿರುದ್ಧ ದೂರು ದಾಖಲಿಸಲಾಗಿದೆ. ದೇವಿಹೊಸೂರಿನ ನಾಗರಾಜ ಬಸಪ್ಪ ಬೇಲಗೂರ ಹಾಗೂ ಇತರ ಏಳು ಜನರ ವಿರುದ್ಧ ಕೇಸು ದಾಖಲಿಸಲಾಗಿದೆ.

ಆರೋಪಿತರು ಸಂತೆ ಮೈದಾನದ ಬಯಲು ಜಾಗೆಯಲ್ಲಿ ಗುಂಪಾಗಿ ಕುಳಿತುಕೊಂಡು ಅಕ್ರಮ ಇಸ್ಪೀಟ್ ಜೂಜಾಟದಲ್ಲಿ ತೊಡಗಿಕೊಂಡಿದ್ದರು. ಖಚಿತ ಮಾಹಿತಿಯಾಧರಿಸಿ ಪೊಲೀಸರು ದಾಳಿ ನಡೆಸಿದಾಗ ಸಿಕ್ಕಿಬಿದ್ದಿದ್ದಾರೆ. ಆರೋಪಿತರಿಂದ 5,525 ರೂ.ನಗದು, ಐದು ಮೊಬೈಲ್, ನಾಲ್ಕು ಬೈಕ್‌ಗಳನ್ನು ವಶಪಡಿಸಿಕೊಂಡಿರುವುದಾಗಿ ದೂರಿನಲ್ಲಿ ತಿಳಿಸಿದೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾವೇರಿ: ಸುಮಾರು ವರ್ಷಗಳಿಂದ ನನೆಗುದಿಗೆ ಬಿದ್ದಂತಹ ಸಹ ಶಿಕ್ಷಕರ ಹುದ್ದೆಯಿಂದ ಮುಖ್ಯ ಶಿಕ್ಷಕರ ಹುದ್ದೆಯ 302 ಹುದ್ದೆಗಳಿಗೆ ಬಡ್ತಿ ನೀಡುವ ಕಾರ್ಯ ಬುಧವಾರ ನಗರದ ಮುನ್ಸಿಪಲ್ ಪ್ರೌಢಶಾಲೆಯ ಆವರಣದಲ್ಲಿ ನಡೆಯಿತು.

ಕಾಂಗ್ರೆಸ್, ಪ್ರತಿಪಕ್ಷಗಳ ನಡೆ ಖಂಡಿಸಿ ಪ್ರತಿಭಟನೆ

ಹಾನಗಲ್: ಮಹಿಳಾ ಮೀಸಲು ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಮತ್ತು ಇತರ ಪ್ರತಿಪಕ್ಷಗಳ ನಡೆ ಖಂಡಿಸಿ ಸೋಮವಾರ ಪ್ರತಿಭಟನೆ ವ್ಯಕ್ತಪಡಿಸಿದ ಜೆಡಿಎಸ್ ತಾಲೂಕುಮಹಿಳಾ ಘಟಕದಿಂದ ಗ್ರೇಡ್-1 ತಹಶೀಲ್ದಾರ್ ವಿಠಲ ಚೌಗಲೆ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ರಾಮನಗೌಡ ಪಾಟೀಲ ಮಾತನಾಡಿ, ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಶೇ. 33 ಮಹಿಳಾ ಮೀಸಲಾತಿ ವಿಧೇಯಕ ಲೋಕಸಭೆಯಲ್ಲಿ ಬಿದ್ದುಹೋಗಲು ಪ್ರತಿಪಕ್ಷಗಳು ಕಾರಣ. ಇದು ಮಹಿಳಾ ವಿರೋಧಿ ಧೋರಣೆಯಾಗಿದೆ ಎಂದರು. ವಿಧೇಯಕ ಸೋಲನ್ನು ವಿರೋಧ ಪಕ್ಷಗಳು ವಿಜಯೋತ್ಸವ ರೀತಿಯಲ್ಲಿ ಆಚರಿಸುವುದು ದುರದೃಷ್ಟ ಎಂದು ಮಹಿಳಾ ಪದಾಧಿಕಾರಿಗಳು ಆರೋಪಿಸಿದರು. ವರಿಷ್ಠ ಎಚ್.ಡಿ. ದೇವೇಗೌಡ ಅವರು ಮುಖ್ಯಮಂತ್ರಿಗಳಿದ್ದ ಸಂದರ್ಭದಲ್ಲಿ ರಾಜ್ಯದಲ್ಲಿ ಸ್ಥಳಿಯ ಸಂಸ್ಥೆಗಳಲ್ಲಿ ಶೇ 33 ಮೀಸಲಾತಿ ನೀಡಿದ್ದರು. ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಮಹಿಳಾ, ಮೀಸಲಾತಿ ವಿಧೇಯಕ ಸಂಸತ್ತಿನಲ್ಲಿ ಪ್ರಥಮ ಬಾರಿಗೆ ಮಂಡಿಸಿದ್ದರು ಎಂದರು. ಈ ಸಂಧರ್ಭದಲ್ಲಿ ಡಿಎಸ್ ತಾಲೂಕು ಘಟಕದ ಮಹಿಳಾ ಅಧ್ಯಕ್ಷೆ ಪವಿತ್ರಾ, ಶಂಕಿನಮಠ, ಶಿಗ್ಗಾವ ತಾಲೂಕು ಘಟಕದ ಅದ್ಯಕ್ಷೆ ಶಕುಂತಲಾ ನೀರಲಗಿ, ಪದಾಧಿಕಾರಿಗಳಾದ ನೀಲಮ್ಮ ಅಕ್ಕಿಕೊಪ್ಪದಮಠ, ಶೃತಿ ಕಮ್ಮಾರ, ಸುಂದ್ರವ್ವ ಕಮ್ಮಾರ, ಗೀತಾ ಮಾಗೋಡ, ಗೀತಾ ಜಾಡರ ಮತ್ತು ಜೆಡಿಎಸ್ ಮುಖಂಡರಾದ ಗೌಸ್ಮೊದೀನ್ ಆಲದಕಟ್ಟಿ, ಸಲೀಂಸಾಬ್ ಸಮನಳ್ಳಿ, ಮುತ್ತಪ್ಪ ಪವಾಡಿ, ಮೂಕಪ್ಪ ಪಡೆಯಪ್ಪನವರ, ಬಸವನಗೌಡ ನೀರಲಗಿ, ಪಾಟೀಲ, ಚನ್ನವೀರಪ್ಪ ಹೊಸಕೊಪ್ಪ ಉಪಸ್ಥಿತರಿದ್ದರು.



ಹಾನಗಲ್: ಮಹಿಳಾ ಮೀಸಲು ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಮತ್ತು ಇತರ ಪ್ರತಿಪಕ್ಷಗಳ ನಡೆ ಖಂಡಿಸಿ ಸೋಮವಾರ ಪ್ರತಿಭಟನೆ ವ್ಯಕ್ತಪಡಿಸಿದ ಜೆಡಿಎಸ್ ತಾಲೂಕುಮಹಿಳಾ ಘಟಕದಿಂದ ಗ್ರೇಡ್-1 ತಹಶೀಲ್ದಾರ್ ವಿಠಲ ಚೌಗಲೆ ಅವರಿಗೆ ಮನವಿ ಸಲ್ಲಿಸಲಾಯಿತು.

ಸಂಸದ ಬಸವರಾಜ ಬೊಮ್ಮಾಯಿ ಅಭಿಮತ

ವಿಕಸಿತ ಭಾರತದ ಕನಸು ನನಸಾಗಲಿ

ಬ್ಯಾಡಗಿ: ದೇವಸ್ಥಾನಗಳಲ್ಲಿ ದಿನನಿತ್ಯದ ಪೂಜೆಯ ಜೊತೆಗೆ ವಾರಕ್ಕೊಮ್ಮೆ ಸಾಮೂಹಿಕ ಪ್ರಾರ್ಥನೆ ಮಾಡುವುದು ನಮ್ಮ ಭಾರತ ದೇಶಕ್ಕೆ ಬಹಳ ಅವಶ್ಯಕತೆ ಇದೆ. ಆ ಮೂಲಕ ನಮ್ಮ ದೇಶ ಭಾರತ ಕಟ್ಟುವ ಕೆಲಸ ಮಾಡಬೇಕು. 2047ಕ್ಕೆ ವಿಕಸಿತ ಭಾರತವನ್ನು ನಮ್ಮ ಪಿಎಂ ಮೋದಿ ಕನಸು ಕಂಡಿದ್ದಾರೆ. ಆ ಕನಸು ನನಸಾಗಬೇಕಾದರೆ ಗ್ರಾಮಗಳಲ್ಲಿ ಭಕ್ತಿಯಿಂದ ಪ್ರಾರಂಭ ಆಗಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಬ್ಯಾಡಗಿ ತಾಲೂಕಿನ ಹೆಡಿಗ್ಗೊಂಡ ಗ್ರಾಮದಲ್ಲಿ ಶ್ರೀ ಕಲ್ಮೇಶ್ವರ ದೇವಸ್ಥಾನದ ಲೋಕಾರ್ಪಣೆ ಹಾಗೂ ಕಳಸಾರೋಹಣ ಮತ್ತು ಮೂರ್ತಿ ಪ್ರಾಣ ಪ್ರತಿಷ್ಠಾಪನೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ದೇವಸ್ಥಾನಗಳು ಧರ್ಮದ ಕೇಂದ್ರ, ಧರ್ಮದಿಂದ ಅಂದರೆ ಸತ್ಯದಿಂದ ನಾವು ಜೀವನ ಮಾಡಬೇಕು. ಆ ಪರಂಪರೆ ಬರಬೇಕೆಂದರೆ ಪ್ರಾರ್ಥನೆ ಬಹಳ ಮುಖ್ಯ. ಭಕ್ತಿಯ ಮುಖಾಂತರ ಭಗವಂತನನ್ನು ನಾವು ನೋಡಲು ಸಾಧ್ಯವಿದೆ. ಭಗವಂತನ ಪ್ರಾಪ್ತಿಯಾಗಲು ಶ್ರದ್ಧೆ ಮತ್ತು ಭಕ್ತಿ ಬಹಳ ಮುಖ್ಯ ಎಂದರು.

ಭಕ್ತಿ ಎಂದರೆ ಉತ್ಕೃಷ್ಟವಾದ ಪ್ರೀತಿ, ದೇವರ ಜೊತೆ ವ್ಯವಹಾರ ಮಾಡಬಾರದು. ಕೈಮುಗಿದು ಆಸ್ತಿ ಹೆಚ್ಚಿಗೆ ಮಾಡು, ಶ್ರೀಮಂತನ ಮಾಡು, ರಾಜಕಾರಣಿಗಳು ಇದ್ದರೆ ಮಂತ್ರಿ ಮಾಡು ಅಂತ ಬೇಡಿಕೊಳ್ಳುತ್ತೇವೆ ಇದು ಭಕ್ತಿಯೂ ಅಲ್ಲ, ಪ್ರಾರ್ಥನೆಯೂ ಅಲ್ಲ. ಏನೂ ಬೇಡದೇ ಏನೇ ಕಷ್ಟ ಬರಲಿ ಅದನ್ನು ಎದುರಿಸುವ ಶಕ್ತಿ ಕೊಡು ಭಗವಂತ ಅಂತ ಪ್ರಾರ್ಥನೆ ಮಾಡಿದರೆ ಅದು ನಿಜವಾದ ಭಕ್ತಿ ಆ ಕೆಲಸವನ್ನು ಮಾಡಬೇಕು. ದೇವಸ್ಥಾನಕ್ಕೆ ಭಕ್ತಿಯಿಂದ ಶಕ್ತಿ ಬರುತ್ತದೆ. ಮಠಕ್ಕೂ ಭಕ್ತರಿಂದ ಶಕ್ತಿ, ಆದ್ದರಿಂದ ಬಹಳ ಒಳ್ಳೆಯ ದೇವಸ್ಥಾನ ಕಟ್ಟಿದ್ದೀರಿ ಜಕಣಾಚಾರಿ ಕಾಲದ ದೇವಸ್ಥಾನದ ಹಾಗೆ ಕಟ್ಟಿದ್ದೀರಿ ಅಷ್ಟು ಚನ್ನಾಗಿ ಕಟ್ಟಿ ಬಿಟ್ಟರೆ ಅಲ್ಲಿ ನಡೆಯಬಾರದ ಚಟುವಟಿಕೆಗಳು ನಡೆಯುತ್ತವೆ. ಹೀಗಾಗಿ ದಿನನಿತ್ಯದ ಪೂಜೆಯ ಜೊತೆಗೆ ವಾರಕ್ಕೊಮ್ಮೆ ಸಾಮೂಹಿಕ ಪ್ರಾರ್ಥನೆ ಮಾಡಬೇಕು ಎಂದು ಹೇಳಿದರು.



ಬ್ಯಾಡಗಿ ತಾಲೂಕಿನ ಹೆಡಿಗ್ಗೊಂಡ ಗ್ರಾಮದಲ್ಲಿ ಶ್ರೀ ಕಲ್ಮೇಶ್ವರ ದೇವಸ್ಥಾನದ ಲೋಕಾರ್ಪಣೆ ಹಾಗೂ ಕಳಸಾರೋಹಣ ಮತ್ತು ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ

ಭಕ್ತಿ ಇದ್ದರೆ ಅಣ್ಣ ತಮ್ಮ, ಅಕ್ಕ ತಂಗಿ, ಮಾವ ಅಳಿಯ ಸಂಬಂಧಗಳು ಉಳಿಯುತ್ತವೆ. ಸಂಬಂಧ ಉಳಿದರೆ ಏನೇ ಕಷ್ಟ ಬಂದರೂ ಎದುರಿಸುವ ಶಕ್ತಿ ಬರುತ್ತದೆ. ಅದನ್ನು ದಾಟಿ ಅಭಿವೃದ್ಧಿ ಮಾಡಬಹುದು ಆ ನಿಟ್ಟಿನಲ್ಲಿ ನಾವೆಲ್ಲ ಸಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕರು ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷರಾದ ವೀರುಪಾಕ್ಷಪ್ಪ ಬಳ್ಳಾರಿ, ಮುಖಂಡರುಗಳಾದ ಎಂ.ಎಸ್. ಪಾಟೀಲ್, ರಾಜು ಹೊಸಕೇರಿ, ಬಿಜೆಪಿ ಬ್ಯಾಡಗಿ ಮಂಡಳದ ಅಧ್ಯಕ್ಷರಾದ ನಿಂಗಪ್ಪ ಬಟ್ಟಲಕಟ್ಟಿ, ಸೇರಿದಂತೆ ಗ್ರಾಮದ ಹಿರಿಯರು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆ ಕಾರ್ಯ ಯಶಸ್ವಿ

ಹಾವೇರಿ: ಸುಮಾರು ವರ್ಷಗಳಿಂದ ನನೆಗುದಿಗೆ ಬಿದ್ದಂತಹ ಸಹ ಶಿಕ್ಷಕರ ಹುದ್ದೆಯಿಂದ ಮುಖ್ಯ ಶಿಕ್ಷಕರ ಹುದ್ದೆಯ 302 ಹುದ್ದೆಗಳಿಗೆ ಬಡ್ತಿ ನೀಡುವ ಕಾರ್ಯ ಬುಧವಾರ ನಗರದ ಮುನ್ಸಿಪಲ್ ಪ್ರೌಢಶಾಲೆಯ ಆವರಣದಲ್ಲಿ ನಡೆಯಿತು.

ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ವೃಂದದ ಸಹ ಶಿಕ್ಷಕರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆಗೆ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ ಚಾಲನೆ ನೀಡಿದೆ. ಶಿಕ್ಷಕರ ಸೇವೆಯನ್ನು ಆಧಾರಿಸಿ ಬಡ್ತಿ ನೀಡುವ ಎಲ್ಲ ತಯಾರಿಗಳನ್ನು ಇಲಾಖೆ ಮಾಡಿಕೊಂಡಿತ್ತು. ಜಿಲ್ಲೆಯ ವಿವಿಧ ತಾಲೂಕುಗಳಿಂದ ಬುಧವಾರ ಬೆಳಗ್ಗೆಯೇ ಆಗಮಿಸಿದ್ದ ಶಿಕ್ಷಕರು ತಮ್ಮ ನೆಚ್ಚಿನ ಶಾಲೆಗೆ ಸರದಿ ಸಾಲಿನಲ್ಲಿ ಕುಳಿತು ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು.

ಬಿರು ಬಿಸಿಲಿನ ತಾಪಮಾನದ ಏರಿಕೆ ನಡುವೆ, ಗಿಡ ಮರದ ನೆರಳಿನ ಆಸರೆಯಲ್ಲಿ ಸಹ ಶಿಕ್ಷಕರು ಕುಳಿತು ಚರ್ಚಿಸುತ್ತಿರುವುದು ಸಾಮಾನ್ಯವಾಗಿ ಕಂಡುಬಂತು. ಒಳಗಿನಿಂದ ಕರೆ ಬರುತ್ತಿದ್ದಂತೆ ಕೊಠಡಿಯೊಳಗೆ ಪ್ರವೇಶ ಮಾಡಿ ಆನ್‌ಲೈನ್ ಮೂಲಕ ಜಿಲ್ಲೆಯಲ್ಲಿರುವ ವಿವಿಧ ಶಾಲೆಗಳಿಗೆ ನೋಂದಣಿ ಮಾಡಿಸಿ, ಹುದ್ದೆ ಬಡ್ತಿ ಪಡೆಯುವ ಪ್ರಕ್ರಿಯೆ ಸಂಜೆಯವರೆಗೂ ನಡೆಯಿತು. ಶಿಕ್ಷಕರಲ್ಲಿ ಸೇವೆಗೆ ಅನುಗುಣವಾಗಿ ಹೊಸ ಶಾಲೆಗೆ ಸೇರುವ ಹುರುಪು, ಉತ್ಸಾಹ ಕಂಡುಬಂತು. ಅಂಗವಿಕಲ ಅಭ್ಯರ್ಥಿಗಳಿಗೂ ನಿಯಮಾನುಸಾರ ಶೇ.4ರಷ್ಟು ಮೀಸಲಾತಿಯನ್ನು ಕಲ್ಪಿಸಿದ್ದು ವಿಶೇಷವಾಗಿತ್ತು.

> ಜಿಲ್ಲೆಯಲ್ಲಿ ಖಾಲಿ ಇರುವ ಕನ್ನಡ ಹಾಗೂ ಉರ್ದು ಮಾಧ್ಯಮದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆ ಎಲ್ಲಾ ತಾಲೂಕುಗಳ ಕ್ಷೇತ್ರ ಶಿಕ್ಷಣಾಕಾರಿಗಳು ಹಾಗೂ ವೃಂದ ಸಂಘದ ಪದಾಕಾರಿಗಳ ಸಮ್ಮುಖದಲ್ಲಿ ನಿಯಮಾನುಸಾರವಾಗಿ ಯಶಸ್ವಿಯಾಗಿ ನಡೆದಿದೆ. ಯಾವುದೇ ರೀತಿ ಲೋಪ ಕಂಡುಬಂದಿಲ್ಲ. ಬಡ್ತಿ ಪಡೆದ ಎಲ್ಲಾ ಮುಖ್ಯ ಶಿಕ್ಷಕರಿಗೆ ಕೃತಜ್ಞತೆ ತಿಳಿಸುವೆ.
> ■ ಮೋಹನ ದಂಡಿನ, ಡಿಡಿಪಿಐ, ಹಾವೇರಿ.

ಶಿಕ್ಷಕರ ಸಂಘದ ನಿರಂತರ ಹೋರಾಟ-ಪ್ರಯತ್ನದ ಫಲವಾಗಿ ಶಿಕ್ಷಕರ ಬಡ್ತಿ ಕಾರ್ಯ ಯಶಸ್ವಿಯಾಗಿ ನಡೆಯುತ್ತಿರುವುದು ಹಾಗೂ ರಾಜ್ಯ ಸಂಘದ ಮಾರ್ಗದರ್ಶನದೊಂದಿಗೆ ಟಿಇಟಿಯನ್ನು ರದ್ದುಗೊಳಿಸಿ ಬಡ್ತಿ ಕೊಡಿಸುವ ಕಾರ್ಯವನ್ನು ಮಾಡಿರುವುದು ಖುಷಿಕೊಟ್ಟಿದೆ. ಸುದೀರ್ಘ ಸೇವೆ ಸಲ್ಲಿಸಿದ ಜಿಲ್ಲೆಯ ಶಿಕ್ಷಕರಿಗೆ ಬಡ್ತಿ ಭಾಗ್ಯವನ್ನು ಹಬ್ಬದ ರೀತಿಯಲ್ಲಿ ಕೊಡಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ಶಿಕ್ಷಕರ ಸಂಘದ ಜಿಲ್ಲಾ ಆಧ್ಯಕ್ಷ ಬಿ.ಪಿ. ಶಿಡೇನೂರ, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಚಳ್ಳಾಳ ಸಂತಸ ವ್ಯಕ್ತಪಡಿಸಿದ್ದಾರೆ.

ಮಕ್ಕಳು ಬೌದ್ಧಿಕ ಆಸ್ತಿಯಾಗುವತ್ತ ಗಮನಹರಿಸಿ

ಹಾವೇರಿ: ಪ್ರಸ್ತುತ ದಿನದಲ್ಲಿ ಭೌತಿಕ ಆಸ್ತಿಗಿಂತ ಬೌದ್ಧಿಕ ಆಸ್ತಿಯ ಅವಶ್ಯಕತೆ ಇದೆ. ಬೌದ್ಧಿಕ ಆಸ್ತಿಯಾಗಲು ಶಿಕ್ಷಣವೇ ಮುಖ್ಯ ಅಸ್ತ್ರ ವಿದ್ಯಾರ್ಥಿಗಳು ನಿರಂತರವಾಗಿ ಜ್ಞಾನಾರ್ಜನೆಗೆ ಮುಂದಾಗಬೇಕು ಎಂದು ಶಾಸಕ ಬಸವರಾಜ ಶಿವಣ್ಣನವರ ಕರೆ ನೀಡಿದರು.


ತಾಲೂಕಿನ ಕಬ್ಬೂರು ಗ್ರಾಮದಲ್ಲಿ ಮಂಗಳವಾರ ಗ್ರಾಮ ಪಂಚಾಯತಿ ಹಾಗೂ ಗ್ರಾಮದ ನಾಗರೀಕರ ವತಿಯಿಂದ ಆಯೋಜಿಸಿದ್ದ 2025-26ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ಹಾಗೂ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಪ್ರತಿ ವಿದ್ಯಾರ್ಥಿಯು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್, ಮಹಾತ್ಮಾ ಗಾಂಧೀಜಿ ಅವರ ಆದರ್ಶಗಳನ್ನಿಟ್ಟುಕೊಂಡು ಸಮಾಜದಲ್ಲಿ ಗುರುತಿಸಿಕೊಳ್ಳುವ ಕೆಲಸದ ಮೂಲಕ ಸಮಾಜದ ಆಸ್ತಿಯಾಗಬೇಕು ಎಂದು ಕಿವಿಮಾತು ಹೇಳಿ, ಉನ್ನತಶ್ರೇಣಿಯಲ್ಲಿ ಪಾಸಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೂವತ್ತು ಸಾವಿರ ರೂ.ಗಳ ಪ್ರೋತ್ಸಾಹಧನ ನೀಡಿದರು.

ಮುಖ್ಯ ಅತಿಥಿಯಾಗಿದ್ದ ತಹಶೀಲ್ದಾರ್ ಶರಣಮ್ಮ ಮಾತನಾಡಿದರು.

ಗ್ರಾಮ ಪಂಚಾಯತ ಮಾಜಿ ಅಧ್ಯಕ್ಷರಾದ ಕರಬಸಪ್ಪ ಹೊಸಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿ, ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳ ಪ್ರಗತಿಗೆ ಶ್ರಮಿಸುತ್ತಿರುವ ಗುರು ವೃಂದವನ್ನು ಪ್ರಶಂಸಿದರು. ಇದೇ ವೇಳೆ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸುವಲ್ಲಿ ಮುಖ್ಯ ಪಾತ್ರ ವಹಿಸಿದ ಉಪನ್ಯಾಸಕರಿಗೆ ಗ್ರಾಪಂ, ಶಾಲಾ, ಕಾಲೇಜು ಅಭಿವೃದ್ಧಿ ಸಮಿತಿ ಹಾಗೂ ಗ್ರಾಮಸ್ಥರ ಪರವಾಗಿ ಅಭಿನಂದಿಸಲಾಯಿತು.

ಈ ವೇಳೆ ಗ್ರಾಪಂ ಆಡಳಿತಾಧಿಕಾರಿ ವೀರಭದ್ರಪ್ಪಬಿ.ಎಚ್,ಪ್ರಾಚಾರ್ಯಎಚ್.ಡಿ ಗಂಟೇರ, ಪ್ರೌಢಶಾಲಾ ಮುಖ್ಯ ಶಿಕ್ಷಕ ಶಿವಪ್ಪ ತಿಪ್ಪಣ್ಣವರ, ಹಿರಿಯ ಉಪನ್ಯಾಸಕ ಆನಂದ ಹಂಡೆ, ರಮೇಶ ನೆಗಳೂರು, ಶಿಕ್ಷಕರಾದ ಸುರೇಶ ಕಲ್ಮನಿ, ಗಣೇಶ ನೀಲಗಂಟಿ, ಸಲೀಂ ಹಾಲಗೇರಿ, ಸಂಜೀವ ವಾದೋನಿ, ವೀರಮ್ಮ ಪ್ರಸಾದಿಮಠ, ಕರಬಸಪ್ಪ ಚಿಕ್ಕಬಾಸೂರು, ಆನಂದ ದೇಸಾಯಿ, ಮಲ್ಲಿಕಾರ್ಜುನ ಬಡಿಗೇರ ಮುಂತಾದವರು ಉಪಸ್ಥಿತರಿದ್ದರು. ಚನ್ನವೀರಸ್ವಾಮಿ ಹಿರೇಮಠ ನಿರೂಪಿಸಿ, ಸ್ವಾಗತಿಸಿದರು. ಪಿಡಿಓ ಮೌಲಾಸಾಬ್ ಯಲವಿಗಿ ವಂದಿಸಿದರು.



ಪಕ್ಷಭೇದ ಮರೆತು ರೈತರಿಗೆ ಬೆಳೆವಿಮೆ ಪರಿಹಾರ ಕೊಡಿಸಿ: ಶಿಡ್ಲಾಪೂರ

ಹಾವೇರಿ: ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಪಕ್ಷಭೇದ ಮರೆತು ರೈತರಿಗೆ ಬೆಳೆವಿಮೆ ಪರಿಹಾರ ಕೊಡಿಸಬೇಕೆಂದು ರೈತ ಸಂಘ ಹಾಗೂ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಭುವನೇಶ್ವರ ಶಿಡ್ಲಾಪೂರ ಒತ್ತಾಯಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಜಿಲ್ಲೆಯಲ್ಲಿ ಶೇ.90ರಷ್ಟು ರೈತರು 2025-26ನೇ ಸಾಲಿನ ಹಂಗಾಮಿನಲ್ಲಿ ಫಸಲ್ ಭೀಮಾ ಯೋಜನೆ ಅಡಿಯಲ್ಲಿ ರೈತರು ಬೆಳೆವಿಮೆ ಕಂತು ತುಂಬಿದ್ದು, ಕೋಟ್ಯಂತರ ರೂ.ಹಣ ಪಾವತಿಸಿದ್ದಾರೆ. ಅದಕ್ಕೆ ಸರ್ಕಾರ ಸಾಸಿವೆಯಷ್ಟೇ ಬೆಳೆ ವಿಮೆ ಜಾರಿಗೊಳಿಸಿದೆ. ಒಂದು ತಾಲೂಕಿನಲ್ಲಿ 30ಕ್ಕೂ ಹೆಚ್ಚು ಗ್ರಾಪಂಗಳಿದ್ದು, ಅದರಲ್ಲಿ ನಾಲ್ಕೈದು ಗ್ರಾಪಂ ವ್ಯಾಪ್ತಿಗೆ ಮಾತ್ರ ಹಣ ಬಿಡುಗಡೆ ಮಾಡಿ, ಇನ್ನುಳಿದ ಶೇ.90ರಷ್ಟು ಶಾರ್ಟ್ ಫಾಲ್ ಫೇಲ್ ಎಂದು ಮಾಡಿರುವುದು ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಇದರಲ್ಲಿ ರೈತರಿಗೆ ಮಹಾಮೋಸವಾಗಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಇದರಿಂದ ಸರ್ಕಾರಕ್ಕೆ ಹಾಗೂ ಇನ್ಸೂರೆನ್ಸ್ ಕಂಪನಿಗೆ ಸಾವಿರಾರು ಕೋಟಿ ಲಾಭವಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ ರೈತರಿಗೆ ಹೀಗೆ ಮೋಸ ಮಾಡುತ್ತಾ ಹೋದರೆ ರೈತರ ಪರಿಸ್ಥಿತಿ ಏನು? ಎಂಬುದರ ಬಗ್ಗೆ ಚಿಂತಿಸಬೇಕಿದೆ.

ಆದ್ದರಿಂದ ಈ ಹಿಂದೆ ಜಿಲ್ಲೆಯಲ್ಲಿ ಸಿಎಂ ಉದಾಸಿ ಕಾಲದಲ್ಲಿ ನೂರಕ್ಕೆ ನೂರರಷ್ಟು ಬೆಳೆ ವಿಮೆ ಬರುತ್ತಿತ್ತು. ರಾಜ್ಯದಲ್ಲಿಯೇ ಹಾವೇರಿ ಜಿಲ್ಲೆಗೆ ಹೆಚ್ಚು ಬೆಳೆ ವಿಮೆ ಬಂದ ಉದಾರಣೆಗಳಿವೆ. ಆದರೆ ಈಗೇಕೆ ಸಂಪೂರ್ಣ ಬೆಳೆ ವಿಮೆಬರುತ್ತಿಲ್ಲ ಎಂಬುದು ರೈತರ ಪ್ರಶ್ನೆ. ಹಾಗಾಗಿ ಜಿಲ್ಲೆಯ ಜನಪ್ರತಿನಿಗಳು ಪಕ್ಷಭೇದ ಮರೆತು ರೈತರಿಗೆ ಬೆಳೆವಿಮೆ ಪರಿಹಾರ ಕೊಡಿಸಬೇಕೆಂದು ಆಗ್ರಹಿಸಿದ್ದಾರೆ.

ಶೇ.33ರಷ್ಟು ಮಹಿಳಾ ಮೀಸಲಾತಿ ಕೊಡದಿದ್ದರೆ ಹೋರಾಟ: ಸ್ವಾತಿ

ಹಾವೇರಿ: ಕೇಂದ್ರ ಬಿಜೆಪಿ ಸರ್ಕಾರ ಸಾಂವಿಧಾನಿಕವಾಗಿ ದೇಶದ ಮಹಿಳೆಯರಿಗೆ ಗೌರವ ಕೊಡುವುದಾದರೆ 2023ರ ಮಸೂದೆಯನ್ನು ಜಾರಿಗೊಳಿಸಿ ಶೇ.33ರಷ್ಟು ಮಹಿಳಾ ಮೀಸಲಾತಿ ಕೊಡಬೇಕು. ಇಲ್ಲವಾದರೆ ಬರುವ ದಿನಗಳಲ್ಲಿ ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ ಎಂದು ಕೆಪಿಸಿಸಿ ವಕ್ತಾರೆ ಸ್ವಾತಿ ಚಂದ್ರಶೇಖರ ಎಚ್ಚರಿಕೆ ನೀಡಿದರು.



ನಗರದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರಾಚೀನಕಾಲದ ಮಹಾಭಾರತದಿಂದ ಇಲ್ಲಿಯವರೆಗೂ ಮಹಿಳೆಯರನ್ನು ದಾಳವಾಗಿ ಬಳಸಿಕೊಂಡು ಬರುತ್ತಿರುವುದು ವಿಷಾದನೀಯ, ಕೇಂದ್ರ, ಸರ್ಕಾರ ವಿಧಾನಸಭೆ, ಪಾರ್ಲಿಮೆಂಟ್‌ಗಳಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ನೀಡಬೇಕು. 2023ರಲ್ಲಿ ಕಾಂಗ್ರೆಸ್ ಪಕ್ಷದ ಸಹಕಾರದೊಂದಿಗೆ ಬಿಲ್‌ಗೆ ಒಪ್ಪಿಗೆ ಸೂಚಿಸಲಾಗಿದೆ. ಆದರೆ ಪ್ರಸ್ತುತ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ಸ್ಪಷ್ಟ ಬಹುಮತ ಇಲ್ಲ. ಆದಾಗ್ಯೂ, ಪಂಚ ರಾಜ್ಯಗಳ ಚುನಾವಣೆ ವೇಳೆ ತರಾತುರಿಯಲ್ಲಿ ಅಧಿವೇಶನ ಕರೆದು ವಿಧೇಯಕ ಜಾರಿಗೆ ತರುವ ಬಹುದೊಡ್ಡ ಹುನ್ನಾರ ನಡೆಸಿದ್ದಾರೆಂದು ಆರೋಪಿಸಿದರು.

1989 ರಾಜೀವಗಾಂಧಿ ಬಿಲ್ ಮಂಡಿಸಲು ಮುಂದೆ ಬಂದಾಗ ಅಟಲ್‌ಜೀ, ಅಡ್ವಾಣಿ ಅವರು ಮಹಿಳೆಯರಿಗೆ ಮೀಸಲಾತಿ ನೀಡುವಷ್ಟು ನಾವು ಮುಂದುವರೆದಿಲ್ಲ ಎಂದು ವಿರೋಧಿಸಿದ್ದರು. 2011ರ ಜನಗಣತಿ ಆಧಾರ ಮೇಲೆ ಮಹಿಳಾ ಮೀಸಲಾತಿ ಜಾರಿಗೆ ತರಬೇಕಿತ್ತು. ಎಲ್ಲಿ ಜನಸಂಖ್ಯೆ ಹೆಚ್ಚಿರುವ ಅಲ್ಲಿ ಕ್ಷೇತ್ರ ಹೆಚ್ಚಳಕ್ಕೆ ಹುನ್ನಾರ ನಡೆಸಿದ್ದಾರೆ. ಕ್ಷೇತ್ರ ಪುನರ್ ವಿಂಗಡಣೆಯಾದರೆ ದಕ್ಷಿಣ ಭಾರತದ ಸಂಸದರಿಗೆ ಬೆಲೆಯೇ ಇಲ್ಲದಂತಾಗುತ್ತದೆ. ಮಹಿಳಾ ಮೀಸಲಾತಿಗೆ ವಿರೋಧ ಮಾಡಿದರೆಂದು ಸುಳ್ಳು ಅಪಪ್ರಚಾರವನ್ನು ಕಾಂಗ್ರೆಸ್ ವಿರುದ್ಧ ಮಾಡಬೇಡಿ. ಸ್ವಪಕ್ಷೀಯರೇ ನಿಮ್ಮ ನಿಲುವನ್ನು ವಿರೋಧ ಮಾಡುತ್ತಿದ್ದಾರೆ. ಕಾಂಗ್ರೆಸ್ ಯಾವಾಗಲೂ ದಕ್ಷಿಣ ಭಾರತ ವಿರೋಧಿ, ಸಂವಿಧಾನ ವಿರೋಧಿ ಕೆಲಸವನ್ನು ಎಂದಿಗೂ ಒಪ್ಪುವುದಿಲ್ಲ, ಈ ಕೂಡಲೇ ಡಿ-ಲಿಮಿಟೇಶನ್ ಸರ್ಕಸ್ ಬಿಟ್ಟು, ದೇಶದ ಐಕ್ಯತೆಯನ್ನು ವಿಭಜಿಸುವ ಹುನ್ನಾರವನ್ನು ಬಿಟ್ಟು ಮಹಿಳಾ ಮೀಸಲಾತಿ ನೀಡಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಂಜೀವಕುಮಾರ ನೀರಲಗಿ, ರಾಜ್ಯ ಕಾರ್ಯದರ್ಶಿ ಪ್ರೇಮಾ ಪಾಟೀಲ, ಹಂಗಾಮಿ ಜಿಲ್ಲಾಧ್ಯಕ್ಷೆ ಶಾಂತಕ್ಕ ಶಿರೂರ, ಗೀತಾ ಪ್ರಕಾಶ, ವಸಂತಾ ಬಾಗೂರ, ಶಂಕರ ಮೆಹರವಾಡೆ ಸೇರಿದಂತೆ ಅನೇಕರು ಹಾಜರಿದ್ದರು.

ಎಲ್ಲ ಧರ್ಮಗಳ ಸಾರವೂ ಒಂದೇ: ಶಾಸಕ ಶ್ರೀನಿವಾಸ ಮಾನೆ

ಹಾನಗಲ್: ಕೇಸರಿ, ಬಿಳಿ, ಹಸಿರು ಬಣ್ಣಗಳ ಆಧಾರದಲ್ಲಿ ಸಮಾಜ ಒಡೆಯುವ ಷಡ್ಯಂತ್ರಕ್ಕೆ ಯುವ ಸಮೂಹ ಬಲಿಯಾಗಬಾರದು. ಎಲ್ಲ ಧರ್ಮಗಳ ಸಾರವೂ ಒಂದೇ. ಶರಣರು, ಸಂತರು, ಸೂಫಿಗಳೆಲ್ಲರೂ ಸಮಾನತೆಯ ಸಂದೇಶ ಸಾರಿದ್ದಾರೆ. ಯಾವುದೇ ಧಾರ್ಮಿಕ ವೇದಿಕೆ, ಪ್ರವಚನಗಳಲ್ಲಿಯೂ ಸಹ ಮಾನವೀಯ ಮೌಲ್ಯಗಳನ್ನೇ ಬೋಧಿಸಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.



ತಾಲೂಕಿನ ಬಾಳೂರು ಗ್ರಾಮದಲ್ಲಿ ಅಡವಿಸ್ವಾಮಿ ಮಠದ ಗುರುಪ್ರಸಾದ ದೇವರ ನಿರಂಜನ ಪಟ್ಟಾಧಿಕಾರ ಮಹೋತ್ಸವದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಲಿಂ.ಕುಮಾರ ಸ್ವಾಮೀಜಿ 12ನೇ ಶತಮಾನದ ಬಸವಣ್ಣನವ ನಂತರ ಸಮ ಸಮಾಜದ ಪರಿಕಲ್ಪನೆಯನ್ನು ಸಮುದಾಯದಲ್ಲಿ ಬಿತ್ತಿದರು. ಶಿವಯೋಗ ಮಂದಿರ, ಅಖಿಲ ಭಾರತ ವೀರಶೈವ ಮಹಾಸಭೆಯ ಮೂಲಕ ಧಾರ್ಮಿಕ ಜಾಗೃತಿ ಮೂಡಿಸಿದರು. ಆ ಪುಣ್ಯ ಪರಂಪರೆಯ ಮುಂದುವರೆದ ಭಾಗವಾಗಿ ಬಾಳೂರಿನ ಅಡವಿಸ್ವಾಮಿ ಮಠ ಧಾರ್ಮಿಕ ಮಾರ್ಗದರ್ಶನ ಮಾಡುತ್ತಿದೆ. ಮಠದ ಈಗಿನ ಪೀಠಾಧ್ಯಕ್ಷರಾದ ಕುಮಾರ ಸ್ವಾಮೀಜಿ ಜಪ, ತಪ, ಅನುಷ್ಠಾನಗಳ ಮೂಲಕ ಭಕ್ತರನ್ನು ಉದ್ಧರಿಸುತ್ತಾ ಬಂದಿದ್ದಾರೆ. ಈಗ ಪಟ್ಟಾಧಿಕಾರ ಹೊಂದುತ್ತಿರುವ ಗುರುಪ್ರಸಾದ ದೇವರ ಶ್ರೀಮಠದ ಪರಂಪರೆ ಮುಂದುವರೆಸಿಕೊಂಡು ಹೋಗಲು ಸನ್ನದ್ಧರಾಗಿದ್ದಾರೆ ಎಂದರು.

ಹಾವೇರಿಯ ವಿಶ್ವವಿದ್ಯಾಲಯ ದಿಂದ ಗೌರವ ಡಾಕ್ಟರೇಟ್ ಪದವಿ ಪಡೆದ ಹಿನ್ನೆಲೆಯಲ್ಲಿ ಅಭಿನಂದನೆ ಸ್ವೀಕರಿಸಿದ ಹಾವೇರಿ ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ಕನ್ನಡ ನಾಡಿನ ಮಠಗಳು ಸಮಾಜದ ಅವಿಭಾಜ್ಯ ಅಂಗ. ಸಮಾಜ ಮತ್ತು ಸಮಾಜ ಬಾಂಧವರ ಸಹಕಾರ ಇದ್ದರೆ ಮಾತ್ರ ಮಠಗಳು ಬೆಳೆದು, ಸಮಾಜಕ್ಕೆ ಬೆಳಕಾಗಲಿವೆ. ಬಾಳೂರಿನ ಅಡವಿಸ್ವಾಮಿ ಮಠದ ಕುಮಾರ ಸ್ವಾಮೀಜಿ ಸ್ವಾಮಿತ್ವದ ಗೌರವ ಹೆಚ್ಚಿಸಿದ್ದಾರೆ. ತಮ್ಮ ನಡೆ, ನುಡಿಗಳಿಂದ ಆದರ್ಶರಾಗಿದ್ದಾರೆ ಎಂದು ಹೇಳಿದ ಅವರು ಶಾಸಕ ಶ್ರೀನಿವಾಸ ಮಾನೆ ಅವರು ಹಲವಾರು ಮಹತ್ವದ ನಿರ್ಣಯಗಳ ಮೂಲಕ ರಾಜಕಾರಣಿಗಳಿಗೆ ಮಾದರಿ ಎನಿಸಿದ್ದಾರೆ. ಸನ್ಮಾನ ಸ್ವೀಕರಿಸುವ ಬದಲಿಗೆ ಶಾಲು, ಮಾಲೆ, ನೆನಪಿನ ಕಾಣಿಕೆಗೆ ಖರ್ಚು ಮಾಡದೇ ಆದೇ ಹಣವನ್ನು ಸರ್ಕಾರಿ ಶಾಲೆಗಳಿಗೆ ನೀಡಿ ಎನ್ನುವ ನಿರ್ಣಯವನ್ನು ರಾಜ್ಯದ ಎಲ್ಲರೂ ಪಾಲಿಸಿದರೆ ಇಡೀ ದೇಶಕ್ಕೆ ಒಳ್ಳೆ ಸಂದೇಶ ನೀಡಿದಂತಾಗಲಿದೆ ಎಂದರು.

ಅಡವಿಸ್ವಾಮಿ ಮಠದ ಕುಮಾರ ಸ್ವಾಮೀಜಿ ಮಾತನಾಡಿದರು. ಸೂಗೂರಿನ ಸಂಸ್ಥಾನ ಹಿರೇಮಠದ ಡಾ.ಚನ್ನರುದ್ರಮುನಿ ಸ್ವಾಮೀಜಿ ಪ್ರವಚನ ಹೇಳಿದರು. ಅಕ್ಕಿಆಲೂರಿನ ವಿರಕ್ತಮಠದ ಶಿವಬಸವ ಸ್ವಾಮೀಜಿ, ಹತ್ತಿಮತ್ತೂರಿನ ವಿರಮಠದ ನಿಜಗುಣ ಸ್ವಾಮೀಜಿ, ಗುರುಪ್ರಸಾದ ದೇವರು, ವಿನಾಯಕ ದೇವರು, ನೇತೃತ್ವ ಅಖಿಲ ಭಾರತ ವೀರಶೈವ ಮಹಾಸಭೆಯ ತಾಲೂಕಾಧ್ಯಕ್ಷಶಿವಕುಮಾರದೇಶಮುಖ ಅಧ್ಯಕ್ಷತೆ ವಹಿಸಿದ್ದರು. ಹಾವೇರಿಯ ಮಾಜಿ ಶಾಸಕ ಶಿವರಾಜ ಸಜ್ಜನರ, ಜಿಪಂ ಮಾಜಿ ಸದಸ್ಯ ಟಾಕನಗೌಡ ಪಾಟೀಲ, ಮುಖಂಡರಾದ ಈರಣ್ಣ ಬೈಲವಾಳ, ರಾಜಣ್ಣ ಅಂಕಸಖಾನಿ, ಷಣ್ಮುಖಪ್ಪ ಮುಚ್ಚಂಡಿ, ಉದಯಕುಮಾರ ವಿರಪಣ್ಣನವರ ಇದ್ದರು.

ಎನ್‌ಇಎಸ್ ಉಳಿವಿಗೆ ಹೋರಾಟ: ಪದಾಧಿಕಾರಿಗಳ ಅಕ್ರಮ ನಡೆಗೆ ಆಕ್ರೋಶ

ಹಾವೇರಿ: ರಾಷ್ಟ್ರೀಯ ಶಿಕ್ಷಣ ಸಮಿತಿ (ಎನ್‌ಇಎಸ್) ಪದಾಧಿಕಾರಿಗಳು ಅಕ್ರಮವಾಗಿ ಸಂಸ್ಥೆಯ ಜಾಗೆ ಕಬಳಿಸಿದ್ದನ್ನು ಕೂಡಲೇ ವಾಪಾಸ್ ಕೊಡಬೇಕು, 3 ದಿನಗಳಲ್ಲಿ ಸಂಸ್ಥೆಯ ಪದಾಧಿಕಾರಿಗಳ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಲೋಕಾಯುಕ್ತರಿಗೆ ದೂರು ನೀಡಿ ಕಾನೂನು ಹೋರಾಟಕ್ಕೆ ಮುಂದಾಗ ಬೇಕಾಗುತ್ತದೆ ಎಂದು ಎನ್‌ಇಎಸ್ ಉಳಿಸಿ ಹೋರಾಟ ಸಮಿತಿ ಮುಖಂಡ ಸಿದ್ದಣ್ಣ ಕಲಕೋಟಿ ಎಚ್ಚರಿಸಿದರು.



ತಾಲೂಕಿನ ಹೊಸರಿತ್ತಿಯ ಗ್ರಾಪಂ ಕಚೇರಿ ಸಮೀಪ ಬುಧವಾರ ಎನ್ ಇಎಸ್ ಉಳಿಸಿ ಹೋರಾಟ ಸಮಿತಿಯ ಹೋರಾಟದಲ್ಲಿ ಪಾಲ್ಗೊಂಡು ಮಾತನಾಡಿ, ರಾಷ್ಟ್ರೀಯ ಶಿಕ್ಷಣ ಸಮಿತಿ ಪದಾಧಿಕಾರಿಗಳುಕಾನೂನುಬಾಹಿರವಾಗಿ ಸಂಸ್ಥೆಯ ಕೋಟ್ಯಾಂತರ ಬೆಲೆಬಾಳುವ ಆಸ್ತಿಯನ್ನು ಕಬಳಿಸಿ ಸಂಸ್ಥೆಯ ಪದಾಧಿಕಾರಿಗಳಾಗಿಮುಂದುವರೆಯುವ ನೈತಿಕತೆ ಕಳೆದುಕೊಂಡಿದ್ದಾರೆ. ಸಂಸ್ಥಾಪಕ ಕಾರ್ಯದರ್ಶಿಯಿಂದ ಹಿಡಿದು ಈಗಿನ ಪದಾಧಿಕಾರಿಗಳು ಸಂಸ್ಥೆಯನ್ನು ಸ್ವಂತದ ಆದಾಯದ ಮೂಲ ಮಾಡಿಕೊಂಡು ಈಗ ಸಿಕ್ಕಿಹಾಕಿಕೊಂಡಿದ್ದಾರೆ. ಇವರಿಗೆ ಕಾನೂನು, ಸಂಸ್ಥೆಯ ಬೈಲಾದ ಬಗ್ಗೆ ಅರಿವಿಲ್ಲ, ಇವರು ಆಡಿದ್ದೇ ಆಟವಾಗಿದೆ ಎಂದು ಕಿಡಿಕಾರಿದರು.

ಶಿಕ್ಷಣ ಸಂಸ್ಥೆಯ ಆಸ್ತಿಯನ್ನು ವಿಲೇ ಮಾಡಲು ಸರ್ಕಾರದ ಅನುಮತಿ ಬೇಕು, ಆದರೆ ಇವರು ಇದ್ಯಾವುದನ್ನೂ ಪಾಲಿಸದೇ ಇವರೇ ಜಾಗಕ್ಕೆ ದರ ನಿಗದಿ ಮಾಡಿ, ಇವರೇ ಮಾರಾಟ ಮಾಡಿ, ಇವರೇ ಖರೀದಿ ಮಾಡಿದ್ದಾರೆ. ಇದರಲ್ಲಿ ಯಾವ ಪಾರದರ್ಶಕತೆ ಇದೆ? ಸಂಸ್ಥೆಯಲ್ಲಿದ್ದು ಆದಕ್ಕೆ ನಷ್ಟ ಮಾಡಿ ದುಡ್ಡು ಹೊಡೆಯುವ ಉದ್ದೇಶ ಇದಾಗಿದೆ. ಅಕ್ರಮ ಎಸಗಿರುವ ಸಂಸ್ಥೆಯ ಪದಾಧಿಕಾರಿಗಳಿಗೆ ಸ್ವಾಭಿಮಾನ, ಮರ್ಯಾದೆ ಹಾಗೂ ಸಂಸ್ಥೆಯ ಬಗ್ಗೆ ಕಳಕಳಿ ಇದ್ದರೇ ಕೂಡಲೇ ಆಸ್ತಿಯನ್ನು ಮರಳಿ ಸಂಸ್ಥೆಗೆ ನೀಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಹೋಗಬೇಕು. ಇಲ್ಲದಿದ್ದರೆ ಕಾನೂನು ಹೋರಾಟ ನಡೆಸಿ ಸರ್ಕಾರವೇ ನಿಮ್ಮನ್ನು ಸಂಸ್ಥೆಯಿಂದ ಕುತ್ತಿಗೆ ಹಿಡಿದು ಹೊರಹಾಕುವಂತೆ ಮಾಡಬೇಕಾಗುತ್ತದೆ ಎಂದು ತಾಕೀತು ಮಾಡಿದರು.

ನಿವೃತ್ತ ಶಿಕ್ಷಕ ಎಂ.ಸಿ. ಚುರ್ಚಿ ಮಾತನಾಡಿದರು. ದುದ್ದುಸಾಬ್ ನದಾಫ್ ಮಾತನಾಡಿದರು. ಪ್ರಭಾವತಿ ಕೋಣನವರ, ನಾಗರಾಜ ಮಡಿವಾಳರ, ಬಾಬಣ್ಣ ಮುಂಡರಗಿ, ಸುಭಾಷ್ ಮಾತನಾಡಿದರು. ಸಭೆಯಲ್ಲಿ ಲಕ್ಷ್ಮೀ ಜೋಶಿ, ಬಿ.ಎಂ. ಕಿತ್ತೂರ, ಐ.ಜಿ. ಕೋರಿ, ಎಂ.ಜಿ. ಹಳ್ಳಿಕೇರಿ, ಸುರೇಶ ರಾಚನಾಯ್ಕರ್, ಯಲ್ಲನಗೌಡ ಮರಿಗೌಡ್ರ, ಶ್ರೀಕಾಂತ ದೀಪಾಳಿ, ಲೋಕೇಶ ಕುಬಸದ, ಸುರೇಶಗೌಡ ಪಾಟೀಲ ಸೇರಿದಂತೆ ಇತರರು ಇದ್ದರು. ಎನ್‌ಇಎಸ್ ಉಳಿಸಿ ಹೋರಾಟ ಮುಖಂಡ ಕೆ.ಸಿ. ಕೋರಿ ನಿರ್ವಹಿಸಿದರು.

ಹೊಸರಿತ್ತಿ ಗ್ರಾಮದ ರಾಷ್ಟ್ರೀಯ ಶಿಕ್ಷಣ ಸಮಿತಿ ಪದಾಧಿಕಾರಿಗಳು ಅಕ್ರಮವಾಗಿ ಸಂಸ್ಥೆಯ ಜಾಗೆ ಕಬಳಿಸಿರುವುದನ್ನು ಖಂಡಿಸಿ ಬುಧವಾರ ಗ್ರಾಮದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

> ಸಂಸ್ಥೆಯ ಪದಾಧಿಕಾರಿಗಳು ನಿಬಂಧನೆಗಳನ್ನು ಗಾಳಿಗೆ ತೂರಿ ದಾನವಾಗಿ ಬಂದಿದ್ದ ಆಸ್ತಿಯನ್ನು ಸ್ವಂತಕ್ಕೆ ಖರೀದಿಸಿಕೊಂಡಿದ್ದು ಖಂಡನೀಯ. ಇದು ಕ್ರಿಮಿನಲ್ ಕೇಸ್ ಆಗುತ್ತದೆ. ಈ ಹೋರಾಟಕ್ಕೆ ಎಲ್ಲರೂ ಕೈಜೋಡಿಸಿ ಸಂಸ್ಥೆಯನ್ನು ಉಳಿಸಿ ಬೆಳೆಸಬೇಕು.
> ■ ಶಂಕ್ರಣ್ಣ ಕೋಣನವರ, ಬಸವೇಶ್ವರ ವಿದ್ಯಾಸಂಸ್ಥೆ

ಕಿರುಸುದ್ದಿ

ಅರ್ಜಿ ಅವಧಿ ವಿಸ್ತರಣೆ

ಬೆಳಗಾವಿ: ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಬೆಳಗಾವಿ ಜಿಲ್ಲೆಯಲ್ಲಿ ನಡೆಸಲಾಗುತ್ತಿರುವ ಮೊರಾರ್ಜಿ ದೇಸಾಯಿ, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ, ಕಾಲೇಜುಗಳ ಪ್ರಥಮ ಪಿಯುಸಿ ದಾಖಲಾತಿಗಾಗಿ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಕಾಲಾವಧಿ ಮೇ 2 ರ ವರೆಗೆ ವಿಸ್ತರಿಸಲಾಗಿದೆ. https://kreis.karnataka.gov.in ಈ ಲಿಂಕ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ದಾಖಲಾತಿ ಪಡೆದ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ. ಹೆಚ್ಚಿನ ಮಾಹಿತಿಗೆ ಹತ್ತಿರದ ವಸತಿ ಶಾಲೆ, ಕಾಲೇಜ್ ಸಂಪರ್ಕಿಸಬಹುದೆಂದು ಬೆಳಗಾವಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ: ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ಹಲವು ಫಲಾನುಭವಿ ಆಧಾರಿತ ಕಾರ್ಯಕ್ರಮಗಳನ್ನು ಒಳಗೊಂಡಿದ್ದು, 2019-20ನೇ ಸಾಲಿನ ಹೊಸ ಪ್ರದೇಶ ವಿಸ್ತರಣೆ-ಬಾಳೆ, ಗೇರು ಮತ್ತು ಸಂಕೀರ್ಣ ತಳಿ ತರಕಾರಿ ಬೆಳೆ ಬೆಳೆಯಲು ಸಹಾಯಧನದ ಸೌಲಭ್ಯವಿದ್ದು, ಸದರಿ ಬೆಳೆಯನ್ನು ಬೆಳೆಯಲು ನೀರಿನ ಅವಶ್ಯಕತೆಯಿದ್ದು, ರೈತರು ತಮ್ಮ ತೋಟದಲ್ಲಿ ವೈಯಕ್ತಿಕ ಕೃಷಿಹೊಂಡ ಮತ್ತು ಸಮುದಾಯ ಕೃಷಿಹೊಂಡಗಳನ್ನು ನಿರ್ಮಾಣ ಮಾಡಿಕೊಂಡಿರುವಂತಹ ಅಭ್ಯರ್ಥಿಗಳಿಗೆ ಸಹಾಯಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಯೋಜನೆಯ ಸೌಲಭ್ಯವನ್ನು ಪಡೆಯಲು ತಾಲ್ಲೂಕಾ ತೋಟಗಾರಿಕೆ ಕಚೇರಿ ಹಾಗೂ ಹೋಬಳಿ ಮಟ್ಟದ ರಯತ ಸಂಪರ್ಕ ಕೇಂದ್ರಗಳಲ್ಲಿ ಸಹಾಯಕ ತೋಟಗಾರಿಕೆ ಅಧಿಕಾರಿಗಳನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಬೆಳಗಾವಿ(ಜಿ.ಪಂ) ತೋಟಗಾರಿಕೆ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸನ್ಮಾನ

ಬೈಲಹೊಂಗಲ: 2026ರ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ ಅಂಗವಾಗಿ ಬೆಳಗಾವಿ ಜಿಲ್ಲೆ ವಿವಿಧ ಆರೋಗ್ಯ ಅಧಿಕಾರಿಗಳು ಹಾಗೂ ವೈದ್ಯರು ತಮ್ಮ ಸೇವೆಗಾಗಿ ಗೌರವಿಸಲ್ಪಟ್ಟಿದ್ದಾರೆ. ಬೈಲಹೊಂಗಲ



ತಾಲೂಕಾ ಆರೋಗ್ಯಾಧಿಕಾರಿ ಡಾ. ಸಂಜಯ ಎಸ್. ಸಿದ್ದಣ್ಣವರ ಅವರನ್ನು ಅತ್ಯುತ್ತಮ ತಾಲೂಕಾ ಆರೋಗ್ಯಾಧಿಕಾರಿಗಳಾಗಿ ಪರಿಗಣಿಸಿ ಸನ್ಮಾನಿಸಲಾಯಿತು. ಸಾರ್ವಜನಿಕ ಆಸ್ಪತ್ರೆ, ಬೈಲಹೊಂಗಲದ ಡಾ. ಪ್ರವೀಣ ಕುಲಕರ್ಣಿ ಅತ್ಯುತ್ತಮ ಶಸ್ತ್ರಚಿಕಿತ್ಸಕರಾಗಿ ಪ್ರಶಸ್ತಿಗೆ ಭಾಜನರಾದರು. ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ನೀಡಿದ ಮಹತ್ವದ ಸೇವೆಯನ್ನು ಗಮನಿಸಿ ಈ ಗೌರವ ನೀಡಲಾಗಿದ್ದು, ಸಾಧನೆಗೈದ ಎಲ್ಲ ಅಧಿಕಾರಿಗಳಿಗೆ ವಿವಿಧ ವಲಯಗಳಿಂದ ಅಭಿನಂದನೆಗಳು ವ್ಯಕ್ತವಾಗಿವೆ.

ಅಪಘಾತ: ಹಲವರಿಗೆ ಗಾಯ



ಸಂಕೇಶ್ವರ: ಕಾರು ಹಾಗೂ ಟಿಟಿ ಟ್ರಾವೆಲ್ಸ್ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಹಲವರು ಗಾಯಗೊಂಡಿದ್ದು ಡಿಕ್ಕಿಯ ಪರಿಣಾಮ ಟ್ರಾವೆಲ್ಸ್ ವಾಹನ ರಸ್ತೆಯಲ್ಲಿ ಮೂರು ಪಲ್ಟಿಯಾಗಿದ ಘಟನೆ ಪಟ್ಟಣದ ಹೊರವಲಯದ ರಾಷ್ಟ್ರೀಯ ಹೆದ್ದಾರಿ ಸೋಲಾಪುರ ಕ್ರಾಸ್ ಬಳಿ ನಡೆದಿದೆ. ಇಚಲಕರಂಜಿಯಿಂದ ಗಡಹಿಂಗ್ಲಜ್ ಸಮೀಪದ ಶಿಂಧೆವಾಡಿಗೆ ಮದುವೆ ಸಮಾರಂಭ ನಿಮಿತ್ತ ತೆರಳುತ್ತಿದ್ದ ಟಿಟಿ ವಾಹನಕ್ಕೆ, ಹಿಂಬದಿಯಿಂದ ಅತಿ ವೇಗವಾಗಿ ಬಂದ ಕಿಯಾ ಕಾರು ಡಿಕ್ಕಿ ಹೊಡೆದಿದೆ. ಈ ವೇಳೆ ನಿಯಂತ್ರಣ ತಪ್ಪಿದ ಟ್ರಾವೆಲ್ಸ್ ವಾಹನವು ಹೆದ್ದಾರಿಯಲ್ಲೇ ಉರುಳಿ ಬಿದ್ದಿದೆ. ಕಾರಿನಲ್ಲಿದ್ದ ದಂಪತಿ ಹಾಗೂ ಮಗು ಪುಣೆ-ಬೆಂಗಳೂರು ಮಾರ್ಗವಾಗಿ ಉಡುಪಿಯತ್ತ ಪ್ರಯಾಣಿಸುತ್ತಿದ್ದರು ಎನ್ನಲಾಗಿದೆ. ಪಲ್ಟಿಯಾದ ಟಿಟಿ ವಾಹನದಲ್ಲಿ ಚಾಲಕ ಸೇರಿ ಒಟ್ಟು 21 ಜನರಿದ್ದರು (19 ಮಹಿಳೆಯರು ಹಾಗೂ ಒಬ್ಬ ಪುರುಷ). ಅಪಘಾತದ ತೀವ್ರತೆಗೆ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಸ್ಥಳೀಯರ ಸಹಾಯದಿಂದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲನೆ ನಡೆಸಿದ್ದು, ಅಪಘಾತಕ್ಕೆ ಕಾರಣವಾದ ಕಾರು ಚಾಲಕ ಸಂದೀಪ್ ಕಾಮತ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಗೋಕಾಕ: ನಗರದ ಚನ್ನಬಸವೇಶ್ವರ ವಿದ್ಯಾಪೀಠದ ಪ್ರೌಢಶಾಲೆ ವಿದ್ಯಾರ್ಥಿಗಳಾದ ಅನುರಾಧಾ ಕುರಿ, ವಿನೋಧ ಸನದಿ, ನಿವೇದಿತಾ ಅಡಿಬಟ್ಟಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ ನಿಮಿತ್ತ ಸಂಸ್ಥೆ ಅಧ್ಯಕ್ಷ ಮುರುಘರಾಜೇಂದ್ರ ಶ್ರೀಗಳು ಸತ್ಕರಿಸಿ, ಗೌರವಿಸಿದರು. ಆಡಳಿತ ಮಂಡಳಿ ಶಂರಕ ಗೋರೋಶಿ, ಮಲ್ಲಿಕಾರ್ಜುನ ಈಟಿ, ವಿವೇಕ ಜತ್ತಿ, ಆಡಳಿತಾಧಿಕಾರಿ ಅಡಿವೇಶ ಗವಿಮಠ, ಮುಖ್ಯೋಪಾಧ್ಯಾಯ ಎಸ್. ಕೆ.ಮಠದ ಇದ್ದರು.

ನೂತನ ಬಸ್ ನಿಲ್ದಾಣ ಕಾಮಗಾರಿಗೆ ಭೂಮಿಪೂಜೆ

ಬೆಳಗಾವಿ: ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಬಡಾಲ ಅಂಕಲಗಿ ಗ್ರಾಮದಲ್ಲಿ ಅಭಿವೃದ್ಧಿ ಕಾಮಗಾರಿಗಳ ಅಬ್ಬರ ಶುರುವಾಗಿದೆ. ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಸಂಸದರ ನಿಧಿಯಡಿ ಮಂಜೂರಾದ ನೂತನ ಬಸ್ ನಿಲ್ದಾಣದ ಕಾಮಗಾರಿಗೆ ಬಿಜೆಪಿ ಮುಖಂಡ ಧನಂಜಯ ಜಾಧವ ಭೂಮಿ ಪೂಜೆ ನೆರವೇರಿಸುವ ಮೂಲಕ ಅಧಿಕೃತ ಚಾಲನೆ ನೀಡಿದ್ದಾರೆ. ಬಡಾಲ ಅಂಕಲಗಿ ಗ್ರಾಮದಲ್ಲಿ ನಡೆದ ಭೂಮಿಪೂಜೆ ಸಮಾರಂಭದಲ್ಲಿ ಮಾತನಾಡಿ, ಸಂಸದ ಈರಣ್ಣ ಕಡಾಡಿ ಗ್ರಾಮೀಣ ಭಾಗದ ಏಳಿಗೆಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಕೇವಲ ಬಸ್ ನಿಲ್ದಾಣ ಮಾತ್ರವಲ್ಲದೆ, ಗ್ರಾಮದ ಯುವಕರಿಗಾಗಿ ಸುಸಜ್ಜಿತ ವ್ಯಾಯಾಮಶಾಲೆ, ಗ್ರಂಥಾಲಯ ಹಾಗೂ ರಸ್ತೆಗಳಿಗೆ ಪೇವರ್ಸ್ ಅಳವಡಿಸುವಂತಹ ಹತ್ತಾರು ಜನಪರ ಕೆಲಸಗಳಿಗೆ ಸಂಸದರು ದೊಡ್ಡ ಮಟ್ಟದ ಅನುದಾನ ಬಿಡುಗಡೆ ಮಾಡಿದ್ದಾರೆ ಎಂದರು. ಈ ಅಭಿವೃದ್ಧಿ ಕಾಮಗಾರಿಗಳಿಂದಾಗಿ ಬಡಾಲ ಅಂಕಲಗಿ ಗ್ರಾಮದ ಮುಖಪುಟವೇ ಬದಲಾಗಲಿದ್ದು, ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಮೋಹನ ಅಂಗಡಿ, ಅಶೋಕ ಚಾಪಗಾವಿ, ಶಿವಣ್ಣ ಬೆಳಗಾವಿ ಸೇರಿದಂತೆ ಗ್ರಾಮದ ಪ್ರಮುಖ ಗಣ್ಯರು ಹಾಗೂ ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದು, ಕ್ಷೇತ್ರದ ಅಭಿವೃದ್ಧಿಗೆ ಕೈಜೋಡಿಸಿದ ಸಂಸದರಿಗೆ ಧನ್ಯವಾದ ಅರ್ಪಿಸಿದರು. ಈ ನೂತನ ಬಸ್ ನಿಲ್ದಾಣದಿಂದಾಗಿ ಪ್ರಯಾಣಿಕರ ದಶಕಗಳ ಬೇಡಿಕೆ ಈಡೇರಿದಂತಾಗಿದೆ.



ಗೋಕಾಕ: ಭಾರತೀಯ ಜನತಾ ಪಾರ್ಟಿ ಗೋಕಾಕ ಮಂಡಳ ವತಿಯಿಂದ ನಾರಿ ಶಕ್ತಿ ವಂದನಾ ಅಧಿನಿಯಮವನ್ನು ಜಾರಿಯಾಗದಂತೆ ತಡೆದ ಮಹಿಳಾ ವಿರೋಧಿ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳ ವಿರುದ್ಧ ಮಹಿಳಾ ಮೋರ್ಚಾ ಪದಾಧಿಕಾರಿಗಳು ಮಂಗಳವಾರ ನಗರದ ಬಸವೇಶ್ವರ ವೃತ್ತದಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು. ನಗರ ಯುವಮೋರ್ಚಾ ಅಧ್ಯಕ್ಷ ಈರಣ್ಣ ಅಂಬಲಿ, ಭಾರತಿ ಅಂಗಡಿ, ಗೀತಾ ಜರತಾರಕರ, ರಾಜೇಶ್ವರಿ ವಡೆಯರ, ರಾಮೇಶ್ವರಿ ಬಸಾಪೂರೆ, ಕುಸುಮಾ ಖನಗಾವಿ, ಶೋಭಾ ಬಂಡಾರಿ, ಶೈಲಾ ಕುಂಬಾರ, ವಿಜಯಲಕ್ಷ್ಮೀ, ರೇಖಾ, ಶಿವಲಿಲಾ, ಜಯಾನಂದ ಹುಣ್ಣಬ್ಯಾಳ, ಕಿರಣ ಢಮಾಮಗರ ಇದ್ದರು.

ಅನಧಿಕೃತ ಬ್ಯಾನರ್ ತೆರವು ಕಾರ್ಯಾಚರಣೆ ಆರಂಭ

ಬೆಳಗಾವಿ: ಇಲ್ಲಿನ ಮಹಾನಗರ ಪಾಲಿಕೆ ಅಧಿಕಾರಿಗಳು ಇತ್ತೀಚಿಗೆ ಫುಲ್ ಆಕ್ಟಿವ್‌ಯಾಗಿದೆ. ಮಂಗಳವಾರದಿಂದ ನಗರದಲ್ಲಿ ಅನಧಿಕೃತ ನೆನ್ನೆಯಷ್ಟೇ ಫೂಟ್‌ಪಾತ್ ಮೇಲಿನ ಅತಿಕ್ರಮಣ ತೆರವುಗೊಳಿಸಿ ಮಹಾನಗರ ಪಾಲಿಕೆಯೂ ಈಗ ಆಪರೇಷನ್ ಬ್ಯಾನರ್ ಅಭಿಯಾನ ಆರಂಭಿಸಿದೆ.

ಮಂಗಳವಾರ ಸಂಜೆಯಿಂದ ನಗರದಲ್ಲಿನ ಪೂಟ್‌ಪಾತ್ ತೆರವು ಕಾರ್ಯಾಚರಣೆ ನಡೆಸಿತ್ತು. ಅದೇ ರೀತಿ ಗುರುವಾರವು ಕೂಡ ಮಹಾನಗರ ಪಾಲಿಕೆ ಲಕ್ಷ್ಮೀ ನಿಪ್ಪಾಣಿಕರ ಅವರ ನೇತೃತ್ವದ ತಂಡವು ನಗರ ಪ್ರಮುಖ ವೃತ್ತಗಳಲ್ಲಿ ಹಾಕಲಾದ ಅವಧಿ ಮೀರಿದ ಮತ್ತು ಅನಧಿಕೃತ



ಬ್ಯಾನರ್ ತೆರವುಗೊಳಿಸುವ ಕಾರ್ಯಾಚರಣೆ ಮುಂದುವರೆಸಿದ್ದಾರೆ.

ನಗರದ ಕೇಂದ್ರ ಬಿಂದು ಕಿತ್ತೂರು ರಾಣಿ ಚೆನ್ನಮ್ಮ ವೃತ್ತ, ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ, ಕ್ಲಬ್ ರಸ್ತೆ, ಕೊಲ್ಲಾಪೂರ ವೃತ್ತ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಹಾಕಲಾದ ವಿವಿಧ ಸಂಘಟನೆಗಳ ಬ್ಯಾನರ್ ಅವಧಿ ಮೀರಿದ ಹೋರ್ಡಿಂಗ್ಸ್ ಎಲ್ಲವನ್ನು ತೆರವುಗೊಳಿಸಲಾಯಿತು. ಮಹಾನಗರ ಪಾಲಿಕೆಯೂ ತನ್ನ ಈ ಕಾರ್ಯಾಚರಣೆಯನ್ನು ಹೀಗೆಯೇ ಮುಂದುವರೆಸುವುದಾಗಿ ತಿಳಿಸಿದೆ.

ಅನಧಿಕೃತ ಬ್ಯಾನರ್ಸ್ ಮತ್ತು ಹೋರ್ಡಿಂಗ್ಸ್ ಗಳಿಂದ ತುಂಬಿ ತುಳುಕಿ ಹೋಗಿ ಅನಗರದ ಪ್ರಮೂಖ ರಸ್ತೆಗಳು ನಿಟ್ಟಿಸಿರು ಬಿಟ್ಟಿವೆ. ಮಹಾನಗರ ಪಾಲಿಕೆಯ ಈ ಕಾರ್ಯಾಚರಣೆಯ ಕಾರ್ಯಕ್ಕೆ ನಗರದ ಜನತೆಯೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಅಕ್ರಮ ಗಣಿಗಾರಿಕೆ: ಲೋಕಾಯುಕ್ತಕ್ಕೆ ದೂರು

ಬೆಳಗಾವಿ: ಜಿಲ್ಲೆಯಲ್ಲಿ ಸಾವಿರಾರು ಕೋಟಿ ಮೌಲ್ಯದ ಬಾಕ್ಸೈಟ್ ಹಾಗೂ ಅಲ್ಯೂಮಿನಸ್ ಲ್ಯಾಟರೈಟ್ ಅಕ್ರಮ ಗಣಿಗಾರಿಕೆ ಪ್ರಕರಣ ಸಂಬಂಧ ರಾಜ ಕುಮಾರ ಟೋಪಣ್ಣವರ ಮತ್ತು ಸುಜಿತ್ ಮುಳಗುಂದ ಕರ್ನಾಟಕ ಲೋಕಾಯುಕ್ತ ಎಸ್ಪಿ, ಬೆಳಗಾವಿ ಅವರಿಗೆ ಪತ್ರದ ಮೂಲಕ ದೂರು ಸಲ್ಲಿಸಿದ್ದಾರೆ.

ಅಕ್ರಮ ಗಣಿಗಾರಿಕೆ ಬೆಳಗಾವಿ ಹಾಗೂ ಖಾನಾಪೂರ ತಾಲೂಕಿನಲ್ಲಿ ದೊಡ್ಡ ಮಟ್ಟದಲ್ಲಿ ನಡೆಸಲಾಗುತ್ತಿದೆ. ಬೆಳಗಾವಿ ತಾಲೂಕಿನ ಬೆಳಗುಂಡಿ ಗ್ರಾಮದ ಸರ್ಕಾರಿ ಜಮೀನು ಸರ್ವೇ ಸಂಖ್ಯೆ 285ರಲ್ಲಿ ಕಾನೂನು ಬಾಹಿರವಾಗಿ ಗಣಿಗಾರಿಕೆ ನಡೆಸಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ದೂರಿನಲ್ಲಿ ಕರ್ನಾಟಕ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆ ನಿರ್ದೇಶಕ ಹಾಗೂ ಭಾರತೀಯ ಖನಿಜ ಬ್ಯೂರೋ, ಗೋವಾ ಪ್ರಾದೇಶಿಕ ಕಚೇರಿ ಅಧಿಕಾರಿ ಅವರ ಹೆಸರು ಸ್ಪಷ್ಟವಾಗಿ ಉಲ್ಲೇಖಿಸಲಾಗಿದ್ದು, ಅಕ್ರಮ ಗಣಿಗಾರಿಕೆ ತಡೆಯಲು ವಿಫಲವಾಗಿರುವುದು. ನಿರ್ಲಕ್ಷ್ಯ ಮತ್ತು ಸಂಧಾನದ ಸಾಧ್ಯತೆ ಬಗ್ಗೆ ಗಂಭೀರ ಆರೋಪ ಮಾಡಲಾಗಿದೆ. ಅಗತ್ಯ ಆದಾಯ, ಅರಣ್ಯ ಹಾಗೂ ಪರಿಸರ ಅನುಮೋದನೆಗಳಿಲ್ಲದೆ, ಸರ್ಕಾರಿ ಜಮೀನಿನಲ್ಲಿಯೇ ಗಣಿಗಾರಿಕೆ ನಡೆದಿದ್ದರೂ ಅನುಮತಿ ನೀಡಲಾಗಿದೆ ಅಥವಾ ಕ್ರಮ ಕೈಗೊಳ್ಳಲಾಗಿಲ್ಲ ಎಂದು ದೂರಿನಲ್ಲಿ ಹೇಳಲಾಗಿದೆ.

ಮಾಲಿನಿ ರಿಸೋರ್ಸಸ್ ಸಂಸ್ಥೆ ಈ ಅಕ್ರಮ ಗಣಿಗಾರಿಕೆಯಲ್ಲಿ ಪ್ರಮುಖ ಪಾತ್ರವಹಿಸಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.



ಕಾನೂನುಬದ್ಧ ಅನುಮತಿಗಳಿಲ್ಲದೆ ಖನಿಜ ತೆಗೆಯುವುದು. ಸಾಗಣೆ ಮತ್ತು ವಿತರಣೆ ಮಾಡಲಾಗುತ್ತಿದೆ. ಅನುಮೋದಿತ ಮಿತಿಮೀರಿ ಗಣಿಗಾರಿಕೆ ನಡೆಸಲಾಗುತ್ತಿದ್ದು, ನಿಯಮ ಸಂಪೂರ್ಣ ಉಲ್ಲಂಘಿಸಲಾಗಿದೆ ಎಂದು ದೂರಿದಾರರು ತಿಳಿಸಿದ್ದಾರೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ನಡೆಯುತ್ತಿರುವ ಅಂತರರಾಜ್ಯ ಅಕ್ರಮ ಗಣಿಗಾರಿಕೆ ಜಾಲದ ಭಾಗವಾಗಿದ್ದು, ಮಹಾರಾಷ್ಟ್ರದ ಚಂದಗಡ್ ತಹಸೀಲ್ದಾರ್ ಅವರು ಸಾವಳ್ಳಿ ಗ್ರಾಮದಲ್ಲಿ ಸಂಗ್ರಹಿಸಿರುವ ಖನಿಜಕ್ಕೆ ಮೂಲ ಪರಿಶೀಲನೆ ಮಾಡದೇ ಪರವಾನಗಿ ನೀಡುತ್ತಿರುವುದು ಗಂಭೀರ ವಿಷಯವಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಈ ಅಕ್ರಮ ಗಣಿಗಾರಿಕೆಯಿಂದ ಪರಿಸರ ಹಾನಿ, ಭೂಮಿ ಹಾನಿ, ನೀರಿನ ಮಟ್ಟ ಕುಸಿತ, ವಾಯು ಮಾಲಿನ್ಯ ಮತ್ತು ರೈತರ ಜೀವನೋಪಾಯಕ್ಕೆ ಹಾನಿಯಾಗಿರುವುದರ ಜೊತೆಗೆ ಸರ್ಕಾರಕ್ಕೆ ಭಾರೀ ಆದಾಯ ನಷ್ಟ ಉಂಟಾಗಿದೆ ಎಂದು ದೂರಿದಾರರು ತಿಳಿಸಿದ್ದಾರೆ. ಮಾಲಿನಿ ರಿಸೋರ್ಸಸ್, ಸಂಬಂಧಿತ ಅಧಿಕಾರಿಗಳ ವಿರುದ್ಧ ಸಮಗ್ರ ತನಿಖೆ ನಡೆಸಿ, ಅಕ್ರಮ ಗಣಿಗಾರಿಕೆ ತಕ್ಷಣ ನಿಲ್ಲಿಸಿ, ಹೊಣೆಗಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅಕ್ರಮ ಲಾಭ ವಸೂಲಿಸಬೇಕು ಎಂದು ಮನವಿ ಮಾಡಿದ್ದಾರೆ.

ಸಮಾಲೋಚನಾ ಸಭೆ

ಗೋಕಾಕ: ಇಲ್ಲಿಯ ಬಸವ ಜ್ಯೋತಿ ಐಟಿಐ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಅಶೋಕ ಲಗಮಪ್ಪಗೋಳ ಅವರ ಷಷ್ಠಬ್ದಿ ಸಮಾರಂಭ ಮತ್ತು ಸಾರ್ಥಕ ಜೀವನದ ಅಭಿನಂದನ ಗ್ರಂಥ ಹೊರ ತರುವ ಕುರಿತು ಸಮಾಲೋಚನಾ ಸಭೆಯು ಖಾಸಗಿ ಹೊಟೇಲ್‌ನಲ್ಲಿ ಜರುಗಿತು.

ಗೋಕಾವಿ ಗೆಳೆಯರ ಬಳಗ ಆಶ್ರಯದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅಶೋಕ ಲಗಮಪ್ಪಗೋಳ ನಡೆದು ಬಂದ ಬದುಕಿನ ಯಶೋಗಾಥೆ ಕುರಿತು ಚರ್ಚಿಸಲಾಯಿತು. ಅವರ ಸಾಧನೆಯದ್ದಕ್ಕೂ ಸಂಭವಿಸಿರುವ ಏರಿಳಿತ, ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿ ಸಂಸ್ಥೆಯನ್ನು ಮೇರು ಮಟ್ಟಕ್ಕೆ ತಲುಪಿಸಿದ ಪರಿ ಹತ್ತು ಹಲವಾರು ಅನುಭವಗಳನ್ನು ಅಶೋಕ ಲಗಮಪ್ಪಗೋಳ ಈ ಸಭೆಯಲ್ಲಿ ಹಂಚಿಕೊಂಡರು. ಅವರ ಷಷ್ಠಬ್ದಿ ಸಮಾರಂಭ ಹಮ್ಮಿಕೊಳ್ಳುವ ರೂಪ ರೇಷೆಯನ್ನು ಸಿದ್ದಪಡಿಸಲು ಮತ್ತು ಸಾರ್ಥಕ ಜೀವನದ ಅಭಿನಂದನ ಗ್ರಂಥ ಬದುಕಿನ ಬರಹ ಗ್ರಂಥ ಇತ್ಯಾದಿ ಕುರಿತು ಸುಧೀರ್ಘವಾಘಿ ಸಭೆಯಲ್ಲಿ ಚರ್ಚಿಸಲಾಯಿತು.

ಹಿರಿಯ ಕಲಾವಿದ ಹಾಗೂ ಸಾಹಿತಿ ಈಶ್ವರಚಂದ್ರ ಬೆಟಗೇರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಲಾವಿದ ಕಾಡೇಶಕುಮಾರ್,ಕವಿ, ಶಿಕ್ಷಕರು ಈಶ್ವರ



ಮಮದಾಪುರ, ಯೋಗ ಶಿಕ್ಷಕ ಆನಂದ ಸೋರಗಾವಿ, ಹಿರಿಯ ಜಾನಪದ ಕಲಾವಿದ ಮುತ್ತೆಪ್ಪ ಶಿಂಗಳಾಪೂರ, ಆಡಳಿತಾಧಿಕಾರಿ ಕೆಂಪಣ್ಣ ಶಿಂಗಳಾಪೂರ , ಜಯಾನಂದ ಮಾದರ ಸೇರಿದಂತೆ ಲಗಮಪ್ಪಗೋಳ ಅವರ ಹಲವಾರು ನಿಕಟವರ್ತಿಗಳು ಇದ್ದರು.

ಅಭಿವೃದ್ಧಿ ಕೆಲಸ ಪಕ್ಷಾತೀತವಾಗಿ ಮಾಡಿರುವೆ: ರಾಜೀವ

ಕುಡಚಿ: ಈಗಿನ ಬೆಲೆ ಏರಿಕೆ ಸರ್ಕಾರದಲ್ಲಿ ಬಡವರಿಗಾಗಿ ಒಂದು ಮನೆ ಕೂಡ ಮಂಜೂರಾಗಿಲ್ಲ. ಒಂದು ವಿದ್ಯುತ್ ಪರಿವರ್ತಕ ಮಂಜೂರಿಗೆ 2-3ಲಕ್ಷ ತೆರಬೇಕಾಗಿದೆ. ಆಸ್ತಿ ತೆರಿಗೆ 5ರಿಂದ 10ಪಟ್ಟು ಹೆಚ್ಚಾಗಿದೆ. 20ರೂ. ಸಿಗುವ ಬಾಂಡ್ ಪೇಪರ್ ಈಗ 500ಕ್ಕೆ ಏರಿದೆ. ಶಾಲಾ ಶುಲ್ಕದಲ್ಲಿ ಹೆಚ್ಚಳ, ಆಸ್ಪತ್ರೆ ಹಾಗೂ ಇತರೆ ಶುಲ್ಕ ಹೆಚ್ಚಿಸಿ ಜನಸಾಮಾನ್ಯರ ಮೇಲೆ ಹೊರೆ ಹಾಕುವ ಮೂಲಕ ಜೀವನ ನಡೆಸುವುದು ದುಸ್ತರವನ್ನಾಗಿಸಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಕುಡಚಿ ಮಾಜಿ ಶಾಸಕ ಪಿ.ರಾಜೀವ ಹೇಳಿದರು.

ರಾಯಬಾಗ ತಾಲೂಕಿನ ಕುಡಚಿ ಗ್ರಾಮೀಣ ಭಾಗದ ಬುಡ್ಡೇನಾನಾ ದರ್ಗಾ ಹತ್ತಿರ ಹಮ್ಮಿಕೊಂಡ ಕಾಂಗ್ರೆಸ್ ತೊರೆದು ಬಿಜೆಪಿ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿ, ನನ್ನ ಅವಧಿಯಲ್ಲಿ ಕ್ಷೇತ್ರದಾತ್ಯಂತ ಸಾವಿರಾರು ಮನೆಗಳು, ಚರಂಡಿ, ಶೌಚಾಲಯ, ಗ್ರಾಮೀಣ ಭಾಗದ ರಸ್ತೆಗಳು, ವಿದ್ಯುತ್, ನೀರಾವರಿ, ಶಾಲಾ ಕೊಠಡಿ ಸೇರಿದಂತೆ ಹಲವು ಅಭಿವೃದ್ಧಿಪರ ಕೆಲಸಗಳನ್ನು ಧರ್ಮ ಹಾಗೂ ಪಕ್ಷಾತೀತವಾಗಿ ಮಾಡಿದ್ದೇನೆ ಎಂದರು.

ನಾಶೀರ ಬಾಗೆಯವರ ನೇತೃತ್ವದಲ್ಲಿ ಮಹಮ್ಮದಸಾಬ್ ಬಾಗೆ, ದಾದೇಪೀರ ಬಾಗೆ, ಜೀವಾವುದಿನ ಬಾಗೆ, ಮಕಫೀರ ಬಾಗೆ, ಶರೀಫ್ ಸಂದರವಾಲೆ, ಅಶ್ಪಾಕ್ ಖಾನ್ ಮುದಸಿರ್ ಸಂದರವಾಲೆ, ಮುದಾಸಿರ್ ಜಹಾಂಗೀರ್, ಸಂಜು ನಿಕ್ಕಂ, , ಮೊಹಮ್ಮದ ಹುಸೇನ್ ಬಾಗೆ ಮೊಸಿನ್ ಬಾಗೆ, ರಿಜಾ ಮಕ್ತುಂಬಡೆ, ನಬಿಲಾಲ ಮುಜಾವರ್ ಇಮಾಮುದಿನ ಭಾಗಸಿರಾಜ, ನಿಸಾರ ಸಂದರವಾಲೆ, ಸಾಹೇಬಲಾಲ್ ರುಕ್ಕುಂದಿ, ಬದ್ರೊ ರುಕುಂದಿ, ಬಾಗೆ, ಸಂದರವಾಲೆ ಸೇರಿದಂತೆ ಇತರ ನೂರಾರು ಕಾರ್ಯಕರ್ತರು ಕಾಂಗ್ರೆಸ್ ತೊರೆದು ಬಿಜೆಪಿ ತತ್ವ ಸಿದ್ಧಾಂತಗಳನ್ನು ಒಪ್ಪಿಕೊಂಡು, ಶಲ್ಯ ಧರಿಸುವ ಮೂಲಕ ಪಕ್ಷ ಸೇರ್ಪಡೆಗೊಂಡರು.

ಡಾ.ಸಚಿನ್ ಮನಗುತ್ತಿ, ಜಹೂರ ಸಂದರವಾಲೆ, ಬದ್ರೊ ಜಿನಾಬಡೆ, ಅಹ್ಮದ್ ಸಂದರವಾಲೆ, ಸುಲ್ತಾನ್ ವಾಟೆ, ಜಹೂರ ಜಿನಾಬಡೆ, ಸಫೀರ ಪಟ್ಟಾಯಿತ ಮೌಲಾಲಿ ವಾಟೆ, ಜಯಕುಮಾರ ಮನಗುತ್ತಿ, ಮೋಹನ್ ಲೋಹಾರ, ಅಶೋಕ ಚೊಣ್ಣೆ ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.



ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಗೆ ಭೂಮಿಪೂಜೆ

ಬೆಳಗಾವಿ: ಬೆಳಗಾವಿ ಗ್ರಾಮೀಣ ಕ್ಷೇತ್ರದ ಮೂಲಭೂತ ಸೌಕರ್ಯಗಳನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ವಿಶೇಷ ಪ್ರಯತ್ನದಿಂದ ಬಡಸ್ ಗ್ರಾಮದಲ್ಲಿ ಸುಮಾರು 4.50 ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಭರ್ಜರಿ ಚಾಲನೆ ನೀಡಲಾಯಿತು.

ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳಕರ್ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಶಾಸ್ತ್ರೋಕ್ತ ವಿಧಾನಗಳೊಂದಿಗೆ ಪೂಜೆ ಸಲ್ಲಿಸಿ ಕಾಮಗಾರಿಗೆ ಚಾಲನೆ ನೀಡಲಾಯಿತು. ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಮಹತ್ವದ ಯೋಜನೆಗೆ ಬೆಂಬಲ ವ್ಯಕ್ತಪಡಿಸಿದರು.

ಈ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣದಿಂದ ಗ್ರಾಮಕ್ಕೆ ಸಂಪರ್ಕ ವ್ಯವಸ್ಥೆ ಸುಧಾರಿಸುವುದರ ಜೊತೆಗೆ ನೀರಿನ ಸಂಗ್ರಹಣೆಗೂ ಅನುಕೂಲವಾಗಲಿದೆ. ರೈತರಿಗೆ ನೀರಾವರಿ ಸೌಲಭ್ಯ ಹೆಚ್ಚಾಗುವ ನಿರೀಕ್ಷೆ ಇದ್ದು, ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೂ ಉತ್ತೇಜನ ದೊರೆಯಲಿದೆ ಎಂದು ಅಭಿಪ್ರಾಯ ವ್ಯಕ್ತವಾಯಿತು.



ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು, ಕಾಡಾ ಅಧ್ಯಕ್ಷರಾದ ಯುವರಾಜ ಕದಂ, ಮನೋಹರ್ ಬೆಳಗಾಂವ್ಕರ್ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದು, ಯೋಜನೆ ಶೀಘ್ರ ಪೂರ್ಣಗೊಳ್ಳಲೆಂದು ಹಾರೈಸಿದರು. ಗ್ರಾಮಸ್ಥರು ಈ ಯೋಜನೆ ಬಗ್ಗೆ ಸಂತಸ ವ್ಯಕ್ತಪಡಿಸಿ, ಇದರಿಂದ ತಮ್ಮ ದೈನಂದಿನ ಜೀವನದಲ್ಲಿ ಮಹತ್ತರ ಬದಲಾವಣೆ ಉಂಟಾಗಲಿದೆ ಎಂದು ತಿಳಿಸಿದರು.

ಈ ಯೋಜನೆ ಗ್ರಾಮಾಭಿವೃದ್ಧಿಗೆ ಮತ್ತೊಂದು ಮೈಲುಗಲ್ಲಾಗಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದ್ದು, ಕಾಮಗಾರಿಯನ್ನು ಸಮಯಕ್ಕೆ ಪೂರ್ಣಗೊಳಿಸುವಂತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೂಚನೆ ನೀಡಿದರು.

ಸ್ಪರ್ಧಾತ್ಮಕ ಯುಗದಲ್ಲಿ ಯುವಕರೇ ಉದ್ಯೋಗದಾತರಾಗಿ: ಪ್ರೊ.ನಾವಿ

ಮೂಡಲಗಿ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯುವಜನತೆ ಕೇವಲ ಪದವಿ ಪ್ರಮಾಣಪತ್ರ ಹಿಡಿದು ಉದ್ಯೋಗಕ್ಕಾಗಿ ಅಲೆಯುವವರಾಗಬಾರದು ಎಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಂ. ದೀನ ದಯಾಳ್ ಉಪಾಧ್ಯಾಯ ಅಧ್ಯಯನ ಪೀಠದ ನಿರ್ದೇಶಕ ಪ್ರೊ. ಬಿ.ಎಸ್. ನಾವಿ ಹೇಳಿದರು.

ತಾಲೂಕಿನ ಕಲ್ಲೋಳಿ ಪಟ್ಟಣದ ಎಸ್‌ಆರ್‌ಇಎಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಣಿ ಚನ್ನಮ್ಮ ವಿವಿ ಪಂಡಿತ ದೀನ ದಯಾಳ್ ಉಪಾಧ್ಯಾಯ ಅಧ್ಯಯನ ಪೀಠ, ಲಘು ಉದ್ಯೋಗ ಭಾರತಿ ಕರ್ನಾಟಕ, ಐಕ್ಯೂಎಸಿ ಹಾಗೂ ಎನ್‌ಎಸ್‌ಎಸ್ ಘಟಕದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ ಕಲ್ಪನೆಯಿಂದ ಕಾರ್ಯರೂಪಕ್ಕೆ: ಯುವ ಉದ್ಯಮಿಗಳಿಗೆ ಅವಕಾಶಗಳು ಎಂಬ ಕಾರ್ಯಾಗಾರದಲ್ಲಿ ಮಾತನಾಡಿದರು.

ಡಿಎಂಎಸ್ ಮಂಡಲದ ವ್ಯವಸ್ಥಾಪನಾ ಆಡಳಿತ ಕಾಲೇಜಿನ ಹಿಂದಿನ ಪ್ರಾಂಶುಪಾಲ ಡಾ.ಬಸವರಾಜ ಕೊಲುಚಿ ಮಾತನಾಡಿ, ಪ್ರತಿಯೊಂದು ಸಮಸ್ಯೆಗೆ ಒಂದು ಉದ್ಯಮದ ಅವಕಾಶವಿರುತ್ತದೆ. ಆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಆಲೋಚನೆ ವಾಣಿಜ್ಯೀಕರಣಗೊಳಿಸಿ ಯಶಸ್ವಿ ಸ್ಟಾರ್ಟ್-ಅಪ್‌ಗಳನ್ನು ಕಟ್ಟಿ ಎಂದರು.

ಅಥಣಿಯ ಕೈಗಾರಿಕಾ ವಿಸ್ತರಣಾಧಿಕಾ ಸತೀಶ ಬಸವಗೌಡರ ಹಾಗೂ ಕಾಲೇಜಿನ



ಪ್ರಾಂಶುಪಾಲ ಡಾ. ಸುರೇಶ ಹನಗಂಡಿ ಮಾತನಾಡಿದರು.

ಸಂಶೋಧನಾ ಸಹಾಯಕ ಯಲ್ಲಪ್ಪ ಮೂಡಲಗಿ, ಸಂಶೋಧನಾ ಅಧಿಕಾರಿ ಡಾ.ಶಿವಲಿಂಗಯ್ಯ ಗೋಠೆ, ಐಕ್ಯೂಎಸಿ ಸಂಯೋಜಕ ಡಾ. ಎಂ.ಬಿ.ಕುಲಮೂರ, ಆರ್.ಎಸ್.ಪಂಡಿತ, ಎನ್‌ಎಸ್‌ಎಸ್ ಅಧಿಕಾರಿ ಶಂಕರ ನಿಂಗನೂರ ಉಪಸ್ಥಿತರಿದ್ದರು.

ಉಪನ್ಯಾಸಕರಾದ ವಿಲಾಸ ಕೆಳಗಡೆ, ಡಾ. ರಾಜಶ್ರೀ ತೊಟಗಿ, ಅಕ್ಷತಾ ಮೇದಾರ, ಎಂ.ಆರ್. ಕರಗಣ್ಣಿ, ಎಸ್.ಎಚ್.ಅಂಕಲಗಿ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.ರಾಧಿಕಾ ಕರೆವ್ವಗೋಳ ಪ್ರಾರ್ಥಿಸಿದರು. ಡಾ. ಕೆ.ಎಸ್. ಪರವ್ವಗೋಳ ಸ್ವಾಗತಿಸಿದರು. ಡಿ.ಎಸ್. ಹುಗ್ಗಿ ಕಾರ್ಯಕ್ರಮ ನಿರೂಪಿಸಿದರೆ, ಬಿ.ಸಿ. ಮಾಳಿ ವಂದಿಸಿದರು.

ಸ್ವಚ್ಛತೆ ಕಡೆ ಹೆಚ್ಚು ಗಮನವಿರಲಿ: ಶಿವಬಸು

ಅಥಣಿ: ಮಲೇರಿಯಾ ಒಂದು ಗಂಭೀರ ಸೋಂಕು ರೋಗ. ಇದು ಹೆಣ್ಣು ಅನಾಫಿಲಿಸ್ ಜಾತಿ ಸೊಳ್ಳೆ ಕಚ್ಚುವಿಕೆಯಿಂದ ಹರಡುತ್ತದೆ. ಸ್ವಚ್ಛತೆಯಿಂದ ರೋಗ ದೂರವಾಗುವುದು. ಆದರಿಂದ ಸ್ವಚ್ಛತೆ ಕಡೆ ಹೆಚ್ಚು ಗಮನ ಹರಿಸಬೇಕು. ಎಂದು ಪ್ರಾಥಮಿಕ ಆರೋಗ್ಯ ನಿರೀಕ್ಷಣಾಧಿಕಾರಿ ಶಿವಬಸು ನಾಯಿಕ ಹೇಳಿದರು.

ಅವರು ತಾಲೂಕಿನ ಅವರಖೋಡ ಗ್ರಾಮದ ರಾಷ್ಟ್ರೋತ್ಥಾನ ಕನ್ನಡ ಮಾಧ್ಯಮ ಶಾಲೆಯಲ್ಲಿ ನಡೆದ ಬೇಸಿಗೆ ತರಬೇತಿ ವಿದ್ಯಾರ್ಥಿಗಳಿಗೆ ವಿಶ್ವ ಮಲೇರಿಯಾ ದಿನಾಚರಣೆ ಅಂಗವಾಗಿ ಮಲೇರಿಯಾ ರೋಗದ ಬಗ್ಗೆ ಜಾಗೃತಿ ಮೂಡಿಸಿ ಮಾತನಾಡಿ, ಈ ಕೀಟವು ಪ್ಲಾಸ್ಮೋಡಿಯಂ ಎಂಬ ಪರೋಪ ಜೀವಿ ಮಾನವನ ರಕ್ತಕ್ಕೆ ಸೇರಿಸುತ್ತದೆ. ಇದರಿಂದ ಜ್ವರ, ನಡುಕು, ತಲೆನೋವು, ವಾಂತಿ ಮುಂತಾದ ಲಕ್ಷಣ ಕಾಣಿಸುತ್ತದೆ ಎಂದರು.

ಶಾಲೆ ಕಾರ್ಯದರ್ಶಿ ಮಾಲತಿ ಎಸ್.ನಾಯಿಕ ಮಾತನಾಡಿ, ಮಲೇರಿಯಾ ರೋಗ ತಡೆಯುವುದು ನಮ್ಮ ಕೈಯಲ್ಲಿದೆ. ಕೆಲವು ಸರಳ ಕ್ರಮ ಅನುಸರಿಸಿದರೆ ನಾವು ಮಲೇರಿಯಾ ರೋಗದಿಂದ ದೂರ ಇರಬಹುದು ಎಂದರು.

ಈ ವೇಳೆ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ (ಪಿಎಚ್ ಸಿಒ) ಜ್ಯೋತಿ ಚೌಗಲಾ, ಶಾಲಾ ಮುಖ್ಯೋಪಾಧ್ಯಾಯ ಕುಮಾರ ಅಪರಾಜ, ಸಹ ಶಿಕ್ಷಕ ಕಿರಣ ಮಾದರ ಹಾಗೂ ಆಶಾ ಕಾರ್ಯಕರ್ತೆಯರು , ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಎಲ್ಲರೂ ಒಂದು ಕುಟುಂಬದಂತೆ ವಾಸಿಸಿ: ರಮೇಶ

ಹುಕ್ಕೇರಿ: ಮಾನ ಸಂಘ ಜೀವಿ, ಸಂಘಟನೆ ಮತ್ತು ಜನಪರ ಹೋರಾಟ ಯಾವಾಗಲೂ ನಾವು ರೂಢಿಸಿಕೊಳ್ಳಬೇಕು. ಆದರೆ ಅದು ನ್ಯಾಯಪರವಾದ ಬೇಡಿಕೆವಿರಬೇಕು ಎಂದು ಮಾಜಿ ಸಂಸದ ರಮೇಶ ಕತ್ತಿ ಹೇಳಿದರು.

ಪಟ್ಟಣದ ಆಂಜನೇಯ ನಗರ ನಿವಾಸಿಗಳು ಪ್ರಾರಂಭಿಸಿದ ಕ್ಷೇಮಾಭಿವೃದ್ಧಿ ಸಂಘವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹುಕ್ಕೇರಿ ಪಟ್ಟಣ ಇತ್ತೀಚಿನ ದಿನಗಳಲ್ಲಿ ಜನದಟ್ಟಣೆ ಪಟ್ಟಣವಾಗಿದೆ. ನೂತನ ಬಡಾವಣೆಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಬೇಕಾದ ಕರ್ತವ್ಯ ನಮ್ಮದಾಗಿದೆ. ಅದಕ್ಕಾಗಿ ಯಾವಾಗಲೂ ಕತ್ತಿ ಕುಟುಂಬ ಬದ್ಧವಾಗಿದೆ. ಇಲ್ಲಿನ ನಿವಾಸಿಗಳು ರಚಿಸಿಕೊಂಡ ಸಂಘದ ಮೂಲಕ ಹಲವಾರು ಜನಪರ ಕಾರ್ಯ ಹಮ್ಮಿಕೊಳ್ಳಬೇಕು. ಎಲ್ಲರೂ ಒಂದು ಕುಟುಂಬದಂತೆ ವಾಸಿಸಬೇಕು. ಪ್ರತಿಯೊಬ್ಬರ ಕುಶಲೋಪರಿ ಚರ್ಚಿಸಿ ಸ್ಪಂದಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಶಿಕ್ಷಣ ಇಲಾಖೆಯ ಬಿ.ಆರ್.ಪಿ ನಾಗವೇಣಿ ಮಾತನಾಡಿ, ಹುಕ್ಕೇರಿ



ಹೂವಿನಕೇರಿ ಆಗಿತ್ತು. ಅಂತಹ ಗತವೈಭವ ಮರುಕಳಿಸುವಂತೆ ನಾವೆಲ್ಲರೂಒಟ್ಟಾಗಿ ಶ್ರಮಿಸೋಣ ಎಂದರು.

ಸಂಘದ ಅಧ್ಯಕ್ಷ ಸಂಜೀವ ವಂಜೀರೆ ಮಾತನಾಡಿ, ಸಂಘದ ಉದ್ದೇಶಗಳನ್ನು ವಿವರಿಸಿದರು.

ಈ ವೇಳೆ ಅತಿಥಿಗಳನ್ನು ಮತ್ತು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ತಾಲೂಕಿಗೆ 2ನೇ ಸ್ಥಾನ ಪಡೆದ ನಿಖಿತಾ ಮುದವೀರ ಅವರನ್ನು ಸನ್ಮಾನಿಸಿದರು.

ಈ ವೇಳೆ ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ, ಮುಖಂಡರಾದ ರವಿ ಕರಾಳೆ, ಗುರುರಾಜ ಕುಲಕರ್ಣಿ,ಮಲ್ಲಪ್ಪಾ ಬಿಸಿರೊಟ್ಟಿ, ಬಸವರಾಜ ಗಂಗನ್ನವರ, ಲಾಜಮ ನಾಯಿಕವಾಡಿ, ಡಾ.ವಿಜಯ ಬಡಿಗೇರ, ರೇಖಾ ಚಿಕ್ಕೋಡಿ, ಸವಿತಾ ಏಣಗಿಮಠ, ಶರ್ಮಿಳಾ ಬಡಮಲ್ಲನವರ, ಶಾಂತಾ ಸೊಲ್ಲಾಪೂರೆ ಹಾಗೂ ಸಂಘದ ಪದಾಧಿಕಾರಿಗಳಿದ್ದರು.

ಈ ಸಂದರ್ಭದಲ್ಲಿ ಆಯ್.ಡಿ.ಜಕಾತಿ ಸ್ವಾಗತಿಸಿದರು. ಸಿ.ಎಂ.ದರಬಾರೆ ನಿರೂಪಿಸಿದರು. ಕೆಂಪಣ್ಣಾ ಮೋಶಿ ವಂದಿಸಿದರು.

ಕಲಾವಿದರಿಗೆ ಪ್ರೋತ್ಸಾಹ ನೀಡಿ: ಶೆಟ್ಟೆಪ್ಪ ಮಾದರ

ಬೆಳಗಾವಿ: ಗ್ರಾಮೀಣ ಜಾನಪದ ಕಲಾ ಸಂಭ್ರಮಹಂತ ಸಂಸ್ಕೃತಿಕ ಕಾರ್ಯಕ್ರಮಗಳು ನಡೆಸುವುದರಿಂದ ಹಲವಾರು ಕಲಾವದರಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಅವರ ಜೀವನಕ್ಕೂ ಒಂದು ದಾರಿಯಾದಂತೆ ಆಗುತ್ತದೆ ಎಂದು ಸಂಸ್ಥೆ ಅಧ್ಯಕ್ಷ ಶೆಟ್ಟೆಪ್ಪ ಕಾಡಪ್ಪ ಮಾದರ ಹೇಳಿದರು.

ಶಿವಾನಂದ ಭಾರತಿ ಸ್ವಾಮಿ ಜಾನಪದ ಕಲಾ ಯುವ ಸಂಘ, ಜೋಕಾನಟ್ಟಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ಸಂಯುಕ್ತಾಶ್ರಯದಲ್ಲಿ ಇತ್ತೀಚಿಗೆ ಕೆ. ಚಂದರಗಿ ಗ್ರಾಮದಲ್ಲಿ ಗ್ರಾಮೀಣ ಜಾನಪದ ಕಲಾ ಸಂಭ್ರಮದಲ್ಲಿ ಮಾತನಾಡಿದರು.

ಉದ್ಘಾಟನೆಯನ್ನು ಮಾರುತಿ ಕಳ್ಳಿಗುದ್ದಿ, ಗ್ರಾಪಂ ಅಧ್ಯಕ್ಷರು ಉದ್ಘಾಟಿಸಿದರು. ಮೊಶೆಪ್ಪ ವೆಂಕಟಾಪೂರ ಅಧ್ಯಕ್ಷತೆ ವಹಿಸಿದರು.

ಈ ವೇಳೆ ರಮೇಶ ಬಸಪ್ಪ ಕತ್ತಿ, ಸಂತೋಷ ಅವಜಪ್ಪಗೋಳ, ಯುಮನವ್ವ ಜೋಕಾನಟ್ಟಿ, ರುದ್ರಪ್ಪ ಮಾದರ, ಶಾಂತವ್ವ ದ್ಯಾಮಪ್ಪ ನಾಗನ್ನವರ, ರುದ್ರಪ್ಪ ಮಾದರ, ರೂಪಾ ಸುತಾರ, ಶ್ರೀಕಾಂತ ದುಂಡಯ್ಯಾ ಹಿರೇಮಠ, ಕೆಂಪಣ್ಣಾ ರಾಮಪ್ಪ ಕತ್ತಿ, ಲಕ್ಷ್ಮಣ ರಾಮಪ್ಪ ಅಕ್ಕಿಸಾಗರ ಭಾಗವಹಿಸಿದರು.

ಕಾರ್ಯಕ್ರಮದಲ್ಲಿ ಸಂಗ್ಯಾ-ಬಾಳ್ಯಾ ಸಣ್ಣಾಟ ಹಾಗೂ ಭಜನಾ ಪದಗಳು ಜರುಗಿದವು. ಯಮುನವ್ವ ಜೋಕಾನಟ್ಟಿ ಸ್ವಾಗತಿಸಿದರು. ಅಕ್ಕಮಹಾದೇವಿ ಮಾದರ ವಂದಿಸಿದರು.



ಕಿರುಸುದ್ದಿ

ವಿದ್ಯುತ್ ವ್ಯತ್ಯಯ ನಾಳೆ

ಸವದತ್ತಿ: ಮೇ.1ರಂದು ಸವದತ್ತಿ ಗ್ರಾಮದೇವಿ ಜಾತ್ರಾ ಮಹೋತ್ಸವ ನಡೆಯುತ್ತಿರುವುದರಿಂದ ಜಾತ್ರಾ ಪೂರ್ವ ತಯಾರಿ ನಿಮಿತ್ತ ಸವದತ್ತಿ ಪಟ್ಟಣಕ್ಕೆ ಸರಬರಾಜು ಆಗುವ ಎಫ್ -3, ರಾಮಾಪುರ ಸೈಟ್ ವಿದ್ಯುತ್ ಮಾರ್ಗದ ತುರ್ತು ನಿರ್ವಹಣೆ ಕಾಮಗಾರಿ ಕಾರ್ಯ ಕೈಗೊಳ್ಳುತ್ತಿರುವುದರಿಂದ 11 ಕೆವಿ ಮಾರ್ಗದ ವಿದ್ಯುತ್ ಸರಬರಾಜಿನಲ್ಲಿ ಮೇ 1ರಂದು ಬೆಳಗ್ಗೆ 9ರಿಂದ ಸಂಜೆ 6ವರೆಗೆ ಪಟ್ಟಣದ ಶಾಖಾ ವ್ಯಾಪ್ತಿಯಲ್ಲಿ ಅಡಿಯಲ್ಲಿ ಬರುವ ಪಟ್ಟಣದ ಜನತಾ ಕಾಲೋನಿ, ಬಿಡಿಓ ಕ್ರಾಸ್ ಮಾಮನಿ ಕೆರೆ ರೋಡ್, ಎಸ್‌ಎಲ್‌ಓ ಕ್ರಾಸ್ ಪೋಲೀಸ್ ಠಾಣೆ ಕೋಟೆಯ ಸುತ್ತಮುತ್ತಲು ಗೋಕಾಕ್ ಮಿಲ್, ಪದಕಿ ಪುರಂ, ಸೌಗಂದಿಪುರ ಎಲ್ ಐಸಿ , ಆಫೀಸ್ ಹೊಸ ಬಸ್ ನಿಲ್ದಾಣ, ಕೆಂಚಲಾರ ಕೊಪ್ಪ , ರೇಣುಕಾ ಟಾಕೀಸ್, ಕೆಎಲ್‌ಇ ಶಾಲೆ ಕುಂಬಾರ ಓಣಿ, ಹುಡೇದ ಓಣಿ, ನಗರ ಸಭೆ ಕಾರ್ಯಾಲಯ, ಬೆಟಗೇರಿ ಅಗಸಿ, ತಾಲೂಕ ಸಾರ್ವಜನಿಕ ಆಸ್ಪತ್ರೆ, ಹನುಮಗೇರಿ ಓಣಿ ಸೇರಿದಂತೆ ನಗರದ ಕೆಲವು ಓಣಿಗಳಿಗೆ ವಿದ್ಯುತ್ ಸಂಪೂರ್ಣವಾಗಿ ನಿಲುಗಡೆಯಾಗಲಿದೆ. ಆದ್ದರಿಂದ ನಗರದ ಸಾರ್ವಜನಿಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪ ವಿಭಾಗ ಹುವಿಸಕಂನಿ ಸವದತ್ತಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಸರ್ಕಾರಿ ಶಾಲೆ ಸಾಧನೆ





ಯಮಕನಮರಡಿ : ಹುನೂರ ಮಾಸ್ತಿಹೋಳಿಯ ಸರ್ಕಾರಿ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಸೋನಾಲಿ ಶಿರಗುಪ್ಪಿ 94.88% ಪ್ರಥಮ ಸ್ಥಾನ, ರಾಧಿಕಾ ಮುಂಗಾರಿ 91.52% ದ್ವಿತೀಯ ಸ್ಥಾನ, ಪ್ರತಿಕ್ಷಾ ಶಿರಗುಪ್ಪಿ 90.56% ಹಾಗೂ ಲತಾ ಬೆನ್ನಿ 90.56% ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳನ್ನು ಶಾಲೆ ಎಸ್‌ಡಿಎಂಸಿ ಅಧ್ಯಕ್ಷರು ಉಪಾಧ್ಯಕ್ಷರು, ಸದಸ್ಯರು ಹಾಗೂ ಮುಖ್ಯೋಪಾಧ್ಯಾಯರು ಸರ್ವ ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

ನೇತ್ರ ತಪಾಸಣಾ ಶಿಬಿರ ನಾಳೆ

ಖಾನಾಪುರ: ಕರ್ನಾಟಕ ಪತ್ರಕರ್ತರ ಸಂಘ(ರಿ), ಮಲಪ್ರಭಾ ಆಸ್ಪತ್ರೆ ಖಾನಾಪುರ ಹಾಗೂ ಜಯಪ್ರೀಯ ಕಣ್ಣಿನ ಆಸ್ಪತ್ರೆ ಹುಬ್ಬಳ್ಳಿ ಇವರ ಸಹಯೋಗದಲ್ಲಿ ಮೇ 1 ರಂದು ಖಾನಾಪುರ ಪಟ್ಟಣದ ಹೊಸ ಬಸ್ ನಿಲ್ದಾಣದ ಎದುರಿನ ಮಲಪ್ರಭಾ ಆಸ್ಪತ್ರೆಯಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಕಣ್ಣಿನ ತಪಾಸಣೆ, ಚಿಕಿತ್ಸೆ, ಕಣ್ಣಿನ ಆರೈಕೆ ಬಗ್ಗೆ ಮಾಹಿತಿ ಮಾರ್ಗದರ್ಶನ ನೀಡಲಾಗುತ್ತದೆ. ತಾಲೂಕಿನ ಸಾರ್ವಜನಿಕರು ಇದರ ಸದುಪಯೋಗ ಪಡೆಯುವಂತೆ ಶಿಬಿರದ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಆರೋಗ್ಯ ತಪಾಸಣಾ ಶಿಬಿರ

ಹಿರೇ ಬಾಗೇವಾಡಿ: ಇಲ್ಲಿಯ ಬಸವನಗರದ ಲೋಟಸ್ ಹಾಸ್ಪಿಟಲ್ ನಲ್ಲಿ ಮೇ 1ರಿಂದ ಮೇ 7 ರವರೆಗೆ ಪ್ರತಿನಿತ್ಯ ಮುಂಜಾನೆ 10 ರಿಂದ ಸಂಜೆ 5 ರವರೆಗೆ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಉಚಿತ ಬಿಪಿ ಮತ್ತು ಶುಗರ್ ಚೆಕಪ್ ನೊಂದಿಗೆ ಸಾಮಾನ್ಯ ತಪಾಸಣೆ, ಹೃದಯ ರೋಗ, ರಕ್ತಹೀನತೆ, ಕಾಮಾಲೆ, ಅಸ್ತಮಾ, ಲಿವರ್ ಸಮಸ್ಯೆ, ಮೂತ್ರಪಿಂಡದ ಸಮಸ್ಯೆ, ನಿದ್ರಾಹೀನತೆ, ಸಂಧಿವಾತ, ಕುತ್ತಿಗೆ ನೋವು, ಬೆನ್ನು ನೋವು, ಚರ್ಮರೋಗ, ಪಾರ್ಶ್ವವಾಯು, ಎಲುಬು ಕೀಲುಗಳ ತಪಾಸಣೆ, ಊತ, ಮೊಣಕಾಲು ನೋವು, ಥೈರಾಯ್ಡ್ ಸಮಸ್ಯೆ, ಗುಪ್ತ ಮತ್ತು ಲೈಂಗಿಕ ರೋಗಗಳ ಸಮಸ್ಯೆಗಳಿಗೆ ನುರಿತ ವೈದ್ಯರಿಂದ ಚಿಕಿತ್ಸೆ ದೊರೆಯಲಿದೆ.

ಫರ್ನಿಚರ್ ಅಂಗಡಿಗೆ ಬೆಂಕಿ: ಅಪಾರ ಹಾನಿ

ಚಿಕ್ಕೋಡಿ: ಪಟ್ಟಣದ ಭೀಮ ನಗರ ಬಡಾವಣೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಫರ್ನಿಚರ್ ಅಂಗಡಿ ಹೊತ್ತಿ ಉರಿದು ಅಪಾರ ಪ್ರಮಾಣ ಹಾನಿಯಾದ ಘಟನೆ ಬುಧವಾರ ಸಂಭವಿಸಿದೆ. ಆಕಸ್ಮಿಕವಾಗಿ ಹೊತ್ತಿಕೊಂಡ ಬೆಂಕಿಯಿಂದ ಅಂಗಡಿ ಹೊತ್ತಿ ಉರಿದಿದ್ದು, ವಿಲಾಸ ಸಾತಪ್ಪ ಸಾಲಿಮನಿ ಎಂಬುವವರಿಗೆ ಸೇರಿದ ಅಂಗಡಿ ಇದಾಗಿದೆ. ಘಟನಾ ಸ್ಥಳಕ್ಕೆ ಅಗ್ನಿಶಾಮಕದಳದ ಸಿಬ್ಬಂದಿ ಆಗಮಿಸಿ ಬೆಂಕಿ ನಂದಿಸಿದರು. ಬೆಂಕಿ ಅವಗಡದಲ್ಲಿ 4 ಲಕ್ಷ ರೂ. ಮೌಲ್ಯದ ವಸ್ತುಗಳು ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ಠಾಣಾ ಅಧಿಕಾರಿ ಅನುರಾಗ ಬಿ ಎಲ್, ರಾಚಯ್ಯ ಮಠಪತಿ, ಬಸವರಾಜ ಹಿರೇಗೌಡರ, ಮಲ್ಲಿಕಾರ್ಜುನ ಕುಂಬಾರ, ಹೈದರ್ ಮುಲ್ತಾನಿ, ಉಮೇಶ ನೇರ್ಲೇಕರ ಇದ್ದರು.



ಬೆಳಗಾವಿ: ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಕುವೆಂಪು ಸಭಾಭವನದಲ್ಲಿ ಆಯೋಜಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಯಶಸ್ವಿಯಾಗಿ ಎದುರಿಸಲು ಮಾರ್ಗದರ್ಶನ ಮತ್ತು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತು. ಭಾರತೀಯ ಆಡಳಿತ ಸೇವೆ ಪರೀಕ್ಷೆಯಲ್ಲಿ ಕಿರಣ ಕಮತೆ ದೇಶಕ್ಕೆ 53 ಮತ್ತು ರಾಜ್ಯಕ್ಕೆ ಮೊದಲ ಸ್ಥಾನ ಪಡೆದರು.

ರೈತರಿಗೆ ಮಾರುಕಟ್ಟೆ ಉಪಯೋಗ ಸಿಗಲಿ: ಸುಜೀತ್

ಬೆಳಗಾವಿ: ಇಲ್ಲಿಯ ಗಾಂಧಿನಗರದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಜೈಕಿಸಾನ್ ಖಾಸಗಿ ಮಾರುಕಟ್ಟೆ ಲೈಸನ್ಸ್ ರದ್ದುಗೊಳಿಸಿರುವ ಪ್ರಶ್ನಿಸಿ ಕೆಎಟಿ ಹೋದ ವೇಳೆ ಖಾಸಗಿ ಮಾರುಕಟ್ಟೆ ಅರ್ಜಿ ವಜಾ ಮಾಡಿ ಆದೇಶ ಹೊರಡಿಸಿದೆ ಎಂದು ನ್ಯಾಯವಾದಿ ನಿತೀನ್ ಬೋಳಬಂದಿ ವರು ತಿಳಿಸಿದರು. ಬುಧವಾರ ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಲೈಸನ್ಸ್ ರದ್ದಾದ 30 ದಿನಗಳ ಒಳಗೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕಿತ್ತು. ಸಮಯದ ವಿಳಂಬದಿಂದ ಕೆಎಟಿಗೆ ಲೈಸನ್ಸ್ ರದ್ದು ಮಾಡಿರುವುದನ್ನು ರದ್ದು ಮಾಡಬೇಕು ಎಂದು ಅರ್ಜಿಸಲ್ಲಿಸಿದರು. ಆದರೆ ಅದನ್ನು ಕೆಎಟಿ ವಜಾಗೊಳಿಸಿ ಆದೇಶ ಹೊರಡಿಸಿದೆ. ಅವರು ಬೇಕಾದರೆ ಮುಂದೆ ನ್ಯಾಯಾಲಯಕ್ಕೆ ಹೋದರೂ ಅದು ನಿಲ್ಲುವುದಿಲ್ಲ ಎಂದರು. ರಾಜಕುಮಾರ ಟೋಪಣ್ಣವರ ಮಾತನಾಡಿ, ಸ್ಥಳೀಯ ಬಿಜೆಪಿ ಶಾಸಕರು ಖಾಸಗಿ ಮಾರುಕಟ್ಟೆ ಗಾಂಧಿ ನಗರದಲ್ಲಿ ಸ್ಥಳಾಂತರಿಸುವ ಹುನ್ನಾರ ನಡೆಸಿದ್ದರು. ಬಿಜೆಪಿ ಸರ್ಕಾರ ಅವಧಿಯಲ್ಲಿ ಖಾಸಗಿ ಮಾರುಕಟ್ಟೆ ವಿರೋಧಿಸಿ ಅದನ್ನು ಬಂದ್ ಮಾಡುವಂತೆ ಮನವಿಗೆ ಸ್ಪಂದಿಸಿರಲಿಲ್ಲ ಎಂದರು. ಸಾಮಾಜಿಕ ಕಾರ್ಯಕರ್ತ ಸುಜೀತ್ ಮುಳಗುಂದ ಮಾತನಾಡಿ, ಕಾನೂನು ಬಾಹಿರವಾಗಿ ನಿರ್ಮಾಣ ಮಾಡಿದ ಮಾರುಕಟ್ಟೆ ಎಪಿಎಂಸಿ ಪ್ರಾಂಗಣದಲ್ಲಿ ಸ್ಥಳಾಂತರ ಮಾಡಿದ್ದಾರೆ. ಆದರೆ ಅಲ್ಲಿ ಭಾನುವಾರ ಮಾರುಕಟ್ಟೆಯಲ್ಲಿ ಅಕ್ರಮವಾಗಿ ವ್ಯಾಪಾರ ವಹಿವಾಟು ನಡೆಸಿದ್ದಾರೆ. ಅದನ್ನು ನಿಲ್ಲಿಸಿ ಎಪಿಎಂಸಿ ಪ್ರಾಂಗಣದಲ್ಲಿಯೇ ವ್ಯಾಪಾರ ವಹಿವಾಟ ನಡೆಸುವಂತೆ ಮಾಡಬೇಕು. ರೈತರಿಗೆ ಅನಕೂಲವಾಗುವ ನಿಟ್ಟಿನಲ್ಲಿ ನಿರ್ಮಾಣ ಮಾಡಿರುವ ಮಾರುಕಟ್ಟೆ ಅವರಿಗೆ ಉಪಯೋಗವಾಗಬೇಕು ಎಂದು ಆಗ್ರಹಿಸಿದರು.



ನೇಸರಗಿ. ಇಲ್ಲಿನ ಪ್ರಸಿದ್ಧ ಶ್ರೀವೀರಭದ್ರೇಶ್ವರ ರಥೋತ್ಸವವು ಬುಧವಾರದಂದು ಅದ್ದೂರಿಯಾಗಿ ಜರುಗಿತು. ಈ ಸಂದರ್ಭದಲ್ಲಿ ಗ್ರಾಮದ ಜನತೆ, ಸುತ್ತಮುತ್ತಲಿನ ಗ್ರಾಮಗಳ ಜನತೆ ಪಾಲ್ಗೊಂಡಿದ್ದರು.

ಗ್ರಾಮೀಣ ಭಾಗದಲ್ಲಿ ಸುಸಜ್ಜಿತ ಸಭಾ ಮಂಟಪಗಳ ನಿರ್ಮಾಣ

ಯರಗಟ್ಟಿ: ಗ್ರಾಮೀಣ ಭಾಗದಲ್ಲಿ ಸುಸಜ್ಜಿತ ಸಭಾ ಮಂಟಪಗಳ ನಿರ್ಮಾಣದಿಂದ ಸಾರ್ವಜನಿಕ ಸಮಾರಂಭಗಳು, ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಸಭೆ-ಸಮಾರಂಭಗಳನ್ನು ಹಮ್ಮಿಕೊಳ್ಳಲು ಗ್ರಾಮಸ್ಥರಿಗೆ ಅನುಕೂಲವಾಗಲಿದೆ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ಯರಝರ್ವಿ ಗ್ರಾಮದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ನಿರ್ಮಿಸಲಾದ ದ್ಯಾಮವ್ವಾದೇವಿ ದೇವಸ್ಥಾನದ ಸಭಾ ಮಂಟಪ ಉದ್ಘಾಟಿಸಿ ಮಾತನಾಡಿ, ಕ್ಷೇತ್ರದ ಪ್ರತಿಯೊಂದು ಗ್ರಾಮವೂ ಮೂಲಭೂತ ಸೌಕರ್ಯಗಳೊಂದಿಗೆ ಅಭಿವೃದ್ಧಿ ಹೊಂದಬೇಕು. ಸಭಾ ಮಂಟಪಕ್ಕೆ ಇನ್ನು ಬೇಕಾಗುವ ಮೂಲಭೂತ ಸೌಕರ್ಯ ಸೌಲಭ್ಯಗಳನ್ನು ಸಿಗ್ರದಲ್ಲಿ ಕಲ್ಪಿಸಲಾಗುವುದು ಎಂದು ಹೇಳಿದರು.

ಯರಗಟ್ಟಿ ಎಪಿಎಂಸಿ ಅಧ್ಯಕ್ಷ ನೀಲಕಂಠ ಶಿದಬಸನ್ನವರ ಮಾತನಾಡಿ, ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶಾಸಕರ ಕೊಡುಗೆ ಅನನ್ಯ ಎಂದು ಹೇಳಿದರು.



ಘೋಡಗೇರಿ ಶಿವಾನಂದ ಮಠದ ಮಲ್ಲಯ್ಯ ಸ್ವಾಮೀಜಿ, ಯಲ್ಲಾಲಿಂಗ ಮಠದ ಚಿದಾನಂದ ಸ್ವಾಮೀಜಿ, ಮುರಗಯ್ಯಸ್ವಾಮಿ ಹಿರೇಮಠ, ಜಿಪಂ ಎಇಇ ಎಚ್.ಎ.ಕದ್ರಾಪೂರ, ಬೆಮುಲ್ ನಿರ್ದೇಶಕ ಶಂಕರ ಇಟ್ನಾಳ, ಮುಖಂಡ ಪ್ರಕಾಶ ವಾಲಿ, ಸವದತ್ತಿ ಎಪಿಎಂಸಿ ಅಧ್ಯಕ್ಷ ಚಂದ್ರು ಜಂಬ್ರಿ, ದೇವಸ್ಥಾನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸುರೇಶ ಮುರಗೋಡ, ಆರ್.ಕೆ.ಪಟಾತ, ಡಾ.ಎ.ಎಂ. ಶಂಕರಲಿಂಗಪ್ಪ, ಎಂ.ಬಿ.ಪೂಜೇರ, ಸಿದ್ದಪ್ಪ ಮಾಳಗಿ, ದುಂಡಪ್ಪ ಕೊಡೆಳ್ಳಿ, ಪ್ರಕಾಶ ಮುರಗೋಡ, ಅಶೋಕ ಗಡಮ್ಮನ್ನವರ, ಭೀಮಶಿ ಕಡಬಿ, ಮಹಾದೇವ ದಾಸಪ್ಪನ್ನವರ, ಪ್ರಕಾಶ ಲಿಂಗರಡ್ಡಿ, ಅರ್ಜುನ ದಳವಾಯಿ, ಬಸವರಾಜ ಹಾರುಗೊಪ್ಪ, ರಮೇಶ ದುಂಡಪ್ಪನವರ, ಸುಬಾಷ ಕಲ್ಲನ್ನವರ, ಬಸವರಾಜ ಕತ್ತಿ, ಸಿದ್ದಾರೂಡ ಪುಜೇರ ಸೇರಿದಂತೆ ಮುಖಂಡರು, ಸಮಾಜದ ಪ್ರಮುಖರು ಹಾಗೂ ಕಾರ್ಯಕರ್ತರು ಇದ್ದರು.

ಭಗವಾನ್ ಬುದ್ಧ ಜಯಂತಿ ಮೇ 1ರಂದು

ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ಮೇ 1ರಂದು ಬೆಳಗ್ಗೆ 10ಕ್ಕೆ ನಗರದ ಸದಾಶಿವ ನಗರದಲ್ಲಿನ ಬುದ್ಧ ವಿಹಾರದಲ್ಲಿ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮ ಜರುಗಲಿದೆ. ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸುವರು. ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಶಾಸಕ ಆಸೀಫ್ ಸೇಠ್ ಅಧ್ಯಕ್ಷತೆ ವಹಿಸುವರು. ರಾಣಿ ಪಾರ್ವತಿದೇವಿ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ .ಎಚ್. ಬಿ. ಕೋಲ್ಕಾರ ಉಪನ್ಯಾಸ ನೀಡುವರು.ಸರ್ಕಾರಿ ಮುಖ್ಯ ಸಚೇತಕ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷ ಭರಮಗೌಡ ಕಾಗೆ, ಹಣಕಾಸು ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ ಆಗಮಿಸಲಿದ್ದಾರೆ. ಸಂಸದರಾದ ಈರಣ್ಣ ಕಡಾಡಿ, ಪ್ರಿಯಾಂಕಾ ಜಾರಕಿಹೊಳಿ, ಜಗದೀಶ್ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮನಸ್ಸು ಹಿಡಿತದಲ್ಲಿ ಇಟ್ಟುಕೊಳ್ಳಿ: ಶ್ರೀಗಳು

ಗೋಕಾಕ: ಜಗತ್ತಿನಲ್ಲಿ ಯಾವುದು ಶಾಶ್ವತವಲ್ಲ, ನನ್ನದು ಎನ್ನುವುದು ಯಾವುದು ಇಲ್ಲಾ, ಮನಸ್ಸು ನಿಗ್ರಹ ಮಾಡುವವರು ಈ ಜಗತ್ತನ್ನು ಗೆಲ್ಲುತ್ತಾರೆ. ಮನಸ್ಸು ಆ ಕಡೆ, ಈ ಕಡೆ ಹರಿಯದಂತೆ ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಿ ಎಂದು ಹೊಸಳ್ಳಿ ಅಭಿನವ ಬೂದೀಶ್ವರ ಸ್ವಾಮಿಜಿ ಹೇಳಿದರು.

ತಾಲೂಕಿನ ಬೆಟಗೇರಿ ಗ್ರಾಮಸ್ಥರ ಸಹಯೋಗದಲ್ಲಿ ಬಸವ ಜಯಂತಿ ಹಾಗೂ 775 ವರ್ಷ ಬಾಳಿದ ಹೊಸಳ್ಳಿ ಮಹಾತಪಸ್ವಿ ಜಗದ್ಗುರು ಬೂದೀಶ್ವರ ಶ್ರೀಗಳು ಶಿಲಾ ಮಂಟಪ ಲೋಕಾರ್ಪಣೆ ನಿಮಿತ್ತ ಬೆಟಗೇರಿ ಗ್ರಾಮದಲ್ಲಿ ಏ.26ರಿಂದ ಏ.30ರವರೆಗೆ ಹೊಸಳ್ಳಿ ಮತ್ತು ಕೊಪ್ಪಳ ಶ್ರೀಗಳಿಂದ ಹಮ್ಮಿಕೊಂಡ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದಲ್ಲಿ ಸ್ಥಳೀಯ ಗಜಾನನ ವೇದಿಕೆ ಮೇಲೆ ನಡೆದ ಪ್ರವಚನದಲ್ಲಿ ಮಾತನಾಡಿ, ಮನಸ್ಸು ಹರಿಯುವಾಗ ಭಗವಂತನ ಸ್ಮರಣೆ ಮಾಡಿ, ಮನಸ್ಸು ನಿಗ್ರಹ ಮಾಡಿದರೆ ಮಹಾದೇವನನ್ನಾಗಿಸುತ್ತದೆ ಎಂದರು.

ಸ್ಥಳೀಯ ಪ್ರವಚನ ಕಾರ್ಯಕ್ರಮಕ್ಕೆ ತನು, ಮನ, ಧನ ಸಹಾಯ, ಸಹಕಾರ ನೀಡಿದ ದಾನಿಗಳನ್ನು, ಗಣ್ಯರನ್ನು ಹೊಸಳ್ಳಿ ಅಭಿನವ ಬೂದೀಶ್ವರ ಸ್ವಾಮಿಜಿ ಅವರು ಸತ್ಕರಿಸಿದರು. ಮಲ್ಲಿಕಾರ್ಜುನ ಕೊಡಗನೂರ ಅವರಿಂದ ತಬಲಾ ಸಾಥದೊಂದಿಗೆ ಕಲ್ಲೋಳ್ಳಿದ ಶಂಕರಯ್ಯ ಗುರುಮಠ ಅವರಿಂದ ಸಂಗೀತ ಸೇವೆ ನಡೆಯಿತು.

ಕೊಪ್ಪಳ ಶ್ರೀಗಳಿಂದ ಪ್ರವಚನ: ತಾಲೂಕಿನ ಬೆಟಗೇರಿ ಗ್ರಾಮದಲ್ಲಿ ಏ.30 ರಂದು ಪ್ರವಚನ ಮಂಗಲ ಕಾರ್ಯಕ್ರಮ, ಬೆಳಗ್ಗೆ 8ಕ್ಕೆ ಗ್ರಾಮದ ವಿವಿಧ ಬೀದಿಗಳಲ್ಲಿ ಬಳಗಾನೂರದ ಶಿವಶಾಂತವೀರ ಶರಣರಿಂದ



ಶಿವಭಜನೆ ಮೂಲಕ ಸದ್ಭಾವನಾ ಪಾದಯಾತ್ರೆ, ಬೆಳಗ್ಗೆ 10ಕ್ಕೆ ಕೊಪ್ಪಳ ಗವಿಸಿದ್ಧೇಶ್ವರ ಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಅವರ ದಿವ್ಯಸಾನ್ನಿಧ್ಯದಲ್ಲಿ ಸ್ಥಳೀಯ ವಿವಿಡಿ ಸರ್ಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಆಧ್ಯಾತ್ಮಿಕ ಪ್ರವಚನ ಜರುಗಲಿದೆ ಎಂದು ಹೊಸಳ್ಳಿ ಮತ್ತು ಕೊಪ್ಪಳ ಶ್ರೀಗಳ ಪ್ರವಚನ ಆಯೋಜನೆ ಸ್ಥಳೀಯ ಸಮಿತಿ ಪ್ರಕಟನೆಯಲ್ಲಿ ತಿಳಿಸಿದೆ.

ಈಶ್ವರ ಬಳಿಗಾರ, ಶ್ರೀಧರ ದೇಯಣ್ಣವರ, ಬಸವರಾಜ ಪಣದಿ, ಈರಯ್ಯ ಹಿರೇಮಠ, ಸಂಗಯ್ಯ ಹಿರೇಮಠ, ಎಂ.ಐ.ನೀಲಣ್ಣವರ, ದುಂಡಪ್ಪ ಮಾಳೇದ, ಮಲ್ಲಪ್ಪ ಪಣದಿ, ಬಾಳಪ್ಪ ಕನೋಜಿ, ನಿಂಗಪ್ಪ ಕಂಬಿ, ದುಂಡಪ್ಪ ಕಂಬಿ, ಈರಣ್ಣ ಬಳಿಗಾರ, ಈರಪ್ಪ ದೇಯಣ್ಣವರ, ಯಲ್ಲಪ್ಪ ಮೇಳೆಣ್ಣವರ, ಸುರೇಶ ನೀಲಣ್ಣವರ, ಭೀಮನಾಯ್ಕ ನಾಯಕರ, ಭರಮಣ್ಣ ಪೂಜೇರ, ಸೇರಿದಂತೆ ಸ್ಥಳೀಯ ಹಾಗೂ ಸುತ್ತಲಿನ ಹಳ್ಳಿಗಳ ಹರ, ಗುರು, ಚರಮೂರ್ತಿಗಳು, ಸಂತ, ಶರಣರು, ಕೊಪ್ಪಳ ಮತ್ತು ಹೊಸಳ್ಳಿ ಶ್ರೀಗಳ ಪ್ರವಚನ ಆಯೋಜನೆ ಸಮಿತಿ ಪದಾಧಿಕಾರಿಗಳು, ಸದಸ್ಯರು, ಅಪಾರ ಸಂಖ್ಯೆಯಲ್ಲಿ ಭಕ್ತ ಜನ ಸಮೂಹ ಈ ಪ್ರವಚನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸಾರ್ವಜನಿಕರಿಗಾಗಿ ನೀರಿನ ಅರವಟ್ಟಿಗೆ ವ್ಯವಸ್ಥೆ

ಸಂಕೇಶ್ವರ : ಬಿರು ಬೇಸಿಗೆಯ ದಿನಗಳಲ್ಲಿ ಬೇಸಿಗೆ ದಾಹ ತಣಿಸುವ ಉದ್ದೇಶದಿಂದ ಚನ್ನಮ್ಮ ವೃತ್ತನಲ್ಲಿ ಪುರಸಭೆ ವತಿಯಿಂದ ಮಡಿಕೆಯಲ್ಲಿ ನೀರು ಹಾಕಿ ತಂಪಾದ ಕುಡಿಯುವ ನೀರಿನ ಅರವಟಿಗೆ ಇಟ್ಟು ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲಾಗಿದೆ.

ಚನ್ನಮ್ಮ ವೃತ್ತನಲ್ಲಿನ ರಸ್ತೆಯಲ್ಲಿ ನಿತ್ಯ ಸಾವಿರಾರು ಜನರು ಓಡಾಟ ನಡೆಸುತ್ತಾರೆ. ಬಿಸಿಲ ಧಗೆಯಿಂದ ಬಾಯಾರಿ ಬಂದವರು ಇಲ್ಲಿ ಸ್ವಲ್ಪ ಹೊತ್ತು ತಂಗಿ, ಇಲ್ಲಿ ಇಡಲಾದ ತಂಪಾದ ಕುಡಿಯುವ ನೀರು ಸೇವಿಸಿ ದಾಹ ತಣಿಸಿಕೊಳ್ಳುತ್ತಿದ್ದಾರೆ.

ಚನ್ನಮ್ಮ ವೃತ್ತ ಬಳಿ ಬಿಸಿಲಿನಿಂದ ರಕ್ಷಿಸಿಕೊಳ್ಳಲು ಪುರಸಭೆ ವತಿಯಿಂದ ಟೆಂಟ್ ನಿರ್ಮಿಸಿ ಅದರಲ್ಲಿ ಜನರಿಗೆ ಕುಳಿತುಕೊಳ್ಳಲು ಕುರ್ಚಿ ಸಹ ಇಡುವ ವ್ಯವಸ್ಥೆ ಮಾಡಲಾಗಿದೆ. ದಿನೇದಿನೇ ಹೆಚ್ಚುತ್ತಿರುವ ಬಿಸಿಲಿನ ತಾಪದಿಂದ ತತ್ತರಿಸುತ್ತಿರುವ ಜನರಿಗೆ ಈ ವ್ಯವಸ್ಥೆ ಮುಖ್ಯಾಧಿಕಾರಿಗಳಾದ ಪ್ರಕಾಶ ಮಠದ ಅವರ ಮಾರ್ಗದರ್ಶದಲ್ಲಿ ಮಾಲಾಗಿದ್ದು, ಇದರಿಂದ ಸಾರ್ವಜನಿಕರಿಗೆ ಅನುಕೂಲಕರವಾಗಲಿ ಎಂದು ಪುರಸಭೆಯ ಕಿರು ಆರೋಗ್ಯ ನೀರಿಕ್ಷಕ ಶ್ರೀಧರ ಬೆಳವಿ ತಿಳಿಸಿದರು.

> ಸದ್ಯ ಬಿಸಿಲಿನ ಪ್ರಖರತೆ ಅಧಿಕವಾಗುತ್ತಿದ್ದು ಪಟ್ಟಣದಲ್ಲಿ ಅಧಿಕವಾಗಿ ಸಾರ್ವಜನಿಕರ ಓಡಾಟ ನಡೆಸುವ ಪ್ರದೇಶದಲ್ಲಿ ತಂಪಾದ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.
> ■ ಪ್ರಕಾಶ ಮಠದ, ಪುರಸಭೆ ಮುಖ್ಯಾಧಿಕಾರಿ

ಈ ವೇಳೆ ಪುರಸಭೆಯ ಸಿಬ್ಬಂದಿಗಳಾದ ಕೃಷ್ಣಾ ಖಾತೆದಾರ, ಪರುಶರಾ ಪಾಟೀಲ, ಪೌರಕಾರ್ಮಿಕರಾದ ಮಂಗಲ ತಮ್ಮಣ್ಣವರ, ಪ್ರಕಾಶ ಸತ್ಯನಾಯಿಕ ಸೇರಿದಂತೆ ಅನೇಕರು ಇದ್ದರು.



ಕುರುಹಿನಶೆಟ್ಟಿ ಸೊಸೈಟಿಗೆ 7.45 ಕೋಟಿ ರೂ. ಲಾಭ

ಮೂಡಲಗಿ: ಕುರುಹಿನಶೆಟ್ಟಿ ಅರ್ಬನ್ ಕೋ-ಆಫ್ ಕ್ರೆಡಿಟ್ ಸೊಸೈಟಿ ಮಾರ್ಚ್ ಅಂತ್ಯಕ್ಕೆ 7.45 ಕೋಟಿ ರೂ. ಲಾಭ ಗಳಸಿ ಪ್ರಗತಿ ಸಾಧಿಸುತ್ತಿದೆ ಎಂದು ಸಂಘದ ಅಧ್ಯಕ್ಷ ಸುಭಾಸ ಬೆಳಕೂಡ ತಿಳಿಸಿದರು.

ಬುಧವಾರ ಕುರುಹಿನಶೆಟ್ಟಿ ಸಂಘದ ಸಭಾಭವನದಲ್ಲಿ 2026 ಸಾಲಿನ ಆರ್ಥಿಕ ಪ್ರಗತಿ ನೋಟ ವಿವರಿಸಲು ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಂಘವು ಮಾರ್ಚ ಅಂತ್ಯಕ್ಕೆ ಶೇರು ಬಂಡವಾಳ 4.73 ಕೋಟಿ, ಠೇವುಗಳು 333.89 ಕೋಟಿ, ನಿಧಿಗಳು 30.84 ಕೋಟಿ, ಸಾಲಗಳು 237.54 ಕೋಟಿ, ವಿವಿಧ



ಬ್ಯಾಂಕುಗಳಲ್ಲಿ ಗುಂತಾಯಿಸಿದ್ದು 118.46 ದುಡಿಯುವ ಬಂಡವಾಳ 391.46 ಕೋಟಿ ಹೊಂದಿ, ಒಟ್ಟು ವಾರ್ಷಿಕ ವಹಿವಾಟು 1742 ಕೋಟಿ ಹೊಂದಿ ಮಾರ್ಚ ಅಂತ್ಯಕ್ಕೆ 7.45 ಕೋಟಿ ಲಾಭ ಗಳಿಸಿದೆ ಎಂದರು.

ಈ ಸಂಸ್ಥೆ ಒಟ್ಟು 18 ಶಾಖೆಗಳನ್ನು ಹೊಂದಿದ್ದು ಎಲ್ಲಾ ಶಾಖೆಗಳು ಲಾಭ ಹೊಂದಿ ಪ್ರಗತಿ ಪಥದಲ್ಲಿ ಮುನ್ನುಗ್ಗುತ್ತಿವೆ. ಪ್ರಸತ್ತ ಸಾಲಿನಲ್ಲಿ ಇನ್ನೂ 5 ಶಾಖೆಗಳನ್ನು ಪಾರಂಭಿಸುವ ಉದ್ದೇಶವಿದೆ ಎಂದರು ನಿಕಟಪೂರ್ವ ಅಧ್ಯಕ್ಷ ಬಸಪ್ಪ ಮುಗಳಖೋಡ ಮಾತನಾಡಿ, ಸೊಸೈಟಿಯು ಕೇಂದ್ರ ಕಛೇರಿಯನ್ನು ಸೇರಿ 5 ಸ್ವಂತ ಕಟ್ಟಡಗಳನ್ನು ಹೊಂದಿದೆ. ಪ್ರತಿ ವರ್ಷ ವಿವಿಧ ಸಮಾಜದ ಪ್ರತಿಭಾವಂತರನ್ನು ಗೌವರಿಸುತ್ತಿದ್ದೆವೆ ಸದ್ಯ 5 ನೂತನ ಶಾಖೆಯನ್ನು ಪ್ರಾರಂಭಿಸಲಾಗುವದು. ಶೇರುದಾರರಿಗೆ 15 ಪ್ರತಿಶತ ಲಾಭಾಂಶವನ್ನು ವಿತರಿಸಲಾಗುತ್ತಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ಇಸ್ಮಾಯಿಲ್ ಕಳ್ಳಿಮನಿ, ನಿರ್ದೇಶಕರಾದ, ಗೊಡಚೆಪ್ಪ ಮುರಗೋಡ, ಬಸವರಾಜ ಬೆಳಕೂಡ, ಲಕ್ಕಪ್ಪ ಲ ಪೂಜೇರಿ ವಿಶಾಲ ಶೀಲವಂತ, ರಾಮಪ್ಪ ಬಳಿಗಾರ, ಮಾಲಾ ಬೆಳಕೂಡ, ರುಕ್ಕವ್ವಾ ಪೂಜೇರಿ,ಉಮಾ ಬೆಳಕೂಡ,ಶಾಂತವ್ವ ಬೋರಗಲ್, ಶ್ಯಾಲನ್ ಕೊಡತೆ ಉಪಸ್ಥಿತರಿದ್ದರು. ಸಂಘದ ಪ್ರಧಾನ ವ್ಯವಸ್ಥಾಪಕ ರಮೇಶ ವಂಟಗೋಡಿ ಸ್ವಾಗತಿಸಿ ವಂದಿಸಿದರು,

ಏಕಾಗ್ರತೆಯಿಂದ ಪರಮಾತ್ಮನ ಶಕ್ತಿ ಪ್ರಾಪ್ತಿ

ಬೆಳಗಾವಿ: ಕುಮಾರಣ್ಣಂದಿರಲ್ಲಿ ಶಾರೀರಿಕ ಶಕ್ತಿ ಮತ್ತು ಮಾನಸಿಕ ಶಕ್ತಿ ಅಪಾರ ಇರುತ್ತದೆ. ಅದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕು. ಮನಸಾ ವಾಚಾ ಕರ್ಮಣಾ ನಿಸ್ವಾರ್ಥ ಸೇವೆ ಮಾಡಬೇಕು: ಎಷ್ಟು ಶ್ರೀಮತದ ಅನುಸಾರ ನಡೆಯುತ್ತಿರಿ ಅಷ್ಟು ನಮ್ಮ ಕಲ್ಯಾಣವಾಗುತ್ತದೆ ಎಂದು ಬೆಳಗಾವಿ ಉಪವಲಯ ಸಂಚಾಲಕಿ ರಾಜಯೋಗಿನಿ ಆದರ್ನಿಯ ಅಂಬಿಕ ಅಕ್ಕನವರು ಹೇಳಿದರು.

ನಗರದ ಹೋರ ವಲಯದಲ್ಲಿರುವ ಕಿಣಿಯೇ ಗ್ರಾಮದಲ್ಲಿ ಬುಧವಾರ ಸೈಲೆನ್ಸ್‌ವ್ಯಾಲಿ ರಿಟ್ರೀಟ್ ಸೆಂಟರ್ ಎರಡು ದಿನ ಕಾಲ ಯೋಗ ತಪಸ್ಸಿನ ಕಾರ್ಯಕ್ರಮ ಸಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ರಾಜಯೋಗಿನಿ ಬಿಕೆ ಶಾಂತಕ್ಕ ಮಾತನಾಡಿ, ನೀರಿನಲ್ಲಿ ,ಗಾಳಿಯಲ್ಲಿ ಮತ್ತು ಬೆಂಕಿಯಲ್ಲಿ ಶಕ್ತಿ ಇರುತ್ತದೆ. ಹೊಳೆ ನೀರನ್ನು ಹಾಗೆ ಹರೆಯಲು ಬಿಟ್ಟರೆ ವ್ಯರ್ಥವಾಗಿ ಹರಿದು ಹೋಗುತ್ತದೆ. ಅದನ್ನು ಒಂದು ಕಡೆ ನಿಲ್ಲಿಸಿದಾಗ ಅದನ್ನು ನಮಗೆ ಯಾವ ರೀತಿಬೇಕು. ಆ ರೀತಿ ಉಪಯೋಗಿಸಬಹುದು. ಅದರಿಂದ ವಿದ್ಯುತ್ ಶಕ್ತಿ ನಿರ್ಮಾಣ ಮಾಡುವುದು. ಅದರಲ್ಲಿ ಅಷ್ಟೊಂದು ಶಕ್ತಿ ಇರುತ್ತದೆ.



ಹಾಗೆಯೇ ಸರ್ವಶಕ್ತಿವಂತ ಪರಮಾತ್ಮನಲ್ಲಿ ಅಪಾರ ಶಕ್ತಿ ಇದೆ ಅದನ್ನು ಪ್ರಾಪ್ತಿ ಮಾಡಿಕೊಳ್ಳುವ ವಿಧಾನ ಆತ್ಮಿಕ ಸ್ಥಿತಿಯಲ್ಲಿ ಸ್ಥಿತರಾಗಿ ಏಕಾಗ್ರ ಮನಸ್ಸಿನಿಂದ ಪರಮಾತ್ಮನನ್ನು ನೆನಪು ಮಾಡುವುದರಿಂದ ಪರಮಾತ್ಮನಲ್ಲಿರುವ ಶಕ್ತಿ ಮತ್ತು ಗುಣ ಅನುಭವ ಮಾಡಬಹುದು ಎಂದರು.

ಈ ವೇಳೆ ಓ ಶಾಂತಿಯ ಅಕ್ಕನವರುಗಳು, ಸೈಲೆನ್ಸ್‌ವ್ಯಾಲಿ ರಿಟ್ರೀಟ್ ಸೆಂಟರ್ ಎಲ್ಲ ಸಿಬ್ಬಂದಿ ವರ್ಗದವರು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಮಹಿಳಾ ಮೀಸಲಾತಿ ಜಾರಿಗೊಳಿಸಿ: ಪ್ರಿಯಾಂಕಾ

ಚಿಕ್ಕೋಡಿ: ಕೇಂದ್ರದಲ್ಲಿ ಬಿಜೆಪಿ ಸರ್ಕಾರ ನಾರಿಶಕ್ತಿ ವಂದನ್ ಮಸೂದೆಯ ಬದಲಾಗಿ 2023ರ ಮಹಿಳಾ ಮೀಸಲಾತಿಯನ್ನು ಕೂಡಲೇ ಜಾರಿಗೊಳಿಸಬೇಕು ಎಂದು ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಆಗ್ರಹಿಸಿದರು.



ಚಿಕ್ಕೋಡಿ ಪಟ್ಟಣದ ನಾಗರಮುನ್ನೋಳಿ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡುತ್ತಾ, ರಾಜೀವ್ ಗಾಂಧಿ ಪ್ರದಾನಮಂತ್ರಿಯಾಗಿದ್ದ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ, ತಾಪಂ, ಜಿಪಂ ಸೇರಿದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿಯನ್ನು ತರಲಾಗಿತ್ತು. ಕಾಂಗ್ರೆಸ್ ಮಹಿಳಾ ವಿರೋಧಿ ಎಂಬ ಬಿಜೆಪಿ ಆರೋಪದಲ್ಲಿ ಯಾವುದೇ ಹುರುಳಿಲ್ಲ ಎಂದು ಕಿಡಿಕಾರಿದರು.

ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಮಹಿಳಾ ಮೀಸಲಾತಿಯನ್ನು ತರುವ ಮಸೂದೆಯನ್ನು ತರಾತುರಿಯಲ್ಲಿ ಮಂಡಿಸಿದ್ದು ಸಂಶಯಕ್ಕೆ ಎಡೆ ಮಾಡಿಕೊಟ್ಟಿದೆ. ಮಣಿಪುರ, ಉತ್ತರ ಪ್ರದೇಶ ಸೇರಿದಂತೆ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆದರೂ ಅದನ್ನು ವಿರೋಧಿಸುವ ಗೋಜಿಗೆ ಹೋಗದ ಬಿಜೆಪಿಯ ಮಹಿಳೆಯರ ಕಾಳಜಿ ತೋರುವ ಬಣ್ಣ ಕಳಚಿದಂತಾಗಿದೆ ಎಂದರು.

ಚಿಕ್ಕೋಡಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ ಮಾತನಾಡಿ, ಮಹಿಳಾ ಮೀಸಲಾತಿ ಮಸೂದೆಯೊಂದಿಗೆ ಕ್ಷೇತ್ರ ಪುನರ್ ವಿಂಗಡಣೆ ಮಾಡಲು ಹೊರಟಿದ್ದ ಬಿಜೆಪಿ ಸರ್ಕಾರದ ಕ್ರಮ ಸಂಶಯಕ್ಕೆ ಎಡೆ ಮಾಡಿಕೊಡುವಂತಿತ್ತು. ಹೀಗಾಗಿಯೇ ಸಂಸತ್ತಿನಲ್ಲಿ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸಿದ್ದವು. ಕಾಂಗ್ರೆಸ್ ಮಹಿಳೆಯರ ಪರವಾಗಿದೆ ಎಂಬುವದಕ್ಕೆ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ತಂದಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ'' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಚಿಕ್ಕೋಡಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ನಿರ್ಮಲಾ ಪಾಟೀಲ, ಗಣೇಶ ಮೋಹಿತೆ, ಮುಖಂಡ ಪ್ರಭಾಕರ ಐ.ಕೋರೆ, ರಾಯಬಾಗನ ನಗರ ತನುಜಾ ಸಿಂಗೆ, ಲಕ್ಷ್ಮೀ ಪಾಟೀಲ, ರೇಖಾ ದಾದುಗೋಳ, ರಾಜು ಕೊಟಗಿ ಮುಂತಾದವರು ಇದ್ದರು.

ಶುದ್ಧ ಕುಡಿಯುವ ನೀರಿನ ಅರವಟ್ಟಿ ಆರಂಭ

ಬೈಲಹೊಂಗಲ: ಬೆಳಗಾವಿ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಬಿಸಿಲಿನ ತಾಪಮಾನ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕರ ಹಾಗೂ ಪ್ರಯಾಣಿಕರ ಹಿತದೃಷ್ಟಿಯಿಂದ ಬೈಲಹೊಂಗಲ ನಗರಸಭೆಯ ವತಿಯಿಂದ ನಗರದ ಕಿತ್ತೂರು ರಾಣಿ ಚನ್ನಮ್ಮಾಜಿ ವೃತ್ತದ ಬಳಿ ಶುದ್ಧ ಕುಡಿಯುವ ನೀರಿನ ಅರವಟ್ಟಿಕೆ ಘಟಕವನ್ನು ಆರಂಭಿಸಲಾಗಿದೆ.

ಜಿಲ್ಲಾಧಿಕಾರಿಗಳು ಬೆಳಗಾವಿ ಹಾಗೂ ಮಾನ್ಯ ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಬೆಳಗಾವಿ ಅವರ ನಿರ್ದೇಶನದ ಮೇರೆಗೆ ಈ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಪೌರಾಯುಕ್ತರು ಮಾತನಾಡಿ, ಬೇಸಿಗೆಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಈ ಅರವಟ್ಟಿ ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ನಗರದ ಮುಖ್ಯ ರಸ್ತೆ ಹಾಗೂ ಮಾರುಕಟ್ಟೆಗೆ ಆಗಮಿಸುವ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು. ಜೊತೆಗೆ, ಬಿಸಿಲಿನ ತಾಪ ಹೆಚ್ಚಿರುವುದರಿಂದ ನಿಯಮಿತವಾಗಿ ನೀರು ಸೇವಿಸುವುದು ಮತ್ತು ಮಧ್ಯಾಹ್ನದ ತೀವ್ರ ಬಿಸಿಲಿನಲ್ಲಿ ಅನಗತ್ಯವಾಗಿ ಹೊರಗೆ ಹೋಗುವುದನ್ನು ತಪ್ಪಿಸುವಂತೆ ಸಲಹೆ ನೀಡಿದರು.



ಸಾಧನೆಗೆ ಬಡತನ, ಜಾತಿ ಅಡ್ಡಿಯಾಗುವುದಿಲ್ಲ

ಕಕಮರಿ: ಸಾಧನೆಗೆ ಬಡತನ, ಜಾತಿ ಎಂದಿಗೂ ಅಡ್ಡಿಯಾಗುವುದಿಲ್ಲ, ಛಲ, ಸತತ ಪ್ರಯತ್ನವಿದ್ದರೆ ಸಾಧನೆ ಸುಲಭವಾಗುತ್ತದೆ. ಶಿಕ್ಷಣ ಯಾರೂ ಕದಿಯಲಾರದ ಸಂಪತ್ತು. ಕಠಿಣ ಪರಿಶ್ರಮ, ತಂದೆ-ತಾಯಿ ಆಶೀರ್ವಾದ, ಗುರುಗಳ ಮಾರ್ಗದರ್ಶನದಿಂದ ಜ್ಞಾನವನ್ನು ಪ್ರತಿಯೊಬ್ಬರು ಸಂಪಾದಿಸಬೇಕೆಂದು ಅಥಣಿ ಕ್ಷೇತ್ರ ಶಿಕ್ಷಣಾಧಿಕಾರಿ ಎಮ್. ಆರ್.ಮುಂಜಿ ಹೇಳಿದರು.

ಅವರು ಮಂಗಳವಾರ ಸಮೀಪದ ಕೊಟ್ಟಲಗಿ ಗ್ರಾಮದ ಶ್ರೀಸಿದ್ದೇಶ್ವರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಅಭಿನಂದನಾ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಸಾಧಕರನ್ನು ಸನ್ಮಾನಿಸಿ ಮಾತನಾಡಿದ ಅವರು. ಶಿಸ್ತು, ಸಮಯಪಾಲನೆ, ಕಠಿಣ ಪರಿಶ್ರಮ, ನಿರಂತರ ಅಧ್ಯಯನದಿಂದ ಹೆಚ್ಚಿನ ಜ್ಞಾನ ಪಡೆಯುವ ಮೂಲಕ ಉನ್ನತ ಗುರಿ ಮುಟ್ಟಲು ಸಾಧ್ಯವಾಗುತ್ತದೆ. ಇಂತಹ ಸಾಧನೆಯನ್ನು ಗಡಿನಾಡು ಗ್ರಾಮವಾದ ಕೊಟ್ಟಲಗಿ ಸಿದ್ದೇಶ್ವರ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ಕರ್ನಾಟಕ ರಾಜ್ಯಕ್ಕೆ 5ನೇ ರ್‍ಯಾಂಕ್ ಪಡೆದಿರುವುದು ಶ್ಲಾಘನೀಯವಾಗಿದೆ. ಎಂದರು.

ದಿವ್ಯ ಸಾನ್ನಿಧ್ಯ ಸಂಖ ವಿರಕ್ತಮಠ ಪ.ಪೂ. ಡಾ.ಶಿವಲಿಂಗೇಶ್ವರ ಸ್ವಾಮೀಜಿ ವಹಿಸಿ ಮಾತನಾಡಿ ದುಡ್ಡಿದ್ದವರಷ್ಟೇ ಸಾಧನೆ ಮಾಡಬಹುದೆಂಬ ಮಾತು ಪ್ರಸ್ತುತ ಸುಳ್ಳಾಗಿದೆ. ಪ್ರತಿಭೆ ಮತ್ತು ಕಠಿಣ ಪರಿಶ್ರಮ ಇದ್ದವರಿಂದಲೂ ಸಾಧನೆ ಸಾಧ್ಯ. ಇದಕ್ಕೆ ಕೊಟ್ಟಲಗಿಯ



ಶ್ರೀ ಸಿದ್ದೇಶ್ವರ ಆಂಗ್ಲ ಮಾಧ್ಯಮ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯೇ ಸಾಕ್ಷಿಯಾಗಿದೆ. ಎಂದರು.

ಶಾಲೆಯ ವಿದ್ಯಾರ್ಥಿ ಆಜಾದ್ ಕೊಕಟನೂರ 621 ಅಂಕ ಪಡೆದು ರಾಜ್ಯಕ್ಕೆ 5ನೇ ರ್‍ಯಾಂಕ್, ಶಾಲೆಯ ಫಲಿತಾಂಶ 100ಕ್ಕೆ 100ರಷ್ಟು ಆಗಿದೆ. ಅಧ್ಯಕ್ಷತೆ ತಾಪಂ ಮಾಜಿ ಸದಸ್ಯ ಅಪ್ಪಾಸಾಬ ಬಿರಾದಾರ ವಹಿಸಿದ್ದರು, ಕಕಮರಿ ಸಿಆರ್‌ಪಿ ಜಿ.ಡಿ.ಹಿಪ್ಪರಗಿ, ಸರ್ವೋದಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆರ್.ಎಸ್.ಪೂಜಾರಿ, ಜಿಪಂ ಮಾಜಿ ಸದಸ್ಯ ಸಿದರಾಯ ಯಲಡಗಿ, ಹೊರ್ತಿ ರಮೇಶ ಮಲ್ನಾಡ್, ಹಾಗೂ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ಗ್ರಾಮದ ಹಿರಿಯರು, ಪಾಲಕರು, ಶಿಕ್ಷಕವೃಂದದವರು ಉಪಸ್ಥಿತರಿದ್ದರು. ಪ್ರಸ್ತಾವಿಕ ನುಡಿ ಶಾಲೆಯ ಮುಖ್ಯಸ್ಥರು ಮಹಾಂತೇಶ ಬಡಚಿ ಮಾತನಾಡಿದರು. ಉಪನ್ಯಾಸಕ ಬಾಬಾಗೌಡ ಪಾಟೀಲ ಸ್ವಾಗತಿಸಿ ನಿರೂಪಿಸಿದರು.

ಕಿರುಸುದ್ದಿ

ಉತ್ತಮ ಫಲಿತಾಂಶ



ಬಾದಾಮಿ: ತಾಲೂಕನ ಕಿತ್ತಲಿ ಗ್ರಾಮದ ಜಿ.ಎಂ. ಹೆರಕಲ್ ಸರಕಾರಿ ಪ್ರೌಢಶಾಲೆ ಶಾಲೆಯ ಎಸ್.ಎಸ್.ಎಲ್.ಸಿ.ಫಲಿತಾಂಶ ಶೇ95.25 ರಷ್ಟು ಬಂದಿದೆ. ಶಾಲೆಯಲ್ಲಿ ಒಟ್ಟು 63 ವಿದ್ಯಾರ್ಥಿಗಳಲ್ಲಿ 60 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ. ಕುಮಾರಿ ಐಶ್ವರ್ಯ ಕಲಾಲ 592(94.72%) ಪ್ರಥಮ, ನಿಕಿತಾ ಮುಲ್ಕಿ ಪಾಟೀಲ್ 591(94.56) ದ್ವಿತೀಯ, ರಚನಾ ಭಜಂತ್ರಿ,.570(91.20) ತೃತಿಯ ಸ್ಥಾನ ಪಡೆದುಕೊಂಡಿದ್ದಾರೆ ಶಾಲೆಯ ಕೀರ್ತಿ ಹೆಚ್ಚಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು ಹಾಗೂ ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ಅಭಿನಂದನೆ ತಿಳಿಸಿದ್ದಾರೆ.

ಬಸಲಿಂಗಪ್ಪ ಶಾಲೆಗೆ ಪ್ರಥಮ

ಬೀಳಗಿ: ತಾಲೂಕಿನ ಚಿಕ್ಕಾಲಗುಂಡಿ ಗ್ರಾಮದ ಪದವಿ ಪೂರ್ವ (ಪ್ರೌಢ ವಿಭಾಗ)ದ ವಿದ್ಯಾರ್ಥಿಗಳು 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ವಿದ್ಯಾರ್ಥಿ ಬಸಲಿಂಗಪ್ಪ ಗುಂಡಳ್ಳಿ ಶೇ. 97.28 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ, ಅಜಯ ಪತ್ತಾರ ಶೇ. 95.52 ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ ಪಡೆದಿರುವರು. ಒಟ್ಟು 65 ವಿದ್ಯಾರ್ಥಿಗಳಲ್ಲಿ 5-ಉನ್ನತ ಶ್ರೇಣಿ, 20-ಪ್ರಥಮ ಶ್ರೇಣಿ, 20-ದ್ವಿತೀಯ ಶ್ರೇಣಿ, 13- ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆಂದು ಮುಖ್ಯೋಪಾಧ್ಯಾಯ ಸಂಗಣ್ಣ ಕರಿಸ್ಯೆಯಪ್ಪನವರ ತಿಳಿಸಿದ್ದಾರೆ.



ಮಲ್ಲಯ್ಯ ನೇಮಕ

ಬಾದಾಮಿ: ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಸಂಚಾಲಕರನ್ನಾಗಿ ತಾಲೂಕಿನ ನಂದಿಕೇಶ್ವರ ಗ್ರಾಮದ ಯುವಮುಖಂಡ ಮಲ್ಲಯ್ಯ ಮುಪ್ಪಿನವರ ಮತ್ತು ಸಹಸಂಚಾಲಕರನ್ನಾಗಿ ಸಿದ್ದು ಗತ್ತಿ, ಸಂದೇಶ ರಾಯ್ಕರ ಇವರನ್ನು ನೇಮಕ ಮಾಡಿ ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಆದೇಶ ಹೊರಡಿಸಿದ್ದಾರೆ.



ಹಾಲಿಗೇರಿ ಸರ್ಕಾರಿ ಪ್ರೌಢಶಾಲೆ ಉನ್ನತೀಕರಣ

ಬಾದಾಮಿ: ರಾಜ್ಯ ಸರ್ಕಾರ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ರಾಜ್ಯದ ಐವತ್ತು ಸರಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳಾಗಿ ಉನ್ನತೀಕರಣ ಮಾಡಿ ಆದೇಶ ಹೊರಡಿಸಿದೆ. ಇದರಲ್ಲಿ ಬಾದಾಮಿ ತಾಲೂಕಿನಲ್ಲಿ ಒಂದು ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿ ಒಟ್ಟು ನಾಲ್ಕು ಸರಕಾರಿ ಪ್ರೌಢಶಾಲೆಗಳನ್ನಾಗಿ ಉನ್ನತೀಕರಣ ಮಾಡಿ ಆದೇಶ ಹೊರಡಿಸಿದೆ. ಬಾದಾಮಿ ತಾಲೂಕಿನ ಹಾಲಿಗೇರಿ, ಹುನಗುಂದ(ಇಲಕಲ್) ತಾಲೂಕಿನ ಕಂದಗಲ್, ಮುಧೋಳ ತಾಲೂಕಿನ ಶಿರೋಳ ಮತ್ತು ಉತ್ತೂರು ಸರಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳಾಗಿ ಉನ್ನತೀಕರಣ ಮಾಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧೀನ ಕಾರ್ಯದರ್ಶಿ ಪದ್ಮಿನಿ ಎಸ್.ಎನ್.ಆದೇಶ ಹೊರಡಿಸಿದ್ದಾರೆ.

ಎಲ್ಲೆಂದರಲ್ಲಿ ಕಸ ಚೆಲ್ಲಬೇಡಿ

ಗುಳೇದಗುಡ್ಡ: ಪಟ್ಟಣದಲ್ಲಿ ಪೌರಕಾರ್ಮಿಕರು ಪಟ್ಟಣ ಸ್ವಚ್ಛಗೊಳಿಸಿದ ನಂತರ ರಸ್ತೆಗಳನ್ನು ಕೆಲವು ಸಾರ್ವಜನಿಕರು, ಪುನಃ ಮಲೀನಗೊಳಿಸುತ್ತಿದ್ದಾರೆ. ಇದರಿಂದ ಪಟ್ಟಣದ ಸೌಂದರ್ಯವು ಹಾಳಾಗುತ್ತಿದೆ. ಪುರಸಭೆಯ ಕಾರ್ಮಿಕರು ಮಾಡಿದ ಕಾರ್ಯವು ವ್ಯರ್ಥವಾಗುತ್ತಿದೆ. ಈ ಕುರಿತು ಸಾರ್ವಜನಿಕರಿಗೆ ಹಲವಾರು ಭಾರೀ ಮನವರಿಕೆ ಮಾಡುವ ಸಲುವಾಗಿ ವ್ಯಾಪಕ ಪ್ರಚಾರ ಮಾಡಿದರು ಸಹ ಕೆಲವು ಸಾರ್ವಜನಿಕರು ಇದರ ಗಂಭೀರತೆಯನ್ನು ಅರ್ಥೈಯಿಸಿಕೊಳ್ಳುತ್ತಿಲ್ಲ. ಪಟ್ಟಣದಲ್ಲಿ ಬ್ಲಾಕ್ ಸ್ಪಾಟ್ ಆಗದಂತೆ ಮುನ್ನೆಚ್ಚರಿಕೆ ವಹಿಸುತ್ತಿದ್ದರೂ ಸಹ ಕೆಲವು ಸಾರ್ವಜನಿಕರ ನಿರ್ಲಕ್ಷತನದಿಂದ ಬ್ಲಾಕ್ ಸ್ಪಾಟ್ ನಿರ್ಮಾಣವಾಗುತ್ತಿವೆ. ಇದೇ ತರಹ ವಿವಿಧ ಕಾರಣಗಳಿಗಾಗಿ ಪಟ್ಟಣವು ಮಲೀನವಾಗುತ್ತಿದ್ದು, ಕರ್ನಾಟಕ ಪೌರಸಭೆಗಳ ಘನತ್ಯಾಜ್ಯ ನಿರ್ವಹಣೆಯ ಮಾದರಿ ಉಪ ವಿಧಿಗಳು 2019 ರಂತೆ ದಂಡ ವಿಧಿಸುವುದು ಅತೀ ಅವಶ್ಯಕವಾಗಿರುವುದರಿಂದ ಈ ನಿಯಮದಲ್ಲಿ ದಂಡ ಅಳವಡಿಸಿಕೊಂಡು ಠರಾವು ಅಂಗೀಕರಿಸಿಕೊಳ್ಳಲಾಗಿರುತ್ತದೆ. ಪುರಸಭೆಯೊಂದಿಗೆ ಸಹಕರಿಸುವಂತೆ ಪುರಸಭೆ ಮುಖ್ಯಾಧಿಕಾರಿ ಅಸ್ಲಂ ಮುಜಾವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮುಧೋಳ: ಅಖಿಲ ಕರ್ನಾಟಕ ಗೋಂಧಳಿ ಸಮಾಜ ಸೇವಾ ಸಮೀತಿ ಮುಧೋಳ ಸಹಯೋಗದಲ್ಲಿ ನಗರದ ಗೋಲ್ಡನ್ ಸಮುದಾಯ ಭವನದಲ್ಲಿ ದ್ವಿತೀಯ ಪಿಯುಸಿ ವರ್ಷದ ಪರೀಕ್ಷೇಯಲ್ಲಿ ಉನ್ನತ ಸ್ಥಾನ ಪಡೆದು ಪಾಸಾದ ವಿದ್ಯಾರ್ಥಿಗಳನ್ನು ಗೌರವ ಸನ್ಮಾನ ನೀಡಿ ಸತ್ಕರಿಸಲಾಯಿತು.

ಪಿಯುಸಿ ವಿದ್ಯಾರ್ಥಿಳಿಗೆ ಗೌರವ ಸನ್ಮಾನ

ಮುಧೋಳ: ಅಖಿಲ ಕರ್ನಾಟಕ ಗೋಂಧಳಿ ಸಮಾಜ ಸೇವಾ ಸಮೀತಿ ಮುಧೋಳ ಸಹಯೋಗದಲ್ಲಿ ನಗರದ ಗೋಲ್ಡನ್ ಸಮುದಾಯ ಭವನದಲ್ಲಿ ದ್ವಿತೀಯ ಪಿಯುಸಿ ವರ್ಷದ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವ ಸನ್ಮಾನ ನೀಡಿ ಸತ್ಕರಿಸಲಾಯಿತು. ಮುಖಂಡ ಸುಭಾಸ ಗಾಯಕವಾಡ ಮಾತನಾಡಿ, ಹಿಂದುಳಿದ ಗೋಂಧಳಿ ಸಮಾಜದ ಮಕ್ಕಳು ಶೇ.90ಕ್ಕಿಂತ ಹೆಚ್ಚು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಪಾಸಾದ ಈ ವಿದ್ಯಾರ್ಥಿಗಳಿಂದ ಮುಂದಿನ ವಿದ್ಯಾಭ್ಯಾಸವು ಉತ್ತಮವಾಗಿ ಪಡೆಯಲು ಅವರಿಗೆ ಪ್ರೋತ್ಸಾಹದಾಯಕ ಈ ಸನ್ಮಾನ ಸಮಾರಂಭದ ಉದ್ದೇಶ ಆಗಿದೆ ಎಂದರು. ಶಿವಾಜಿ ಅಡೇಕರ ಮಾತನಾಡಿ, ಯಾವದೇ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಸಾಧನೆ ಮಾಡಿದಲ್ಲಿ ಅಂಥವರನ್ನು ಗುರುತಿಸಿ ಇಂಥ ಪ್ರೋತ್ಸಾಹದಾಯಕ ಕಾರ್ಯಗಳು ಹಮ್ಮಿಕೊಳ್ಳುವಲ್ಲಿ ಸಮಾಜದ ಮುಖಂಡರ ಸಹಕಾರ ಅಗತ್ಯವಿದೆ. ಇದರಿಂದ ಮುಂಬರುವ ವಿದ್ಯಾರ್ಥಿಗಳಿಗೂ ಪ್ರೇರಣೆ ನೀಡಿದಂತಾಗುತ್ತದೆ ಎಂದರು. ಪ್ರೀತಮ ಸಂ. ಮುಖೆ, ಶೇ.96.ಕೋಮಲ್ ಸಂ. ಭೋಸಲೆ, ಶೇ.93. ವಾಸಂತಿ ಅ. ವಾಗ್ಮೋರೆ, ಶೇ.92. ಶಿಲ್ಪಾ ಶಿ. ಅಡೇಕರ, ಶೇ.91. ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಪಾಸಾದ ಈ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಪ್ರಮುಖರಾದ ಎಸ್.ಎಂ.ಗಾಯಕವಾಡ, ಅನೀಲ ವಾಗ್ಮೋರೆ, ಸಂಜು ಮುಖೆ, ರಾಮು ಕಾಳೆ, ವಾಸು ಭೋಸಲೆ, ಮಹಾದೇವ ಗಾಯಕವಾಡ, ಎಸ್.ಎನ್.ಅಡೇಕರ, ಎಸ್.ಎನ್.ಬೂದಿಹಾಳ, ಪತ್ರಕರ್ತ ಬಿ.ಎಚ್.ಬೀಳಗಿ ಇತರರಿದ್ದರು. ಪರುಶರಾಮ ವಾಗ್ಮೋಡೆ ನಿರೂಪಿಸಿದರು. ಶಿವಾಜಿ ಅಡೇಕರ ಸ್ವಾಗತಿಸಿದರು. ಪಾಂಡು ಕಾಳೆ ವಂದಿಸಿದರು.



ಲೋಕಾಪುರ: ಬಾಳೆಹೊನ್ನೂರು ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಬೆಂಗಳೂರಿನ ರೇಣುಕಾಚಾರ್ಯ ವಿದ್ಯಾಸಂಸ್ಥೆ ಆಯೋಜಿಸಿದ್ದ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಲೋಕಾಪುರ ಹಿರೇಮಠದ ಡಾ.ಚಂದ್ರಶೇಖರ ಸ್ವಾಮಿಜಿಯವರನ್ನು ಗೌರವಿಸಲಾಯಿತು. ಬಿವಿಬಿಟಿಸಿ ಸಾರಿಗೆ ಸಂಸ್ಥೆಯ ಅಧ್ಯಕ್ಷ ಆರಾಧ್ಯ, ಅಂಕನಕಾರ ಪ್ರಶಾಂತ ರಿಬ್ಬನ್ ಪೇಟೆ, ಸಂಸ್ಥೆಯ ಅಧ್ಯಕ್ಷರು, ಪದಾಧಿಕಾರಿಗಳು ಇದ್ದರು.

ದಿನದಿಂದ ದಿನಕ್ಕೆ ಏರುತ್ತಿರುವ ಬಿಸಿಲಿನ ತಾಪ

ಕುಕ್ಕುಟೋದ್ಯಮಕ್ಕೆ ಬಿಸಿಲಿನ ಕುತ್ತು

ಮಲ್ಲಿಕಾರ್ಜುನ ಕೊಪ್ಪಿ

ದಿಗಂತ ವಿಶೇಷ

ಸಾವಳಗಿ: ರಾಜ್ಯದ ವಿವಿಧ ಭಾಗಗಳಂತೆ ಜಮಖಂಡಿ ತಾಲೂಕು ಕೂಡ ಈ ಬಾರಿ ಭಾರೀ ಬಿಸಿಲಿನ ತಾಪಮಾನಕ್ಕೆ ಒಳಗಾಗಿದ್ದು, ಇದರ ಪರಿಣಾಮ ಕುಕ್ಕುಟೋದ್ಯಮದ ಮೇಲೆ ತೀವ್ರವಾಗಿ ಬೀಳುತ್ತಿದೆ. ದಿನದಿಂದ ದಿನಕ್ಕೆ ಏರುತ್ತಿರುವ ಉಷ್ಣಾಂಶವು ಕೋಳಿಗಳ ಆರೋಗ್ಯ, ಉತ್ಪಾದನೆ ಹಾಗೂ ಸಾಕಾಣಿಕಾರರ ಆರ್ಥಿಕ ಸ್ಥಿತಿಗೆ ಗಂಭೀರ ಹೊಡೆತ ನೀಡುತ್ತಿದೆ. ಸ್ಥಳೀಯ ಕುಕ್ಕುಟ ಸಾಕಾಣಿಕಾರರ ಮಾಹಿತಿಯಂತೆ, ಸಾಮಾನ್ಯವಾಗಿ 25ರಿಂದ 30 ಡಿಗ್ರಿ ಸೆಲ್ಸಿಯಸ್ ನಡುವೆ ಕೋಳಿಗಳು ಉತ್ತಮವಾಗಿ ಬೆಳೆಯುತ್ತವೆ.

ಇತ್ತೀಚಿನ ದಿನಗಳಲ್ಲಿ ತಾಪಮಾನ 38ರಿಂದ 42 ಡಿಗ್ರಿ ಸೆಲ್ಸಿಯಸ್ ವರೆಗೆ ಏರಿಕೆಯಾಗಿರುವುದರಿಂದ ಕೋಳಿಗಳು ತೀವ್ರ ಉಷ್ಣ ಒತ್ತಡಕ್ಕೆ ಒಳಗಾಗುತ್ತಿವೆ. ಈ ಪರಿಸ್ಥಿತಿ ಎದುರಿಸಲು ಸಾಕಾಣಿಕಾರರು ಹಲವು ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುತ್ತಿದ್ದಾರೆ. ಕೋಳಿ ಶೆಡ್ಡಗಳಲ್ಲಿ ತಂಪು ನೀರಿನ ಸಿಂಪಡಣೆ, ಫ್ಯಾನ್ಗಳ ಬಳಕೆ, ಹಸಿರು ಜಾಲರಿ (ಗ್ರೀನ್ ನೆಟ್) ಅಳವಡಿಕೆ, ಶೆಡ್‌ಗಳ ಮೇಲೆ ಹುಲ್ಲು ಅಥವಾ ತಂಪು ವಸ್ತುಗಳನ್ನು ಹಾಕುವುದು, ನೀರಿಗೆ ಎಲೆಕ್ಟ್ರೋಲೈಟ್ಗಳ ಮಿಶ್ರಣ ನೀಡುವುದುಮುಂತಾದಕ್ರಮಅನುಸರಿಸುತ್ತಿದ್ದಾರೆ. ನಿರಂತರವಾಗಿ ಹೆಚ್ಚುತ್ತಿರುವ ಉಷ್ಣಾಂಶವು ಈ ಕ್ರಮಗಳ ಪರಿಣಾಮಕಾರಿತ್ವವ ಕಡಿಮೆಮಾಡುತ್ತಿದೆ.



ಮೊಟ್ಟೆ ಉತ್ಪಾದನೆಗೂ ಹೊಡೆತ

ಮೊಟ್ಟೆ ಉತ್ಪಾದನೆಗೂ ಬಿಸಿಲಿನ ತೀವ್ರತೆ ದೊಡ್ಡ ಹೊಡೆತ ನೀಡಿದೆ. ಸಾಕಾಣಿಕಾರರ ಪ್ರಕಾರ, ಹಿಂದೆ ದಿನಕ್ಕೆ ನಿರಂತರವಾಗಿ ದೊರೆಯುತ್ತಿದ್ದ ಮೊಟ್ಟೆಗಳ ಸಂಖ್ಯೆ ಈಗ ಶೇಕಡಾವಾರು 20ರಿಂದ 30ರಷ್ಟು ಇಳಿಕೆಯಾಗಿರುವುದು ಗಮನಾರ್ಹವಾಗಿದೆ. ಇದು ಮಾರುಕಟ್ಟೆಯಲ್ಲಿ ಸರಬರಾಜು ಕುಸಿತಕ್ಕೆ ಕಾರಣವಾಗಿದ್ದು, ಬೆಲೆಯಲ್ಲಿ ಅಸ್ಥಿರತೆ ಉಂಟಾಗುತ್ತಿದೆ.

ಬಿಸಿಲಿನ ತೀವ್ರತೆ ಮುಂದುವರಿದರೆ ಜಮಖಂಡಿ ತಾಲೂಕಿನಲ್ಲಿ ಕುಕ್ಕುಟೋದ್ಯಮಕ್ಕೆ ದೊಡ್ಡ ಮಟ್ಟದ ಹಾನಿಯಾಗುವ ಸಾಧ್ಯತೆ ಇರುವುದರಿಂದ ಸರ್ಕಾರ ಹಾಗೂ ಸಂಬಂಧಿತ ಇಲಾಖೆ ತುರ್ತು ಕ್ರಮ ಕೈಗೊಳ್ಳಬೇಕಾಗಿದೆ.

> ಕೋಳಿ ಆಹಾರದ ಬೆಲೆ ಏರಿಕೆಯೂ ಸಾಕಾಣಿಕಾರರ ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸಿದೆ. ಮೆಕ್ಕೆಜೋಳ, ಸೇರಿದಂತೆ ವಿವಿಧ ಆಹಾರ ಪದಾರ್ಥಗಳ ದರ ಏರಿಕೆಯಿಂದ ಉತ್ಪಾದನಾ ವೆಚ್ಚ ಹೆಚ್ಚಾಗಿದೆ. ಆದಾಯ ಕಡಿಮೆಯಾಗುತ್ತಿರುವ ಈ ಸಂದರ್ಭದಲ್ಲಿ ಹೆಚ್ಚಿದ ವೆಚ್ಚವನ್ನು ನಿರ್ವಹಿಸುವುದು ಸಾಕಾಣಿಕಾರರಿಗೆ ಕಷ್ಟಕರ.
>
> ■ ರಾಜು ಮಿರ್ಜೆ, ಕೋಳಿ ಸಾಕಾಣಿಕೆಗಾರ

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ವಿಶೇಷ ಕಾಳಜಿ

ರಬಕವಿ-ಬನಹಟ್ಟಿ: ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಇಚ್ಛಾಶಕ್ತಿಯಿಂದ ಅವಶ್ಯಕತೆಯಿದ್ದು, ಪ್ರತಿಯೊಬ್ಬರೂ ಬದ್ಧತೆಯಿಂದ ಕಾರ್ಯನಿರ್ವಹಿಸದಾಗ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಸಾಧ್ಯ, ತಾಲೂಕಿನಾದ್ಯಂತ ಎಲ್ಲ ವ್ಯಾಪಾರಸ್ಥರು ಇದಕ್ಕನುಗುಣವಾಗಿ ನಿಯಮದಂತೆ ಬಾಲ ಕಾರ್ಮಿಕರನ್ನು ಸೇರಿಸಿಕೊಳ್ಳಬಾರದೆಂದು ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು.

ಬುಧವಾರ ತಹಶೀಲ್ದಾರ್ ಕಾರ್ಯಾಲಯದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ತಂಡದ ನೇತೃತ್ವದಲ್ಲಿ ಬೀದಿಗಿಳಿದು ಪ್ರತಿಯೊಂದು ವ್ಯಾಪಾರಸ್ಥರಿಗೆ ಸಂದೇಶ ರವಾನೆಯೊಂದಿಗೆ ಕೆಲ ಅಂಗಡಿಗಳಲ್ಲಿ ಬಾಲ ಕಾರ್ಮಿಕರ ಬಗ್ಗೆ ವಿಚಾರಣೆ ನಂತರ ಮಾತನಾಡಿದರು. ಮಕ್ಕಳು ದೇಶದ ಆಸ್ತಿ ಅವರ ಭವಿಷ್ಯಕ್ಕಾಗ ಉತ್ತಮ ಶಿಕ್ಷಣ ನೀಡಬೇಕೆಂಬ ಮನಸ್ಥಿತಿ ಎಲ್ಲರಲ್ಲಿ ಬರಬೇಕು. ಅದರಲ್ಲೂ ಬಾಲ ಕಾರ್ಮಿಕರನ್ನು ಕಾನೂನು ಮೀರಿ ಇರಿಸಿಕೊಳ್ಳದೆ ಅಂಥವರಿಗೆ ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕೆಂದು ಸಲಹೆ ನೀಡಿದರು.

6ರಿಂದ 14 ವರ್ಷದ ಮಕ್ಕಳಿಗೆ ಕಡ್ಡಾಯ ಶಿಕ್ಷಣ ನೀಡಲು ನಿಬಂಧನೆಯಿಂದ ತಾಲೂಕಿನಾದ್ಯಂತ ಎಲ್ಲಿಯೂ ಬಾಲ ಕಾರ್ಮಿಕರು ಕೆಲಸ ಮಾಡದಂತೆ ಪಾಲಕರು ಹಾಗೂ ವ್ಯಾಪಾರಸ್ಥರು ನಿಗಾ ವಹಿಸಬೇಕು. ಒಂದು ವೇಳೆ ಅಂಥಹ ಘಟನೆ ಕಂಡು ಬಂದಲ್ಲಿ 2 ವರ್ಷ ಜೈಲು ಶಿಕ್ಷೆ ಹಾಗೂ 20 ರಿಂದ 50 ಸಾವಿರ ರೂ.ಗಳವರೆಗೆ ದಂಡ ವಿಧಿಸುವಲ್ಲಿ ಕಾರಣವಾಗಲಿದೆ. ಇದ್ಯಾವದಕ್ಕೂ ಅವಕಾಶ ನೀಡದೆ ಬಾಲ ಕಾರ್ಮಿಕ ಪದ್ಧತಿ ಸಂಪೂರ್ಣ ನಿರ್ಮೂಲನೆಗೆ ಜನತೆ ಸಹಕರಿಸಬೇಕೆಂದು ಹೇಳಿದರು.

ಕಾರ್ಮಿಕ ಇಲಾಖೆ ಯೋಜನಾಧಿಕಾರಿ ಸುಧಾಕರ ಬಡಿಗೇರ, ಕಾರ್ಮಿಕ ನಿರೀಕ್ಷಕ ರಮೇಶ ವಂಗಿ, ಸಿಆರ್‌ಪಿ ಜಗದೀಶ ಕುಳ್ಳೊಳ್ಳಿ, ಹಿಂದುಳಿದ ವರ್ಗ ಇಲಾಖೆ ಅಧಿಕಾರಿ ಮಹಾಬಲ ಜುಂಜರವಾಡ, ತಾಲೂಕಾ ಆರೋಗ್ಯಾಧಿಕಾರಿ ಅಪ್ಪಾಜಿ ಹೂಗಾರ, ನಗರಸಭೆ ಪರಿಸರ ವಿಭಾಗದ ಶೋಭಾ ಹೊಸಮನಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸುಭದ್ರಾ ಮಹಾಜನ್ ಸೇರಿದಂತೆ ಅನೇಕ ಅಧಿಕಾರಿಗಳ ತಂಡ ಭಾಗವಹಿಸಿತ್ತು.



ಕರ್ತವ್ಯ ನಿಷ್ಠೆಯಿಂದ ಕಾರ್ಯ ನಿರ್ವಹಿಸಿ



ಬಾಗಲಕೋಟೆ: ಬೆಳಗಾವಿ ಉತ್ತರ ವಲಯದ ಆರಕ್ಷಕ ಮಹಾನಿರೀಕ್ಷಕ ಚೇತನ್ ಸಿಂಗ್ ರಾಥೋರ್ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ನವನಗರ ಪೊಲೀಸ್ ಠಾಣೆಗೆ ಭೇಟಿ ನೀಡಿ ಪರಿವೀಕ್ಷಣೆ ಕೈಗೊಂಡರು.

ಕಾನೂನು ಸುವ್ಯವಸ್ಥೆ ಕಾಪಾಡುವ ಕ್ರಮಗಳು,ಅಪರಾಧ ಪ್ರಕರಣಗಳ ಪತ್ತೆ ಹಾಗೂ ನಿಯಂತ್ರಣ ಕುರಿತು ಕೈಗೊಳ್ಳಲಾಗುತ್ತಿರುವ ಕಾರ್ಯಚಟುವಟಿಕೆಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದರು.

ಬಳಿಕ ಅಧಿಕಾರಿ ಹಾಗೂ ಸಿಬ್ಬಂದಿಯವರೊಂದಿಗೆ ಸಭೆ ನಡೆಸಿದ ಚೇತನ್ ಸಿಂಗ್ ರಾಥೋರ್ ಸಾರ್ವಜನಿಕ ಸ್ನೇಹಿ ಪೊಲೀಸ್ ಸೇವೆ ಒದಗಿಸುವುದು, ಅಪರಾಧ ತಡೆಗಟ್ಟುವ ಕ್ರಮಗಳನ್ನು ಮತ್ತಷ್ಟು ಬಲಪಡಿಸುವುದು ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಹೆಚ್ಚಿನ ಜಾಗೃತಿ ವಹಿಸಿ,ಕರ್ತವ್ಯನಿಷ್ಠೆಯಿಂದ ಕಾರ್ಯನಿರ್ವಹಿಸುವಂತೆ ಸೂಕ್ತ ಸೂಚನೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಡಿವೈಎಸ್‌ಪಿ ಗಜಾನನ ಸುತಾರ ಇದ್ದರು.

ಪಿಯುಸಿ: ಸಮರೀನ ರಾಜ್ಯಕ್ಕೆ 5ನೇ ಸ್ಥಾನ

ಬೀಳಗಿ: ತಾಲೂಕಿನ ಬಾಡಗಂಡಿಯ ಎಸ್. ಆರ್. ಪಾಟೀಲ ಶಿಕ್ಷಣ ಪ್ರತಿಷ್ಠಾನದ ಬಾಪೂಜಿ ಸ್ವತಂತ್ರ ಮಹಾವಿದ್ಯಾಲಯ 2025-26ನೇ ಸಾಲಿನಲ್ಲಿ ನಡೆದ ದ್ವಿತೀಯ ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದಲ್ಲಿ ಸಮರೀನ ಬಾಗವಾನ 600ಕ್ಕೆ 596 ಅಂಕಗಳನ್ನು ಪಡೆದು ರಾಜ್ಯಕ್ಕೆ 5 ಸ್ಥಾನ ಹಾಗೂ ಬಾಗಲಕೋಟೆ-ವಿಜಯಪುರ ಅವಳಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ. ವಿದ್ಯಾರ್ಥಿನಿ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಎಸ್. ಆರ್. ಪಾಟೀಲ, ಕಾರ್ಯದರ್ಶಿ ಎಂ.ಎನ್.ಪಾಟೀಲ, ಸಲಹೆಗಾರರು, ಪ್ರಾಚಾರ್ಯರು ಹಾಗೂ ಸಿಬ್ಬಂದಿ ಶುಭ ಹಾರೈಸಿದ್ದಾರೆ.



ವಿವಿಧ ಬೇಡಿಕೆ ಈಡೇರಿಕೆಗೆ ಕೃಷಿ ಪರಿಕರ ಮಾರಾಟಗಾರರ ಆಗ್ರಹ

ಬಾದಾಮಿ: ತಾಲೂಕು ಕೃಷಿ ಪರಿಕರಗಳ ಮಾರಾಟಗಾರರ ಸಂಘದ ವತಿಯಿಂದ ವಿವಿದ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ವ್ಯಾಪಾರ ಬಂದ್ ಮಾಡಿ ತಹಶೀಲ್ದಾರ್ ಮತ್ತು ಕೃಷಿ ಸಹಾಯಕ ನಿರ್ದೇಶಕರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಕೃಷಿ ಪರಿಕರಗಳ ಮಾರಾಟಗಾರರ ಮೇಲೆ ಇನ್ನಿಲ್ಲದ ಖಡಿವಾಣ ಹಾಕಿ ವ್ಯಾಪಾರ ವಹಿವಾಟಿಗೆ ತುಂಬಾ ತೊಂದರೆಯಾಗುತ್ತಿರುವ ನಿಯಮಾವಳಿ ಸಡಿಲಗೊಳಿಸಬೇಕು ಎಂದು ಅಗ್ರಹಿಸಿ ರಾಷ್ಟ್ರವ್ಯಾಪಿ ಕರೆದ ಹಿನ್ನಲೆಯಲ್ಲಿ ನಗರದ ಎಲ್ಲಾ ಕೃಷಿ ಪರಿಕರಗಳ ಆಗ್ರೋ ಕೆಮಿಕಲ್ ಮತ್ತು ಗೊಬ್ಬರ ವ್ಯಾಪಾರಸ್ತರು ತಮ್ಮ ಅಂಗಡಿ ಮುಗ್ಗಟ್ಟುಗಳನ್ನು ಸಂಪೂರ್ಣ ಮಾಡಿ ಪ್ರತಿಭಟಿಸಿದರು.



ಬಾದಾಮಿ ತಾಲೂಕು ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಅಧ್ಯಕ್ಷ ಚನ್ನಪ್ಪ ಪಟ್ಟಣದ ಮಾತನಾಡಿ, ಡಿಎಪಿ ಮತ್ತು ಯುರಿಯಾದ ಜೋತೆಗೆ ಒತ್ತಾಯವಾಗಿ ಬೇರೆ ಉತ್ಪಾದನೆಗಳನ್ನು ಲಿಂಕ್ ಮಾಡಬಾರದು. ಎಲ್ಲಾ ರಸಗೊಬ್ಬರಗಳ ಬೆಲೆ ಮೇಲೆ 8% ಡೀಲರ್ ಲಾಭಾಂಶ ಇರಲೇಬೇಕು, ಎಲ್ಲಾ ರಸಗೊಬ್ಬರಗಳನ್ನು ಎಲ್ ಓಎಲ್ ಮೂಲಕ ಕೊಡುವ ಹಾಗೆ ಕ್ರಮ, ಗೊಬ್ಬರ, ಬೀಜ, ಕೀಟನಾಶಕಗಳ ಶಾಂಪಲ ಕಳಪೆ ಬಂದಾಗ ಕಂಪನಿಯವರ ಮೇಲೆ ಮಾತ್ರ ಕೇಸ್ ಹಾಬೇಕು, ಡೀಲರಗಳ ಮೇಲೆ ಕೇಸ್ ಬೇಡ ಎಂದು ಹೀಗೆ ಹತ್ತು ಹಲವು ಬೇಡಿಕೆಗಳಿಗೆ ಮನವಿ ಸಲ್ಲಿಸಲಾಯುತು.

ಉಮೇಶ ಜಾಧವ, ಕೃಷಿ ಇಲಾಖೆಯಲ್ಲಿ ಸಹಾಯಕ ನಿರ್ದೇಶಕ ಅಶೋಕ ತಿರಕನ್ನವರ ಮನವಿ ಸ್ವೀಕರಿಸಿದರು. ಮಾರಾಟಗಾರರಾದ ಕೃಷಿ ಪರಿಕರಗಳ ಮಾರಾಟಗಾರರಾದ ಚನ್ನಪ್ಪ ಪಟ್ಟಣದ, ಸೋಮಲಿಂಗಪ್ಪ ನಿಲುಗಲ್, ಯಲ್ಲಪ್ಪ ಅಮರನ್ನವರ, ಪಿ.ಬಿ.ಚವ್ಹಾಣ, ಸತೀಶ ಹೆಬ್ಬಳ್ಳಿ, ಫಕೀರಪ್ಪ ಬಾಣದ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಗ್ರಾಮ ದೇವತೆಗೆ ಉಡಿ ತುಂಬುವ ಕಾರ್ಯ ಮತ್ತೈದೆಯ ಸಂಕೇತ

ಬೀಳಗಿ: ದ್ಯಾಮವ್ವ ದೇವಿಗೆ ಉಡಿ ತುಂಬುವುದು ಮತ್ತೈದೆಯ ಸಂಕೇತ. ವರ್ಷಕ್ಕೊಮ್ಮೆ ಗ್ರಾಮದೇವತೆಗೆ ಉಡಿ ತುಂಬುವ ಮೂಲಕ ದೇವಿಯನ್ನು ಸಂತೋಷ ಗೊಳಿಸಲಾಗುತ್ತದೆ ಎಂದು ಪೂರ್ಣಾನಂದ ಮಠದ ಮಾತೋಶ್ರೀ ಅನುಸೂಯ ತಾಯಿ ಹೇಳಿದರು.

ತಾಲೂಕಿನ ಅನಗವಾಡಿ ಗ್ರಾಮದಲ್ಲಿ ಬಸವೇಶ್ವರ ತರುಣ ಸಂಘದ ಆಶ್ರಯದಲ್ಲಿ ನಡೆದ ಗ್ರಾಮ ದೇವತೆಯ ಉಡಿ ತುಂಬುವ ಕಾರ್ಯಕ್ರಮದ ಅಂಗವಾಗಿ ನಡೆದ ಅಜಾತ ನಾಗಲಿಂಗ ಮಹಿಮೆ ಎಂಬ ಭಕ್ತಿ ಪ್ರಧಾನ ನಾಟಕ ಉದ್ಘಾಟಿಸಿ ಮಾತನಾಡಿದರು. ರಾಯಚೂರ ಜಿಲ್ಲೆಯ ಮಾನ್ವಿ ತಾಲೂಕಿನ ಡವಳಗೇರಿ ಗ್ರಾಮದ ವಿಶ್ವಕರ್ಮ ಸಮಾಜದ ಮೌನೇಶ ಮತ್ತು ನಾಗಮ್ಮ ದಂಪತಿಗಳ ಉದರದಲ್ಲಿ ನಾಗಲಿಂಗೇಶ್ವರರು ಜನಿಸಿದ್ದು, ನಿರುಪಾಧೀಶರ ಶಿಷ್ಯರಾಗಿದ್ದರು. ಬಡವರು, ದುಃಖಿಗಳು, ಕಷ್ಟ ಜೀವಿಗಳು ಇದ್ದಲ್ಲಿ ಸಂಚಾರ ಮಾಡುತ್ತ ಸಾಮಾನ್ಯ ಜನರನ್ನು ಉದ್ಧಾರ ಮಾಡುತ್ತ ಬಂದ ಪವಾಡ ಪುರುಷರು ಎಂದರು.



ಡಾ.ರಮೇಶ ಅಕ್ಕಿಮರಡಿ ಮಾತನಾಡಿ, ಏಳು ಊರುಗಳಿಗೆ ಒಬ್ಬಳೇ ಗ್ರಾಮದೇವತೆ ಆಗಿರುವುದರಿಂದ ದ್ಯಾಮವ್ವದೇವಿಯನ್ನು ಸಪ್ತಪುರವಾಸಿನಿ ಎಂದು ಕರೆಯಲಾಗುತ್ತಿದೆ. ಒಳ್ಳೆಯ ಸಂಸ್ಕಾರ ಹೊಂದಿದ ಪುಣ್ಯಭೂಮಿ ನಮ್ಮದಾಗಿದ್ದು, ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕೊಡಬೇಕು. ಉಡಿ ತುಂಬುವ ಕಾರ್ಯಕ್ರಮಕ್ಕೆ ಪವಾಡ ಪುರುಷ ಅಜಾತ ನಾಗಲಿಂಗೇಶ್ವರ ನಾಟಕ ಮತ್ತಷ್ಟು ಮೆರಗು ನೀಡಿದೆ ಎಂದರು.

ಬೀಳಗಿ ತಾಲೂಕಿನ ಬೂದಿಹಾಳ (ಎಸ್.ಎ) ಗ್ರಾಮದ ರೇವಣಸಿದ್ಧೇಶ್ವರ ನಾಟ್ಯ ಕಲಾ ಸಂಘದ ಕಲಾವಿದರು ಅಜಾತ ನಾಗಲಿಂಗ ಮಹಿಮೆ ಎಂಬ ನಾಟಕವನ್ನು ಮನೋಜ್ಞವಾಗಿ ಅಭಿನಯಿಸಿದರು. ರಮೇಶ ಎಚ್ ಮೇಟಿ ಮಾತನಾಡಿದರು. ಸುರೇಶ ಎಸ್.ಜಿಡ್ಡಿಮನಿ ನಿರೂಪಿಸಿದರು.

ಭಂಡಾರದಲ್ಲಿ ಮಿಂದೆದ್ದ ಜನತೆ

ಕೆರೂರ: ಪಟ್ಟಣದ ಗ್ರಾಮ ದೇವತೆಗಳಾದ ದ್ಯಾಮವ್ವ ಹಾಗೂ ದುರ್ಗವ್ವ ದೇವಿಯ ಮಹಾ ರಥೋತ್ಸವವು ಬುಧವಾರ ಸಂಜೆ ಸಂಭ್ರಮದಿಂದ ಜರಗಿತು. ಒಂಬತ್ತು ವರ್ಷಗಳ ಬಳಿಕ ನಡೆದ ರಥೋತ್ಸವದಲ್ಲಿ ಭಕ್ತರು ಭಂಡಾರದ ಮಿಂದೆದ್ದ ದೃಶವು ನೋಡುಗರಿಗೆ ಸಂಭ್ರಮ ಮನೆ ಮಾಡಿತ್ತು.

ದೇವತೆಯವರು ಬೆಳಿಗ್ಗೆ ದೇವಸ್ಥಾನದಿಂದ ಹೊರಟ ಮೆರವಣಿಗೆ ಪಟ್ಟಣದ ವಿವಿಧ ರಾಜ ಬೀದಿಗಳಲ್ಲಿ ಸಂಚರಿಸಿತು. ಸಂಜೆ 5.30ಕ್ಕೆ ದೇವತೆಯರನ್ನು ರಥೋತ್ಸದಲ್ಲಿ ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ದೇವತೆಗಳಿಗೆ ಭಕ್ತರು ಉಡಿ ತುಂಬಿ ದರ್ಶನವನ್ನು ಪಡೆದುಕೊಂಡರು.



ಭಕ್ತರು ಗ್ರಾಮ ದೇವತೆಗಳ ಜೈಕಾರ ಹಾಕುತ್ತ, ರಥವನ್ನು ಎಳೆಯುತ್ತಾ ಮುಂದೆ ಸಾಗಿದರು,ರಾಷ್ಟ್ರೀಯ ಹೆದ್ದಾರಿ ಮೇಲೆ ನೇರೆದಿದ್ದ ಸಾವಿರಾರು ಭಕ್ತರು ತಮ್ಮ ತಮ್ಮ ಭಕ್ತಿ ಭಾವವನ್ನು ಸಮರ್ಪಿಸಿದರು. ಬೇಸಿಗೆ ಇರುವದರಿಂದ ಅಲ್ಲಿ ಅಲ್ಲಿ ಪಟ್ಟಣ ಪಂಚಾಯಿತಿ ವತಿಯಿಂದ ಕುಡಿಯುವ ನೀರಿನ ವ್ಯವಸ್ಥೆ, ದೇವತೆಯವರು ಸಂಚರಿಸುವ ಪ್ರಮುಖ ಮಾರ್ಗಗಳಲ್ಲಿ ಸ್ವಚ್ಚತೆ ಮಾಡಲಾ ಗಿತ್ತು,ಜಾತ್ರೆಯ ಅಂಗವಾಗಿ ರಾಷ್ಟ್ರೀಯ ಹೆದ್ದಾರಿ ಉದ್ದಕ್ಕೂ ವಿದ್ಯುತ್ ದೀಪಾಲಂಕಾರದ ವ್ಯವಸ್ಥೆ ಮಾಡಲಾಗಿತ್ತು. ಜಾತ್ರೆಯ ಅಂಗವಾಗಿ ಹಿರಿಯರು ,ಯುವಕರು,ಮಹಿಳೆಯರು, ಮಕ್ಕಳು, ಪರ ಊರಿನಿಂದ ಬಂದ ಜನರು ಪರಸ್ಪರ ಭಂಡರವನ್ನು ಎರಚಿ ಜಾತ್ರೆಯನ್ನು ಸಂಭ್ರಮಿಸಿದರು.

ದೇಶದ ಅಭಿವೃದ್ಧಿಗೆ ಜನಗಣತಿ ಆಧಾರ

ವಿಜಯಪುರ: ಭವಿಷ್ಯದಲ್ಲಿ ದೇಶದ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವ ದೃಷ್ಟಿಕೋನದಿಂದ ಜನಗಣತಿಯೇ ಆಧಾರ ಜಿಲ್ಲಾ ಆರ್ಥಿಕ ಮತ್ತು ಸಾಂಖಿಕ ಅಧಿಕಾರಿ, ಜ್ಯೋತಿ ದೇಶಪಾಂಡೆ ಹೇಳಿದರು.

ನಗರದ ದರಬಾರ ಪದವಿ ಮಹಾವಿದ್ಯಾಲಯದಲ್ಲಿ 'ಜನಗಣತಿ ಸಮಾಜದ ಪ್ರಗತಿಗೆ ಆಧಾರ' ಎಂಬ ವಿಷಯದ ಉಪನ್ಯಾಸ ಕಾರ್ಯಕ್ರಮವನ್ನು ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರ ನಮ್ಮ ತಂದೆ ತಾಯಿ ಇದ್ದ ಹಾಗೆ, ಮಕ್ಕಳ ಭವಿಷ್ಯಕ್ಕಾಗಿ ಪಾಲಕರು ಹೇಗೆ ಯೋಜನೆಗಳನ್ನು ರೂಪಿಸುತ್ತಾರೋ, ಹಾಗೆ ದೇಶದ ಅಭಿವೃದ್ಧಿ ಹಾಗೂ ದೇಶದ ಜನರಿಗಾಗಿ ಸರ್ಕಾರ ಜನಗಣತಿಯನ್ನು ನಡೆಸುತ್ತದೆ ಎಂದರು.

ಪ್ರತಿ 10 ವರ್ಷಕ್ಕೊಮ್ಮೆ ನಡೆಸುವ ಈ ಜನಗಣತಿ ಕಾರ್ಯದಲ್ಲಿ ತಾವೆಲ್ಲರೂ ಸಕ್ರಿಯವಾಗಿ ಭಾಗವಹಿಸಿ, ಸರ್ಕಾರಕ್ಕೆ ಸರಿಯಾದ ಮಾಹಿತಿಯನ್ನು ಒದಗಿಸಿ, ಭವಿಷ್ಯವನ್ನು ಕಟ್ಟಿಕೊಳ್ಳಿ ಎಂದರು.

ಸಾಂಖ್ಯಿಕ ಇಲಾಖೆಯ ಸಹಾಯಕ ನಿರ್ದೇಶಕ ಎ.ಬಿ ಮಣಿಕಾರ ಮಾತನಾಡಿ, ದೇಶದ ಅಭಿವೃದ್ಧಿಗೆ, ಯೋಜನೆಗಳಿಗೆ, ಸಂಪನ್ಮೂಲ ಹಂಚಿಕೆಗೆ ಮತ್ತು ನೀತಿ -ನಿರೂಪಣೆಗೆ ಅಗತ್ಯವಾದ ಅಧಿಕೃತ ದತ್ತಾಂಶವೇ ಜನಗಣತಿ ಎಂದರು. ವಿ.ಬಿ.ದರಬಾರ ಪಿಯು ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ನಾಗರಾಜ್ ಮಾತನಾಡಿ, ಜನಗಣತಿ ಎಂದರೆ ಸರ್ಕಾರದ ನೀತಿ-ನಿಯಮಗಳನ್ನು ರೂಪಿಸಲು, ಯೋಜನೆಗಳನ್ನು ಕಲ್ಪಿಸಲು ಎಲ್ಲ ವರ್ಗದವರ ಮಾಹಿತಿಯನ್ನು ಕಲೆ ಹಾಕುವುದು ಇದರ ಪ್ರಮುಖ ಉದ್ದೇಶವಾಗಿದ್ದು, ಇಲ್ಲಿ ಅಂಕಿ- ಅಂಶಗಳು ನಿಖರವಾಗಿರಬೇಕು. ಪ್ರತಿಯೊಬ್ಬರು ಜನಗಣತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ದೇಶದ ಅಭಿವೃದ್ಧಿಗೆ ನಾವೆಲ್ಲರೂ ಪಾಲುದಾರರಾಗಬೇಕು ಎಂದರು.



ವಿ.ಭ. ದರಬಾರ ಪಿಯು ಕಾಲೇಜಿನ ಸಮಾಜಶಾಸ್ತ್ರದ ಉಪನ್ಯಾಸಕ ಕೆ.ಡಿ ಚೌಹಾಣ್, ಪ್ರಾಚಾರ್ಯ ಜಿ.ಎಚ್ ಮಣ್ಣೂರ ಮಾತನಾಡಿದರು. ಸುಭಾಷ್ ಪಾಟೀಲ್, ಎಂ.ಕೆ. ಕುಂಬಾರ್, ಭೂಗೋಳಶಾಸ್ತ್ರ ವಿಭಾಗದ ಉಪನ್ಯಾಸಕ ಎಂ ಎಚ್ ಕೋಟ್ಯಾಲ, ಸೀಮಾ ಪಾಟೀಲ್, ಸ್ಮಿತಾ ದೇಸಾಯಿ ಉಪಸ್ಥಿತರಿದ್ದರು. ಪ್ರೀತಿ ನಿರೂಪಿಸಿದರು. ನಿವೇದಿತ ಕುಮುಟಗಿ ಸ್ವಾಗತಿಸಿದರು. ರಶ್ಮಿ ಪಾಟೀಲ್ ವಂದಿಸಿದರು.

ವರ್ಣಶ್ರೀ ಪ್ರಶಸ್ತಿಗೆ ಶಿವನಗುತ್ತಿ ಆಯ್ಕೆ

ಇಳಕಲ್: ಚಿತ್ರಕಲಾ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗೈದ ಕಲಾವಿದರನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಕರ್ನಾಟಕ ಲಲಿತಕಲಾ ಅಕಾಡೆಮಿಯು ನೀಡುವ 2024-25ನೇ ಸಾಲಿನ ಪ್ರತಿಷ್ಠಿತ 'ವರ್ಣಶ್ರೀ ಪ್ರಶಸ್ತಿ'ಗೆ ಕಲಾವಿದ ಬಿ.ತಿರುಪತಿ ಶಿವನಗುತ್ತಿ ಅವರನ್ನು ಆಯ್ಕೆ ಮಾಡಲಾಗಿದೆ. ತಿರುಪತಿ ಶಿವನಗುತ್ತಿ ಅವರು ತಮ್ಮ ವೈಶಿಷ್ಟ್ಯಪೂರ್ಣ ಕಲಾಕೃತಿಗಳ ಮೂಲಕ ರಾಜ್ಯ ಮಟ್ಟದಲ್ಲಿ ವಿಶೇಷ ಗುರುತಿಸಿಕೊಂಡಿದ್ದಾರೆ. 'ಅಣು ಅಣುವಿನಲ್ಲೂ ಅಂಬೇಡ್ಕರ್' ಎಂಬ ವಿಭಿನ್ನ ಪರಿಕಲ್ಪನೆಯಡಿ ಒಂದು ಲಕ್ಷಕ್ಕೂ ಅಧಿಕ ಬಾರಿ 'ಅಂಬೇಡ್ಕರ್' ಎಂಬ ಪದವನ್ನು ಬರೆಯುವ ಮೂಲಕ ರಚಿಸಿದ ಭಾವಚಿತ್ರವು ಅವರ ಸೃಜನಶೀಲತೆಗೆ ಉತ್ತಮ ಉದಾಹರಣೆಯಾಗಿದೆ. ಅಲ್ಲದೆ, ಅಕ್ಕಿ ಕಾಳುಗಳನ್ನು ಬಳಸಿ ರೂಪಿಸಿದ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ, 6 ಅಡಿ 4 ಅಡಿ ಅಳತೆಯ ಬೃಹತ್ ಸಂವಿಧಾನದ ಮಾದರಿ ಪುಸ್ತಕ ಸೇರಿದಂತೆ ಅನೇಕ ವಿನೂತನ ಕಲಾಕೃತಿಗಳನ್ನು ಅವರು ನಿರ್ಮಿಸಿದ್ದಾರೆ. ನಿರಂತರವಾಗಿ ಚಿತ್ರಕಲಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದು, ಸಮಾಜಮುಖಿ ಸಂದೇಶಗಳನ್ನು ತಮ್ಮ ಕಲೆಯ ಮೂಲಕ ಜನರಿಗೆ ತಲುಪಿಸಿದ್ದಾರೆ. ಅವರ ಕಲಾಸೇವೆ ಮತ್ತು ಸಾಧನೆ ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ರೂ.25,000 ನಗದು, ಪ್ರಶಸ್ತಿ ಫಲಕ, ನೆನಪಿನ ಕಾಣಿಕೆ, ಶಾಲು, ಹಾರ ಮತ್ತು ತಾಂಬೂಲಗಳನ್ನು ಒಳಗೊಂಡಿದೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ತಂಗಡಗಿ ಅವರ ನೇತೃತ್ವದಲ್ಲಿ ನಡೆಯುವ ರಾಜ್ಯಮಟ್ಟದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು. ಈ ಕುರಿತು ಮಾಹಿತಿ ನೀಡಿರುವ ಅಕಾಡೆಮಿ ಸದಸ್ಯ ವೆಂಕಟೇಶ್ ಬಡಿಗೇರ ಅವರು ತಿರುಪತಿ ಶಿವನಗುತ್ತಿ ಅವರ ಸಾಧನೆ ಯುವ ಕಲಾವಿದರಿಗೆ ಪ್ರೇರಣೆಯಾಗಲಿದೆ ಎಂದರು.



ಕಿರುಸುದ್ದಿ

ಮೇ 15ರಂದು ಉಡಿ ತುಂಬುವ ಕಾರ್ಯಕ್ರಮ

ಮುದ್ದೇಬಿಹಾಳ: ಕೃಷಿ ಹಂಗಾಮು ಪೂರ್ವದಲ್ಲಿ ನಗರದ ಗ್ರಾಮ ದೇವತೆಯರಾದ ದುರ್ಗಾದೇವಿ, ಶಾರಮ್ಮ, ಪಿಲೆಕೆಮ್ಮ, ಏಳು ಮಕ್ಕಳ ತಾಯಿ, ದುರ್ಗಾದೇವಿ ದೇವತೆಯರಿಗೆ ಮೇ 1ರಿಂದ ಶುಕ್ರವಾರ ಹಾಗೂ ಮಂಗಳವಾರ ಸೇರಿದಂತೆ ಐದು ವಾರಗಳ ಸೇವಾ ಕೈಂಕರ್ಯ ಹಮ್ಮಿಕೊಳ್ಳಲಾಗಿದೆ. ಜೂನ್ ತಿಂಗಳಲ್ಲಿ ರೈತರ ದಿನ ಆಗುತ್ತದೆ ಬಿತ್ತನೆ ಶುರು ಆಗುತ್ತದೆ ಹೀಗಾಗಿ ಊರಿನ ಸಂಪ್ರದಾಯದಂತೆ ವಾರದ ಎರಡು ದಿನ ದೇವಿಯರಿಗೆ ನೀರು ಹಾಯಿಸುವುದು. ನಂತರ ಮೇ 15 ಕೊನೆಯ ವಾರ ಶುಕ್ರವಾರ ಉಡಿ ತುಂಬುವ ಕಾರ್ಯಕ್ರಮ ನಡೆಯುತ್ತದೆ ಎಂದು ಗ್ರಾಮ ದೇವತೆ ಕಮಿಟಿಯವರು ತಿಳಿಸಿದ್ದಾರೆ.

ಇಂದು ದತ್ತಿ ನಿಧಿ ಕಾರ್ಯಕ್ರಮ

ಬಸವನಬಾಗೇವಾಡಿ: ಪಟ್ಟಣದ ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಐಕ್ಯೂಎಸಿ ಆಶ್ರಯದಲ್ಲಿ ಕಸಾಪ ಜಿಲ್ಲಾ ಹಾಗೂ ತಾಲೂಕು ಘಟಕದಿಂದ ಜಾನಪದ ಉತ್ಸವ 2026 ಮತ್ತು ಮೋಜಿನ ಆಟಗಳು ಮುಕ್ತಾಯ ಸಮಾರಂಭ ಹಾಗೂ ಬಹುಮಾನ ವಿತರಣೆ, ದತ್ತಿ ನಿಧಿ ಕಾರ್ಯಕ್ರಮ ಏ.30ರಂದು ಬೆಳಗ್ಗೆ 9.45ಕ್ಕೆ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ನಡೆಯಲಿದೆ.ವಿರಕ್ತಮಠದ ಸಿದ್ಧಲಿಂಗ ಸ್ವಾಮೀಜಿ ಸಾನಿಧ್ಯ ವಹಿಸುವರು, ಶರಣ ಚಿಂತಕ ವಿವೇಕಾನಂದ ಕಲ್ಯಾಣಶೆಟ್ಟಿ ಉದ್ಘಾಟಿಸುವರು, ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎ.ವಿ.ಸೂರ್ಯವಂಶಿ ಅಧ್ಯಕ್ಷತೆ ವಹಿಸುವರು, ಸವಿತಾ ಝಳಕಿ, ಶಾಂತಾ ಬಿರಾದಾರ ಉಪನ್ಯಾಸ ನೀಡುವರು, ಶಿಕ್ಷಕ ಶಿವು ಮಡಿಕೇಶ್ವರ ಪ್ರಾಸ್ತಾವಿಕ ನುಡಿ ಹೇಳುವರು, ಡಾ. ಬಿ.ಎಂ.ಸಾಲವಾಡಗಿ, ಅಶೋಕ ಹಂಚಲಿ, ದತ್ತಿ ದಾನಿಗಳಾದ ಪ್ರಕಾಶ ಬೆಣ್ಣೂರ, ಈರನಗೌಡ ಪಾಟೀಲ, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ, ತಾಲೂಕಾಧ್ಯಕ್ಷ ಶಿವಾನಂದ ಡೋಣೂರ ಉಪಸ್ಥಿತರಿರುವರು. ಆದರ್ಶ ಶಿಕ್ಷಕರ ವೇದಿಕೆ ಜಿಲ್ಲಾಧ್ಯಕ್ಷ ಉಮೇಶ ಕೌಲಗಿ, ನಾಟಕ ಬರಹಗಾರ ಸಂಘದ ಜಿಲ್ಲಾಧ್ಯಕ್ಷ ವಾಯ್. ಎಚ್. ಅಂಗಡಗೇರಿ ಅವರಿಗೆ ವಿಶೇಷ ಸನ್ಮಾನ ನೆರವೇರಲಿದೆ ಎಂದು ವೈ.ಎನ್.ಮಿಣಜಗಿ ತಿಳಿಸಿದ್ದಾರೆ.

ತಾಯವ್ವಗೆ ಪಿಎಚ್‌ಡಿ

ವಿಜಯಪುರ: ಇಲ್ಲಿನ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ತಾಯವ್ವ ಮಾಂಗ ಅವರು ಸಲ್ಲಿಸಿದ್ದ ಕನ್ನಡ ಅನುವಾದ ಸಾಹಿತ್ಯಕ್ಕೆ ಲೇಖಕಿಯರ ಕೊಡುಗೆ ಕುರಿತ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ತಾಯವ್ವ ಮಾಂಗ ಅವರು ಕನ್ನಡ ಅಧ್ಯಯನ ವಿಭಾಗದ ಪ್ರೊ.ಮಹೇಶ ಚಿಂತಾಮಣಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು.



ಪದವಿ ಪಡೆದಿರುವ ತಾಯವ್ವ ಮಾಂಗ ಅವರನ್ನು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್ ಲಕ್ಕಣ್ಣನವರ ಅಭಿನಂದಿಸಿದ್ದಾರೆ.

ದಿವ್ಯಾಗೆ ಶೇ.97.28 ಅಂಕ

ನಾಲತವಾಡ: ಪಟ್ಟಣದ ಜಗದೇವನಗರ ನಿವಾಸಿ ದಿ.ಪತ್ರಕರ್ತ ಉಮೇಶ ಆಲಕೊಪ್ಪರ ಪುತ್ರಿ, ನಾಗರಬೆಟ್ಟದ ಎಕ್ಸಪರ್ಟ್ ಪ್ರೌಢ ಶಾಲೆ ವಿದ್ಯಾರ್ಥಿನಿ ದಿವ್ಯಾ ಆಲಕೊಪ್ಪರ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.97.28 ಅಂಕ ಪಡೆದು ಉತ್ತಮ ಸಾಧನೆ ಮಾಡಿದ್ದಾಳೆ. ವಿದ್ಯಾರ್ಥಿನಿ ಸಾಧನೆಗೆ ಸಂಸ್ಥೆ ಅಧ್ಯಕ್ಷ ಬಿ.ಜಿ.ಮಠ, ಪುತ್ರಿಯ ಚಿಕ್ಕಪ್ಪ ರಮೇಶ ಆಲಕೊಪ್ಪರ, ಕುಟುಂಬಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.



ನಿಧನ ಸುದ್ದಿ

ಮರೇಪ್ಪ ಅಗಸರ

ಸಿಂದಗಿ: ತಾಲೂಕಿನ ಯಂಕಂಚಿ ಗ್ರಾಮದ ಮಡಿವಾಳ ಸಮಾಜದ ಮರೇಪ್ಪ ದುಂಡಪ್ಪ ಆಗಸರ(65) ನಿಧನರಾಗಿದ್ದಾರೆ. ಮೃತರರಿಗೆ ಪತ್ನಿ, ಓರ್ವ ಪುತ್ರ-ಪುತ್ರಿ ಸೇರಿದಂತೆ ಬಂದು ಬಳಗ ಇದ್ದಾರೆ.



ಭೀಮಾಶಂಕರಯ್ಯ ವಿರಕ್ತಮಠ

ವಿಜಯಪುರ: ನಗರದ ಜೋರಾಪುರ ಪೇಠ ನಿವಾಸಿ ಭೀಮಾಶಂಕರಯ್ಯ ಬಿ. ವಿರಕ್ತಮಠ (65) ನಿಧನರಾದರು. ಮೃತರಿಗೆ ಸಿದ್ಧೇಶ್ವರ ಸಂಸ್ಥೆಯ ಚೇರ್ಮನ್ ಬಸಯ್ಯ ಹಿರೇಮಠ ಅವರ ಸಹೋದರರಾಗಿದ್ದಾರೆ.





ಮುದ್ದೇಬಿಹಾಳ: ಸರ್ಕಾರಿ ಪದವಿ ಕಾಲೇಜಿನಲ್ಲಿ ಐತಿಹಾಸಿಕ ಚಂಪಾರಣ್ಯ ಸತ್ಯಾಗ್ರಹ ಕುರಿತು ಸಂವಾದ, ಕಿರುಚಿತ್ರ, ಛಾಯಾಚಿತ್ರಗಳ ಪ್ರದರ್ಶನ ಕಾರ್ಯಕ್ರಮ ನಡೆಯಿತು. ಗಾಂಧಿ ಅನುಯಾಯಿಗಳಾದ ಪತ್ರಕರ್ತ, ನೀಲೇಶ್ ಬೇನಾಳ, ಕನ್ನಡ ಪ್ರಾಧ್ಯಾಪಕ ಪ್ರಕಾಶ್ ನರಗುಂದ, ಕಾಲೇಜು ಪ್ರಾಂಶುಪಾಲ ಡಾ.ಎಂ.ಎಚ್ ಕಟಗೂರ ಸೇರಿದಂತೆ ಕಾಲೇಜಿನ ಸಿಬ್ಬಂದಿ ವಿದ್ಯಾರ್ಥಿಗಳು ಕಾರ್ಯಕ್ರಮ ವೀಕ್ಷಿಸಿದರು.

ಡಾ.ಅಂಬೇಡ್ಕರ್ ಕೊಡುಗೆ ಅಪಾರ

ಝಳಕಿ: ವಿಶ್ವ ಮಾನವ ಕುಲಕ್ಕೆ ಸರ್ವರಿಗೂ ಸಮಪಾಲು ಸಮಬಾಳು ಡಾ.ಅಂಬೇಡ್ಕರ್ ಅವರ ಕೊಡುಗೆ ಅಪಾರವಾದದ್ದು ಎಂದು ಬೌದ್ಧವಿಹಾರ ಸಂಘಪಾಲ ಬಂತೇಜಿ ಗುರುಗಳು ಬೀದರ ಆರ್ಶೀವಚನ ನೀಡಿದರು. ಸಮೀಪದ ಹಿಂಗಣಿ ಗ್ರಾಮದಲ್ಲಿ ನಡೆದ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ 135ನೇ ಜಯಂತಿ ಉತ್ಸವ ಪ್ರಯುಕ್ತ ದಿವ್ಯ ಸಾನ್ನಿಧ್ಯ ವಹಿಸಿ ಆರ್ಶೀವಚನ ನೀಡದ ಅವರು, ನಿಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಿ ಒಳ್ಳೆಯ ಶಿಕ್ಷಣವಂತಯಾಗಿ ಮಾಡಿ ಪ್ರತಿ ಮನೆ ಮನೆಯಲ್ಲಿ ಮಕ್ಕಳು ಸರ್ಕಾರಿ ಹುದ್ದೆಗಳಲ್ಲಿ ಇರುವ ಹಾಗೇ ಬೆಳೆಸಿರಿ. ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಆಡಂಬರ ಖರ್ಚು ಮಾಡಬೇಡಿ. ಶಾಲೆಗಳಲ್ಲಿ ಉತ್ತಮ ಸಾಧನೆ ಮಾಡಿ ಮಕ್ಕಳಿಗೆ ಶಾಲೆಗಳಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಸನ್ಮಾನಿಸಿ ಗೌರವಿಸಿರಿ ಎಂದರು. ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ರಾಘವೇಂದ್ರ ಸಾಹುಕಾರ ಕಾಪಸೆ ಮಾತನಾಡಿ, ಯುವಕರು ಡಾ.ಅಂಬೇಡ್ಕರ್ ಅವರ ತತ್ವಗಳನ್ನು ಅಳವಡಿಕೊಳಬೇಕು. ಭಾರತೀಯ ಸಂವಿಧಾನದ ಮುಖ್ಯ ಶಿಲ್ಪಿಯಾಗಿನಿಂದ ಹಿಡಿದು ದೀನದಲಿತ ಜಾತಿಗಳಿಗೆ ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದವರು. ಭಾರತೀಯ ಸಮಾಜಕ್ಕೆ ಅವರ ಕೊಡುಗೆ ಅಪಾರ ಎಂದು ಹೇಳಿದರು. ಯುವ ಮುಖಂಡ ಪೀರಪ್ಪ ಕಟ್ಟಿಮನಿ, ಗ್ರಾಪಂ ಅಧ್ಯಕ್ಷ ಪ್ರಕಾಶ ಪ್ಯಾಟಿ, ವಿನಾಯಕ ಗುಣಸಾಗರ, ಸುರೇಶ ನಡಗಡ್ಡಿ, ಶಿವಾನಂದ ಹಾವಗೊಂಡ, ಲಕ್ಷ್ಮೀಕಾಂತ ಎಳಗಿ, ಚನ್ನಪ್ಪ ಕಾಂಬಳೆ, ಸುರೇಶ ಕಟ್ಟೀಮನಿ, ಚಿದಾನಂದ ಕಟ್ಟಿಮನಿ, ಆಕಾಶ ಕಟ್ಟಿಮನಿ, ವಿಕಾಸ ಕಟ್ಟಿಮನಿ ಸಿದ್ದಾರಾಮ ಕಟ್ಟಿಮನಿ, ರಾಜಶೇಖರ ಕಟ್ಟಿಮನಿ ಇದ್ದರು.



ಝಳಕಿ: ಸಮೀಪದ ಹಿಂಗಣಿ ಗ್ರಾಮದಲ್ಲಿ ನಡೆದ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ 135ನೇ ಜಯಂತಿ ಉತ್ಸವ ನಡೆಯಿತು. ಬೌದ್ಧವಿಹಾರ ಸಂಘಪಾಲ ಬಂತೇಜಿ ಗುರುಗಳು ಬೀದರ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ರಾಘವೇಂದ್ರ ಸಾಹುಕಾರ ಕಾಪಸೆ, ಯುವ ಮುಖಂಡ ಪೀರಪ್ಪ ಕಟ್ಟಿಮನಿ, ಗ್ರಾಪಂ ಅಧ್ಯಕ್ಷ ಪ್ರಕಾಶ ಪ್ಯಾಟಿ, ವಿನಾಯಕ ಗುಣಸಾಗರ, ಸುರೇಶ ನಡಗಡ್ಡಿ, ಶಿವಾನಂದ ಹಾವಗೊಂಡ, ಲಕ್ಷ್ಮೀಕಾಂತ ಎಳಗಿ, ಚನ್ನಪ್ಪ ಕಾಂಬಳೆ, ಸುರೇಶ ಕಟ್ಟೀಮನಿ, ಚಿದಾನಂದ ಕಟ್ಟಿಮನಿ, ಆಕಾಶ ಕಟ್ಟಿಮನಿ, ವಿಕಾಸ ಕಟ್ಟಿಮನಿ ಸಿದ್ಧಾರಾಮ ಕಟ್ಟಿಮನಿ, ರಾಜಶೇಖರ ಕಟ್ಟಿಮನಿ ಇದ್ದರು.

ಮಾದಕ ವ್ಯಸನಕ್ಕೆ ಯುವಜನತೆ ಬಲಿಯಾಗದಿರಲಿ | ಜಿಲ್ಲಾಧಿಕಾರಿ ಸೂಚನೆ

ದುಷ್ಪರಿಣಾಮದ ಜಾಗೃತಿ ಮೂಡಿಸಿ

ವಿಜಯಪುರ: ಯುವ ಜನಾಂಗ ದುಶ್ಚಟಗಳಿಗೆ ಬಲಿಯಾಗದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಮಾದಕ ವ್ಯಸನದಿಂದಾಗುವ ದುಷ್ಪರಿಣಾಮಗಳ ಕುರಿತು ವ್ಯಾಪಕವಾಗಿ ಜಾಗೃತಿ ಮೂಡಿಸಲು ಇಲಾಖಾಧಿಕಾರಿಗಳು ಸಮನ್ವಯತೆ ಹಾಗೂ ಸಹಕಾರದಿಂದ ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಸೂಚನೆ ನೀಡಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡ ಮಾದಕ ವಸ್ತು ನಿಯಂತ್ರಣ ಕುರಿತ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ಎಲ್ಲಾ ವಸತಿ ನಿಲಯಗಳ ಮೇಲೆ ನಿಗಾ ವಹಿಸಬೇಕು. ಶೈಕ್ಷಣಿಕ ಅವಧಿ ಮುಗಿದ ನಂತರ ಮಾದಕ ವಸ್ತು ನಿಯಂತ್ರಣ ಕುರಿತ ಅಭಿಯಾನ ಜಾಗೃತಿ ಹಮ್ಮಿಕೊಳ್ಳಬೇಕು ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಖಾಸಗಿ ಹಾಗೂ ಸರ್ಕಾರಿ ಶಾಲೆ ಸೇರಿದಂತೆ ಎಲ್ಲಾ ಶಾಲೆಗಳಲ್ಲಿ ಮಾದಕ ವಸ್ತು ನಿಯಂತ್ರಣ ಕೋಶ ರಚಿಸಿಕೊಳ್ಳಬೇಕು ಶಾಲಾ ಮಕ್ಕಳಿಂದ ಒಂದು ಸಮಿತಿ ರಚಿಸಿ ಮಕ್ಕಳಿಂದ ಕಾರ್ಯಕ್ರಮ ಮಾಡಿಸಿ. ಹಾಸ್ಟೆಲ್ ಕಮಿಟಿ, ಕ್ರೀಡಾ ಮತ್ತು ಸಾಂಸ್ಕೃತಿಕ ಸಮಿತಿ ಮಾದರಿಯಲ್ಲಿ ಮಾದಕ ವಸ್ತು ನಿಯಂತ್ರಣ ಕುರಿತ ಸಮಿತಿ ರಚಿಸಿಕೊಂಡು ವ್ಯಾಪಕ ತಿಳಿವಳಿಕೆ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು. ಮಾದಕ ವಸ್ತು ನಿಯಂತ್ರಣ ಸಮಿತಿಯು ಆಗಾಗ ಸಭೆ ಸೇರಿ ಜಾಗೃತಿ ಮೂಡಿಸಬೇಕು. ಮಾದಕ ವಸ್ತು ನಿಯಂತ್ರಣದ ಬಗ್ಗೆಯೂ ವ್ಯಾಪಕ ಪ್ರಚಾರ ಮಾಡಿ ಸಾರ್ವಜನಿಕರಿಗೆ ಈ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಮಕ್ಕಳು, ಮನೆಯ ನೆರೆಹೊರೆಯವರಿಗೂ ತಿಳಿಸುವಂತಾಗಬೇಕು ಎಂದರು.

ಇನ್ನೊಂದೆಡೆ ಸಾಮಾಜಿಕ ಮಾಧ್ಯಮಗಳನ್ನು ಸಾಕಷ್ಟು ಬಳಸಿಕೊಂಡು ವ್ಯಾಪಕ ಪ್ರಚಾರ ಮಾಡಬೇಕು. ಸ್ಕಿಟ್, ನಾಟಕ ಮೂಲಕ ಜಾಗೃತಿ ಮೂಡಿಸುವ ಕ್ರಮಕ್ಕೆ ಸೂಚಿಸಲಾಯಿತು. ಆರೋಗ್ಯ ಇಲಾಖೆಯ ಆರೋಗ್ಯ ಕೇಂದ್ರಗಳಲ್ಲಿ ಕೈಗೊಂಡು, ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮಗಳು ಹಾಗೂ ಪರಿಣಾಮಗಳ ಬಗ್ಗೆ ತಿಳಿಸಿಕೊಡಬೇಕು ಎಂದು ಜಿಲ್ಲಾಧಿಕಾರಿಗಳು ಸಲಹೆ ಮಾಡಿದರು.

ಮಾದಕ ದ್ರವ್ಯಗಳ ನಿಯಂತ್ರಣ ಕೇವಲ ಪೊಲೀಸರಿಗೆ ಸೀಮಿತವಾಗದೆ, ಎಲ್ಲ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡುವಂತೆ ಸಮಿತಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಜಿಲ್ಲಾ ಮಟ್ಟದ ಮಾದಕ ದ್ರವ್ಯಗಳ ಹಾವಳಿ ನಿಯಂತ್ರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದ್ದು,ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ನಾರ್ಕೋ ಕೋ-ಆರ್ಡಿನೇಷನ್ ಸೆಂಟರ್ ಸಮಿತಿಯು ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ನಡೆದ ಮಾದಕ ದ್ರವ್ಯ ಜಪ್ತಿ ಮತ್ತು ಕಾನೂನು ಕ್ರಮಗಳ ಬಗ್ಗೆ ಜಿಲ್ಲೆಯಾದ್ಯಂತ ಎನ್‌ಡಿಪಿಎಸ್ ಕಾಯ್ದೆಯಡಿ ಹಲವು ಪ್ರಕರಣಗಳನ್ನು ದಾಖಲಿಸಲಾಗಿದೆ.2024ನೇ ಸಾಲಿನಲ್ಲಿ; ಒಟ್ಟು 28 ಪ್ರಕರಣಗಳು ದಾಖಲಾಗಿದ್ದು, 297 ಕೆ.ಜಿ. 872 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿತ್ತು. ಇದರಲ್ಲಿ 373 ಕೆ.ಜಿ. 574 ಗ್ರಾಂ ಗಾಂಜಾವನ್ನು ನಾಶಪಡಿಸಲಾಗಿದೆ. 2025ನೇ ಸಾಲಿನಲ್ಲಿ; 338 ಕೆ.ಜಿ. 037 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ. ಜೊತೆಗೆ 18 ಕೆ.ಜಿ. 432 ಗ್ರಾಂ ಅಫೀಮು ವಶಪಡಿಸಿಕೊಳ್ಳಲಾಗಿದ್ದು,ಗಣನೀಯಪ್ರಮಾಣದ ಮಾದಕ ದ್ರವ್ಯವನ್ನು ನಾಶಪಡಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ ಇಲ್ಲಿಯವರೆಗೆ 13 ಪ್ರಕರಣಗಳು ದಾಖಲಾಗಿದ್ದು, ಸುಮಾರು 9 ಕೆ.ಜಿ. 532 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ.

ನಾಳೆ 'ನೆಲೆ' ಅಭಿನಂದನ ಗ್ರಂಥ ಬಿಡುಗಡೆ

ಸಿಂದಗಿ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ, ಸಿಂದಗಿಯ ಜಿ.ಪಿ.ಪೋರವಾಲ ಕಲಾ, ವಾಣಿಜ್ಯ ಹಾಗೂ ವಿ.ವಿ.ಸಾಲಿಮಠ ವಿಜ್ಞಾನ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯ ಡಾ.ಚನ್ನಪ್ಪ ಕಟ್ಟಿ ಅವರಿಗೆ ಮೇ 1ರಂದು ಅಭಿನಂದನಾ ಸಮಾರಂಭ, ನೆಲೆ ಅಭಿನಂದನ ಗ್ರಂಥ ಬಿಡುಗಡೆ ಮತ್ತು ವಿಚಾರ ಸಂಕಿರಣ ನಗರದ ವಿಜಯಪುರ ರಸ್ತೆಯಲ್ಲಿರುವ ಮಾಂಗಲ್ಯ ಭವನದಲ್ಲಿ ಜರುಗಲಿದೆ ಎಂದು ಸಂಸ್ಥೆಯ ಸಂಚಾಲಕ ಡಾ.ಎಂ.ಎಂ.ಪಡಶೆಟ್ಟಿ ತಿಳಿಸಿದರು.



ನಗರದ ಬಸವ ಮಂಟಪದಲ್ಲಿ ನೆಲೆ ಪ್ರಕಾಶನ ಸಂಸ್ಥೆಯ ವತಿಯಿಂದ ಹಮ್ಮಿಕೊಂಡ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ.1 ರಂದು ಬೆಳಿಗ್ಗೆ 10ಗಂಟೆಗೆ ಡಾ.ಚನ್ನಪ್ಪ ಕಟ್ಟಿ ಸಾಹಿತ್ಯ ಮುಖಾಮುಖಿ ವಿಚಾರ ಸಂಕಿರಣವನ್ನು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಮಕ್ಕಳ ಸಾಹಿತಿಗಳಾದ ಹ.ಮ.ಪೂಜಾರ ಉದ್ಘಾಟಿಸಲಿದ್ದಾರೆ. ಅಥಣಿಯ ಕತೆಗಾರ ಕಾದಂಬರಿಕಾರ ಡಾ.ಬಾಳಾಸಾಹೇಬ ಲೋಕಾಪುರ ಅವರು ಡಾ.ಚನ್ನಪ್ಪ ಕಟ್ಟಿ ಅವರ ಕತೆಯ ಕುರಿತು ಅಧ್ಯಕ್ಷತೆ ವಹಿಸಿ ಮಾತನಾಡಲಿದ್ದಾರೆ. ಬೆಂಗಳೂರಿನ ವಿಮರ್ಶಕಿ ಎನ್.ಆರ್. ಲಲಿತಾಂಬಾ ಕಟ್ಟಿ ಅವರ ಕಾವ್ಯ ಕುರಿತು, ತಿಪಟೂರಿನ ಅನುವಾದಕ ಬರಹಗಾರ ಎಸ್.ಗಂಗಾಧರಯ್ಯ ಅನುವಾದ ಕುರಿತು, ಹಂಪಿ ಕನ್ನಡ ವಿಶ್ವವಿದ್ಯಾಯದ ಸಂಶೋಧಕ ಡಾ.ಎಫ್.ಟಿ.ಹಳ್ಳಿಕೇರಿ ಅವರು ಕಟ್ಟಿ ಸಂಶೋಧನೆ ಕುರಿತಾಗಿ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಜಯಪುರದ ಚಾಣಕ್ಯ ಕರಿಯರ ಅಕಾಡೆಮಿ ಸಂಸ್ಥಾಪಕ ಎನ್.ಎಂ.ಬಿರಾದಾರ ಇರಲಿದ್ದಾರೆ.

ನೆಲೆಪ್ರಕಾಶನದಚನ್ನಪ್ಪಕಟ್ಟಿಅನುವಾದಿಸಿದ ಕುವರಿಯಾದೊಡೆ ಕುಂದೇನು? ಗ್ರಂಥವನ್ನು ಶಾಸಕ ಅಶೋಕ ಮನಗೂಳಿ, ಸಂಗಮೇಶ ಮೇತ್ರಿ ಸಂಪಾದಿಸಿದ ಅಮೋಘಸಿದ್ಧ ಜನಪದ ಮಹಾಕಾವ್ಯ ಸಾಂಸ್ಕೃತಿಕ ಮುಖಾಮುಖಿ ಗ್ರಂಥವನ್ನು ಮಾಜಿ ಶಾಸಕ ರಮೇಶ ಭೂಸನೂರ ಮತ್ತು ಚನ್ನಪ್ಪ ಕಟ್ಟಿ ಅವರ ವಿಮರ್ಶಾ ಸಂಕಲನ ಒಕ್ಕಣೆಯನ್ನು ವಿಪ ಮಾಜಿ ಸದಸ್ಯ ಅರುಣ ಶಹಾಪೂರ ಬಿಡುಗಡೆಗೊಳಿಸಲಿದ್ದಾರೆ. ಅಭಿನಂದನ ಗ್ರಂಥದ ಗೌರವ ಸಂಪಾದಕ ಡಾ.ಶ್ರೀರಾಮ ಇಟ್ಟಣ್ಣವರ, ಪ್ರಧಾನ ಸಂಪಾದಕ ಡಾ.ಎಂ. ಎಂ.ಪಡಶೆಟ್ಟಿ, ಡಾ.ಸಂಗಮೇಶ ಮೇತ್ರಿ, ಡಾ.ಚನ್ನಪ್ಪ ಕಟ್ಟಿ, ಸರೋಜಾ ಕಟ್ಟಿ ಉಪಸ್ಥಿತಿ ಇರಲಿದ್ದಾರೆ ಎಂದು ತಿಳಿಸಿದ್ದಾರೆ.

ನಿವೃತ್ತ ಪ್ರಾಧ್ಯಾಪಕ ಡಾ.ಅರವಿಂದ ಮನಗೂಳಿ, ಎಂ.ಎಸ್.ಹೈಯ್ಯಾಳಕರ, ಶಿವಪ್ಪ ಗವಸಾಯಿ, ಬಿಪಿಎಸ್.ಹಣಮಶೆಟ್ಟಿ, ಚಿದಂಬರ ಬಂಡಗಾರ, ದೇವು ಮಾಕೊಂಡ, ಜಗದೀಶಕಲಬುರ್ಗಿ,ಎ.ಆರ್.ಹೆಗ್ಗನದೊಡ್ಡಿ, ಬಸಯ್ಯ ಮಠಪತಿ, ಡಾ.ಶರಣಬಸವ ಜೋಗುರ, ಶಿವಾನಂದ ಕಲಬುರ್ಗಿ, ಗೆಳೆಯರ ಬಳಗ, ಶಿಷ್ಯ ಬಗಳ ಇದ್ದರು.

ಸೊಳ್ಳೆಗಳ ನಿಯಂತ್ರಣ ಅಗತ್ಯ: ತಿವಾರಿ

ಮುದ್ದೇಬಿಹಾಳ: ವಿಶ್ವ ಮಲೇರಿಯಾ ದಿನವನ್ನು ಏ.25ರಂದು ಆಚರಿಸಲಾಗುತ್ತದೆ. ಮಲೇರಿಯಾವನ್ನು ನಿರ್ಮೂಲನೆ ಮಾಡುವುದು ಮತ್ತು ಈ ರೋಗದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಸೊಳ್ಳೆಗಳಿಂದ ಹಲವಾರು ಕಾಯಿಲೆ ಹರಡುತ್ತಿದ್ದು, ಸೊಳ್ಳೆ ನಿಯಂತ್ರಣ ಮಾಡಿದಲ್ಲಿ ಇಂತಹ ಕಾಯಿಲೆ ತಡೆಗಟ್ಟಬಹುದಾಗಿದೆ. ಜಾಗೃತಿ ವಹಿಸಿ ಸೊಳ್ಳೆ ನಿರ್ಮೂಲನೆ ಬಗ್ಗೆ ಎಚ್ಚರ ವಹಿಸಬೇಕೆಂದು ತಾಲೂಕು ಆರೋಗ್ಯ ಅಧಿಕಾರಿ ಡಾ.ಸತೀಶ ತಿವಾರಿ ಹೇಳಿದರು.

ಇಲ್ಲಿನ ತಾಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸಿದ್ದಗಂಗಾ ಪ್ಯಾರ ಮೆಡಿಕಲ್ ಕಾಲೇಜ್ ಸಹಯೋಗದಲ್ಲಿ ಸಿದ್ದಗಂಗಾ ಪ್ಯಾರ ಮೆಡಿಕಲ್ ಕಾಲೇಜನಲ್ಲಿ ಹಮ್ಮಿಕೊಂಡ ಮಲೇರಿಯಾ ದಿನಾಚರಣೆಯ ಕುರಿತು ಮಾತನಾಡಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಎಸ್. ಗೌಡರ ಮಾತನಾಡಿ, ಸೊಳ್ಳೆಗಳಿಂದ ಪ್ರಸಾರವಾಗುವ ರೋಗಗಳಲ್ಲಿ ಮಲೇರಿಯಾ ರೋಗವು ಕೂಡ ಒಂದು. ಇದು ಪ್ಲಾಸ್ಮೋಡಿಯಾ ಎಂಬ ಸೂಕ್ಷ್ಮಾಣು ಪರಾವಲಂಬಿ ಮೂಲಕ ಬರುತ್ತದೆ. ಹೆಣ್ಣು ಅನಾಫಿಲಿಸ್ ಸೊಳ್ಳೆಯು ಮಲೇರಿಯಾ ಸೋಂಕಿತ ವ್ಯಕ್ತಿಗೆ ಕಚ್ಚಿ ರಕ್ತ ಹೀರಿ ಆರೋಗ್ಯವಂತ ವ್ಯಕ್ತಿಗೆ ಕಚ್ಚುವುದರಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಸಾರ್ವಜನಿಕರು ಯಾವುದೇ ಜ್ವರ ಬಂದಾಗ ಆರೋಗ್ಯ ನಿರೀಕ್ಷಣಾಧಿಕಾರಿಗಳ ಹತ್ತಿರ ಅಥವಾ ಸಮೀಪದ ಆಸ್ಪತ್ರೆಯಲ್ಲಿ ರಕ್ತಲೇಪನ ತಗೆಸಿ ಚಿಕಿತ್ಸೆ ಪಡೆಯಬೇಕು ಎಂದರು.

ವಿಬಿಡಿ ಮೇಲ್ವಿಚಾರಕ ಎಸ್.ಸಿ.ರುದ್ರವಾಡಿ ಮಾತನಾಡಿ, ಮಲೇರಿಯಾ ರೋಗವನ್ನು ಸಂಪೂರ್ಣ ನಿಯಂತ್ರಿಸುವಲ್ಲಿ ಪಣ ತೊಡೋಣ, ಮನೆ ಸುತ್ತಲಿನ ಪರಿಸರ ಸ್ವಚ್ಛವಾಗಿಟ್ಟುಕೊಳ್ಳಬೇಕು. ಹಾಗೂ ಮನೆಯ ಸುತ್ತಮುತ್ತಲೂ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಸ್ವಯಂ ರಕ್ಷಣಾ ವಿಧಾನಗಳಾದ ಸೊಳ್ಳೆ ಪರದೆ, ಬೇವಿನ ಸೊಪ್ಪಿನ ಹೊಗೆ, ಸೊಳ್ಳೆ ಬತ್ತಿ ಹಾಗೂ ಸೊಳ್ಳೆ ಬ್ಯಾಟ್ ಮುಖಾಂತರ ಸೊಳ್ಳೆಗಳನ್ನು ನಿಯಂತ್ರಿಸಬಹುದೆಂದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಯಲ್ಲಪ್ಪ ಚಲವಾದಿ ಎ.ಪಿ.ಶಾಸ್ತ್ರಿಮಠ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಅನುಸೂಯಾ ತೇರದಾಳ ಸಾಂಕ್ರಾಮಿಕ ರೋಗಶಾಸ್ತ್ರಜ್ಞ ಪ್ರಶಾಂತ್ ಕಡಿ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ವೀರೇಶ ಎಸ್.ಬಿ.ವಿಜಯ ಹೂಗಾರ ಸಿದ್ದಗಂಗಾ ಕಾಲೇಜಿನ ಶಿಕ್ಷಕರಾದ ಹಿನಾಕೌಸರ್ ಸುತಾರ ಮುನಿರಾಬೇಗಂ ನದಾಫ್ ಪಾರ್ವತಿ ಹಿರೇಮಠ ಮಲ್ಲಿಕಾರ್ಜುನ ಹೆಬ್ಬಾಳ



ಸಂತ ಶಿಶುನಾಳ ಶರೀಫರ ತತ್ವಪದಗಳು ಬದುಕಿಗೆ ಆದರ್ಶ: ಬಾಗಾಯತ

ವಿಜಯಪುರ: ಸಂತ ಶಿಶುನಾಳ ಶರೀಫರ ತತ್ವಪದಗಳು ಕೇವಲ ಕನ್ನಡ ಸಾಹಿತ್ಯವಾಗಿರದೇ ಅವು ಬದುಕಿನ ದರ್ಶನವಾಗಿವೆ. ಜಾತಿ, ಧರ್ಮ, ಭಾಷೆಯ ಸೀಮೆಗೆ ಒಳಪಡದೇ ವಿಶ್ವಮಾನವ ಪ್ರಜ್ಞೆಯನ್ನು ಒಳಗೊಂಡಿವೆ ಎಂದು ವಿಶ್ರಾಂತ ಪ್ರಾಚಾರ್ಯ, ಇತಿಹಾಸಕಾರ ಡಾ.ವಿ.ಎಂ.ಬಾಗಾಯತ ಹೇಳಿದರು.



ನಗರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ ಹಾಗೂ 'ಚಿಂತನ ಸಾಂಸ್ಕೃತಿಕ ಬಳಗ' ಹಮ್ಮಿಕೊಂಡ 'ಅನುಭಾವಿಗಳು - ಮರುಭೆಟ್ಟಿ' ನಿಮಿತ್ತ 'ಸಂತ ಶಿಶುನಾಳ ಶರೀಫರು' ಎಂಬ ವಿಷಯದ ಕುರಿತು ಮಾತನಾಡಿದ ಅವರು, ಗುರುಗೋವಿಂದ ಭಟ್ಟರ ಮತ್ತು ಶಿಶುನಾಳ ಶರೀಫರ ಗುರು-ಶಿಷ್ಯ ಸಂಬಂಧ ಅತ್ಯದ್ಭುತ. ಇಬ್ಬರೂ ಬೇರೆ ಬೇರೆ ಮತದವರಾದರೂ ಪರಸ್ಪರ ಅವಿನಾಭಾವ ಸಂಬಂಧವು ಜಾತಿಯನ್ನು ಮೀರಿ ಬೆಳೆದದ್ದು ಮೌಲ್ಯಯುತವಾದುದು. ಅನುಭಾವದ ನೆಲೆಯಲ್ಲಿಯೇ ಸಾಕ್ಷಾತ್ಕಾರ ಪಡೆಯುವ ಮಾರ್ಗ ತೋರಿಸಿಕೊಟ್ಟವರು ಎಂದರು.

ಸಂತ ಶಿಶುನಾಳ ಶರೀಫರ ತತ್ವಪದಗಳು ಬಹುತೇಕರಲ್ಲಿ ಬಾಯಿಪಾಠವಾಗಿವೆ, ಅಷ್ಟೊಂದು ಸರಳ ಹಾಗೂ ಶ್ರೇಷ್ಠತೆಯ ಸಾರ ಆ ತತ್ವಪದಗಳಲ್ಲಿ ಅಡಗಿದೆ, ಅವರು ತತ್ವಪದಗಳಲ್ಲಿ ಸಾರಿದ ಜೀವನ ತತ್ವವನ್ನು ಬದುಕಿನ ಪ್ರತಿ ಪಥದಲ್ಲಿಯೂ ಅಳವಡಿಸಿಕೊಂಡು ಜೀವನದಲ್ಲಿ ಮುನ್ನಡೆಯಬೇಕು ಎಂದು ಕರೆ ನೀಡಿದರು.

ಬಿ.ಆರ್.ಬನಸೋಡೆ ವಚನಗಾಯನ ಮಾಡಿದರು. ಡಾ. ಸುಭಾಸ ಕನ್ನೂರ ನಿರೂಪಿಸಿದರು. ಡಾ.ವಿ.ಡಿ.ಐಹೊಳ್ಳಿ ಅತಿಥಿಗಳನ್ನು ಪರಿಚಯಿಸಿದರು. ಡಾ.ಎಸ್.ಐ.ಮೇತ್ರಿ ವಂದಿಸಿದರು. ಪಂಡಿತರಾವ್ ಪಾಟೀಲ ಮತ್ತು ಬಿ.ಎಂ.ಪಾಟೀಲ ತತ್ವಪದಗಳನ್ನು ಹಾಡಿದರು.

ಪಾರ್ವತಿ ಬಡಿಗೇರಗೆ ಸನ್ಮಾನ



ಇಂಡಿ: ತಾಲೂಕಿನ ಲಚ್ಯಾಣ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಸ್ಥಳೀಯ ನಿವಾಸಿ ಪಾರ್ವತಿ ಭೀಮರಾಯ ಬಡಿಗೇರ ನಡೆದ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ 625ಕ್ಕೆ 615 ಅಂಕ (ಶೇ. 98.40) ಪಡೆದು ಕನ್ನಡ ಮಾಧ್ಯಮ ವಿಭಾಗದಲ್ಲಿ ಇಂಡಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಮಾಡಿದ ಸಾಧನೆಗೆ ಶಾಸಕ ಯಶವಂತರಾಯಗೌಡ ಪಾಟೀಲ ನಗರದ ಪ್ರವಾಸಿಮಂದಿರದಲ್ಲಿ ಸನ್ಮಾನಿಸಿ ಗೌರವಿಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಸಯೀದಾ ಮುಜಾವರ, ಲಚ್ಯಾಣದ ಸರ್ಕಾರಿ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಬಿ.ಎಲ್.ಪಾಟೀಲ, ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶಿವರಾಜ ಪಾಟೀಲ,ಸರ್ಕಾರಿ ನೌಕರರ ಸಂಘದ ತಾಲೂಕು ಘಟಕದ ಅಧ್ಯಕ್ಷ ರೇವೂರ, ಬಿಆರ್‌ಸಿ ನಡುಗಡ್ಡಿ ಹಾಗೂ ಶಾಲಾ ಸಿಬ್ಬಂದಿ, ಪಾಲಕರು ಉಪಸ್ಥಿತರಿದ್ದರು.

ಇಂದಿನಿಂದ ಜಾತ್ರಾ ಮಹೋತ್ಸವ

ಇಂಡಿ: ತಾಲೂಕಿನ ಅರ್ಜುಣಗಿ ಬಿ.ಕೆ.ಗ್ರಾಮದ ಅಂಬಾಮಠದ ಅಂಬಾದೇವಿಯ ಹಾಗೂ ವೀರಭದ್ರೇಶ್ವರ ಜಾತ್ರಾ ಮಹೋತ್ಸವವು ಏ.30ರಿಂದ ಮೇ 8ರ ವರೆಗೆ ಜರಗುವುದು. ಏ.30ರಂದು ಗುರುವಾರ ಬೆಳಗ್ಗೆ 8ಗಂಟೆಗೆ ಪುರುವಂತರ ಸೇವೆಯೊಂದಿಗೆ ವೀರಭದ್ರೇಶ್ವರ ದೇವರ ಮೆರವಣಿಗೆ, 9 ದಿನಗಳವರೆಗೆ ಪ್ರತಿ ದಿನ ಸಂಜೆ 8 ಗಂಟೆಗೆ ಯಡೆಯೂರು ಸಿದ್ದಲಿಂಗೇಶ್ವರ ಮಹಾಪುರಾಣ ಜಗುವುದು. ಮೇ 1ರಂದು ಶುಕ್ರವಾರ ಬೆಳಗ್ಗೆ 6 ಗಂಟೆಗೆ ದೇವಿಗೆ ರುದ್ರಾಭಿಷೇಕ ಹಾಗೂ ಹೋಮ ಹವನ ಕಾರ್ಯಕ್ರಮ ನಂತರ ಜಂಗಮ ವಟುಗಳಿಗೆ ಅಯ್ಯಾಚಾರ, ಸುಮಂಗಲೆಯರಿಗೆ ಉಡಿ ತುಂಬ ಕಾರ್ಯಕ್ರಮ ನಡೆಯುವುದು. ಮಧ್ಯಾಹ್ನ 4 ಗಂಟೆಗೆ ಶ್ರೀದೇವಿ ಪಲ್ಲಕ್ಕಿ ಹಾಗೂ ಎಲ್ಲಾ ಗ್ರಾಮದ ಪಲ್ಲಕ್ಕಿಗಳ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸುವುದು. ಮೇ 8ರಂದು ಶುಕ್ರವಾರ ಬೆಳಗ್ಗೆ 8 ಗಂಟೆಗೆ ಹಾವಾಮಲ್ಲಿನಾಥರ ಮೆರವಣಿಗೆ ಹಾಗೂ ತುಲಾಭಾರ ಕಾರ್ಯಕ್ರಮ, ಮಧ್ಯಾಹ್ನ 12.30 ಗಂಟೆಗೆ ಸರಳ ಸಾಮೂಹಿಕ ವಿವಾಹ ನಡೆಯುವುದು. ಧರ್ಮಸಭೆ ಜರಗುವುದು. ರಾತ್ರಿ 10 ಗಂಟೆಗೆ ಜೈ ಭೀಮ ಯುವಕ ಮಂಡಳಿಯಿಂದ ತಾಮ್ರಧ್ವಜ ನಾಟಕ ಜರಗುವುದು. ಅಫಜಲಪುರ ಶ್ರೀಗಳು, ಶಿರಶ್ಯಾಡ ಶ್ರೀಗಳು,ಅಚಲೇರಿ ಶ್ರೀಗಳು, ತಾರಾಪುರ ಮಠದ ಶ್ರೀಗಳು, ಅರ್ಜುಣಗಿ ಮಠ ಶ್ರೀಗಳು, ಜೈನಾಪುರ ಶ್ರೀಗಳು, ಬೆಕಿನಾಳ ಶ್ರೀಗಳು, ಸಂಕನಾಳ ಶ್ರೀಗಳು, ಭಾಗ್ಯವಂತಿ ಬಟಗೇರಾ ಆಗಮಿಸಲಿದ್ದಾರೆ ಎಂದು ವೇದಮೂರ್ತಿ ಮಡಿವಾಳಯ್ಯ ಶಾಸ್ತ್ರಿಗಳು ತಿಳಿಸಿದ್ದಾರೆ.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬಂಜಾರಾ ಪರಿಷತ್ ಮನವಿ

ವಿಜಯಪುರ: ಬಂಜಾರಾ ಸಮಾಜ ಗುಳೇ ಹೋಗುವುದನ್ನು ತಪ್ಪಿಸಲು ವಿಶೇಷ ಉದ್ಯೋಗಾವಕಾಶ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗಆಗ್ರಹಿಸಿ ವಿಜಯಪುರದಲ್ಲಿ ರಾಷ್ಟ್ರೀಯ ಬಂಜಾರಾ ಪರಿಷತ್ ಪದಾಧಿಕಾರಿಗಳು ಎಸ್ಸಿಎಸ್ಟಿ ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ ಅವರಿಗೆ ಲಿಖಿತ ಮನವಿ ಸಲ್ಲಿಸಿದರು.

ಪ್ರಕಾಶ ಚವ್ಹಾಣ ಮಾತನಾಡಿ, ಉದ್ಯೋಗವಿಲ್ಲದೇ ಬಂಜಾರಾ ಸಮಾಜದ ಜನರು ಗುಳೇ ಹೋಗುವುದು ತಪ್ಪಿಲ್ಲ, ಈ ಸಂದರ್ಭದಲ್ಲಿ ಜನಾಂಗದ ಮಕ್ಕಳಿಗೆ ಶಿಕ್ಷಣ ದೊರೆಯುತ್ತಿಲ್ಲ ಇಂತಹ ಮಕ್ಕಳಿಗೆ ವಿಶೇಷ ಆದ್ಯತೆ ನೀಡಿ ಪ್ರತ್ಯೇಕ ವಸತಿ ಸಮೇತ ಹಾಸ್ಟೆಲ್ ನಿರ್ಮಿಸಿ ಶಿಕ್ಷಣ ನೀಡಬೇಕಾಗಿರುವುದು ಅತ್ಯಂತ ಅಗತ್ಯವಾಗಿದೆ, ಈ ನಿಟ್ಟಿನಲ್ಲಿ ಆಯೋಗ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದರು.

ಇಟ್ಟಂಗಿಹಾಳ ತಾಂಡದಲ್ಲಿರುವ ಸರ್ಕಾರಿ ಜಾಗದಲ್ಲಿ ಸುಮಾರು 40 ವರ್ಷಗಳಿಂದ ವಾಸ ಮಾಡುತ್ತಿದ್ದ ಜನತೆ ದುಡಿಯಲು ಗುಳೆ ಹೋದಾಗ ಏಕಾಏಕಿ ಯಾವದೇ ಮುನ್ಸೂಚನೆ ನೀಡದೆ ನೂರಾರು ಮನೆಗಳನ್ನು ನೆಲಸಮ ಮಾಡಿ ಜಿಲ್ಲಾಡಳಿತ ಘೋರ ಅನ್ಯಾಯ ಮಾಡಿದೆ. ಈ ನೊಂದ ಜನತೆಗೆ ಇನ್ನುವರೆಗೂ ಮನೆಗಳಾಗಲಿ ಅಥವಾ ಜಾಗವಾಗಲಿ ಸಿಗುತ್ತಿಲ್ಲ ಇದರ ಕಡತ ಜಿಲ್ಲಾಧಿಕಾರಿಗಳ ಬಳಿ ಇದ್ದು, ಯಾವುದೇ ಕ್ರಮ ಕೈಕೊಂಡಿರುವುದಿಲ್ಲ, ಈ ಬಗ್ಗೆ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.



ತೊರವಿ ಎಲ್ ಟಿ ನಂಬರ್ 1ರಲ್ಲಿ ನೂರಾರು ವರ್ಷಗಳಿಂದ ವಾಸವಿದ್ದ ಬಂಜಾರ ಸಮುದಾಯದ ಜನತೆಯನ್ನು ಕೆಲವು ಪಟ್ಟಬದ್ಧ ಹಿತಾಸಕ್ತಿಗಳು ಸೇರಿಕೊಂಡು ನಮ್ಮನ್ನು ಆ ಜಾಗದಿಂದ ಖಾಲಿ ಮಾಡಿಸುವ ಹುನ್ನಾರ ಮಾಡುತ್ತಿದ್ದಾರೆ ಇದರ ಬಗ್ಗೆ ಗಮನಿಸಿ ನಮ್ಮ ಜನತೆಗೆ ನ್ಯಾಯ ದೊರಕಿಸಬೇಕೆಂದು ಮನವಿ ಸಲ್ಲಿಸಲಾಯಿತು. ಹಾಗೆಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈಗಾಗಲೇ ಎಲ್ಲ ತಾಂಡಾಗಳನ್ನು ಕಂದಾಯ ಗ್ರಾಮ ಎಂದು ಘೋಷಣೆ ಮಾಡಿದೆ ಆದರೆ ಇನ್ನುವರೆಗೂ ಹಕ್ಕು ಪತ್ರ ನೀಡಿಲ್ಲ ತಾವು ಕ್ರಮ ಕೈಗೊಂಡು ನಮಗೆ ಹಕ್ಕು ಪತ್ರ ದೊರಕಿಸಿಕೊಡಿ ಎಂದರು.

ನಮ್ಮ ಜಿಲ್ಲೆಯಲ್ಲಿ ಲವ್ ಜಿಹಾದ್ ಎಗ್ಗಿಲ್ಲದೆ ನಡೆಯುತ್ತಿದೆ ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿರುವ ಮುಗ್ದ ಬಾಲಕಿಯರನ್ನು ಮನವೊಲಿಸಿ ರಿಜಿಸ್ಟರ್ ಮದುವೆ ಮಾಡಿಕೊಳ್ಳುತ್ತಿರುವುದು ಕಂಡು ಬಂದಿದೆ. ರಿಜಿಸ್ಟರ್ ಮಾಡುವ ಸಂಧರ್ಭದಲ್ಲಿ ಇಬ್ಬರ ಜಾತಿ ಯಾವದೂ ಅಂತ ಪರಿಶೀಲನೆ ಮಾಡದೇ ಅಧಿಕಾರಿಗಳು ನೇರವಾಗಿ ರಿಜಿಸ್ಟರ್ ಮದುವೆ ಮಾಡಿಸಿ ಅನ್ಯಾಯ ಮಾಡುತ್ತಿದ್ದಾರೆ. ಸ್ವ ಜಾತಿಯವರೇ ರಿಜಿಸ್ಟರ್ ಮದುವೆ ಮಾಡಿಕೊಳ್ಳಬೇಕಾದರೆ ನೂರಾರು ಪ್ರಶ್ನೆ ಕೇಳುವ ಅಧಿಕಾರಿಗಳು ಅನ್ಯ ಜಾತಿಯವರು ಬಂದರೇ ಏಕೆ ಪ್ರಶ್ನೆ ಮಾಡುವದಿಲ್ಲ ಎಂದು ಪ್ರಶ್ನಿಸಿದರು. ಗೋಪಾಲ ಮಹಾರಾಜ್, ರಾಜಪಾಲ ಚವ್ಹಾಣ, ಸುರೇಶ ಬಿಜಾಪುರ ಇದ್ದರು.

ಇಂದು ಯಲ್ಲಮ್ಮದೇವಿ ಜಾತ್ರಾ ಮಹೋತ್ಸವ

ಇಂಡಿ: ತಾಲೂಕಿನ ಚಿಕ್ಕಮಣೂರ ಮತ್ತು ಅಫಝುಲಪುರ ತಾಲೂಕಿನ ಹಿರೇಮಣೂರ ಗ್ರಾಮದ ಭೀಮಾ ನದಿ ಮಧ್ಯದಲ್ಲಿರುವ ಯಲ್ಲಮ್ಮದೇವಿ ಜಾತ್ರಾ ಮಹೋತ್ಸವ ಏ.30ರಿಂದ ಜರಗುವವು. ಏ.30ರಂದು ಗುರುವಾರ ಯಲ್ಲಮ್ಮ ದೇವಿಗೆ ಬಾಸಿಂಗ ಮೆರವಣಿಗೆ ವಿವಿಧ ವಾದ್ಯ ವೈಭವಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ರಾತ್ರಿ 9 ಗಂಟೆಗೆ ದೇವಿಯು ಮಂದಿರಕ್ಕೆ ಆಗಮಿಸುವಳು. ರಾತ್ರಿ 10.30ಕ್ಕೆ ಪ್ರೇಮಾ ಅಫಝುಲಪೂರ ಹಾಗೂ ಸಂಗಡಿಗರಿಂದ ಚೌಡಕಿ ಆಟ ಹಾಗೂ ಚೌಡಕಿ ಪದಗಳು ಜರಗುವವು.

ಮೇ 1 ರಂದು ಶುಕ್ರವಾರ ಅಗಿ ಹುಣ್ಣಿಮೆಯಂದು ಬೆಳಗ್ಗೆ 5 ಗಂಟೆಗೆ ಡಾ. ಶಂಬುಲಿಂಗ ಶ್ರೀಗಳಿಂದ ಪಡಸಾವಳಗಿ ಮತ್ತು ಉದಗಿರಮಠ ಇವರಿಂದ ದೇವಿಯ ರುದ್ರಾಭಿಷೇಕ ಜರುಗುವದು. 7 ಗಂಟೆಗೆ ದೇವಿಗೆ ವಸ್ತ್ರಾಭರಣ, 9 ಗಂಟೆಗೆ ದೇವಿಗೆ ನೈವೆದ್ಯ, ಸಂಜೆ 4 ಗಂಟೆಗೆ ದೇವಿಯ ಪಲ್ಲಕ್ಕಿ ಮೆರವಣಿಗೆ ನವಿಲು ಕುಣಿತ ಕರಡಿ ಕುಣಿತ ಕುದರೆ ಕುಣಿತ ಗೊಂಬೆ ಕುಣಿತ ಡೊಳ್ಳಿನ ವಾಲಗ ಸೇರಿದಂತೆ ವಿವಿಧ ವಾದ್ಯ ವೈಭವಗಳೊಂದಿಗೆ ಭೀಮಾ ನದಿಯಲ್ಲಿರುವ ದೇವಿಯ ಮಂದಿರಕ್ಕೆ ತಲುಪುವದು. 5 ಗಂಟೆಗೆ ಬಾಸಿಂಗ ಮೆರವಣೆಗೆ ದೇವಿಯ ಪಲ್ಲಕ್ಕಿ ಸ್ವಾಗತಿಸುವದು 7 ಗಂಟೆಯಿಂದ 9 ರ ವರೆಗೆ ಮದ್ದು ಸುಡುವದು ನಂತರ ಪಲ್ಲಕ್ಕಿ ಮೆರವಣಿಗೆ ಗ್ರಾಮದಲ್ಲಿರುವ ದೇವಿಯ ಮಂದಿರಕ್ಕೆ ಆಗಮಿಸುವದು ಹೊಸ ಪಾದಗಟ್ಟೆ ಹಾಗೂ ಬನ್ನಿ ಮಹಾಕಾಳಿ ದೇವಸ್ಥಾನದ ಹತ್ತಿರ ಕುರಿಗಳ ಭವ್ಯ ಜಾತ್ರೆ ನಡೆಯಲಿದೆ. ಮೇ 2ರಂದು ಬೆಳಗ್ಗೆ 9 ಗಂಟೆಗೆ ವಿದ್ಯಾಶ್ರೀ ಮಸಬಿನಾಳ ಹರದೇಶ ನಾಗೇಶ ಹಾಗೂ ಮುಕ್ತುಮಸಾಬ ಸೊನ್ನಾಳ ಅವರಿಂದ ಗೀಗೀ ಪದಗಳು ಜರುಗುವವು. ಸಂಜೆ 5 ಗಂಟೆಯಿಂದ 7 ಗಂಟೆಯ ವರೆಗೆ ಸುಪ್ರಸಿದ್ಧ ಲ್ಲಾನರಿಂದ ಕುಸ್ತಿಗಳು ನಡೆಯಲಿವೆ. ಜಾನುವಾರು ಜಾತ್ರೆಯಲ್ಲಿ ಉತ್ತಮ ಜಾನುವಾರುಗಳಿಗೆ ಯಲ್ಲಮ್ಮ ದೇವಿ ಟ್ರಸ್ಟ ಕಮಿಟಿ ವತಿಯಿಂದ ಮೇ 5ರಂದು ಬಹುಮಾನ ವಿತರಿಸಲಾಗುವದು. ಭಕ್ತರಿಗೆ ಇಂಡಿಯಿಂದ ನೇರ ಬಸ್ಸಿನ ಸೌಕರ್ಯ ಇರುವುದು ಎಂದು ದೇವಸ್ಥಾನ ಸಮಿತಿಯವರು ತಿಳಿಸಿದ್ದಾರೆ.



ಬಸವನಬಾಗೇವಾಡಿ: ತಾಲೂಕಿನ ಇವಣಗಿ ಗ್ರಾಮದ ಯಮನಪ್ಪ ವಾಲಿಕಾರ ಅವರು 2026ನೇ ಸಾಲಿನ ಪಿಎಸ್‌ಐ ಆಗಿ ತುಮಕೂರು ಗ್ರಾಮಾಂತರ ಠಾಣೆಗೆ ಆಯ್ಕೆಯಾದ ಹಿನ್ನೆಲೆ ಬಸವನಬಾಗೇವಾಡಿ, ಕೊಲ್ಹಾರ ತಾಲೂಕುಗಳ ಮಹರ್ಷಿ ವಾಲ್ಮೀಕಿ ನಾಯಕ ಮಹಾಸಭಾದ ವತಿಯಿಂದ ಸನ್ಮಾನಿಸಲಾಯಿತು. ವಾಲ್ಮೀಕಿ ಮಹಾಸಭಾದ ತಾಲೂಕಾಧ್ಯಕ್ಷ ರವಿ ನಾಯ್ಕೋಡಿ, ಭೀಮಣ್ಣ ದಳವಾಯಿ, ಸಿದ್ದು ಮೇಟಿ, ಪರಸು ಬಡಿಗೇರ, ವಿನಾಯಕ ನಾಯ್ಕೋಡಿ, ಚಂದ್ರಶೇಖರ ಲಿಂಗದಹಳ್ಳಿ ಪರಸು ಬಿರಾದಾರ ಇದ್ದರು.

ಉಚಿತ ಯೋಗ ಶಿಬಿರ

ಬಸವನಬಾಗೇವಾಡಿ: ಉಚಿತ ಯೋಗ ಶಿಬಿರ ಈರಕಾರ ದೇವಾಲಯದಲ್ಲಿ ಪ್ರತಿನಿತ್ಯ ಬೆಳಗ್ಗೆ 5ರಿಂದ 6.30ರ ವರಗೆ ಉಚಿತ ಯೋಗ ಕ್ಲಾಸ್ ನಡೆಯುತ್ತಿದ್ದು, ಪಟ್ಟಣದ ಜನರು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಕಾಶಿನಾಥ ಅವಟಿ ತಿಳಿಸಿದ್ದಾರೆ.

ಕಿರುಸುದ್ದಿ

ದೈಹಿಕ ಆರೋಗ್ಯಕ್ಕೆ ಕ್ರೀಡೆ ಸಹಕಾರಿ: ಗುಳಗಣ್ಣವರ



◆**ಕುಕನೂರ:** ಕ್ರೀಡೆಗಳು ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಉತ್ತಮ ಸಹಕಾರಿಯಾಗಿವೆ ಎಂದು ಕೊಪ್ಪಳ ಜಿಲ್ಲಾ ಬಿಜೆಪಿ ಅಧ್ಯಕ್ಷ ನವೀನ್ ಕುಮಾರ್ ಗುಳಗಣ್ಣವರ ಹೇಳಿದರು. ಅವರು ತಾಲೂಕಿನ ಮಾಳೆಕೊಪ್ಪ ಗ್ರಾಮದಲ್ಲಿ ಜಮಾಂಬಿಕಾ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಎಂಪಿಎಲ್ ಪ್ರೀಮಿಯರ್ ಲೀಗ್ ಫೈನಲ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು. ಆಟದಲ್ಲಿ ಸೋಲು ಗೆಲುವು ಸಹಜ, ಸ್ಪರ್ಧಾಮನೋಭವಾ ಬಹಳ ಮುಖ್ಯ ಎಂದರು. ಸಿದ್ದಣ್ಣ ಜೀವಣ್ಣರ್ವ, ರಮೇಶ್ ತಳವಾರ್, ರುದ್ರಪ್ಪ ತಳರ್ವಾ, ಮಹೇಶ್ ಪತ್ತಾರ್, ಮಂಜು ಬಾರ್ ಕೇರ್ ಉಡಚಪ್ಪ ಚಿದಾನಂದ ಪ್ರಮುಖರು ಪಾಲ್ಗೊಂಡಿದ್ದರು.

ಅಧ್ಯಕ್ಷರಾಗಿ ಡಾ.ಹುಸೇನಪ್ಪ ಅಮರಾಪುರ ನೇಮಕ

◆**ಸಿಂಧನೂರು:** ತಮ್ಮ ಕ್ರಿಯಾಶೀಲತೆಯನ್ನು ಗುರುತಿಸಿ, ದಲಿತ ಸಾಹಿತ್ಯ ಪರಿಷತ್ತು ಗದಗ ರಾಜ್ಯ ಘಟಕದ ರಾಜ್ಯಾಧ್ಯಕ್ಷ ಡಾ.ಅರ್ಜುನ ಗೊಳಸಂಗಿ ಅವರ ಆದೇಶದ ಮೇರೆಗೆ ಕಲಬುರಗಿ ದಸಾಪ ವಿಭಾಗೀಯ ಸಂಯೋಜಕ ಎಚ್.ಎಫ್.ಮಸ್ಕಿ ಅವರು ಸೂಚಿಸಿದಂತೆ ಡಾ.ಹುಸೇನಪ್ಪ ಅಮರಾಪುರ ಅವರನ್ನು ರಾಯಚೂರು ಜಿಲ್ಲಾ ದಸಾಪ ಘಟಕದ ಅಧ್ಯಕ್ಷರೆಂದು ನೇಮಕ ಮಾಡಿದೆ.



ತಮ್ಮ ಅವಧಿ ಮೂರು ವರ್ಷ ಆಗಿರುತ್ತದೆ. ತಮ್ಮನ್ನು ಬದಲಾಯಿಸುವ ಇಲ್ಲವೆ ಮುಂದುವರೆಯಿಸುವ ಹಕ್ಕು ರಾಜ್ಯ ಕಾರ್ಯಕಾರಿ ಸಮಿತಿಗೆ ಇರುತ್ತದೆ. ತಾವು ಸ್ಥಳೀಯವಾಗಿ ಸಭೆ ಕರೆದು, ತಮ್ಮ ಜಿಲ್ಲಾ ಕಾರ್ಯಕಾರಿ ಸಮಿತಿಯನ್ನು ಹಾಗೂ ತಾಲೂಕು ಅಧ್ಯಕ್ಷರನ್ನು ನೇಮಕ ಮಾಡಿಕೊಂಡು ಜಿಲ್ಲಾ ಹಾಗೂ ತಾಲೂಕು ಪದಾಧಿಕಾರಿಗಳ ಪಟ್ಟಿಯನ್ನು ಅನುಮೋದನೆಗಾಗಿ ರಾಜ್ಯ ಸಮಿತಿಗೆ ಕಳುಹಿಸಿ ಕೊಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಿಲಿಂಡರ್ ಕಳುವು

◆**ಕಲಬುರಗಿ:** ನಗರದ ಸ್ವಸ್ತಿಕ್ ನಗರದಲ್ಲಿ ಸೋಮವಾರ ಹಾಡುಹಗಲೇ ಗ್ಯಾಸ್ ತುಂಬಿದ ಎಲ್‌ಪಿಜಿ ಸಿಲಿಂಡರ್ ಕಳ್ಳತನವಾಗಿರುವ ಘಟನೆ ಬೆಳಕಿಗೆ ಬಂದಿದೆ. ಮಲ್ಲಿಕಾರ್ಜುನ ಎಂಬವರ ಮನೆಯ ಆವರಣದಲ್ಲಿದ್ದ ಸಿಲಿಂಡರ್ ಅನ್ನು ಅಪರಿಚಿತ ವ್ಯಕ್ತಿ ಕದ್ದು ಪರಾರಿಯಾಗಿದ್ದಾನೆ. ಬೈಕ್ ಮೇಲೆ ಬಂದಿದ್ದ ಕಳ್ಳನು ಸಿಲಿಂಡರ್ ಕಳುವು ಮಾಡುವ ದೃಶ್ಯ ಮನೆಯ ಸಿಸಿ ಟಿವಿಯಲ್ಲಿ ಸೆರೆಯಾಗಿದೆ. ಈ ಕುರಿತು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಪತ್ತೆಹಚ್ಚಲು ಪೊಲೀಸರು ಮುಂದಾಗಿದ್ದಾರೆ. ಇತ್ತೀಚೆಗೆ ಸಿಲಿಂಡರ್‌ಗಳ ಕಾಳಬಜಾರ್ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆ ಇಂತಹ ಕಳ್ಳತನ ಪ್ರಕರಣಗಳು ಹೆಚ್ಚುತ್ತಿರುವುದಾಗಿ ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ. ಪೊಲೀಸರು ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕೆಂದು ಸೂಚಿಸಿದ್ದಾರೆ.

ರಸ್ತೆ ಅಪಘಾತ

◆**ಕಲಬುರಗಿ:** ಜಿಲ್ಲೆಯ ಅಫಜಲಪುರ ತಾಲೂಕಿನ ಅತನೂರ ಗ್ರಾಮದ ಆರ್‌ಎಂಎಸ್ ಶಾಲೆಯ ಸಮೀಪ ಅಫಜಲಪುರದಿಂದ ಕಲಬುರಗಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ಸೊಂದು ಆಕಸ್ಮಿಕವಾಗಿ ರಸ್ತೆ ಕೆಳಭಾಗಕ್ಕೆ ಇಳಿದ ಪರಿಣಾಮ ಪ್ರಯಾಣಿಕರಲ್ಲಿ ಕೆಲಕಾಲ ಆತಂಕ ಉಂಟಾಯಿತು. ಚಾಲಕ ತನ್ನ ಸಮಯೋಚಿತ ಚಾತುರ್ಯ ಪ್ರದರ್ಶಿಸಿ ಬಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ರಸ್ತೆ ಪಕ್ಕಕ್ಕೆ ಇಳಿಸುವ ಮೂಲಕ ಸಂಭವಿಸಬಹುದಾದ ಭೀಕರ ದುರಂತವನ್ನು ತಪ್ಪಿಸಿದರು. ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಎಲ್ಲರನ್ನು ಅಪಾಯದಿಂದ ಪಾರು ಮಾಡಿದ ಚಾಲಕನ ಧೈರ್ಯಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಾರಿಗೆ ಘಟಕ ವ್ಯವಸ್ಥಾಪಕ ಎ.ವಿ.ಭೋವಿ ಅವರು ಮಾತನಾಡಿ, ಘಟನೆ ನಡೆದ ಸ್ಥಳದಲ್ಲಿ ರಸ್ತೆ ಇಕ್ಕಟ್ಟಾಗಿದ್ದು, ಎದುರಿಗೆ ಬಂದ ವಾಹನದಿಂದ ಅಪಾಯ ಸಂಭವಿಸುವ ಸಾಧ್ಯತೆ ಇದ್ದ ಕಾರಣ ಚಾಲಕ ಮುನ್ನೆಚ್ಚರಿಕೆಯಾಗಿ ಬಸ್ಸನ್ನು ರಸ್ತೆ ಪಕ್ಕಕ್ಕೆ ಇಳಿಸಿದ್ದಾನೆ. ಇದರಿಂದ ಯಾವುದೇ ಅಪಾಯ ಸಂಭವಿಸಿಲ್ಲ, ಸಾರ್ವಜನಿಕರು ಆತಂಕ ಪಡುವ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.



ಕಲಬುರಗಿ: ಜಿಲ್ಲೆಯ ಜೇವರ್ಗಿ ತಾಲೂಕಿನ ಸಿಗರತಹಳ್ಳಿ ಗ್ರಾಮದ ಯಲ್ಲಾಲಿಂಗ ಸಿದ್ದಪ್ಪ ಮತ್ತು ನಾವದಗಿ ಗ್ರಾಮದ ರೇವಣಸಿದ್ದಪ್ಪ ಹಣಮಂತ) ಅವರು ಭಾಲ್ಕಿ ತಾಲೂಕಿನ ನಾವದಗಿ ಗ್ರಾಮದಲ್ಲಿ ಇತ್ತೀಚೆಗೆ ಸಂಭವಿಸಿದ ಸಿಡಿಲು ಬಡಿತ ದುರಂತದಿಂದ ಮರಣ ಹೊಂದಿದ್ದು, ಸಿಗರತಹಳ್ಳಿ ಗ್ರಾಮದ ಮೃತರ ಮನೆಗೆ ಶಾಸಕ ಡಾ.ಅಜಯ್ ಸಿಂಗ್ ಭೇಟಿ ನೀಡಿ ಸಾಂತ್ವನ ಹೇಳಿ, ಸರ್ಕಾರದ ವತಿಯಿಂದ 5 ಲಕ್ಷ ಪರಿಹಾರ ಧನದ ಚೆಕ್ ವಿತರಿಸಿದರು.

ಸಸಿಗಳ ಪೋಷಣೆಗೆ ಮುಂದಾಗಿ

◆**ಕುಷ್ಟಗಿ:** ಗ್ರಾಮೀಣ ಭಾಗದಲ್ಲಿ ಪ್ರತಿಯೊಬ್ಬರೂ ಸಸಿಗಳನ್ನು ಬೆಳೆಸಿ ಪೋಷಿಸಲು ಮುಂದಾಗಬೇಕು ಎಂದು ಹೆಚ್ಚುವರಿ ಸಿವಿಲ್ ನ್ಯಾಯಧೀಶ ಮಹಾಂತೇಶ ಚೌವಳಗಿ ಹೇಳಿದರು.

ತಾಲೂಕಿನ ಗುಡಿ ಕಲಕೇರಿ ಫಾರ್ಮ್ ಹೌಸ್ ನರ್ಸರಿ ಆವರಣದಲ್ಲಿ ನಡೆದ ಅರಣ್ಯ ಇಲಾಖೆ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ವಕೀಲರ ಸಂಘ ನೇತೃತ್ವದಲ್ಲಿ ವಿಶ್ವಭೂಮಿ ದಿನಾಚರಣೆ ನಿಮಿತ್ತ ಕಾನೂನು ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಬುಧವಾರ ಮಾತನಾಡಿದರು.

ನಮ್ಮ ಸುತ್ತಮುತ್ತಲಿನ ಪರಿಸರ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಗಿಡಮರಗಳನ್ನು ಉಳಿಸಿ ಬೆಳೆಸುವ ಕಾರ್ಯವಾಗಲಿ. ಪ್ರತಿಯೊಬ್ಬರೂ ಮಣ್ಣು ಪರೀಕ್ಷೆ ಮೂಲಕ ಜಮೀನಲ್ಲಿ ಉತ್ತಮ ನಾಟಿ ಪಡೆಯಲು ಸಾಧ್ಯ. ಪರಿಸರ ನಾಶದಿಂದ ವಾತಾವರಣ ಗಟ್ಟಿಸಿಕೊಳ್ಳಲು ಸಂಪೂರ್ಣ ವಿಫಲರಾಗುತ್ತಿದ್ದೇವೆ. ಹೆಚ್ಚಿನದಾಗಿ ಸಸಿಗಳನ್ನು ಬೆಳೆಸಲು ಒತ್ತು ನೀಡಬೇಕು ಎಂದು ತಿಳಿಸಿದರು.

ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಶಿವರಾಜ ಮೇಟಿ,ಸಾಮಾಜಿಕ ವಲಯ ಅರಣ್ಯಾಧಿಕಾರಿ ಹನುಮಂತ, ತಾಲೂಕು ವಕೀಲರ ಸಂಘದ ಅಧ್ಯಕ್ಷ ಎಚ್.ಆರ್.ನಾಯಕ್ ಎಪಿಪಿ ಇಂದಿರಾ ಸುಹಾಸಿನಿ ವಲಯ ಅರಣ್ಯ ಇಲಾಖೆ ಸಿಬ್ಬಂದಿ, ನಾಗರಿಕರು ಇದ್ದರು.



ಕುಷ್ಟಗಿ: ತಾಲೂಕಿನ ಗುಡಿ ಕಲಕೇರಿ ಫಾರ್ಮ್ ಹೌಸ್ ನರ್ಸರಿ ಆವರಣದಲ್ಲಿ ನಡೆದ ಅರಣ್ಯ ಇಲಾಖೆ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ವಕೀಲರ ಸಂಘ ನೇತೃತ್ವದಲ್ಲಿ ವಿಶ್ವಭೂಮಿ ದಿನಾಚರಣೆ ನಿಮಿತ್ತ ಕಾನೂನು ಅರಿವು ಕಾರ್ಯಕ್ರಮಕ್ಕೆ ಹೆಚ್ಚುವರಿ ಸಿವಿಲ್ ನ್ಯಾಯಧೀಶ ಮಹಾಂತೇಶ ಚೌವಳಗಿ ಚಾಲನೆ ನೀಡಿದರು. ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಶಿವರಾಜ ಮೇಟಿ,ಸಾಮಾಜಿಕ ವಲಯ ಅರಣ್ಯಾಧಿಕಾರಿ ಹನುಮಂತ, ತಾಲೂಕು ವಕೀಲರ ಸಂಘದ ಅಧ್ಯಕ್ಷ ಎಚ್.ಆರ್.ನಾಯಕ್ ಎಪಿಪಿ ಇಂದಿರಾ ಸುಹಾಸಿನಿ ವಲಯ ಅರಣ್ಯ ಇಲಾಖೆ ಸಿಬ್ಬಂದಿ, ನಾಗರಿಕರು ಇದ್ದರು.

ಭೂಮಾಪನ ಕಾರ್ಯ ಸ್ಥಗಿತ | ನೂರಾರು ರೈತರ ಅರ್ಜಿಗಳು ಬಾಕಿ

ಭೂಮಾಪಕರ ಮುಷ್ಕರ: ಪರದಾಟ

▸**ಶಿವಮೂರ್ತಿ ಇಟಗಿ**

◆**ಯಲಬುರ್ಗಾ:** ಭೂಮಾಪಕರು ಎರಡು ತಿಂಗಳಿಂದ ಮುಷ್ಕರ ನಡೆಸುತ್ತಿರುವುದರಿಂದ ಭೂಮಿ ಸರ್ವೆಯಾಗದೇ ನೂರಾರು ಅರ್ಜಿಗಳು ಬಾಕಿ ಉಳಿದಿವೆ. ಭೂಮಾಪನ ಕಾರ್ಯ ಸ್ಥಗಿತಗೊಂಡಿರುವುದರಿಂದರೈತರು,ಸಾರ್ವಜನಿಕರಿಗೆ ತೀವ್ರ ತೊಂದರೆ ಎದುರಾಗಿದೆ.

ರೈತರು ಸಂಕಷ್ಟಕ್ಕೆ: ಬೇಸಿಗೆ ಅವಧಿಯಲ್ಲಿ ಕೃಷಿ ಚಟುವಟಿಕೆ ಕಡಿಮೆ ಇರುವ ಕಾರಣ, ಭೂಮಾಪನ ಕಾರ್ಯ ನಡೆಸಲು ಸೂಕ್ತ ಸಕಾಲವಾಗಿದೆ. ಆದರೆ ಮುಷ್ಕರದಿಂದಾಗಿ ಸರ್ವೆ ಕಾರ್ಯ ನಡೆಯದೇ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಳೆಗಾಲ ಆರಂಭವಾದ ಬಳಿಕ ಭೂಮಾಪನ ಕಾರ್ಯ ನಡೆಸುವುದು ಕಷ್ಟವಾಗಲಿದೆ ಎಂಬ ಆತಂಕ ರೈತರನ್ನು ಕಾಡುತ್ತಿದೆ.

ಭೂಮಾಪಕರ ಕೊರತೆ: ಯಲಬುರ್ಗಾ ಹಾಗೂ ಕುಕನೂರು ತಾಲೂಕಿನ ಭೂಮಾಪನ ಕಚೇರಿಯಲ್ಲಿ 34 ಜನ ಸಿಬ್ಬಂದಿ ಕಾರ್ಯ ನಿರ್ವಹಿಸಬೇಕು. ಆದರೆ, ಈಗ ಸದ್ಯ 6 ಜನ ಸರ್ಕಾರಿ ಭೂ ಮಾಪಕರು ಸರ್ವೆ ಕಾರ್ಯ ಮಾಡುತ್ತಿದ್ದಾರೆ. ಯಲಬುರ್ಗಾ, ಕುಕನೂರು ಸೇರಿ 28 ಮಂದಿ ಪರವಾನಗಿ ಪಡೆದ ಭೂಮಾಪಕರು ಇದ್ದು, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮುಷ್ಕರ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರಿ ಭೂಮಾಪಕರು ನ್ಯಾಯಾಲಯ ಸಂಬಂಧಿತ ಪ್ರಕರಣಗಳ ಕೆಲಸ, ಮತ್ತೊಬ್ಬರು ಆಕಾರ್ ಬಂದ್ ಕೆಲಸ, ಇನ್ನೊಬ್ಬರು 11ಇ ಸ್ಕೆಚ್ ಹಾಗೂ ಡೇಟಾ ಎಂಟ್ರಿ ಕಾರ್ಯನಿರ್ವಹಿಸುತ್ತಿದ್ದು, ಇದರಿಂದ ಜಮೀನಿಗೆ ತೆರಳಿ ಭೂಮಾಪನ ಮಾಡುವ ಸಿಬ್ಬಂದಿಯೇ ಇಲ್ಲದಂತಾಗಿ ಆಕಾರ ಬಂದ್ ತಾತ್ಕಾಲಿಕ ಪೋಡಿ 11ಇ ನಕ್ಷೆ ಹದ್ದುಬಸ್ತ್ ಪೋಡಿ ಮುಕ್ತ ಗ್ರಾಮ ಅಭಿಯಾನ ಕೋರ್ಟ್ ಪೋಡಿ. ಇತರೆ ಪ್ರಕರಣಗಳು ಸೇರಿದಂತೆ 2469 ಅರ್ಜಿಗಳನ್ನು ಸರ್ವೆ ಮಾಡಲು ಸಲ್ಲಿಕೆಯಾಗಿವೆ. ಸರ್ವೆದಾರರು ಸತತ ಎರಡು ತಿಂಗಳುಗಳಿಂದ ಹೋರಾಟದಲ್ಲಿ ಭಾಗವಹಿಸಿರುವ ಹಿನ್ನೆಲೆಯಲ್ಲಿ ಸರ್ವೆ ಮಾಡದೆ ಹಾಗೆಯೇ ಸರ್ವೆಗಾಗಿ ಬಾಕಿ ಉಳಿದಿವೆ ಎಂದು ಭೂಮಾಪನ ಇಲಾಖೆ ಸಬೂಬ ಇದಾಗಿದೆ.

ಬೇಡಿಕೆ ಈಡೇರಿಸಿ: ರೈತರ ಸಮಸ್ಯೆಗಳನ್ನು ತಕ್ಷಣ ಪರಿಹರಿಸಲು ಸರ್ಕಾರ ಭೂಮಾಪಕರ ಬೇಡಿಕೆಗಳನ್ನು ತಕ್ಷಣ ಈಡೇರಿಸುವ ಮೂಲಕ ಅವರನ್ನು ಕರ್ತವ್ಯಕ್ಕೆ ಹಾಜರಾಗುವಂತೆ ಮನವೊಲಿಸಬೇಕು ಇಲ್ಲವೇ ಪರ್ಯಾಯವ್ಯವಸ್ಥೆ ಕಲ್ಪಿಸಿ ರೈತರ ಹಿತ ಕಾಪಾಡಬೇಕು ಎಂದು ಯಲಬುರ್ಗಾ-ಕುಕನೂರು ತಾಲೂಕಿನ ರೈತರಾದ ವೀರನಗೌಡ ಬನ್ನಪ್ಪಗೌಡ್ರ, ಶರಣಪ್ಪ ಅರಕೇರಿ, ಅಂದಪ್ಪ ಕೋಳೂರು.ಹನಮಗೌಡ ಮಾಲಿಪಾಟೀಲ. ಮಾರುತಿ ಹೆಗಡೆ ಹಾಗೂ ಸಾರ್ವಜನಿಕರು ಆಗ್ರಹಿಸಿದ್ದಾರೆ.



ದಿಗಂತ ವಿಶೇಷ

ಹೋರಾಟದ ಎಚ್ಚರಿಕೆ

ಇದೀಗ ಬೇಸಿಗೆ ಇರುವುದರಿಂದ ಭೂಮಾಪನ ಕಾರ್ಯಕ್ಕೆ ಅನುಕೂಲಕರವಾಗಿದ್ದು, ಸರ್ಕಾರ ಸರ್ವೆಯರ್‌ಗಳ ಬೇಡಿಕೆ ಈಡೇರಿಸಬೇಕು. ಸರ್ವೆ ವಿಳಂಬವಾದಲ್ಲಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಹೋರಾಟ ನಡೆಸಲಾಗುವುದು ಎಂದು ಕೃಷಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಶಂಕ್ರಪ್ಪ ತಳವಾರ ಹಾಗೂ ಜಿಲ್ಲಾ ಕರವೇ ಕಾರ್ಯಾಧ್ಯಕ್ಷ ರಾಜಶೇಖರ ಶ್ಯಾಗೊಟಿ ಎಚ್ಚರಿಸಿದ್ದಾರೆ.

> ಭೂಮಾಪಕರ ನೇಮಕಗೊಳಿಸಬೇಕು. ಪರವಾನಗಿ ಹೊಂದಿದ ಭೂಮಾಪಕರು ಮುಷ್ಕರ ನಡೆಸುತ್ತಿರುವ ಕಾರಣ ಸರ್ವೆ ಕೆಲಸ ಸ್ಥಗಿತವಾಗಿದೆ. ಸಾಕಷ್ಟು ಸಿಬ್ಬಂದಿ ಕೊರತೆಯಿಂದ ಸಮಸ್ಯೆಯಾಗಿದೆ. ಯಲಬುರ್ಗಾ ಮತ್ತು ಕುಕನೂರು ತಾಲೂಕಿಗೆ 6 ಜನ ಸೀಮಿತವಾಗಿದ್ದಾರೆ. ರೈತರ ಜಮೀನು ಸರ್ವೆ ಕಾರ್ಯಕ್ಕೆ ತೊಂದರೆಯಾಗುತ್ತಿದೆ. ಈ ಸಮಸ್ಯೆ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗಿದೆ.
>
> ■ **ಪುಂಡಲೀಕಪ್ಪ ಕುಂಬಾರ, ಅಧಿಕಾರಿ ಭೂಮಾಪನಾ ಇಲಾಖೆ**

ಫುಟ್‌ಪಾತ್ ರಸ್ತೆ ಒತ್ತುವರಿ ತೆರವು

◆**ಗಂಗಾವತಿ:** ನಗರದ ಪ್ರಮುಖ ರಸ್ತೆಗಳಲ್ಲಿ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗಿದ್ದ ಫುಟ್‌ಪಾತ್ ರಸ್ತೆ ಅತಿಕ್ರಮವನ್ನು ನಗರಸಭೆ ಅಧಿಕಾರಿಗಳು ಬುಧವಾರ ಬೆಳಿಗ್ಗೆ ಜೆಸಿಬಿ ಮೂಲಕ ತೆರವುಗೊಳಿಸಿದರು.

ಪೌರಾಯುಕ್ತ ವಿರುಪಾಕ್ಷಮೂರ್ತಿ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯು ಅತಿಕ್ರಮಣ ಮಾಡಿಕೊಂಡಿದ್ದ ವ್ಯಾಪಾರಸ್ಥರಲ್ಲಿ ಆತಂಕ ಮೂಡಿಸಿದೆ. ಈ ಹಿಂದೆಯೇ ನಗರಸಭೆ ವತಿಯಿಂದ ವ್ಯಾಪಾರಸ್ಥರ ಸಭೆ ನಡೆಸಿ, ರಸ್ತೆ ಬದಿ ಹಾಗೂ ಫುಟ್‌ಪಾತ್‌ಗಳನ್ನು ಖಾಲಿ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿತ್ತು. ಆದರೆ, ವ್ಯಾಪಾರಸ್ಥರು ಈ ಸೂಚನೆಯನ್ನು ಗಂಭೀರವಾಗಿ ಪರಿಗಣಿಸದ ಹಿನ್ನೆಲೆಯಲ್ಲಿ ಬುಧವಾರ ನಗರಸಭೆ ನೇರ ಕ್ರಮಕ್ಕೆ ಮುಂದಾಗಿದೆ.

ಜೆಸಿಬಿ ಮೂಲಕ ತೆರವು: ನಗರದ ಪ್ರಮುಖ ವೃತ್ತಗಳು ಸಿಬಿಎಸ್ ವೃತ್ತದಿಂದ ಮಹಾವೀರ ಸರ್ಕಲ್ ಗಾಂಧಿ ಸರ್ಕಲ್ ಗಣೇಶ ಸರ್ಕಲ್ ಜುಲೈ ನಗರ ಮತ್ತು ರಸ್ತೆ ಬದಿಗಳಲ್ಲಿ ಅನಧಿಕೃತವಾಗಿ ಹಾಕಲಾಗಿದ್ದ ಶೆಡ್‌ಗಳು, ಅಂಗಡಿಯ ಮುಂಗಟ್ಟುಗಳು ಹಾಗೂ ಅಡ್ಡಾದಿಡ್ಡಿ ಇಟ್ಟಿದ್ದ ವಸ್ತುಗಳನ್ನು ಜೆಸಿಬಿ ಯಂತ್ರಗಳ ಸಹಾಯದಿಂದ ತೆರವುಗೊಳಿಸಲಾಯಿತು.

ಸಾರ್ವಜನಿಕರ ಸಂಚಾರಕ್ಕೆ ಅನುವು ಫುಟ್‌ಪಾತ್ ಅತಿಕ್ರಮಣದಿಂದಾಗಿ ಪಾದಚಾರಿಗಳು ರಸ್ತೆಯಲ್ಲೇ ನಡೆಯುವಂತಾಗಿತ್ತು. ಇದು ಸಂಚಾರ ದಟ್ಟಣೆಗೆ ಕಾರಣವಾಗಿತ್ತು. ಕಾರ್ಯಾಚರಣೆಯ ನಂತರ ರಸ್ತೆಗಳು ಈಗ ಸುಗಮ ಸಂಚಾರಕ್ಕೆ ಮುಕ್ತವಾಗಿವೆ.

> ನಾವು ಈಗಾಗಲೇ ವ್ಯಾಪಾರಸ್ಥರ ಸಭೆ ನಡೆಸಿ, ಸ್ವಯಂಪ್ರೇರಿತರಾಗಿ ಅತಿಕ್ರಮಣ ತೆರವುಗೊಳಿಸುವಂತೆ ಸೂಚನೆ ನೀಡಲಾಗಿದೆ. ಹಲವರು ಜಾಗ ಖಾಲಿ ಮಾಡಿರಲಿಲ್ಲ. ಸಾರ್ವಜನಿಕ ಹಿತದ ದೃಷ್ಟಿಯಿಂದ ಮತ್ತು ನಗರದ ಸೌಂದರ್ಯಕರಣಕ್ಕಾಗಿ ಈ ತೆರವು ಕಾರ್ಯಾಚರಣೆ ಅನಿವಾರ್ಯವಾಗಿದೆ. ಮುಂದಿನ ದಿನಗಳಲ್ಲೂ ಅತಿಕ್ರಮಣ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.
>
> ■ **ವಿರುಪಾಕ್ಷಿ ಮೂರ್ತಿ, ನಗರಸಭೆ ಪೌರಾಯುಕ್ತ**



ಬಿಜೆಪಿ ನಿಯೋಗದಿಂದ ಡಿಸಿಗೆ ಮನವಿ

◆**ಮಾನ್ವಿ:** ತಾಲೂಕಿನ ವಿವಿಧ ಸಮಸ್ಯೆಗಳ ಕುರಿತು ರಾಯಚೂರಿನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ನಿತೀಶ್ ಕೆ. ಅವರಿಗೆ ಮಾಜಿ ಶಾಸಕ ಗಂಗಾಧರ ನಾಯಕ ನೇತೃತ್ವದಲ್ಲಿ ಬಿಜೆಪಿ ಮಾನ್ವಿ ಮಂಡಲ ನಿಯೋಗ ತೆರಳಿ ಮನವಿ ಸಲ್ಲಿಸಲಾಯಿತು.

ನಂತರ ಮಾಜಿ ಶಾಸಕ ಗಂಗಾಧರ ನಾಯಕ ಮಾತನಾಡಿ, ಸಾರ್ವಜನಿಕರ ಸುಗಾಮ ಸಂಚಾರಕ್ಕೆ ಅನುಕೂಲವಾಗುವಂತೆ ಪಟ್ಟಣದ ಬಸ್ ನಿಲ್ದಾಣದ ಹತ್ತಿರದ ಮುಖ್ಯರಸ್ತೆಯಲ್ಲಿನ ಕಾಯಿಪಲ್ಲೆ, ತಳ್ಳುಬಂಡಿ ವ್ಯಾಪಾರಿಗಳನ್ನು ಸ್ಥಳಾಂತರಿಸಬೇಕು, ಪುರಸಭೆಯಿಂದ ಪಟ್ಟಣಕ್ಕೆ ನೀರು ಪೂರೈಸುವ ಪಂಪಾ ಉದ್ಯಾನವನದಲ್ಲಿರುವ 63 ಕೆ.ವಿ.ಎ ಜನರೇಟರನ್ನು ದುರಸ್ತಿಗೊಳಿಸಬೇಕು. ನೀರಿನ ಟ್ಯಾಂಕ್ ತುಂಬಿಸುವ ಸಮಯದಲ್ಲಿ ನೀರು ಪೋಲಾಗದಂತೆ ಕ್ರಮ ಕೈಗೊಳ್ಳಬೇಕು. ಟ್ಯಾಂಕಿನಿಂದ ವಿವಿಧ ವಾರ್ಡಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ನಿಗದಿತ ಸಮಯವನ್ನು ನಿಗದಿಗೊಳಿಸಿ ನೀರು ಬಿಡಬೇಕು. ಸಾರ್ವಜನಿಕ ಸ್ಥಳಗಳಲ್ಲಿನ ಕಸವನ್ನು ನಿಯಮಿತವಾಗಿ ವಿಲೇವಾರಿಮಾಡ ಬೇಕು. ಚರಂಡಿ ಸ್ವಚ್ಛಗೊಳಿಸಬೇಕು. ಅನಧಿಕೃತಶುದ್ಧ ಕುಡಿಯುವ ನೀರಿನ ಘಟಕಗಳ ಮೇಲೆ ಕ್ರಮ ಕೈಗೊಳ್ಳಬೇಕು. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಬೇಕು. ರಾಜ್ಯ ಹೆದ್ದಾರಿ-23 ಮತ್ತು ರಾಜ್ಯ ಹೆದ್ದಾರಿ ಪಕ್ಕದಲ್ಲಿನ ಮಾಂಸದ ಅಂಗಡಿಗಳನ್ನು, ಬೀದಿ ನಾಯಿಗಳನ್ನು ಸುರಕ್ಷಿತವಾಗಿ ಸ್ಥಳಾಂತರಿಸಬೇಕು. ಬೀದಿ ದೀಪಗಳನ್ನು ಸರಿಪಡಿಸಬೇಕು. ಘನತ್ಯಾಜ್ಯ ವಿಲೇವಾರಿ ಘಟಕ ಕಳಪೆಯಾಗಿ ನಿರ್ಮಿಸಲಾಗಿದು ಸೂಕ್ತ ತನಿಖೆಯನ್ನು ನಡೆಸಬೇಕು ಒತ್ತಾಯಿಸಿದರು.

ರೈತ ಮೋರ್ಚಾ ಅಧ್ಯಕ್ಷರಾದ ದೊರಬಾಬು, ಜಿಲ್ಲಾ ಭಾರತೀಯ ಜನತಾ ಪಾರ್ಟಿ ಉಪಾಧ್ಯಕ್ಷರಾದ ಶರಣಪ್ಪ ಗೌಡ ನಕ್ಕುಂದಿ , ಮಾಜಿ ಮಂಡಲ ಅಧ್ಯಕ್ಷ ಜೆ. ಸುಧಾಕರ್, ಟಿಪಿಸಿಎಂಎಸ್ ಅಧ್ಯಕ್ಷ ತಿಮ್ಮಾರೆಡ್ಡಿ ಭೋಗಾವತಿ, ವಿಶ್ವನಾಥ್ ನಂದ್ಯಾಳ ಎಂಶ್ರೀನಿವಾಸ್, ರವಿಕುಮಾರ್ ಸಾಹುಕಾರ, ಜಿ.ಉಮಾಪತಿನಾಯಕ್, ಶಿವಕುಮಾರ್, ಶರಣಯ್ಯ ಸ್ವಾಮಿ, ಜಗದೀಶ್ ಒತ್ತೂರು, ಚನ್ನಬಸವ ಜಾನೇಕಲ್, ಶಿವಕುಮಾರ, ವೀರೇಶಯಾದವ್, ಬಸವ ಪ್ರಭು ಪಾಟೀಲ, ವೀರನಗೌಡ ವಕೀಲರು, ಗೋಪಾಲ ಇಭ್ರಮಾಪುರ್ ಇತರರಿದ್ದರು.



ಜೆಡಿಎಸ್ ಸಮಾವೇಶ: ಇಂದು ಸೇಡಂ ಕ್ಷೇತ್ರಕ್ಕೆ ನಿಖಿಲ್ ಕುಮಾರಸ್ವಾಮಿ ಭೇಟಿ

◆**ಕಲಬುರಗಿ:** ಜನರೊಂದಿಗೆ ಜೆಡಿಎಸ್ ಸಮಾವೇಶದಲ್ಲಿ ಭಾಗಿಯಾಗಲು ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಏ.30 ಕಲಬುರಗಿ ಜಿಲ್ಲೆಯ ಸೇಡಂ ಮತಕ್ಷೇತ್ರಕ್ಕೆ ಆಗಮಿಸಲಿದ್ದಾರೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಬಾಲರಾಜ್ ಗುತ್ತೇದಾರ್ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಹೈದ್ರಾಬಾದ್ ಮುಖಾಂತರ ಮಧ್ಯಾಹ್ನ 3 ಗಂಟೆಗೆ ರಿಬ್ಬನಪಲ್ಲಿ ಗ್ರಾಮಕ್ಕೆ ತಲುಪಲಿರುವ ಅವರನ್ನು ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಭವ್ಯವಾಗಿ ಸ್ವಾಗತಿಸಲಿದ್ದಾರೆ.ಜಿಪಂ ಮಾಜಿ ಅಧ್ಯಕ್ಷ ಕೃಷ್ಣಾರೆಡ್ಡಿ, ಆಲೋಡ ಹಣಮಂತಪ್ಪ, ಸೂರಜ್ ನಾಯಕ ಸೋನಿ, ಶಾಸಕರಾದ ಶರಣಗೌಡ ಕಂದಕೂರು, ಕರಿಯಮ್ಮ ನಾಯಕ, ವೆಂಕಟಪ್ಪ ನಾಯಕ, ಸಿ.ವಿ.ಚಂದ್ರಶೇಖರ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ವಿವಿಧ ಜಿಲ್ಲಾಧ್ಯಕ್ಷರು ಭಾಗವಹಿಸಲಿದ್ದಾರೆ ಎಂದರು. ಮಧ್ಯಾಹ್ನ 4 ಗಂಟೆಗೆ ಜೆಡಿಎಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಯಲಿದ್ದು, ನಂತರ ಕೊತ್ತಲ ಬಸವೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆಯಲಿದ್ದಾರೆ.ಬಳಿಕ ತೆರೆದ ವಾಹನದಲ್ಲಿ ಕಾರ್ಯಕರ್ತರೊಂದಿಗೆ ಮೆರವಣಿಗೆಯಾಗಿ ಕ್ರೀಡಾಂಗಣದವರೆಗೆ ತೆರಳುವ ಕಾರ್ಯಕ್ರಮ ಇದೆ. ಸಂಜೆ 5.30 ಗಂಟೆಗೆ ಸಾವಿರಾರು ಜನರನ್ನು ಉದ್ದೇಶಿಸಿ ಜನರೊಂದಿಗೆ ಜನತಾದಳ ಕಾರ್ಯಕ್ರಮ ಹಾಗೂ ಬೆಳ್ಳಿಹಬ್ಬ ಸಮಾರಂಭದಲ್ಲಿ ನಿಖಿಲ್ ಕುಮಾರಸ್ವಾಮಿ ಮಾತನಾಡಲಿದ್ದಾರೆ ಎಂದರು. ಸಮಾವೇಶದ ಯಶಸ್ಸಿಗಾಗಿ ಪಕ್ಷದ ವತಿಯಿಂದ ಈಗಾಗಲೇ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ಈ ಸಮಾವೇಶವು ಸೇಡಂ ಕ್ಷೇತ್ರದಲ್ಲಿ ಪಕ್ಷವನ್ನು ಬಲಪಡಿಸುವುದರ ಜೊತೆಗೆ ಮುಂದಿನ ದಿನಗಳಲ್ಲಿ ಹೊಸ ಚೈತನ್ಯ ತುಂಬಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ. ಪಕ್ಷದ ಮುಖಂಡರಾದ ಶಿವಕುಮಾರ್ ನಾಟೀಕರ್,ಬಸವರಾಜ ಬಿರಬಿಟ್ಟಿ, ರಾಮಚಂದ್ರ ಅಟ್ಟೂರು, ಪ್ರವೀಣ್ ಜಾಧವ್, ರಾಜಕುಮಾರ್ ಬಡದಾಳ, ಶಂಕರಗೌಡ ಪಾಟೀಲ್, ರಿಜ್ವಾನ್ ಅಹ್ಮದ್, ಬೈಲಪ್ಪ ಪಟ್ಟೇದಾರ ಇತರರಿದ್ದರು.



ಅಗಳಕೇರಾದಲ್ಲಿ ಅನ್ನಭಾಗ್ಯ ಅಕ್ಕಿ ವಶ

◆**ಮುನಿರಾಬಾದ್:** ಅಕ್ರಮ ಅಕ್ಕಿ ದಂಧೆ ಎಗ್ಗಿಲ್ಲದೆ ಸಾಗಿದ್ದು, ತಾಲೂಕಿನ ಅಗಳಕೇರಾ ಗ್ರಾಮದಲ್ಲಿ ಮುನಿರಾಬಾದ್ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ಅಪಾರ ಪ್ರಮಾಣದ ಅನ್ನಭಾಗ್ಯ ಅಕ್ಕಿ ಮೂಟೆಗಳನ್ನು ವಶಪಡಿಸಿಕೊಂಡಿದ್ದಾರೆ. ಗ್ರಾಮೀಣ ಭಾಗದ ಜನರಿಂದ ಸುಮಾರು 50 ರಿಂದ 60 ಚೀಲ ಅಕ್ಕಿ ಕಡಿಮೆ ದರಕ್ಕೆ ಅನ್ನಭಾಗ್ಯ ಅಕ್ಕಿಯನ್ನು ಸಂಗ್ರಹಿಸಿಡಲಾಗಿದೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು, ಅಗಳಕೇರಾ ಗ್ರಾಮದ ಮರಿಯಪ್ಪ ಎಂಬುವವರು ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಸುಮಾರು 50ಕ್ಕೂ ಹೆಚ್ಚು ಅಕ್ಕಿ ಮೂಟೆಗಳನ್ನು ಜಪ್ತಿ ಮಾಡಿದ್ದಾರೆ. ಮುನಿರಾಬಾದ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಕಾರ್ಯಾಚರಣೆ ನಡೆದಿದ್ದು, ಅಕ್ಕಿ ದಾಸ್ತಾನು ಮಾಡಿದ್ದ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಕಳೆದ ಕೇವಲ ಒಂದು ವಾರದ ಅವಧಿಯಲ್ಲಿ ತಾಲೂಕಿನಾದ್ಯಂತ ಇದು ಮೂರನೇ ಅಕ್ರಮ ಅಕ್ಕಿ ಪತ್ತೆ ಪ್ರಕರಣವಾಗಿದೆ. ಈ ಮೊದಲು ಕೂಕನಪಳ್ಳಿ ಹಾಗೂ ದದೇಗಲ್ ಗ್ರಾಮಗಳಲ್ಲಿಯೂ ಸಹ ದೊಡ್ಡ ಪ್ರಮಾಣದ ಅನ್ನಭಾಗ್ಯ ಅಕ್ಕಿಯನ್ನು ವಶಪಡಿಸಿಕೊಳ್ಳಲಾಗಿತ್ತು. ಜಿಲ್ಲೆಯಾದ್ಯಂತ ಬಡವರಿಗಾಗಿ ವಿತರಿಸುವ ಅಕ್ಕಿ ದುರ್ಬಳಕೆಯಾಗುತ್ತಿರುವುದು ಈ ಸರಣಿ ಪತ್ತೆ ಪ್ರಕರಣಗಳಿಂದ ಸಾಬೀತಾಗಿದ್ದು, ಪೊಲೀಸರು ಹಾಗೂ ಆಹಾರ ಇಲಾಖೆ ಅಧಿಕಾರಿಗಳು ಜಾಲದ ಮೂಲವನ್ನು ಪತ್ತೆ ಹಚ್ಚಲು ತನಿಖೆ ಚುರುಕುಗೊಳಿಸಿದ್ದಾರೆ.

ಬಡ ಜನರಿಗೆ ಸೇರಬೇಕಾದ ಅನ್ನಭಾಗ್ಯ ಅಕ್ಕಿಯನ್ನು ಖಚಿತ ಮಾಹಿತಿ ಮೇರೆಗೆ ಪಡಿತರ ಚೀಟಿ ಅಕ್ಕಿಯನ್ನು ಸುಮಾರು ಒಂದು 50 ಚೀಲ ಅಕ್ಕಿಯನ್ನು ವಶಪಡಿಸಿಕೊಂಡಿದ್ದು, ಅಕ್ರಮ ಅನ್ನಭಾಗ್ಯ ಅಕ್ಕಿಯನ್ನು ಯಾರಾದರೂ ಸಂಗ್ರಹಿಸಿದಾರೆ ನಿರ್ಧಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಆಹಾರ ಇಲಾಖೆ ನಿರೀಕ್ಷಕ ರವಿಚಂದ್ರ ಹಳೆಗೌಡ್ರು ಹೇಳಿದರು.



ರಾಷ್ಟ್ರೀಯ ಹಸ್ತಪ್ರತಿ ಸಮೀಕ್ಷೆ: ಸಮನ್ವಯತೆ ಇರಲಿ

◆**ಕೊಪ್ಪಳ:** ರಾಷ್ಟ್ರೀಯ ಹಸ್ತಪ್ರತಿ ಸಮೀಕ್ಷೆ ಮಾರ್ಚ್ ನಲ್ಲಿ ಆರಂಭವಾಗಿದ್ದು, ಮೇ 2026 ರವರೆಗೆ ನಡೆಯಲಿದೆ. ಸಮೀಕ್ಷೆ ಸಮರ್ಪಕ ಜಾರಿಗೆ ಸಂಬಂಧಿಸಿದ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಸಲಹೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ಹಸ್ತಪ್ರತಿ ಸಮೀಕ್ಷೆ ಕುರಿತ ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಜ್ಞಾನ ಭಾರತಂ ಮಿಷನ್ ಯೋಜನೆಯಡಿ ದೇಶದಾದ್ಯಂತ ಲಭ್ಯವಿರುವ ಶತಮಾನಗಳಷ್ಟು ಹಳೆಯ ಕೈಬರಹದ ಪತ್ರ, ಹಸ್ತಪ್ರತಿ ಹಾಗೂ ಐತಿಹಾಸಿಕ ದಾಖಲೆ ಸಂರಕ್ಷಿಸಿ ಡಿಜಿಟಲೀಕರಣ ಮಾಡುವ ಮಹತ್ತರ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಶಾಶ್ವತವಾಗಿ ಉಳಿಸುವುದರ ಜೊತೆಗೆ ಸಾರ್ವಜನಿಕರಿಗೆ ಒಂದೇ ರಾಷ್ಟ್ರೀಯ ವೇದಿಕೆ ಮೂಲಕ ಪ್ರವೇಶ ಕಲ್ಪಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಈ ಯೋಜನೆಯಡಿ ಹಸ್ತಪ್ರತಿ ಸಮೀಕ್ಷೆ, ಸಂರಕ್ಷಣೆ, ರಕ್ಷಣೆ, ಡಿಜಿಟಲೀಕರಣ, ನೋಂದಣಿ, ವಿಮರ್ಶಾತ್ಮಕ ಸಂಪಾದನೆ ಮತ್ತು ಪ್ರಕಟಣೆ ಕಾರ್ಯ ಕೈಗೊಳ್ಳಲಾಗುತ್ತದೆ. ಕೇಂದ್ರ ಸರ್ಕಾರ ಅಭಿವೃದ್ಧಿಪಡಿಸಿರುವ ಮೊಬೈಲ್ ಅಪ್ಲಿಕೇಷನ್ ಮೂಲಕ ದೇಶಾದ್ಯಂತ ಹಸ್ತಪ್ರತಿ ಮಾಹಿತಿ ಅಪ್‌ಲೋಡ್ ಮಾಡಿ, ರಾಷ್ಟ್ರೀಯ ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಹಂಚಿಕೊಳ್ಳುವ ಯೋಜನೆ ರೂಪಿಸಲಾಗಿದೆ ಎಂದು ಮಾಹಿತಿ ನೀಡಿದರು.



ಕೇಂದ್ರ ಸಂಸ್ಕೃತಿ ಮಂತ್ರಾಲಯದ ಮಾರ್ಗದರ್ಶನದಂತೆ, ಜಿಲ್ಲಾ ಮಟ್ಟದಲ್ಲಿ ಹಸ್ತಪ್ರತಿಗಳ ಸಮೀಕ್ಷೆ ಕಾರ್ಯಕ್ಕೆ ಹೆಚ್ಚಿನ ಪ್ರಚಾರ ಮತ್ತು ಜಾಗೃತಿ ಮೂಡಿಸಲು ಸೂಚನೆ ನೀಡಲಾಗಿದೆ. ಸಮೀಕ್ಷೆ ಯಶಸ್ವಿಗೊಳಿಸಲು ಎಲ್ಲ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ಅದರಂತೆ ಜಿಲ್ಲೆಯಲ್ಲಿನ ಹಸ್ತಪ್ರತಿಗಳ ಸಂಗ್ರಹಣೆಗೆ ಸಂಬಂಧಿಸಿದ ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸಿ ಎಂದು ಹೇಳಿದರು.

ಜಿಪಂ ಸಿಇಒ ವರ್ಣಿತ್ ನೇಗಿ, ಎಡಿಸಿ ಸಿದ್ರಾಮೇಶ್ವರ, ಪುರಾತತ್ವ ಇಲಾಖೆ ಉಪ ನಿರ್ದೇಶಕ ಶ್ರೀಜೇಶ್ವರ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ನಾಗರಾಜ, ಆನೆಗೊಂದಿಯ ರಾಜ ವಂಶಸ್ಥ ಶ್ರೀಕೃಷ್ಣ ದೇವರಾಯ, ವಿದ್ವಾನ್ ಶಿವರಾಮ ಕೃಷ್ಣಾನಂದ ಸ್ವಾಮೀಜಿ, ವಿದ್ವಾನ್ ಪ್ರಾಣೇಶಾಚಾರ, ಕೊಪ್ಪಳ ಕ್ಲಸ್ಟರ್ ಕೇಂದ್ರದ ಸಂಯೋಜಕ ಪ್ರಮೋದ್ ಆಚಾರ್ಯ ಪೂಜಾರ್, ಇತಿಹಾಸ ಸಂಶೋಧಕರಾದ ಡಾ.ಶರಣಬಸಪ್ಪ ಕೋಲ್ಕಾರ್, ಡಾ.ರವಿ ಚೌವ್ಹಾಣ, ಡಾ.ಸಿದ್ದಲಿಂಗಪ್ಪ ಕೊಟ್ನೆಕಲ್, ಡಾ.ಗೀತಾ ಪಾಟೀಲ್ ಸೇರಿ ಇತರರು ಇದ್ದರು.

ಬೊಜ್ಜಿರುವ ಪೊಲೀಸ್ ಸಿಬ್ಬಂದಿಗೆ ಯೋಗ ಕಡ್ಡಾಯ: ಎಸ್‌ಪಿ

◆**ವಿಜಯನಗರ:** ಪತಂಜಲಿ ಯೋಗ ಸಮಿತಿಯ ಸಹಯೋಗದಲ್ಲಿ ಇಲ್ಲಿ ಪೊಲೀಸ್ ಸಿಬ್ಬಂದಿಗೆ ನೀಡಲಾದ 15 ದಿನಗಳ ವಿಶೇಷ ಯೋಗ ಶಿಬಿರ ಯಶಸ್ವಿಯಾಗಿದೆ. ಇನ್ನು ಮುಂದೆ ಬೊಜ್ಜು ಇರುವ ಸಿಬ್ಬಂದಿ ಯೋಗ ಮಾಡುವುದನ್ನು ಕಡ್ಡಾಯಗೊಳಿಸಲಾಗುವುದು ಎಂದು ಎಸ್ಪಿ ಎಸ್. ಜಾಹ್ನವಿ ಹೇಳಿದರು.

ಇಲ್ಲಿನ ಪೊಲೀಸ್ ಕವಾಯತು ಮೈದಾನದಲ್ಲಿ ಪತಂಜಲಿ ಯೋಗ ಸಮಿತಿಯ ಸಹಯೋಗದಲ್ಲಿ 15 ದಿನಗಳ ಕಾಲ ನಡೆದ ವಿಶೇಷ ಯೋಗ ಶಿಬಿರದ ಸಮಾರೋಪದಲ್ಲಿ ಬುಧವಾರ ಮಾತನಾಡಿದ ಅವರು, ಬಿಎಂಐ ಯಂತ್ರದ ಮೂಲಕ ಬೊಜ್ಜು ಪರೀಕ್ಷೆ ಮಾಡುವ ಪ್ರಕ್ರಿಯೆ ಶೀಘ್ರ ಆರಂಭವಾಗಲಿದೆ, ಇದರ ಜತೆಗೆ ಬೊಜ್ಜು ಇರುವವರು ಯೋಗವನ್ನು ಕಡ್ಡಾಯವಾಗಿ ಮಾಡಲು ಸೂಚಿಸಲಾಗುವುದು ಎಂದರು.

ಸದ್ಯ ಹೊಸಪೇಟೆ ಉಪವಿಭಾಗದ ಪೊಲೀಸ್ ಸಿಬ್ಬಂದಿಗೆ ಯೋಗ ತರಬೇತಿ ನೀಡಲಾಗಿದೆ. ಕೂಡ್ಲಿಗಿ, ಹರಪನಹಳ್ಳಿ ಉಪವಿಭಾಗದ ಸಿಬ್ಬಂದಿಗೆ ಸಹ ಶೀಘ್ರದಲ್ಲೇ ಇಂತಹದೇ ವಿಶೇಷ ಯೋಗ ಶಿಬಿರ ಹಮ್ಮಿಕೊಳ್ಳಲಾಗುವುದು. ಇದೀಗ ಪಾಲ್ಗೊಳ್ಳದವರಿಗೂ ಯೋಗ ತರಬೇತಿ ಶಿಬಿರ ನಡೆಯಲಿದೆ ಎಂದು ಹೇಳಿದರು.

ಪತಂಜಲಿ ಯೋಗ ಸಮಿತಿಯ ರಾಜ್ಯ ಪ್ರಭಾರಿ ಹಾಗೂ ದಕ್ಷಿಣ ಭಾರತದ ಪ್ರಮುಖ ಯೋಗ ಶಿಕ್ಷಕ ಭವರ್‌ಲಾಲ್ ಆರ್ಯ ಮಾತನಾಡಿ, ಯೋಗದ ಜತೆಗೆ ಸಾತ್ವಿಕ ಆಹಾರವೂ ಮುಖ್ಯ. ಸರಿಯಾದ ಸಮಯಕ್ಕೆ ಆಹಾರ ಸೇವಿಸುವುದನ್ನು ಕರ್ತವ್ಯದಲ್ಲಿ ಇರುವ ಸಿಬ್ಬಂದಿ ಸಹ ರೂಢಿಸಿಕೊಳ್ಳಬೇಕು ಎಂದರು.

ನೀವು ಸಮಾಜಘಾತುಕರು, ಕ್ರಿಮಿನಲ್‌ಗಳನ್ನು ವಿಚಾರಿಸುತ್ತಲೇ ಇರುತ್ತೀರಿ. ಯೋಗದ ಬಗ್ಗೆಯೂ ಅವರಿಗೆ ತಿಳಿವಳಿಕೆ ನೀಡಿ ಮತ್ತು ಅವರೂ ನಿತ್ಯ ಯೋಗ ಮಾಡಲು ಪ್ರೇರೇಪಿಸಿ. ಇದರಿಂದ ಖಂಡಿತ ಅಪರಾಧ ಕೃತ್ಯಗಳೂ ಕಡಿಮೆಯಾಗಲು ಸಾಧ್ಯವಿದೆ ಎಂದು ಭವರ್‌ಲಾಲ್ ಆರ್ಯ ಹೇಳಿದರು.

ಇದೇ ವೇಳೆ 15 ದಿನ ಯೋಗ ಶಿಬಿರ ನಡೆಸಿಕೊಟ್ಟ ಯೋಗ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಎಎಸ್‌ಪಿ ಜಿ.ಮಂಜುನಾಥ್, ಪತಂಜಲಿ ಯೋಗ ಶಿಬಿರದ ರೂವಾರಿ ಅನಂತ ಜೋಶಿ, ಪತಂಜಲಿ ಯೋಗ ಸಮಿತಿಯ ರಾಜ್ಯ ಸದಸ್ಯ ಬಾಲಚಂದ್ರ ಶರ್ಮಾ, ಜಿಲ್ಲಾ ಪ್ರಭಾರಿ ಪ್ರೊ.ಎಫ್.ಟಿ.ಹಳ್ಳಿಕೇರಿ, ಬಳ್ಳಾರಿ ಜಿಲ್ಲಾ ಪ್ರಭಾರಿ ರಾಜೇಶ್ ಕರ್ವಾ, ಯೋಗ ಸಾಧಕರಾದ ಕೃಷ್ಣ ನಾಯ್ಕ್, ಪೂಜಾ ಎಲಿ, ಅಶೋಕ್ ಚಿತ್ರಗಾರ್, ರಾಜಭಕ್ಷಿ, ಕವಿತಾ ಭಾಸ್ಕರ್, ಶ್ರೀರಾಮ್, ಚಂದ್ರಿಕಾ ಶ್ರೀರಾಮ್, ವಿಠೋಬಣ್ಣ, ಚಂದ್ರಿಕಾ ಶ್ರೀರಾಮು, ಕವಿತಾ ಭಾಸ್ಕರ, ಸುಜಾತಾ ಕರ್ಣ, ರಾಮು, ಯರಿಯಪ್ಪ, ಕರಿಬಸವರಾಜ, ರಾಮಚಂದ್ರ ಕಂಬದ, ಕಾರ್ಯಕ್ರಮದ ಸಂಯೋಜಕ ಆರ್‌ಪಿಐ ಇನ್‌ಸ್ಪೆಕ್ಟರ್ ಗೋವಿಂದಪ್ಪ ಪಾಲ್ಗೊಂಡಿದ್ದರು.



ಕಿರುಸುದ್ದಿ

ಆರೋಗ್ಯ ಕಾಪಾಡಿಕೊಳ್ಳಿ: ಡಾ.ನಾಗಭೂಷಣ



◆**ಹೂವಿನಹಡಗಲಿ:** ತಾಲೂಕಿನ ಮಾನ್ಯರಮಸಲವಾಡದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಬೆಂಗಳೂರು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೂವಿನಹಡಗಲಿ ಹಾಗೂ ದೇವದಾಸಿ ಪುನರ್ವಸತಿ ಇಲಾಖೆ ವಿಜಯನಗರ ಸಂಯುಕ್ತ ಆಶ್ರಯದಲ್ಲಿ ಮಾಜಿ ದೇವದಾಸಿ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಿಬಿರದಲ್ಲಿ ವೈದ್ಯಾಧಿಕಾರಿ ಡಾ.ನಾಗಭೂಷಣ್ ಮಾತನಾಡಿ, ಎಲ್ಲ ದೇವದಾಸಿ ಮಹಿಳೆಯರು ನಿಮ್ಮ ಆರೋಗ್ಯದ ಬಗ್ಗೆ ಗಮನ ಹರಿಸಿ ಹಾಗೂ ನಿಮ್ಮ ಸ್ವಂಚತ ಬಹಳ ಮುಖ್ಯ. ಹಾಗೆಯೆ ಸರ್ಕಾರ ನಿಮ್ಮಂತಹ ಮಹಿಳೆಯರನ್ನು ಗುರುತಿಸಿ ಅನೇಕ ರೀತಿಯ ಸಹಾಯ ಸೌಲಭ್ಯಗಳನ್ನು ಒದಗಿಸುತ್ತಿದ್ದು ಇದರ ಸದುಪಯೋಗ ಪಡೆದುಕೊಂಡು ನಿಮ್ಮ ನಿಮ್ಮ ಮಕ್ಕಳನ್ನು ಉತ್ತಮ ವಿದ್ಯಾಭ್ಯಾಸ ಮಾಡಿಸುವುದು ಒಳ್ಳೆಯದು ಹಾಗೆಯೇ ದೇವದಾಸಿ ಪದ್ಧತಿ ಇದೊಂದು ಅನಿಷ್ಟ ಪದ್ಧತಿ ಇದನ್ನು ಇಲ್ಲಿಗೆ ಮೊಟಕುಗೊಳಿಸಿ. ನಿಮ್ಮ ಮಕ್ಕಳ ಭವಿಷ್ಯ ರೂಪಿಸುವಂತೆ ಸಲಹೆ ನೀಡಿದರು. ಶಿಬಿರದ ಮುಖ್ಯ ಅತಿಥಿಗಳಾಗಿ ದೇವದಾಸಿ ಪುನರ್ವಸತಿ ಅನುಷ್ಠಾನದೀಕಾರಿ ಹಾಲನಗೌಡ, ಎಲ್ ಟಿಹಿ. ಎ.ಮಧುಕೇಶ್ವರ್, ಸಿಬ್ಬಂದಿಗಳಾದ ಲಕ್ಷ್ಮೀ, ರೇಖಾ,ಮಧುಲಾಲ್ ಸಿಂಗ್ ನಾಯ್ಕ, ನವೀನ್ ಕುಮಾರ್, ಹಲಗಿ ಸುರೇಶ ಇತರರು ಉಪಸ್ಥಿತರಿದ್ದರು. ಮಾಜಿ ದೇವದಾಸಿ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ ಮಾಡಲಾಯಿತು. ಯಾವುದೇ ಮಹಿಳೆಯರಲ್ಲಿ ಯಾವುದೇ ನ್ಯೂನ್ಯತೆಗಳು ಕಂಡು ಬಂದಿರುವುದಿಲ್ಲ ಎಂದು ಸಿಬ್ಬಂದಿ ಸಮಿರಾ ಮಾಹಿತಿ ನೀಡಿದರು.

ಅಧ್ಯಕ್ಷರಾಗಿ ಮೈತ್ರಿ ಪಲ್ಲೇದ ಅವಿರೋಧ ಆಯ್ಕೆ



◆**ಬಳ್ಳಾರಿ:** ಬಳ್ಳಾರಿ ಜನತಾ ಬಜಾರ್ (ಬಳ್ಳಾರಿ ಕೇಂದ್ರ ಸಹಕಾರ ಸಗಟು ಮಾರಾಟ ಸಂಘ)ನ ನೂತನ ಅಧ್ಯಕ್ಷರಾಗಿ ಮೈತ್ರಿ ಪಲ್ಲೇದ ಅವರು ಅವಿರೋಧವಾಗಿ ಆಯ್ಕೆಯಾದರು. ಈ ಹಿಂದಿನ ಅಧ್ಯಕ್ಷರಾಗಿದ್ದ ಕೆ.ಎ.ವೇಮಣ್ಣ ಅವರು ರಾಜೀನಾಮೆ ನೀಡಿದ್ದ ಹಿನ್ನೆಲೆ, ತೆರವಾದ ಸ್ಥಾನಕ್ಕೆ ನೂತನ ಅಧ್ಯಕ್ಷರ ಆಯ್ಕೆಗಾಗಿ ಬುಧವಾರ ಚುನಾವಣೆ ನಡೆದಿದ್ದು, ನೂತನ ಅಧ್ಯಕ್ಷರ ಅವಿರೋಧ ಆಯ್ಕೆ ಕುರಿತು ಚುನಾವಣೆ ಅಧಿಕಾರಿ ಘೋಷಿಸಿದರು. ಪಲ್ಲೇದ ಮೈತ್ರಿ ಅವರ ನಾಮಪತ್ರಕ್ಕೆ ಜಿ.ನೀಲಕಂಠಪ್ಪ ಮತ್ತು ನಸೀಮಾಬೇಗಂ ಅವರು ಸೂಚಕರಾಗಿ-ಅನುಮೋದಕರಾಗಿ ಸಹಿ ಮಾಡಿದ್ದರು.

ನಿರ್ದೇಶಕ ಕೆ.ಎ.ವೇವಣ್ಣ, ಉಪಾಧ್ಯಕ್ಷ ಎಸ್. ಮುಜಾಹಿದ್ ಅಲಿ, ನಿರ್ದೇಶಕರಾದ ವೆಂಕಟೇಶ್ ಹೆಗಡೆ, ನಸೀಮಾಬೇಗಂ, ಪಿ. ದಾನರೆಡ್ಡಿ, ವಿ. ಪ್ರದೀಪರೆಡ್ಡಿ, ಕೆ.ಭರಮರೆಡ್ಡಿ, ಹಲಕುಂದಿ ವಿಜಯಕುಮಾರ್, ಕೆ.ಎಂ ಕೇದಾರನಾಥ, ಜಿ.ನೀಲಕಂಠಪ್ಪ, ಕೋರಿ ಚನ್ನಬಸಪ್ಪ (ಪುಟ್ಟ), ಎಂ.ನರೇಶಕುಮಾರ್, ಕೆ.ವೆಂಕಟಸ್ವಾಮಿ, ಕಾತ್ಯಾಯಿನಿ ಮರಿದೇವಯ್ಯ ಪರಿಣಿತ ಸದಸ್ಯರಾರ ಪತ್ರಕರ್ತ ಎಚ್.ಎಂ.ಮಹೇಂದ್ರ ಕುಮಾರ್, ವೀರಶೈವ ತರುಣ ಸಂಘದ ಅಧ್ಯಕ್ಷರಾದ ನಂದೀಶ್ ಮಠಂ, ಮಾಜಿ ಉಪಾಧ್ಯಕ್ಷರಾದ ಇಬ್ರಾಹಿಂ ಬಾಬು, ಜಾನೆಕುಂಟೆ ಬಸವರಾಜ್ (ಕುಮ್ಮಿ), ಪಲ್ಲೇದ ಪ್ರಭುಲಿಂಗ, ಕೋರಿ ವಿರುಪಾಕ್ಷಪ್ಪ, ಗಂಗಾವತಿ ವೀರೇಶ್, ಮುಂಡಾಸದ ಮಲ್ಲಿಕಾರ್ಜುನ, ಬಾಡದ ಬದರಿನಾಥ ಉಪಸ್ಥಿತರಿದ್ದರು.



ಕುರುಗೋಡು: ಪಟ್ಟಣದಲ್ಲಿ ಹಿಂದು ಜಾಗರಣಾ ವೇದಿಕೆಯಿಂದ ಹಮ್ಮಿಕೊಂಡಿದ್ದ 'ಗೋ ಹತ್ಯೆ ನಿಷೇಧ' ಕಾಯ್ದೆ ಜಾರಿಗೆ ಒತ್ತಾಯಿಸಿ ನಾಡಗೌಡರ ವೃತ್ತದಿಂದ ತಹಶೀಲ್ದಾರ್ ಕಚೇರಿವರೆಗೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.



ಸಿರುಗುಪ್ಪ: ತೆಕ್ಕಲಕೋಟೆ ಪಟ್ಟಣದ ವಾಲ್ಮೀಕಿ ನಗರದಲ್ಲಿ ನೂತನ ಶ್ರೀಆಂಜನೇಯ ಸ್ವಾಮಿಯ ದೇವಸ್ಥಾನ ಮತ್ತು ಮೂರ್ತಿ ಪ್ರತಿಷ್ಠಾಪನೆ ಹಾಗೂ ಮಹರ್ಷಿ ವಾಲ್ಮೀಕಿ ಗುರುಪೀಠ ರಾಜನಹಳ್ಳಿ ಪೀಠಾಧಿಪತಿ ಪ್ರಸನ್ನಾನಂದ ಸ್ವಾಮೀಜಿಯವರ ತುಲಭಾರ ಕಾರ್ಯಕ್ರಮವನ್ನು ಬುಧವಾರ ಹಮ್ಮಿಕೊಳ್ಳಲಾಗಿತು.

ಮೂರ್ತಿ ಪ್ರತಿಷ್ಠಾಪನೆ, ಶ್ರೀಗಳಿಗೆ ತುಲಾಭಾರ

◆**ಸಿರುಗುಪ್ಪ:** ತೆಕ್ಕಲಕೋಟೆ ಪಟ್ಟಣದ ವಾಲ್ಮೀಕಿ ನಗರದಲ್ಲಿ ನೂತನ ಶ್ರೀಆಂಜನೇಯ ಸ್ವಾಮಿಯ ದೇವಸ್ಥಾನ ಮತ್ತು ಮೂರ್ತಿ ಪ್ರತಿಷ್ಠಾಪನೆ ಹಾಗೂ ಮಹರ್ಷಿ ವಾಲ್ಮೀಕಿ ಗುರುಪೀಠ ರಾಜನಹಳ್ಳಿ ಪೀಠಾಧಿಪತಿ ಪ್ರಸನ್ನಾನಂದ ಸ್ವಾಮೀಜಿಯವರ ತುಲಭಾರ ಕಾರ್ಯಕ್ರಮವನ್ನು ಬುಧವಾರ ಹಮ್ಮಿಕೊಳ್ಳಲಾಗಿತು.

ಇದಕ್ಕೂ ಮುನ್ನ ಆಂಜನೇಯ ಸ್ವಾಮಿ ಪ್ರತಿಷ್ಠಾಪನಾ ಕಾರ್ಯಕ್ರಮ ನಿಮಿತ್ತ ವಿವಿಧ ಪೂಜೆಗಳು, ಹೋಮ, ಹವನ ಸೇರಿದಂತೆ ವಿವಿಧ ಪೂಜೆಗಳು ಅದ್ದೂರಿಯಾಗಿ ಅರ್ಥಪೂರ್ಣವಾಗಿ ನಡೆದವು. ನೂರಾರು ಭಕ್ತರು ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಂಜನೇಯ ಸ್ವಾಮಿಯ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು. ನಂತರ ತೀರ್ಥಬೋರಾದ ವಿತರಿಸಲಾಯಿತು. ಇದಕ್ಕೂ ಮುನ್ನ ವಾಲ್ಮೀಕಿ ಪೀಠದ ಗುರುಗಳ ತುಲಾಭಾರ ಕಾರ್ಯಕ್ರಮ ಅತ್ಯಂತ ವೈಭವದಿಂದ ನೆರವೇರಿತು. ವಿವಿಧ ಮುಖಂಡರು ಭಾಗವಹಿಸಿ ಭಕ್ತಿ ಸಮರ್ಪಿಸಿದರು. ನಂತರ ಗುರುಗಳು ಆಶೀರ್ವಚನ ನೀಡಿದರು. ನಂತರ ಭಕ್ತರು ಶ್ರೀಗಳ ಆಶೀರ್ವಾದ ಪಡೆದರು.

ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ, ಬಿಜೆಪಿ ಯುವ ಘಟಕದ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ, ವಾಲ್ಮೀಕಿ ಮಹಾಸಭಾ ತಾಲೂಕು ಅಧ್ಯಕ್ಷ ಉಡೆಗೋಳ ನರಸಿಂಹ ನಾಯಕ, ಸಮಾಜದ ಮುಖಂಡರಾದ ನರೇಂದ್ರ ಸಿಂಹ, ಪಿ.ತಿಮ್ಮಪ್ಪ, ನಾಗಪ್ಪ, ದೇವೇಂದ್ರ, ಚಿದಾನಂದಪ್ಪ, ಸಿದ್ದಪ್ಪ, ಲಚ್ಚಪ್ಪ, ಮಾರಪ್ಪ, ಚಿದಾನಂದ, ಪಂಪಣ್ಣ ಸೇರಿದಂತೆ ಸಮಾಜದ ಮುಖಂಡರು ಸಾವಿರಾರು ಮುಖಂಡರು ಇದ್ದರು.



ವಿಜಯನಗರ: ಮಾಜಿ ಸಿಎಂ ಯಡಿಯೂರಪ್ಪ ಅಭಿಮಾನೋತ್ಸವ ಕಾರ್ಯಕ್ರಮದ ನಿಮಿತ್ತ ಹೊಸಪೇಟೆಯಲ್ಲಿ ಬುಧವಾರ ಏರ್ಪಡಿಸಿದ್ದ ಪೂರ್ವಭಾವಿಗೆ ಆಗಮಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಕೊಟ್ಟೂರು ಸ್ವಾಮಿ ಸಂಸ್ಥಾನ ಮಠಕ್ಕೆ ಭೇಟಿ ನೀಡಿ, ಪೂಜ್ಯರಿಂದ ಆಶೀರ್ವಚನ ಪಡೆದರು. ಈ ವೇಳೆ ಶಾಸಕ ಕೃಷ್ಣನಾಯ್ಕ, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಸಂಜೀವರೆಡ್ಡಿ, ಮಾಜಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಮತ್ತಿತರರು ಇದ್ದರು.

ಜನ-ಜಾನುವಾರುಗಳು ನೀರಿಗಾಗಿ ಹಾಹಾಕಾರ
ಬರಿದಾದ ವೇದಾವತಿ ನದಿ ಒಡಲು

▶ಅಂಗಡಿ ಗಾದಿಲಿಂಗ

◆**ಸಿರುಗುಪ್ಪ:** ಭತ್ತದ ನಾಡು ಎಂದು ಪ್ರಸಿದ್ಧಿಯಾಗಿದ್ದ ಸಿರುಗುಪ್ಪ ಈಗ ನೀರಿನ ಹಾಹಾಕಾರದಿಂದ ಪರಿತಪಿಸುವಂತಾಗಿದೆ.

ವೇದಾವತಿ ನದಿಯು ಪಾತ್ರದ ಸಾವಿರಾರು ರೈತರ ಜೀವನಾಡಿಯಾಗಿರುವ ವೇದಾವತಿ ನದಿ ಸಂಪೂರ್ಣ ಬತ್ತಿ ಹೋಗಿದೆ. ಹಗರಿನದಿ ಪಾತ್ರದ ಗ್ರಾಮಗಳಲ್ಲಿ ನೀರಿಗಾಗಿ ಹಾಹಾಕಾರ ಉಂಟಾಗಿದೆ.



ಪ್ರತಿ ವರ್ಷ ವೇದಾವತಿ ಹಗರಿನದಿಯ ಪಾತ್ರದ ರೈತರು ಎರಡನೇ ಬೆಳೆಗೆ ನೀರನ್ನು ಬಳಸಿಕೊಂಡು ಉತ್ತಮ ಬೆಳೆಯ ನಿರೀಕ್ಷೆಯಲ್ಲಿದ್ದರು. ಆದರೆ ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್‌ಗಳನ್ನು ಅಳವಡಿಸುವ ಕಾರಣದಿಂದ ಎರಡನೇ ಬೆಳೆಗೆ ನೀರು ಪೂರೈಕೆಯಾಗದಿರುವುದರಿಂದ ವೇದಾವತಿನದಿಯ ಪಾತ್ರದ 35 ರಿಂದ 45ಕ್ಕೂ ಹೆಚ್ಚು ಗ್ರಾಮಗಳಲ್ಲಿ ರೈತರು ಮತ್ತು ಜಾನುವಾರುಗಳಿಗೆ ಹಾಗೂ ಪ್ರಾಣಿ ಪಕ್ಷಿಗಳಿಗೆ ನೀರಿನ ಸಮಸ್ಯೆ ಉಂಟಾಗಿ ಸಾಕಷ್ಟು ತೊಂದರೆಯಾಗಿದೆ.

ವೇದಾವತಿ ನದಿಯಲ್ಲಿ ನೀರು ಇಲ್ಲದೆ ರೈತರು ತಮ್ಮ ಅಲ್ಪಸ್ವಲ್ಪ ಬೆಳೆದ ಬೆಳೆಯನ್ನು ಉಳಿಸಿಕೊಳ್ಳಲು ವೇದಾವತಿ ನದಿಯ ಮಧ್ಯದಲ್ಲಿ 20 ರಿಂದ 25 ಅಡಿ ಆಳದಲ್ಲಿ ಪೈಪ್‌ಗಳನ್ನು ಹಾಕಿ ಕಷ್ಟಪಟ್ಟರೂ ಸಹ ನೀರು ಸಹ ಸಿಗದಿರುವುದು ರೈತರ ಆತಂಕಕ್ಕೆ ಕಾರಣವಾಗಿದೆ.

ಜಿಲ್ಲಾಡಳಿತ, ಸರ್ಕಾರ ವೇದಾವತಿ ನದಿಗೆ ಎಲ್‌ಎಲ್‌ಸಿ ಕಾಲುವೆ ಮೂಲಕ ನೀರು ಹರಿಸಿ ರೈತರ, ಜಾನುವಾರುಗಳ, ಪ್ರಾಣಿ-ಪಕ್ಷಿಗಳನ್ನು ರಕ್ಷಿಸಬೇಕೆಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

ದಿಗಂತ ವಿಶೇಷ

ವೇದಾವತಿ ನದಿಯಲ್ಲಿ ನೀರು ಇಲ್ಲದೆ ಹಗರಿ ಭಾಗದ ಜನ ಜಾನುವಾರುಗಳಿಗೆ ನೀರಿನ ಹಾಹಾಕಾರ ಉಂಟಾಗಿದೆ ಜಿಲ್ಲಾಡಳಿತ ಕೂಡಲೇ ವೇದಾವತಿ ನದಿಗೆ ನೀರು ಹರಿಸುವ ಮೂಲಕ ರೈತರ ಮತ್ತು ಜಾನುವಾರುಗಳ ಹಿತವನ್ನು ಕಾಪಾಡಬೇಕಾಗಿದೆ.

■ **ಸಿದ್ಧರಾಮನಗೌಡ,** ರೈತ

ಈಗಾಗಲೇ ವೇದಾವತಿ ನದಿಗೆ ನೀರು ಹರಿಸುವಂತೆ ಜಿಲ್ಲಾಧಿಕಾರಿಗೆ ಮನವಿ ಪತ್ರ ನೀಡಿದರೂ ಮತ್ತು ಸಿರುಗುಪ್ಪದಲ್ಲಿ ಧರಣಿ ಕುಳಿತರೂ ಜಿಲ್ಲಾಡಳಿತ ಹಾಗೂ ತಾಲೂಕಾಡಳಿತ ನೀರು ಹರಿಸದಿರುವುದನ್ನು ನೋಡಿದರೆ ನಿದ್ರೆಗೆ ಜಾರಿದಂತಾಗಿದೆ. ತಾಲೂಕಿನಲ್ಲಿರುವ ಕುಡಿಯುವ ನೀರಿನ ಕೆರೆಗಳನ್ನು ಪರಿಶೀಲಿಸಲು ತಂಡಗಳನ್ನು ರಚಿಸಬೇಕು ಎಂದರು.

■ **ಎಂ.ಎಸ್.ಸೋಮಲಿಂಗಪ್ಪ,** ಮಾಜಿ ಶಾಸಕ

ಗಣವೇಷಧಾರಿಗಳಿಂದ ಆಕರ್ಷಕ ಪಥಸಂಚಲನ

◆**ಹಗರಿಬೊಮ್ಮನಹಳ್ಳಿ:** ರಾಷ್ಟ್ರ ಸೇವಿಕಾ ಮಹಿಳಾ ಗಣವೇಶಧಾರಿಗಳ ಪಥಸಂಚಲನ ನಡೆಯಿತು. ಬುಧವಾರ ರಾಷ್ಟ್ರ ಸೇವಿಕಾ ಸಮಿತಿ ವಿಜಯನಗರ ಜಿಲ್ಲಾ ಪ್ರಾಂತ ಹಾಗೂ ಹಗರಿಬೊಮ್ಮನಹಳ್ಳಿಯ ರಾಷ್ಟ್ರ ಸೇವಿಕ ಸಮಿತಿಯಿಂದ ಹಮ್ಮಿಕೊಂಡಿದ್ದ ಗಣವೇಶಧಾರಿಗಳ ಪಥಸಂಚಲನ ಪಟ್ಟಣದ ಪ್ರಮುಖ ಬೀದಿಯಲ್ಲಿ ನಡೆಯಿತು.

ಭಾರತಮಾತೆಯ ಭಾವಚಿತ್ರ ಡ್ರಂ ಸೆಟ್ ವಾದ್ಯ ಮೇಳದೊಂದಿಗೆ ಶ್ರೀಹಗರಿ ಆಂಜನೇಯ ದೇವಸ್ಥಾನದಿಂದ ಬಸವೇಶ್ವರ ಬಜಾರ್, ರಾಮನಗರ ಬಸ್ ನಿಲ್ದಾಣ, ರಥ ಬೀದಿ, ಕೂಡ್ಲಿಗಿ ವೃತ್ತದ ಮಾರ್ಗವಾಗಿ ರಾಷ್ಟ್ರ ಸೇವಿಕಾ ಗಣವೇಶಧಾರಿಗಳ ಪಥಸಂಚಲನ ಪೊಲೀಸ್ ಬಿಗಿ ಬಂದೋಬಸ್ತ್ ನಡುವೆ ನಡೆಯಿತು.

ಪಥಸಂಚಲನ ಅಂಗವಾಗಿ ಪಟ್ಟಣದ ಪ್ರಮುಖ ರಸ್ತೆಗಳನ್ನು ಸ್ವಚ್ಛಗೊಳಿಸಿ ರಂಗೋಲಿ ಗಳಿಂದ ಸಿಂಗಾರಿಸಲಾಗಿತ್ತು. ವಿವಿಧ ಭಾಗಗಳಿಂದ ಬಂದ ಗಣವೇಶಧಾರಿ ಗಳನ್ನು ಪುಷ್ಪಾರ್ಚನೆಗಳ ಮೂಲಕ ಸ್ವಾಗತಿಸಲಾಯಿತು.

ಅಖಿಲ ಭಾರತ ಸಹ ಕಾರ್ಯವಾಹಿಕ ಉತ್ತರ ಪ್ರಾಂತ ಅಧಿಕಾರಿ ಅಲಕ್ ಇನಾಂದಾರ್, ಶಿಭಿರಾಧಿಕಾರಿ ಸರಸ್ವತಿ ಹೆಬ್ಬಾರ್, ವಿಶೇಷ ಹೊನ್ನ ಅಧಿಕಾರಿ ರತ್ನಮಾಲಾ, ರಾಷ್ಟ್ರ ಸೇವಿಕಾ ಸಮಿತಿಯ ಪದ್ಮ ವಿಠಲ್ ಜ್ಯೋತಿರಾವ್, ಮಂಜುಳ ರಾಮಣ್ಣ, ಜ್ಯೋತಿ ನಾಗರಾಜ್, ಚಿತ್ರಶಾಸ್ತ್ರಿ, ಸವಿತಾ, ಲೀಲಾವತಿ, ಪುಷ್ಪಾ, ಆರ್‌ಎಸ್‌ಎಸ್‌ನ ಬಸವನಗೌಡ ರೊಟ್ಟಿ ಕೊಟ್ರಪ್ಪ, ಸೋಮನಗೌಡ, ಶ್ರೀಶೈಲಪ್ಪ, ರಮೇಶ್ ಬೆಲ್ಲಂ ಕೊಂಡಮ್ ವಾಚ್ ಶ್ರೀನಿವಾಸ ಹಾಗೂ ಡಿವೈಎಸ್ಪಿ ಮಲ್ಲೇಶ್ ದೊಡ್ಡನಿ, ಹಗರಿಬೊಮ್ಮನಹಳ್ಳಿ ಸಿಪಿಐ ವಿಕಾಸ್ ಲಮಾಣಿ, ಸಿಪಿಐ ದುರ್ಗಪ್ಪ ಸಿಪಿಐ ಪ್ರಹ್ಲಾದ್, ಮರಿಯಮ್ಮನಹಳ್ಳಿ ಪಿಎಸ್‌ಐ ತಾರಾಬಾಯಿ, ಕೂಡ್ಲಿಗಿಯ ಪಿಎಸ್‌ಐ ಪ್ರಕಾಶ್, ಕೊಟ್ಟೂರಿನ ಪಿಎಸ್‌ಐ ಗೀತಾಂಜಲಿ ಖಾನಹೊಸಳ್ಳಿಯ ಪಿಎಸ್‌ಐ ಸಿದ್ದರಾಮಪ್ಪ ಸೇರಿದಂತೆ ಆರ್ ಎಸ್‌ಎಸ್‌ನಾ ಇತರ ಪ್ರಮುಖರು ಪೊಲೀಸ್ ಅಧಿಕಾರಿಗಳು ಸಿಬ್ಬಂದಿ ನೂರಾರು ಜನ ರಾಷ್ಟ್ರಸೇವಿಕಾ ಗಣಾವೇಷಧಾರಿಗಳು ಪಾಲ್ಗೊಂಡಿದ್ದರು.



ಗೋವುಗಳ ರಕ್ಷಣೆ ನಮ್ಮೆಲ್ಲರ ಕರ್ತವ್ಯ

◆**ಕುರುಗೋಡು:** ನಮ್ಮ ಹಿಂದೂ ಧರ್ಮದ ಪ್ರತೀಕವಾದ ಗೋವುಗಳ ಸಂತತಿ ನಶಿಸಿ ಹೋಗುತ್ತಿದ್ದು, ಮುಂದಿನ ಪೀಳಿಗೆಗಾಗಿ ಗೋವುಗಳನ್ನು ರಕ್ಷಿಸಿ ಪಾಲನೆ ಮಾಡಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಮುಖಂಡ ನಟರಾಜ್ ಗೌಡ ತಿಳಿಸಿದರು. ಪಟ್ಟಣದಲ್ಲಿ ಹಿಂದೂ ಜಾಗರಣಾ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ 'ಗೋ ಹತ್ಯೆ ನಿಷೇಧ' ಕಾಯ್ದೆ ಜಾರಿಗೆ ತರಬೇಕೆಂದು ನಾಡಗೌಡರ ವೃತ್ತದಿಂದ ತಹಶೀಲ್ದಾರ್ ಕಚೇರಿವರೆಗೆ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು. ಗೋವು ಕೇವಲ ಒಂದು ಪ್ರಾಣಿಯಲ್ಲ, ನಮ್ಮ ದೇಶದ ಸಂಸ್ಕೃತಿಯಲ್ಲಿ ಗೋವುಗಳಿಗೆ ಮಹತ್ವಸ್ಥಾನ ನೀಡಲಾಗಿದೆ. ಭಾರತೀಯರ ಪೂಜನೀಯ ಗೋಮಾತೆಯನ್ನು ರಕ್ಷಿಸುವ ನಿಟ್ಟಿನಲ್ಲಿ ಸರ್ಕಾರ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ನಂತರ ತಹಶೀಲ್ದಾರ್ ನರಸಪ್ಪ ಅವರಿಗೆ ಮನವಿ ಸಲ್ಲಿಸಿದರು. ಸರ್ನಾಡ ನಟರಾಜ್, ವೀರಭದ್ರಗೌಡ, ಮಾರುತಿ, ಮೈಲಾಪುರ ವೀರಭದ್ರ, ಸಂದೀಪ್, ಅರುಣ್, ವಿನೋದ್, ಶಶಿ, ಪವನ್, ಬಸವ ಇನ್ನು ಅನೇಕರು, ಹಿಂದೂ ಜಾಗರಣಾ ವೇದಿಕೆ ಪದಾಧಿಕಾರಿಗಳು ಭಾಗವಹಿಸಿದ್ದರು.

ಮೇ 15ರಂದು ತೆರೆ ಕಾಣಲಿದೆ ಶಿಖಂಡಿ ಕನ್ನಡ ಚಲನಚಿತ್ರ

◆**ಬಳ್ಳಾರಿ:** ಪೋಲಾ ಮೂವೀಸ್ ಅಡಿಯಲ್ಲಿ ನಿರ್ಮಾಣವಾಗಿರುವ 'ಶಿಖಂಡಿ' ಕನ್ನಡ ಚಲನಚಿತ್ರ ಮೇ 15ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಈ ಚಿತ್ರವನ್ನು ನಿರ್ದೇಶಕ ಗುರುಮೂರ್ತಿ ಅವರು ನಿರ್ದೇಶಿಸಿದ್ದು, ಇದು ಅವರ ಎರಡನೇ ಚಲನಚಿತ್ರವಾಗಿದೆ. ಇವರ ಮೊದಲ ಚಿತ್ರ 'ಮಾರಕಾಸ್ತ್ರ'ವಾಗಿದೆ ಎಂದು ಚಿತ್ರದ ನಿರ್ಮಾಪಕ, ಹೋಟೆಲ್ ಉದ್ಯಮಿ ಪೋಲಾ ಪ್ರವೀಣ್ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಇದು ಬಳ್ಳಾರಿಯ ಚಿತ್ರವಾಗಿದ್ದು, ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶ ನೀಡಲಾಗಿದೆ. ಬಳ್ಳಾರಿ ಜನರಿಗೆ ಉತ್ತಮ ಮನರಂಜನೆ ನೀಡುವುದು ನಮ್ಮ ಉದ್ದೇಶ,' ಎಂದರು.

ಚಿತ್ರದಲ್ಲಿ ನಟ ಯುವರಾಜ್ ಗೌಡ ಮುಖ್ಯ ಪಾತ್ರದಲ್ಲಿ ಅಭಿನಯಿಸಿದ್ದು, ನಟಿ ಖ್ಯಾತಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಸಹ ನಿರ್ದೇಶಕರಾಗಿ ಉಮೇಶ್ ಕಾರ್ಯನಿರ್ವಹಿಸಿದ್ದು, ಕಳನಾಯಕನ ಪಾತ್ರದಲ್ಲಿ ದೀಪಾ ಶೆಟ್ಟಿ ಅಭಿನಯಿಸಿದ್ದಾರೆ. ಡಿಒಪಿಯಾಗಿ ಸ್ವಾಮಿ ಕೆಲಸ ಮಾಡಿದ್ದು, ಚಾಂದನಿ ಸೇರಿದಂತೆ ಅನೇಕರು ತಾಂತ್ರಿಕ ಬಳಗದಲ್ಲಿ ಭಾಗಿಯಾಗಿದ್ದಾರೆ.

ಈ ಚಿತ್ರವನ್ನು ಬಳ್ಳಾರಿಯ ವಿವಿಧ ಭಾಗಗಳಲ್ಲಿ ಚಿತ್ರಿಕರಣಗೊಂಡಿದ್ದು, ಜೊತೆಗೆ ಬೆಂಗಳೂರು, ಮೈಸೂರು, ಮಾಗಡಿ, ಚನ್ನಪಟ್ಟಣ ಮತ್ತು ಬಿಡದಿ ಪ್ರದೇಶಗಳಲ್ಲಿ ಚಿತ್ರೀಕರಣ ನಡೆದಿದೆ. ಸಾಹಿತಿ ಕಿನ್ನಾಳ ರಾಜ್ ಅವರು ಕಥೆ ರಚಿಸಿದ್ದು, ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರವಾಗಿದೆ.

ಚಿತ್ರದಲ್ಲಿ ಬಳ್ಳಾರಿಯ ಸುಮಾರು 22 ಕಲಾವಿದರಿಗೆ ಅವಕಾಶ ನೀಡಲಾಗಿದೆ. ಮೊದಲ ಹಂತದಲ್ಲಿ 100ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವ ಯೋಜನೆ ಇದ್ದು, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ಚಿತ್ರವನ್ನು ಬಿಡುಗಡೆ ಮಾಡಲು ನಿರ್ಮಾಪಕರು ತಯಾರಿ ನಡೆಸಿದ್ದಾರೆ. ಸ್ಥಳೀಯ ಪ್ರತಿಭೆಗಳನ್ನು ಉತ್ತೇಜಿಸುವ ಈ ಚಿತ್ರಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ನಿರೀಕ್ಷಿಸಲಾಗಿದೆ ಎಂದರು.



ರೈತರಿಗೆ ಎಫ್‌ಐಡಿ ಮೂಲಕ ಯೂರಿಯಾ ವಿತರಣೆ

◆**ಹಗರಿಬೊಮ್ಮನಹಳ್ಳಿ:** ಎಫ್‌ಐಡಿ ಮುಖಾಂತರ ರೈತರಿಗೆ ಯೂರಿಯಾ ಗೊಬ್ಬರವನ್ನು ವಿತರಿಸಲಾಗುವುದು ಎಂದು ಜಂಟಿ ಕೃಷಿ ನಿರ್ದೇಶಕರ ಕಚೇರಿ ಅಧಿಕಾರಿ ಎಚ್.ನಾಗರಾಜ್ ತಿಳಿಸಿದರು.

ಬುಧವಾರ ಕೃಷಿ ಇಲಾಖೆ ಕಚೇರಿಯಲ್ಲಿ ಏರ್ಪಡಿಸಲಾಗಿದ್ದ 2026-27ನೇ ಸಾಲಿನ ಮುಂಗಾರು ಹಂಗಾಮಿನ ಬಿತ್ತನೆ ಬೀಜ ರಸ ಗೊಬ್ಬರ ಕ್ರಿಮಿ ನಾಶಕ ಡೀಲರ್ಸ್ ಮಾರಾಟಗಾರರ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಬೀಜ ರಸ ಗೊಬ್ಬರ ಕಾಯ್ದೆಯ ಬಗ್ಗೆ ತಿಳಿಸಿದರು.



ತಹಶೀಲ್ದಾರ್ ಆರ್.ಕವಿತಾ ಮಾತನಾಡಿ, ಮುಂಗಾರು ಹುಂಗಾಮಿನಲ್ಲಿ ರೈತರಿಗೆ ಸಾಕಾಗುವಷ್ಟು ಬಿತ್ತನೆ ಬೀಜ ರಸ ಗೊಬ್ಬರ ಸಂಗ್ರಹಿಸಿ ರೈತರಿಗೆ ಬಿತ್ತನೆ ಬೀಜ ರಸಗೊಬ್ಬರ ಕ್ರಿಮಿನಾಶಕಗಳ ಕೊರತೆ ಆಗದಂತೆ ಮುಂಜಾಗ್ರತೆ ವಹಿಸಿ ಎಂದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಸ್.ಬಿ.ಪಾಟೀಲ ಮಾತನಾಡಿ, ಬಿತ್ತನೆ ಬೀಜ ರಸಗೊಬ್ಬರ ಕ್ರಿಮಿನಾಶಕಗಳನ್ನು ಪರವಾನಿಗೆ ಇಲ್ಲದೆ ಮಾರಾಟ ಮಾಡುವವರ ವಿರುದ್ಧ ಕಳಪೆ ಬೀಜ ಮಾರಾಟ ಮಾಡುವವರ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದರು.

ತಾಪಂ ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕ ರಮೇಶ್ ಮಹಾಲಿಂಗಪುರ, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ವಿಜಯಕುಮಾರ್ ನಿಚಾಪುರ, ಕೃಷಿ ಇಲಾಖೆಯ ನಾಗಾರ್ಜುನ ಬೋಜ ನಾಯ್ಕ್, ಶಶಿಕುಮಾರ್, ಕೃಷಿಕ ಸಮಾಜದ ಕೆಪಿ ದೇವರಾಜ, ರೈತ ಸಂಘದ ಬಸವನಗೌಡ ರೈತರದ ಚಂದ್ರಪ್ಪ ವಿಶ್ವನಾಥ, ಬಿತ್ತನೆ ಬೀಜ ರಸಗೊಬ್ಬರ ಕ್ರಿಮಿನಾಶಕಗಳ ಮಾರಾಟಗಾರರ ಸಂಘದ ಶ್ರೀನಿವಾಸ ವಿತರಕರು ರೈತರು ಇಲಾಖೆಯ ಅಧಿಕಾರಿಗಳು ಸಿಬ್ಬಂದಿ ಇದ್ದರು.

ದೇವಸ್ಥಾನದ ಗೋಪುರ ಉದ್ಘಾಟನೆ: ಶಾಸಕ ಭಾಗಿ

◆**ಬಳ್ಳಾರಿ:** ನಮ್ಮ ಕುಟುಂಬದ ಮೇಲೆ ಶ್ರೀಉಡುಸಲಮ್ಮ ದೇವಿಯ ಆಶೀರ್ವಾದ ಹಾಗೂ ಬಾದನಹಟ್ಟಿಯ ಜನರ ಆಶೀರ್ವಾದ ಹೀಗೆ ಇರಲಿ, ಕೊನೆ ಉಸಿರು ಇರೋವರೆಗೂ ನನ್ನ ಜನರನ್ನು ಮರೆಯುವ ಮಾತೇ ಇಲ್ಲ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.



ಸಮೀಪದ ಬಾದನಹಟ್ಟಿಯಲ್ಲಿ ಮರು ನಿರ್ಮಾಣಗೊಂಡ ಶ್ರೀಉಡುಸಲಮ್ಮ ದೇವಿ ದೇವಸ್ಥಾನದ ಗೋಪುರಗಳ ಉದ್ಘಾಟನೆ ಹಾಗೂ ಪೂಜೆಯಲ್ಲಿ ಭಾಗವಹಿಸಿ ಮಾತನಾಡಿದರು.

ನನ್ನ ತಂದೆ ಸೂರ್ಯನಾರಾಯಣ ರೆಡ್ಡಿ ಅವರು, ಖಾಲಿ ಕೈಯಲ್ಲಿ ಇಲ್ಲಿಗೆ ಬಂದಾಗ ಬಾದನಹಟ್ಟಿಯ ಶ್ರೀಉಡುಸಲಮ್ಮ, ಕುರುಗೋಡಿನ ಶ್ರೀದೊಡ್ಡ ಬಸವೇಶ್ವರ ಹಾಗೂ ಇಲ್ಲಿನ ಜನರ ಆಶೀರ್ವಾದ ಮತ್ತು ಪ್ರೀತಿಯಿಂದ ನಾನು ನಮ್ಮ ಕುಟುಂಬ ಈ ಹಂತಕ್ಕೆ ಬಂದಿದ್ದೇವೆ ಎಂದರು.

ನನ್ನ ತಂದೆ ಶಾಸಕರಾದಾಗ ನಮ್ಮ ಕುಟುಂಬದ ಸದಸ್ಯರೊಬ್ಬರು ಶಾಸಕರಾದರೆಂದು ನೀವೆಲ್ಲ ಸಂಭ್ರಮ ಪಟ್ಟಿದ್ದೀರಿ, ಅದೇ ರೀತಿ ನಾನು ಶಾಸಕನಾದಾಗಲೂ ಕೂಡ ನಮ್ಮ ಮನೆಯ ಮಗ ಶಾಸಕ ಆದ ಎಂದು ಸಂತೋಷಪಟ್ಟಿದ್ದೀರಿ, ನಿಮ್ಮೆಲ್ಲರ ಪ್ರೀತಿ ಅನನ್ಯವಾದುದು ಎಂದರು.

ದೇವಸ್ಥಾನದ ಮರು ನಿರ್ಮಾಣಕ್ಕೆ ಆರ್ಥಿಕವಾಗಿ ಭಕ್ತಿ ಸೇವೆ ಸಲ್ಲಿಸಿದ ಮಾಜಿ ಶಾಸಕ ಸೂರ್ಯನಾರಾಯಣ ರೆಡ್ಡಿ, ಶಾಸಕ ಭರತ್ ರೆಡ್ಡಿ, ಉದ್ಯಮಿ ಸತೀಶ್ ರೆಡ್ಡಿಯವರ ಕಾರ್ಯವನ್ನು ಗ್ರಾಮದ ಹಿರಿಯರು ಶ್ಲಾಘಿಸಿದರು.

ಪಾಲಿಕೆ ಮಾಜಿ ಮೇಯರ್ ಎಂ.ರಾಜೇಶ್ವರಿ, ಮುಖಂಡರಾದ ಎಂ. ಸುಬ್ಬರಾಯುಡು, ಚಾನಾಳ್ ಶೇಖರ್, ಉದ್ಯಮಿ ಸತೀಶ್ ರೆಡ್ಡಿ, ಪ್ರಮುಖರಾದ ಮೇಟಿ ಬಸಪ್ಪ, ಹನುಮಂತ ರೆಡ್ಡಿ, ತಿಮ್ಮಪ್ಪ, ಗೋವಿಂದಪ್ಪ, ಬಸಪ್ಪಯ್ಯ, ಮಣೂರು ಜಡೆಪ್ಪ, ಕರೆಣ್ಣ, ಎಚ್.ಈಶ್ವರ ಗೌಡ, ಪರಶುರಾಮ ಸೇರಿದಂತೆ ಇತರರಿದ್ದರು.

ವಿಶಿಷ್ಟಚೇತನರು ಮುಖ್ಯವಾಹಿನಿಗೆ ಬರಲಿ: ಜಿಲ್ಲಾಧಿಕಾರಿ

◆**ವಿಜಯನಗರ:** ವಿಶಿಷ್ಟಚೇತನರು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಪೂರಕ ವಾತಾವರಣ ನಿರ್ಮಿಸುವುದು ಸರ್ಕಾರದ ಮೊದಲ ಆದ್ಯತೆಯಾಗಿದ್ದು, ಅವರ ಕುಂದುಕೊರತೆಗಳಿಗೆ ಅಧಿಕಾರಿಗಳು ವಿಳಂಬ ಮಾಡದೆ ತಕ್ಷಣ ಸ್ಪಂದಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ವಿಕಲಚೇತನರ ಕುಂದು ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಶಿಷ್ಟಚೇತನರಿಗೆ ಸರ್ಕಾರದಿಂದ ಸಿಗಬೇಕಾದ ಮಾಸಾಶನ, ಸಾಧನ ಸಲಕರಣೆಗಳು ಹಾಗೂ ಬಸ್ ಪಾಸ್ ವಿತರಣೆಯಲ್ಲಿ ಯಾವುದೇ ಲೋಪವಾಗದಂತೆ ಎಚ್ಚರ ವಹಿಸಲು ಸಂಬಂಧಪಟ್ಟ ಇಲಾಖೆಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಅವರು ವಿವಿಧ ಸರ್ಕಾರಿ ಇಲಾಖೆಗಳಲ್ಲಿ ವಿಕಲಚೇತನರಿಗೆ ಮೀಸಲಿರುವ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಚುರುಕುಗೊಳಿಸಲು ಸೂಚಿಸಲಾಯಿತು. ಸಭೆಯಲ್ಲಿ ಉಪಸ್ಥಿತರಿದ್ದ ನೂರಾರು ವಿಕಲಚೇತನರು ವಿವಿಧ ಇಲಾಖೆಗಳಲ್ಲಿ ತಮಗೆ ಸಿಗಬೇಕಾದ ಸೌಲಭ್ಯ, ಸಾಧನ ಸಲಕರಣೆ ಸಕಾಲದಲ್ಲಿ ದೊರೆಯುತ್ತಿಲ್ಲ, ಇದರಿಂದ ವಿಕಲಚೇನರಿಗೆ ತೀವ್ರ ಸಮಸ್ಯೆ ಎದುರಾಗುತ್ತಿದೆ.



ಆದ್ದರಿಂದ ಯೋಜನೆಗಳಲ್ಲಿ ತಮಗಾಗುತ್ತಿರುವ ತೊಂದರೆಗಳ ಕುರಿತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಇದಕ್ಕೆ ಜಿಲ್ಲಾಧಿಕಾರಿಗಳು ಪರಿಶೀಲಿಸಿ ಅಗತ್ಯ ಕ್ರಮ ವಹಿಸಲಾಗುವುದು ಎಂದು ಸಕಾರಾತ್ಮಕವಾಗಿ ಸ್ಪಂದಿಸಿದರು.

ಈ ವೇಳೆ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿ ಮಾತನಾಡಿ, 2025-26ನೇ ಸಾಲಿನ ವಿಶಿಷ್ಟಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಜಿಲ್ಲೆಯಾದ್ಯಂತ 532 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, 150 ಫಲಾನುಭವಿಗಳಿಗೆ ಗ್ರಾಮೀಣ ಪುನರ್ವಸತಿ ಯೋಜನೆ, 106 ಅಹ ಫಲಾನುಭವಿಳಿಗೆ ಆರೈಕೆದಾರರ ಪ್ರೋತ್ಸಾಹ ನಿಧಿ, 31 ವಿಕಲಾಂಗ ವಿದ್ಯಾರ್ಥಿಗಳಿಎ ಶುಲ್ಕ ಮರುಪಾವತಿ ಮಾಡಲಾಗಿದೆ. ಅದಷ್ಟೇ ಅಲ್ಲದೇ ಆಧಾರ ಯೋಜನೆಯಡಿ 32 ಜನರಿಗೆ ಸ್ವಯಂ ಉದ್ಯೋಗಕ್ಕಾಗಿ ತಲಾ ರೂ.50,000 ಆರ್ಥಿಕ ನೆರವು ನೀಡಲಾಗಿದೆ. 1 ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ ರೂ.2,000 ಹಾಗೂ 6 ರಿಂದ 10ನೇ ತರಗತಿಯವರಿಗೆ ರೂ.4,000 ವಿತರಿಸಲಾಗುವುದು. 7 ವಿಶೇಷಚೇತನ ದಂಪತಿಗಳಿಗೆ ರೂ.3.50 ಲಕ್ಷ ವಿವಾಹ ಪ್ರೋತ್ಸಾಹಧನ ವಿತರಣೆ ಮಾಡಲಾಗಿದೆ. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ಗರಿಷ್ಠ ರೂ.50,000 ಪ್ರೋತ್ಸಾಹಧನ ನೀಡಲಾಗುತ್ತಿದ್ದು, ಈ ಬಾರಿ ಇಬ್ಬರು ಕ್ರೀಡಾಪಟುಗಳಿಗೆ ರೂ.70,000 ವಿತರಿಸಲಾಗಿದೆ. ಸಂಸದರ ಮತ್ತು ಶಾಸಕರ ನಿಧಿಯಿಂದ ಈಗಾಗಲೇ ವೀಲ್ ಚೇರ್, ಶ್ರವಣ ದೋಷವುಳ್ಳವರಿಗೆ ಸಾಧನಗಳು ಮತ್ತು ತ್ರಿಚಕ್ರ ವಾಹನಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಗಂಗಪ್ಪ, ನಗರಾಭಿವೃದ್ಧಿ ಇಲಾಖೆ ಯೋಜನಾ ನಿರ್ದೇಶಕ ಮನೋಹರ್, ವಿವಿಧ ಇಲಾಖೆಗಳ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಹುಣಸಗಿ ಬಸ್ ನಿಲ್ದಾಣದಲ್ಲಿ ಶೌಚಾಲಯದ ದುಸ್ಥಿತಿ

▶ಮಲ್ಲಿಕಾರ್ಜುನ ಗುತ್ತೇದಾರ

◆**ಹುಣಸಗಿ:** ಪಟ್ಟಣದ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ಸಾರ್ವಜನಿಕ ಶೌಚಾಲಯದ ನಿರ್ಲಕ್ಷ್ಯದಿಂದ ಉಂಟಾದ ಸಮಸ್ಯೆ ದಿನದಿಂದ ದಿನಕ್ಕೆ ಗಂಭೀರ ಸ್ವರೂಪ ಪಡೆಯುತ್ತಿದೆ. ಶೌಚಾಲಯದ ಸೆಪ್ಟಿಕ್ ಟ್ಯಾಂಕ್ ಪೂರ್ಣವಾಗಿ ತುಂಬಿ ಓವರ್‌ಫ್ಲೋ ಆಗಿ, ಗಲೀಜು ನೀರು ನಿರಂತರವಾಗಿ ಸಾರ್ವಜನಿಕ ರಸ್ತೆ ಮೇಲೆ ಹರಿದು ಹೋಗುತ್ತಿರುವುದು ಅಲ್ಲಿನ ಜನಜೀವನವನ್ನು ಅಸ್ತವ್ಯಸ್ತಗೊಳಿಸಿದೆ.



ಪ್ರತಿದಿನ ನೂರಾರು ಪ್ರಯಾಣಿಕರು ಸಂಚರಿಸುವ ಈ ಬಸ್ ನಿಲ್ದಾಣದಲ್ಲಿ ಮಲಿನ ನೀರು ಹಾಗೂ ದುರ್ವಾಸನೆಯಿಂದ ಪರಿಸ್ಥಿತಿ ಹದಗೆಟ್ಟಿದ್ದು, ಸ್ಥಳೀಯ ನಿವಾಸಿಗಳು ಮತ್ತು ವ್ಯಾಪಾರಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಮಳೆಗಾಲದಲ್ಲಿ ಈ ಸಮಸ್ಯೆ ಇನ್ನಷ್ಟು ತೀವ್ರವಾಗುವ ಸಾಧ್ಯತೆಇದ್ದು, ರಸ್ತೆಯ ಮೇಲೆ ನೀರು ನಿಂತುಕೊಳ್ಳುವುದರಿಂದ ಸಾರ್ವಜನಿಕರಿಗೆ ಸಂಚರಿಸಲು ಅಡಚಣೆ ಉಂಟಾಗಿದೆ.

ಈ ಕುರಿತು ಸ್ಥಳೀಯರು ಹಲವು ಬಾರಿ ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ಇಲಾಖೆಯ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರೂ ಯಾವುದೇ ಶಾಶ್ವತ ಕ್ರಮ ಕೈಗೊಳ್ಳದಿರುವುದು ಸಾರ್ವಜನಿಕರಲ್ಲಿ ಅಸಮಾಧಾನ ಮತ್ತು ಆಕ್ರೋಶವನ್ನು ಹೆಚ್ಚಿಸಿದೆ.

ದಿಗಂತ ವಿಶೇಷ

» ಶೌಚಾಲಯದ ಸೆಪ್ಟಿಕ್ ಟ್ಯಾಂಕ್ ತಕ್ಷಣ ಸ್ವಚ್ಛಗೊಳಿಸಬೇಕು.

» ಮಲಿನ ನೀರು ರಸ್ತೆ ಮೇಲೆ ಹರಿಯದಂತೆ ಶಾಶ್ವತ ಒಳಚರಂಡಿ ವ್ಯವಸ್ಥೆ ಮಾಡಬೇಕು.

» ಶೌಚಾಲಯದ ನಿಯಮಿತ ನಿರ್ವಹಣೆಗಾಗಿ ಸಿಬ್ಬಂದಿ ನೇಮಕ ಮಾಡಬೇಕು.

» ಸಾರ್ವಜನಿಕರ ದೂರುಗಳಿಗೆ ತಕ್ಷಣ

ಹುಣಸಗಿ ಬಸ್ ನಿಲ್ದಾಣದ ಈ ದುಸ್ಥಿತಿ, ಸಾರ್ವಜನಿಕ ಸೇವಾ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಕುಂದಿಸುತ್ತಿದೆ. ಜನರ ಮೂಲಭೂತ ಅಗತ್ಯವಾದ ಸ್ವಚ್ಛತೆ ಮತ್ತು ಆರೋಗ್ಯದ ಕಡೆ ಅಧಿಕಾರಿಗಳು ತಕ್ಷಣ ಗಮನಹರಿಸಿ, ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವುದು ಅವಶ್ಯಕವಾಗಿದೆ. ಇಲ್ಲವಾದರೆ ಸಾರ್ವಜನಿಕರು ಕಠಿಣ ಹೋರಾಟಕ್ಕೆ ಮುಂದಾಗುವ ಸಾಧ್ಯತೆ ಇದೆ ಎಂಬ ಎಚ್ಚರಿಕೆ ನೀಡಲಾಗಿದೆ.

■ **ದೇವಪ್ಪ ಬಿ.ಸಿ., ಪಟ್ಟಣದ ನಿವಾಸಿ**

ಇದಕ್ಕೂ ಮೀರಿ ಸಮಸ್ಯೆ ಕುರಿತು ಮಾಹಿತಿ ನೀಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮೂಲಕ ಸಂಪರ್ಕಿಸಲು ಯತ್ನಿಸಿದಾಗಲೂ ನಿರಾಸೆಯೇ ಎದುರಾಗಿದೆ. ಕೆಲ ಅಧಿಕಾರಿಗಳ ದೂರವಾಣಿ ಸಂಖ್ಯೆಗಳು ಬೇರೊಬ್ಬರ ಕೈಯಲ್ಲಿದ್ದು 'ಅಧಿಕಾರಿಗಳು ರಜೆಯಲ್ಲಿದ್ದಾರೆ' ಎಂಬ ಉತ್ತರ ಸಿಕ್ಕಿದೆ. ಇನ್ನೂ ಕೆಲವು ದೂರವಾಣಿ ಸಂಖ್ಯೆಗಳು 'ನಾಟ್ ರೀಚಬಲ್' ಆಗಿವೆ. ಅಧಿಕಾರಿಗಳ ಲಭ್ಯತೆ ಮತ್ತು ಜವಾಬ್ದಾರಿತನದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದೆ.